सत्यमेव जयते

# ವಿದ್ಯುನ್ಮಾನ ಮತಯಂತ್ರ ಮತ್ತು ವಿವಿಪ್ಯಾಟ್ ಕುರಿತ ಕೈಪಿಡಿ

324.6.ಇಎಂಎಸ್.ಎಂಎ.002.2020

भारत निर्वाचन आयोग Election Commission of India

## ಭಾರತ ಚುನಾವಣಾ ಆಯೋಗ

ನಿರ್ವಾಚನ ಸದನ, ಅಶೋಕ ರಸ್ತೆ, ನವದೆಹಲಿ-110 001.

"ಸದೃಢ ಪ್ರಜಾಪ್ರಭುತ್ವಕ್ಕಾಗಿ ಹೆಚ್ಚಿನ ಭಾಗವಹಿಸುವಿಕೆ"

**ಭಾರತ ಚುನಾವಣಾ ಆಯೋಗ**

**ನಿರ್ವಾಚನ ಸದನ, ಅಶೋಕ ರಸ್ತೆ, ನವದೆಹಲಿ–110 001**

**“ಸದೃಢ ಪ್ರಜಾಪ್ರಭುತ್ವಕ್ಕಾಗಿ ಹೆಚ್ಚಿನ ಭಾಗವಹಿಸುವಿಕೆ”**

# ಮುನ್ನುಡಿ

ವಿದ್ಯುನ್ಮಾನ ಮತಯಂತ್ರಗಳ ಬಳಕೆಯು ಚುನಾವಣಾ ವ್ಯವಸ್ಥೆಯನ್ನು ಕಾಂತ್ರಿಕಾರಿಯನ್ನಾಗಿಸಿದೆ ಹಾಗೂ ಮತದಾರನು ಪರಿಶೀಲಿಸಿಕೊಳ್ಳಬಹುದಾದ ಕಾಗದ ತಾಳೆ ದರ್ಶಕ (ವಿವಿಪ್ಯಾಟ್) ವ್ಯವಸ್ಥೆಯನ್ನು ಪರಿಚಯಿಸಿರುವುದು ಮತದಾನ ಪ್ರಕ್ರಿಯೆಗೆ ಹೆಚ್ಚು ಪಾರದರ್ಶಕತೆ ಒದಗಿಸಿದೆ.

ಇದು ವಿದ್ಯುನ್ಮಾನ ಮತಯಂತ್ರ ಹಾಗೂ ವಿವಿಪ್ಯಾಟ್ ಕೈಪಿಡಿಯ 5ನೇ ಆವೃತ್ತಿಯಾಗಿದ್ದು, ಮೇ 2017ರಿಂದಲೂ ಕಡ್ಡಾಯವಾಗಿ ಇವಿಎಂಗಳೊಂದಿಗೆ ವಿವಿಪ್ಯಾಟ್‌ಗಳನ್ನು ಶೇ.100ರಷ್ಟು ನಿಯೋಜಿಸಿಕೊಳ್ಳುವ ದೃಷ್ಟಿಯಿಂದ ಇದನ್ನು ಮರುರೂಪಿಸಲಾಗಿದೆ.ಈ ಕೈಪಿಡಿಯು, ಇವಿಎಂ ಮತ್ತು ವಿವಿಪ್ಯಾಟ್‌ಗಳ ಬಳಕೆಯ ಕುರಿತು ಎಲ್ಲಾ ಮಹತ್ವಪೂರ್ಣ ಸೂಚನೆಗಳ ಸಾರಾಂಶವನ್ನು ಒಳಗೊಂಡಿರುತ್ತದೆ.ಈ ಕೈಪಿಡಿಯನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳುವುದಕ್ಕಾಗಿ ಭಾಗಗಳಾಗಿ ವಿಭಜಿಸಲಾಗಿದೆ. ಭಾಗ–**I** ಚುನಾವಣೇತರ ಅವಧಿ, ಮೊದಲ ಹಂತದ ಪರಿಶೀಲನೆ ಮತ್ತು ಮೊದಲ ಯಾಧೃಚೀಕರಣದ ಅವಧಿಯಲ್ಲಿ ಇವಿಎಂಗಳ ಸಂಗ್ರಹಣೆ ಮತ್ತು ಚಲನವಲನವನ್ನು ಒಳಗೊಂಡಿರುತ್ತದೆ. ಭಾಗ-**II,** ಮತಗಳ ಎಣಿಕೆಗೆ ಸಂಬಂಧಿಸಿದ ಎರಡನೇ ಯಾದೃಚೀಕರಣದ ಎಲ್ಲಾ ಕಾರ್ಯವಿಧಾನಗಳನ್ನು ಒಳಗೊಂಡಿರುತ್ತದೆ, ಭಾಗ–**III** ಐತಿಹಾಸಿಕ ಮತ್ತು ಕಾನೂನು ದೃಷ್ಟಿಕೋನವನ್ನು ಒದಗಿಸುತ್ತದೆ, ಭಾಗ–ಖಗಿ, ಎಲ್ಲಾ ಅನುಬಂಧಗಳನ್ನು ಒಳಗೊಂಡಿರುತ್ತದೆ.

ಈ ಕೈಪಿಡಿಯು ಚುನಾವಣೆಗೆ ಸಂಬಂಧಿಸಿದ ಎಲ್ಲ ಅಧಿಕಾರಿಗಳಿಗೆ, ಸಿಬ್ಬಂದಿ ವರ್ಗಕ್ಕೆ ಮತ್ತು ಇತರ ಹಿತಾಸಕ್ತಿದಾರರಿಗೆ ಪ್ರಯೋಜನಕಾರಿಯಾಗುವುದೆಂಬ ಆಶಾಭಾವನೆ ಇದೆ.ಇದನ್ನು ಮತ್ತಷ್ಟು ಮಾಹಿತಿಯುಕ್ತವಾಗಿ ಮತ್ತು ಪ್ರಯೋಜನಕಾರಿಯಾಗಿ ಮಾಡಲು ಆಯೋಗವು ಈ ಕೈಪಿಡಿಯ ಎಲ್ಲ ಬಳಕೆದಾರರಿಂದ ಸಲಹೆಗಳನ್ನು ಆಹ್ವಾನಿಸುತ್ತದೆ.

**ಸುದೀಪ್ ಜೈನ್**

ಉಪ ಚುನಾವಣಾ ಆಯುಕ್ತರು

ಭಾರತ ಚುನಾವಣಾ ಆಯೋಗ

ನವದೆಹಲಿ

ಆಗಸ್ಟ್, 2020

## ಪರಿವಿಡಿ


| ಕ್ರಮ ಸಂಖ್ಯೆ | ಅಧ್ಯಾಯ ಸಂಖ್ಯೆ | ಪರಿವಿಡಿ | ಪುಟ ಸಂಖ್ಯೆ |
|---|---|---|---|
| | | **ಭಾಗ - I** | |
| | | **ಚುನಾವಣೇತರ ಅವಧಿಯಿಂದ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಮೊದಲ ಹಂತದ ಯಾದೃಚ್ಛೀಕರಣದವರೆಗೆ** | |
| 1 | ಅಧ್ಯಾಯ– 1 | ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಸಂಗ್ರಹಣೆ ಮತ್ತು ಇವಿಎಂ – ಸಂಗ್ರಹಾಗಾರವನ್ನು ತೆರೆಯುವುದು ಮತ್ತು ಚುನಾವಣೆ ಇಲ್ಲದ ಅವಧಿಯಲ್ಲಿ ಮತ್ತು ತುರ್ತು ಸಮಯದಲ್ಲಿ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಸಾಗಣೆ. | |
| 2 | ಅಧ್ಯಾಯ– 2 | ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಮೊದಲ ಹಂತದ ಪರಿಶೀಲನೆ (ಎಫ್‌ಎಲ್‌ಸಿ) | |
| 3 | ಅಧ್ಯಾಯ– 3 | ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಮೊದಲ ಹಂತದ ಯಾದೃಚ್ಛೀಕರಣ | |
| 4 | ಅಧ್ಯಾಯ– 4 | ದೋಷಪೂರ್ಣ ಇವಿಎಂ ಮತ್ತು ವಿವಿಪ್ಯಾಟ್‌ಗಳನ್ನು ರಿಪೇರಿ ಮಾಡುವುದು | |
| 5 | ಅಧ್ಯಾಯ– 5 | ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಕುರಿತು ತರಬೇತಿ ಹಾಗೂ ಜಾಗೃತಿ | |
| | | **ಭಾಗ –II** | |
| | | **ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಎರಡನೇ ಯಾದೃಚ್ಛೀಕರಣದಿಂದ ಮತ ಎಣಿಕೆಯವರೆಗೆ** | |
| 1 | ಅಧ್ಯಾಯ– 6 | ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಸಂಗ್ರಹಣೆ ಹಾಗೂ ಇವಿಎಂ ಸಂಗ್ರಹಾಗಾರವನ್ನು ತೆರೆಯುವುದು ಮತ್ತು ಚುನಾವಣಾ ಅವಧಿಯಲ್ಲಿ ಮತ್ತು ತುರ್ತು ಸಂದರ್ಭದಲ್ಲಿ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಚಲನವಲನ | |
| 2 | ಅಧ್ಯಾಯ– 7 | ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಎರಡನೇ ಯಾದೃಚ್ಛೀಕರಣ | |
| 3 | ಅಧ್ಯಾಯ– 8 | ಇವಿಎಂಗಳು (ಕ್ಯಾಂಡಿಡೇಟ್ ಸೆಟ್) ಮತ್ತು ವಿವಿಪ್ಯಾಟ್‌ಗಳ ಸಿದ್ಧತೆ | |
| 4 | ಅಧ್ಯಾಯ– 9 | ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ವಿಲೇವಾರಿ | |
| 5 | ಅಧ್ಯಾಯ– 10 | ಮತದಾನ ಕೇಂದ್ರಗಳಲ್ಲಿ ಬಳಸಿದ ಮತದಾನದ ಅಂಕಣಗಳು (ವೋಟಿಂಗ್ ಕಂಪಾರ್ಟ್‌ಮೆಂಟ್) | |
| 6 | ಅಧ್ಯಾಯ– 11 | ಮತದಾನದ ದಿನ | |
| 7 | ಅಧ್ಯಾಯ– 12 | ಮತದಾನ ಮತ್ತು ಮತ ಎಣಿಕೆಯಾದ ತರುವಾಯ ಮತ ದಾಖಲಿಸಿದ ಮತ್ತು ದಾಖಲಿಸದ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಸಂಗ್ರಹಣೆ ಮತ್ತು ಇವಿಎಂಗಳ ಬಗ್ಗೆ ಜೋನಲ್/ ಸೆಕ್ಟರ್/ ಏರಿಯಾ ಅಧಿಕಾರಿಗಳಿಗೆ ನೀಡಲಾದ ಸೂಚನೆಗಳು | |
| 8 | ಅಧ್ಯಾಯ– 13 | ಮರು ಮತದಾನದ ಸಂದರ್ಭದಲ್ಲಿ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಬಳಕೆ | |
| 9 | ಅಧ್ಯಾಯ– 14 | ಮತ ಎಣಿಕೆ | |
| 10 | ಅಧ್ಯಾಯ– 15 | ವಿವಿಪ್ಯಾಟ್‌ನ ಬಳಕೆಯ ಸಂದರ್ಭದಲ್ಲಿ ಮಾಡಬೇಕಾದ್ದದ್ದು ಮತ್ತು ಮಾಡಬಾರದ್ದು | |
| 11 | ಅಧ್ಯಾಯ– 16 | ಗಂಭೀರ ತಪ್ಪುಗಳ ಉದಾಹರಣೆಗಳು | |
| | | **ಭಾಗ – III** | |
| | | **ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಪರಿಚಯ** | |
| 1 | ಅಧ್ಯಾಯ– 17 | ಪರಿಚಯ | |
| 2 | ಅಧ್ಯಾಯ – 18 | ಇವಿಎಂ ಮತ್ತು ವಿವಿಪ್ಯಾಟ್‌ಗಳ ಬಳಕೆಗಾಗಿ ಕಾನೂನು ಉಪಬಂಧಗಳು | |
| 3 | ಅಧ್ಯಾಯ – 19 | ಇವಿಎಂ ನಿರ್ವಹಣಾ ವ್ಯವಸ್ಥೆ | |
| 4 | ಅಧ್ಯಾಯ – 20 | ಇವಿಎಂಗಳ ವಿಲೇವಾರಿ | |
| | | **ಭಾಗ – IV** | |
| | | **ಅನುಬಂಧಗಳು** | |
| 1 | ಅನುಬಂಧ – 1 | ಪ್ರಧಾನ ದಾಸ್ತಾನು ರಿಜಿಸ್ಟರ್ | |
| 2 | ಅನುಬಂಧ – 2 | ಮಾಸಿಕ/ ತ್ರೈಮಾಸಿಕ ಪರಿಶೀಲನಾ ವರದಿ | |
| 3 | ಅನುಬಂಧ – 3 | ರಾಜಕೀಯ ಪಕ್ಷಗಳ ಹಾಜರಾತಿ ರಿಜಿಸ್ಟರ್ – ಮೊದಲ ಹಂತದ ಪರಿಶೀಲನಾ ಸಭಾಂಗಣ | |
| 4 | ಅನುಬಂಧ – 4 | ಮೊದಲ ಹಂತದ ಪರಿಶೀಲನೆ (ಎಫ್‌ಎಲ್‌ಸಿ)ಗಾಗಿನ ಏರ್ಪಾಟುಗಳ ಪರಿಶೀಲನಾ ವರದಿ | |
| 5 | ಅನುಬಂಧ – 5 | ಬಿಇಎಲ್/ ಇಸಿಐಎಲ್ ಇವರು ಇವಿಎಂಗಳನ್ನು ಪ್ರಮಾಣೀಕರಿಸುವುದು | |

| | | | |
|---|---|---|---|
| 6 | ಅನುಬಂಧ – 6 | ವಿವಿಪ್ಯಾಟ್‌ಗಳ ಮೊದಲ ಹಂತದ ಪರಿಶೀಲನಾ (ಎಫ್‌ಎಲ್‌ಸಿ) ಅವಧಿಯಲ್ಲಿ ಅಣಕು ಮತದಾನದ ಪ್ರಮಾಣೀಕರಣ | |
| 7 | ಅನುಬಂಧ – 7 | ಎಫ್‌ಎಲ್‌ಸಿ ಅವಧಿಯಲ್ಲಿ ಅಣಕು ಮತದಾನದ ಯಾದೃಚ್ಛಿಕ ಆಯ್ಕೆ | |
| 8 | ಅನುಬಂಧ – 8 | ಮೊದಲ ಹಂತದ ಪರಿಶೀಲನೆಯ ಸಮಯದಲ್ಲಿ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಅಣಕು ಮತದಾನ | |
| 9 | ಅನುಬಂಧ – 9 | ಗುಲಾಬಿ ಬಣ್ಣದ ಕಾಗದ ಬಳಸಿ ಇವಿಎಂಗಳ ಕಂಟ್ರೋಲ್ ಯೂನಿಟ್ ಅನ್ನು ಮೊಹರು ಮಾಡುವುದು | |
| 10 | ಅನುಬಂಧ – 10 | ಎಫ್‌ಎಲ್‌ಸಿ ವ್ಯವಸ್ಥೆ ಕುರಿತು ಜಿಲ್ಲಾ ಚುನಾವಣಾ ಅಧಿಕಾರಿಯ ಪ್ರಮಾಣೀಕರಣ | |
| 11 | ಅನುಬಂಧ – 11 | ಮೊದಲನೇ ಹಂತದ ಪರಿಶೀಲನಾ ಪ್ರಕ್ರಿಯೆಯನ್ನು ಪೂರ್ಣಗೊಂಡ ಕುರಿತ ಪ್ರಮಾಣಪತ್ರ | |
| 12 | ಅನುಬಂಧ – 12 | ಇವಿಎಂ ಮತ್ತು ವಿವಿಪ್ಯಾಟ್ ಬಳಸಿ ಮತದಾನ ಮಾಡುವ ವಿಧಾನ | |
| 13 | ಅನುಬಂಧ – 13 | ಪ್ರಿಸೈಡಿಂಗ್ ಆಫೀಸರ್ ರವರ ಮಾಹಿತಿ ಕೈಪಿಡಿ | |
| 14 | ಅನುಬಂಧ – 14 | ಭದ್ರತಾ ಕೊಠಡಿಯಲ್ಲಿ ಮಾಡಿರುವ ಏರ್ಪಾಟಿನ ವರದಿ | |
| 15 | ಅನುಬಂಧ – 15 | ಮತ ಎಣಿಕೆ ಕೇಂದ್ರದಲ್ಲಿನ ವ್ಯವಸ್ಥೆಯ ವರದಿ | |
| 16 | ಅನುಬಂಧ – 16 | ಇವಿಎಂಗಳ ಸಿದ್ಧತೆಯ ರಿಜಿಸ್ಟರ್ | |
| 17 | ಅನುಬಂಧ – 17 | (ಬಿಇಎಲ್/ ಇಸಿಐಎಲ್ ನಿಂದ ಇವಿಎಂಗಳ ಪ್ರಮಾಣ ಪತ್ರ | |
| 18 | ಅನುಬಂಧ – 18 | ವಿವಿಪ್ಯಾಟ್‌ನಲ್ಲಿ ಪೇಪರ್ ರೋಲ್ ಅನ್ನು ಅಳವಡಿಸುವುದು | |
| 19 | ಅನುಬಂಧ – 19 | ಇವಿಎಂಗಳ ಸಿದ್ಧತೆಯ ಸಮಯದಲ್ಲಿ ಅಣಕು ಮತದಾನದ ಪ್ರಮಾಣೀಕರಣ | |
| 20 | ಅನುಬಂಧ –20 | ಮತದಾನ ವಿಭಾಗ – ಬ್ಯಾಲಟಿಂಗ್ ಯೂನಿಟ್‌ಗಳ ಹೊರಮುಖ ಮತ್ತು ಸರಣಿ ಕ್ರಮ | |
| 21 | ಅನುಬಂಧ – 21 | ಪ್ರಿಸೈಡಿಂಗ್ ಅಧಿಕಾರಿಯ ವರದಿ | |
| 22 | ಅನುಬಂಧ –22 | ಚುನಾವಣಾ ಅಧಿಕಾರಿಗಳು ಕಂಟ್ರೋಲ್ ಯೂನಿಟ್/ಬ್ಯಾಲಟ್ ಯೂನಿಟ್/ವಿವಿಪ್ಯಾಟ್‌ನ ಸಿದ್ಧತೆ ಸಮಯದಲ್ಲಿ ದೋಷಗಳು/ ತಪ್ಪುಗಳು ಕಂಡು ಬಂದಲ್ಲಿ ನಿವಾರಿಸಲು ಸಲಹೆಗಳು | |
| 23 | ಅನುಬಂಧ –23 | ಮತದಾರನ ಘೋಷಣಾ ನಮೂನೆ | |
| 24 | ಅನುಬಂಧ –24 | ಮತಕೇಂದ್ರದ ಸಿಬ್ಬಂದಿಗೆ ಒದಗಿಸಬೇಕಾದ ಮತದಾನದ ಹೆಚ್ಚುವರಿ ಸಾಮಗ್ರಿಗಳ ಪರಿಶೀಲನಾ ಪಟ್ಟಿ | |
| 25 | ಅನುಬಂಧ –25 | ಮತದಾನದ ಕೊನೆಯಲ್ಲಿ ಪ್ರಿಸೈಡಿಂಗ್ ಅಧಿಕಾರಿಯು ಕ್ಲೋಸ್ ಗುಂಡಿಯನ್ನು ಒತ್ತಿಲ್ಲದ ಕಂಟ್ರೋಲ್ ಯೂನಿಟ್‌ನಿಂದ ಫಲಿತಾಂಶದ ದತ್ತಾಂಶವನ್ನು ಪಡೆಯುವ ವರದಿ | |
| 26 | ಅನುಬಂಧ – 26 | ಮತದಾನದ ಮುಕ್ತಾಯದಲ್ಲಿ ಮತ್ತು 17ಸಿ ನಮೂನೆಯಲ್ಲಿ ನಮೂದಿಸಿದಂತೆ ಪ್ರಿಸೈಡಿಂಗ್ ಅಧಿಕಾರಿಯು ಕ್ಲೋಸ್ ಗುಂಡಿಯನ್ನು ಒತ್ತಿಲ್ಲದ ಸಂದರ್ಭದಲ್ಲಿ ಕಂಟ್ರೋಲ್ ಯೂನಿಟ್‌ನಲ್ಲಿ ಪ್ರದರ್ಶಿತವಾದ ಒಟ್ಟು ಮತಗಳ ನಡುವಿನ ವ್ಯತ್ಯಾಸದ ವರದಿ | |
| 27 | ಅನುಬಂಧ – 27 | ಮತದಾನದ ಮುಕ್ತಾಯದಲ್ಲಿ ಮತ್ತು 17ಸಿ ನಮೂನೆಯಲ್ಲಿ ನಮೂದಿಸಿದಂತೆ ಪ್ರಿಸೈಡಿಂಗ್ ಅಧಿಕಾರಿಯು ಕ್ಲೋಸ್ ಗುಂಡಿಯನ್ನು ಒತ್ತಿಲ್ಲದ ಸಂದರ್ಭದಲ್ಲಿ ಕಂಟ್ರೋಲ್ ಯೂನಿಟ್‌ನಲ್ಲಿ ಪ್ರದರ್ಶಿತವಾದ ಒಟ್ಟು ಮತಗಳ ನಡುವಿನ ವ್ಯತ್ಯಾಸದ ವರದಿ | |
| 28 | ಅನುಬಂಧ – 28 | ಯಾದೃಚ್ಛಿಕವಾಗಿ ಆಯ್ಕೆ ಮಾಡಿದ ಒಂದು ಮತಗಟ್ಟೆಯ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ಕಡ್ಡಾಯವಾಗಿ ಪರಿಶೀಲಿಸುವುದು | |
| 29 | ಅನುಬಂಧ – 29 | ಯಾದೃಚ್ಛಿಕವಾಗಿ ಆಯ್ಕೆ ಮಾಡಿದ 05 ಮತದಾನ ಕೇಂದ್ರಗಳ ವಿವಿಪ್ಯಾಟ್‌ನ ಪೇಪರ್ ಸ್ಲಿಪ್‌ಗಳ ಕಡ್ಡಾಯ ಪರಿಶೀಲನೆ | |
| 30 | ಅನುಬಂಧ – 30 | ಮಾದರಿ ಕಂಟೇನರ್ ಹಾಗೂ ಪಿಜನ್ ಹೋಲ್‌ಗಳು | |
| 31 | ಅನುಬಂಧ – 31 | ಮುದ್ರಿತ ಪೇಪರ್ ಲೆಕ್ಕದ ಫಲಿತಾಂಶ | |
| 32 | ಅನುಬಂಧ –32 | ದಾಖಲಾದ ಮತಗಳ ಲೆಕ್ಕ (ನಮೂನೆ – 17ಸಿ) | |
| 33 | ಅನುಬಂಧ –33 | ವಿವಿಪ್ಯಾಟ್ ಸ್ಲಿಪ್‌ಗಳನ್ನು ಹರಿದು ನಾಶಪಡಿಸಲು ಅಧಿಕಾರಿಯ ನೇಮಕ | |
| 34 | ಅನುಬಂಧ – 34 | ಅಣಕು ಮತದಾನಕ್ಕೆ ಸಂಬಂಧಿಸಿದ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಪ್ರಮಾಣಪತ್ರ | |
| 35 | ಅನುಬಂಧ – 35 | ಅಣಕು ಮತದಾನ ಮತ್ತು ನೈಜ ಮತದಾನಕ್ಕೆ ಸಂಬಂಧಿಸಿದ ಎಲ್ಲಾ ವಿವಿಪ್ಯಾಟ್‌ನ ಪೇಪರ್ ಸ್ಲಿಪ್‌ಗಳ ಪ್ರಮಾಣಪತ್ರ | |
| 36 | ಅನುಬಂಧ –36 | ಸೆಕ್ಟರ್ ಆಫೀಸರ್‌ಗಳು/ ವಲಯ ದಂಡಾಧಿಕಾರಿ ಮೊದಲಾದವರಿಗೆ ವರದಿ ನಮೂನೆ | |
| 37 | ಅನುಬಂಧ –37 | ಎಲ್ಲಾ ಬಳಕೆಯಾಗಿರದ ಮೀಸಲು ಇವಿಎಂಗಳು ಮತ್ತು ವಿವಿಪ್ಯಾಟ್‌ಗಳು ಮತ್ತು ದೋಷಪೂರಿತ ದಾಖಲಾಗದಿರುವ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಪ್ರಮಾಣಪತ್ರ | |

## ಭಾಗ –I

## ಚುನಾವಣೇತರ ಅವಧಿಯಿಂದ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಮೊದಲ ಯಾದೃಚ್ಛೀಕರಣದವರೆಗೆ


| ಕ್ರಮ ಸಂಖ್ಯೆ | ಅಧ್ಯಾಯ ಸಂಖ್ಯೆ | ಪರಿವಿಡಿ | ಪುಟ ಸಂಖ್ಯೆ |
|---|---|---|---|
| 1 | ಅಧ್ಯಾಯ 1 | ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಸಂಗ್ರಹಣೆ ಮತ್ತು ಇವಿಎಂ – ಸಂಗ್ರಹಾಗಾರವನ್ನು ತೆರೆಯುವುದು ಮತ್ತು ಚುನಾವಣೆ ಇಲ್ಲದ ಅವಧಿಯಲ್ಲಿ ಮತ್ತು ತುರ್ತು ಸಮಯದಲ್ಲಿ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಸಾಗಣೆ | 8–9 |
| 2 | ಅಧ್ಯಾಯ 2 | ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಮೊದಲ ಹಂತದ ಪರಿಶೀಲನೆ | 10–14 |
| 3 | ಅಧ್ಯಾಯ 3 | ಇವಿಎಂ/ವಿವಿಪ್ಯಾಟ್‌ಗಳ ಮೊದಲ ಯಾದೃಚ್ಛೀಕರಣ | 15–18 |
| 4 | ಅಧ್ಯಾಯ 4 | ದೋಷಪೂರ್ಣ ಇವಿಎಂ ಮತ್ತು ವಿವಿಪ್ಯಾಟ್‌ಗಳನ್ನು ರಿಪೇರಿ ಮಾಡುವುದು | 19 |
| 5 | ಅಧ್ಯಾಯ 5 | ತರಬೇತಿ ಮತ್ತು ಜಾಗೃತಿ | 20–23 |

**ಅಧ್ಯಾಯ – 1**

# ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಸಂಗ್ರಹಣೆ ಮತ್ತು ಇವಿಎಂ – ಸಂಗ್ರಹಾಗಾರವನ್ನು ತೆರೆಯುವುದು ಮತ್ತು ಚುನಾವಣೆ ಇಲ್ಲದ ಅವಧಿಯಲ್ಲಿ ಮತ್ತು ತುರ್ತು ಸಮಯದಲ್ಲಿ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಸಾಗಣೆ

**ಸಂಗ್ರಹಣಾಗಾರದ ಭೌತಿಕ ಅಂಶಗಳು:**

- ಕೇವಲ (1) ಪ್ರವೇಶ/ನಿರ್ಗಮನ ಸ್ಥಳ.
- ಸಂಗ್ರಹಾಗಾರದ ಎಲ್ಲಾ ಇತರ ಬಾಗಿಲುಗಳು/ಕಿಟಕಿಗಳನ್ನು ಇಟ್ಟಿಗೆ–ಗಾರೆ ಅಥವಾ ಕಾಂಕ್ರೀಟ್ ಬಳಸಿ ಮುಚ್ಚಬೇಕು.
- ಸಂಗ್ರಹಾಗಾರ/ಭದ್ರತಾ ಕೊಠಡಿಯ ಹೊರಗಡೆ ವಿದ್ಯುತ್ ಮೇನ್ ಸ್ವಿಚ್‌ನ್ನು ಅಳವಡಿಸಬೇಕು ಮತ್ತು ಮೊಹರು ಮಾಡಿದ ನಂತರ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಬೇಕು.
- ತೇವ, ಕ್ರಿಮಿಕೀಟಗಳು, ಇಲಿಗಳು ಮುಂತಾದವುಗಳಿಂದ ಮುಕ್ತವಾಗಿರಬೇಕು.
- ಪ್ರವಾಹ/ನೀರು ನಿಂತುಕೊಳ್ಳುವ ಅಪಾಯ/ಬಿರುಕುಗಳು/ಸೋರಿಕೆ/ಒಡೆದ ಕಿಟಕಿ ಇತ್ಯಾದಿಯಿಂದ ಮುಕ್ತವಾಗಿರಬೇಕು.
- ಮುಂಭಾಗದಲ್ಲಿ ಸಾಧ್ಯವಾದಷ್ಟು ಎತ್ತರದ ಸ್ಥಳದಲ್ಲಿ ಗಾಳಿಯ ಪರಿಚಲನೆಗಾಗಿ ಎಗ್ಸಾಸ್ಟ್ ಫ್ಯಾನ್ ಒದಗಿಸಬೇಕು ಮತ್ತು ಗವಾಕ್ಷಿ/ಕಿರುಕಿಟಕಿಗೆ ಸದೃಢವಾದ ಕಬ್ಬಿಣದ ಗ್ರಿಲ್ ಅಳವಡಿಸಬೇಕು.
- ಚುನಾವಣೆಗೆ ಸಂಬಂಧಿಸಿದ ಅಥವಾ ಸಂಬಂಧವಿರದ ಯಾವುದೇ ಇತರ ಸಾಮಗ್ರಿಯನ್ನು (ಮತದಾನ ಮಾಡಿದ ಇವಿಎಂಗಳು/ವಿವಿಪ್ಯಾಟ್‌ಗಳೊಂದಿಗೆ ಇಟ್ಟುಕೊಳ್ಳಬೇಕೆಂದು ಆಯೋಗವು ಗೊತ್ತುಪಡಿಸಿದ ದಸ್ತಾವೇಜುಗಳು/ಸಾಮಗ್ರಿಗಳನ್ನು ಹೊರತುಪಡಿಸಿ) ಇವಿಎಂಗಳು ಮತ್ತು ವಿವಿಪ್ಯಾಟ್‌ಗಳೊಂದಿಗೆ ಇಡುವಂತಿಲ್ಲ.

## 1.1 ಚುನಾವಣೇತರ ಅವಧಿಯಲ್ಲಿ (ಸಿ+45 ದಿನಗಳ ನಂತರ)

### 1.1.1 ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಸಂಗ್ರಹಣೆ:

1. ಖಜಾನೆಯಲ್ಲಿ
2. ಜಿಲ್ಲಾ ಕೇಂದ್ರಗಳು
3. ಮೇಲೆ ಹೇಳಿದಂತೆ ಸಾಧ್ಯವಾಗದಿದ್ದರೆ ಸಿಂಧುವಾದ ಕಾರಣಗಳನ್ನು ನೀಡುವ ಮೂಲಕ ತಾಲ್ಲೂಕು ಕೇಂದ್ರ ಕಾರ್ಯ ಸ್ಥಾನಕ್ಕಿಂತ ಕಡಿಮೆಯಿರದ ಸ್ಥಾನದಲ್ಲಿ ಇಡಬೇಕು.

### 1.1.2 ಸಂಗ್ರಹಾಗಾರದ ಭದ್ರತೆ ಮತ್ತು ಸುರಕ್ಷಾ ಕ್ರಮಗಳು:

- ಇಬ್ಬರು ಪ್ರತ್ಯೇಕ ಅಧಿಕಾರಿಗಳೊಂದಿಗೆ ಪ್ರತಿಯೊಂದು ಲಾಕ್‌ನ ಎಲ್ಲಾ ಕೀಗಳನ್ನು ಹೊಂದಿರುವ ಡಬಲ್ ಲಾಕ್ ವ್ಯವಸ್ಥೆ.
- 247 ಭದ್ರತೆಗಾಗಿ ಕನಿಷ್ಠ ಅರ್ಧ ತುಕಡಿ ಸಶಸ್ತ್ರ ಪೊಲೀಸ್ ಪಡೆ (ಸರ್ಕಾರಿ ಭದ್ರತಾ ಸಿಬ್ಬಂದಿ ಮಾತ್ರ).
- ಪ್ರತಿಯೊಂದು ಪ್ರವೇಶ ಮತ್ತು ನಿರ್ಗಮನ ಹಾಗೂ ಕರ್ತವ್ಯ ಆವರ್ತನ ಸೂಚಿಗಾಗಿ ಲಾಗ್ ಪುಸ್ತಕವನ್ನು ನಿರ್ವಹಿಸುವುದು.
- ಸಂಗ್ರಹಾಗಾರವನ್ನು ತೆರೆಯುವ ಮತ್ತು ಮುಚ್ಚುವ ಕಾಲದಲ್ಲಿ ವಿಡಿಯೋ ಚಿತ್ರೀಕರಣ ಮಾಡಬೇಕು.
- ಒಳಗಡೆ ಮತ್ತು ಹೊರಗಡೆ ಎರಡೂ ಕಡೆ ಅಗ್ನಿಶಾಮಕಗಳ ವ್ಯವಸ್ಥೆ ಇರಬೇಕು.

**1.1.3 ಸಂಗ್ರಹಾಗಾರದ ಕೀಗಳ ಅಭಿರಕ್ಷೆ: ಡಿಇಒ ರವರು ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಸುರಕ್ಷಿತ ಅಭಿರಕ್ಷೆಯ ಪ್ರಭಾರ ಹೊಂದಿರತಕ್ಕದ್ದು:**

- ಬೀಗ–1ರ ಎಲ್ಲಾ ಕೀಗಳು ಡಿಇಒ ರವರ ಬಳಿ ಮತ್ತು ಬೀಗ–2 ಎಲ್ಲಾ ಕೀಗಳು ಡೆಪ್ಯುಟಿ ಡಿಇಒ ರವರ ಬಳಿ ಇರತಕ್ಕದ್ದು.
- ಜಿಲ್ಲಾ ಕೇಂದ್ರ ಸ್ಥಾನದಿಂದ ಹೊರಗಿರುವ ಸಂಗ್ರಹಾಗಾರದ ಬೀಗ–1ರ ಎಲ್ಲಾ ಕೀಗಳು ಎಸ್‌ಡಿಎಂ ಅವರ ಬಳಿ ಮತ್ತು ಬೀಗ–2ರ ಎಲ್ಲಾ ಕೀಗಳು ತಹಸೀಲ್ದಾರ್‌ರವರ ಬಳಿಯೂ ಇರತಕ್ಕದ್ದು.
- ಖಜಾನೆಯಲ್ಲಿ ಕೀಗಳನ್ನು ಇಡಬೇಕು ಮತ್ತು ಕೀಗಳನ್ನು ಇಡುವುದಕ್ಕೆ ಮತ್ತು ತೆಗೆದುಕೊಳ್ಳುವುದಕ್ಕೆ ಸೂಕ್ತ ಲಾಗ್ ಬುಕ್‌ನ್ನು ನಿರ್ವಹಣೆ ಮಾಡಬೇಕು.
- ಸಿಟಿಸಿಯ ಭಾಗವಾಗಿ ಕೀಗಳನ್ನು ಹಸ್ತಾಂತರಿಸುವುದು ಮತ್ತು ತೆಗೆದುಕೊಳ್ಳುವುದು.

**1.1.4 ಸಂಗ್ರಹಾಗಾರವನ್ನು ತೆರೆಯಲು ಶಿಷ್ಟಾಚಾರ ವ್ಯವಸ್ಥೆ:**

- ಸಂಗ್ರಹಾಗಾರದಿಂದ ಇವಿಎಂ/ವಿವಿಪ್ಯಾಟ್‌ಗಳನ್ನು ತೆರೆಯುವ ಮತ್ತು ಮುಕ್ತಾಯದ ಕುರಿತಾದ ದಿನಾಂಕ ಮತ್ತು ಸಮಯವನ್ನು, ಕನಿಷ್ಠ ಪಕ್ಷ 24 ಗಂಟೆಗಳು ಮುಂಚಿತವಾಗಿ, ರಾಷ್ಟ್ರೀಯ ಮತ್ತು ರಾಜ್ಯ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳಿಗೆ ಲಿಖಿತದಲ್ಲಿ ಮಾಹಿತಿಯನ್ನು ನೀಡಬೇಕು.
- ಚುನಾವಣಾ ಅರ್ಜಿ ಅಥವಾ ನ್ಯಾಯಾಲಯ ಪ್ರಕರಣಗಳಲ್ಲಿ ಇತ್ಯರ್ಥದಲ್ಲಿರುವ ಇವಿಎಂ/ವಿವಿಪ್ಯಾಟ್‌ಗಳನ್ನು ಇಟ್ಟಿರುವ ಸಂಗ್ರಹಾಗಾರವನ್ನು ಯಾವುದೇ ಉದ್ದೇಶಗಳಿಗಾಗಿ ತೆರೆಯುವಂತಿಲ್ಲ.
- ಇವಿಎಂ ಸಂಗ್ರಹಾಗಾರವನ್ನು ತೆರೆಯುವ ಮತ್ತು ಮುಚ್ಚುವ ಉದ್ದೇಶಗಳಿಗಾಗಿ ಡಿಇಒ ರವರು ತಹಶೀಲ್ದಾರ್ ದರ್ಜೆಗಿಂತ ಕಡಿಮೆಯಲ್ಲದ ಅಧಿಕಾರಿಯನ್ನು ನಾಮನಿರ್ದೇಶನ ಮಾಡಬೇಕು.
- ಸಂಗ್ರಹಾಗಾರವನ್ನು ತೆರೆಯುವ ಮತ್ತು ಮುಚ್ಚುವ ಕಾಲದಲ್ಲಿ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಉಪಸ್ಥಿತರಿರಲು ಅವಕಾಶ ನೀಡಬೇಕು.
- ಕಡ್ಡಾಯವಾಗಿ ವಿಡಿಯೋಚಿತ್ರೀಕರಣವನ್ನು ನಡೆಸಬೇಕು.
- ಪ್ರವಾಹ ಅಥವಾ ಬೆಂಕಿ ಮುಂತಾದ ತುರ್ತು ಸಂದರ್ಭದಲ್ಲಿ, ವಿಡಿಯೋ ಚಿತ್ರೀಕರಣ ಸಾಧ್ಯವಾಗದಿದ್ದರೆ, ಮೊಬೈಲ್‌ನ ಮೂಲಕ ಸಂಗ್ರಹಾಗಾರವನ್ನು ತೆರೆಯುವ/ಮುಚ್ಚುವ ವಿಡಿಯೋವನ್ನು ಮಾಡತಕ್ಕದ್ದು.
- ಪ್ರವಾಹ ಅಥವಾ ಬೆಂಕಿಯಂಥ ತುರ್ತು ಸಂದರ್ಭದಲ್ಲಿ ಸಿಇಒ/ಡಿಇಒ ರವರು ಆಯೋಗಕ್ಕೆ ಸೂಕ್ತ ಮಾಹಿತಿ ನೀಡಿ, ಇವಿಎಂಗಳು/ವಿವಿಪ್ಯಾಟ್‌ಗಳನ್ನು ಸ್ಥಳಾಂತರಿಸಬಹುದು ಮತ್ತು ಘಟನೋತ್ತರ ಅನುಮೋದನೆಯನ್ನು ಸಹ ಪಡೆಯಬೇಕು.
- ಅನುಬಂಧ–1ರ ನಮೂನೆಯಂತೆ ಪ್ರತಿಯೊಂದು ಜಿಲ್ಲೆಗಾಗಿ ಮಾಸ್ಟರ್ ಸ್ಟಾಕ್ ರಿಜಿಸ್ಟರ್ (ಎಂಎಸ್‌ಆರ್)ನಲ್ಲಿ ಇವಿಎಂಗಳು/ವಿವಿಪ್ಯಾಟ್‌ಗಳ ವಿವರಗಳನ್ನು ನಮೂದಿಸಬೇಕು.

**1.1.5 ಡಿಇಒ ಅವರಿಂದ ಸಂಗ್ರಹಾಗಾರದ ಮಾಸಿಕ/ತ್ರೈಮಾಸಿಕ ಪರಿಶೀಲನೆ:**

- ಪ್ರತೀ ತಿಂಗಳು ಮೊಹರು ಮಾಡಲಾದ ಸಂಗ್ರಹಾಗಾರದ ಮಾಸಿಕ ಪರಿಶೀಲನೆ ಮಾಡಬೇಕು ಮತ್ತು ಪರಿಶೀಲನೆ ವರದಿಯನ್ನು ಅನುಬಂಧ–2ರಲ್ಲಿ, ಸಂಬಂಧಪಟ್ಟ ಸಿಇಒ ರವರಿಗೆ ತರುವಾಯದ ತಿಂಗಳ 5ನೇ ದಿನಾಂಕದೊಳಗೆ ಸಲ್ಲಿಸಬೇಕು.
- ಪ್ರತೀ ವರ್ಷ ಏಪ್ರಿಲ್, ಜುಲೈ, ಅಕ್ಟೋಬರ್, ಮತ್ತು ಜನವರಿಯ 5ನೇ ದಿನಾಂಕದೊಳಗೆ ಸಂಗ್ರಹಾಗಾರವನ್ನು ತೆಗೆದು ಪರಿಶೀಲಿಸಿ ಅದರ ಆಂತರಿಕ ಸ್ಥಿತಿಯ ತ್ರೈಮಾಸಿಕ ಪರಿಶೀಲನಾ ವರದಿಯನ್ನು ತಯಾರಿಸಬೇಕು ಮತ್ತು ವರದಿಯನ್ನು ಸಂಬಂಧಪಟ್ಟ ಸಿಇಒ ರವರಿಗೆ ಅನುಬಂಧ–2ರಲ್ಲಿ ಸಲ್ಲಿಸಬೇಕು.
- ಸಿಇಒ ರವರು ಪ್ರತೀ ತಿಂಗಳ 15ನೇ ದಿನಾಂಕದೊಳಗೆ ಕ್ರೋಢೀಕೃತ ವರದಿಯನ್ನು ಆಯೋಗಕ್ಕೆ ಸಲ್ಲಿಸತಕ್ಕದ್ದು.

**1.1.6** ಎಫ್‌ಎಲ್‌ಸಿಯು ಪೂರ್ಣಗೊಂಡ ತರುವಾಯ, ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಕನಿಷ್ಠ 1 ಸೆಕ್ಷನ್ ಭದ್ರತೆ ಮತ್ತು ಸಿಸಿಟಿವಿ ಕವರೇಜ್‌ನೊಂದಿಗೆ ಮೊದಲ ಯಾದೃಚ್ಛೀಕರಣದವರೆಗೆ ಇವಿಎಂಗಳು/ವಿವಿಪ್ಯಾಟ್‌ಗಳನ್ನು ಭದ್ರತಾ ಕೊಠಡಿಯಲ್ಲಿ ಇಟ್ಟಿರಬೇಕು.

ಅಧ್ಯಾಯ – 2

# ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಮೊದಲ ಹಂತದ ಪರಿಶೀಲನೆ (ಎಫ್‌ಎಲ್‌ಸಿ)

**2.1 ಮೊದಲ ಹಂತದ ಪರಿಶೀಲನೆ (ಎಫ್‌ಎಲ್‌ಸಿ)ಯ ಸಮಗ್ರ ಜವಾಬ್ದಾರಿ–** ಜಿಲ್ಲಾ ಚುನಾವಣಾಧಿಕಾರಿಯು, ಸಮಗ್ರ ಎಫ್‌ಎಲ್‌ಸಿ ಪ್ರಕ್ರಿಯೆಗೆ ಜವಾಬ್ದಾರರಾಗಿರತಕ್ಕದ್ದು ಮತ್ತು ಎಫ್‌ಎಲ್‌ಸಿ ಮೇಲ್ವಿಚಾರಕರಾಗಿ ಮೊದಲ ಹಂತದ ಪರಿಶೀಲನೆ ಪ್ರಕ್ರಿಯೆ ಬಗ್ಗೆ ಸಂಪೂರ್ಣವಾಗಿ ತರಬೇತಿ ಪಡೆದ ಹೆಚ್ಚುವರಿ/ಉಪ ಜಿಲ್ಲಾ ಚುನಾವಣಾಧಿಕಾರಿಯವರನ್ನು ನೇಮಿಸುವ ಮೂಲಕ ಎಫ್‌ಎಲ್‌ಸಿ ಸೂಚನೆಗಳ ಕಟ್ಟುನಿಟ್ಟಿನ ಪಾಲನೆ ಮತ್ತು ಅನುಸರಣೆಯನ್ನು ಸುನಿಶ್ಚಿತಗೊಳಿಸತಕ್ಕದ್ದು.

**2.2 ಯಾವಾಗ ಎಫ್‌ಎಲ್‌ಸಿಯನ್ನು ಮಾಡಬೇಕು:**

- ರಾಜ್ಯ ವಿಧಾನಸಭೆ ಮತ್ತು ಲೋಕಸಭೆಗೆ ನಡೆಯುವ ಪ್ರತಿಯೊಂದು ಸಾರ್ವತ್ರಿಕ ಮತ್ತು ಉಪ–ಚುನಾವಣೆಗೆ ಮುಂಚೆ ಎಫ್‌ಎಲ್‌ಸಿ ನಡೆಸಬೇಕು.
- ಉಪ–ಚುನಾವಣೆಯ ಸಂದರ್ಭದಲ್ಲಿ ಸ್ಥಾನ ತೆರವಾದ ಒಂದು ತಿಂಗಳೊಳಗೆ.
- ರಾಜ್ಯ ವಿಧಾನಸಭೆಗೆ ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ ಸುಮಾರು 120 ದಿನದ ಮತ್ತು ಲೋಕಸಭೆಯ ಸಂದರ್ಭದಲ್ಲಿ ಸುಮಾರು 180 ದಿನದ ಅವಧಿಯಲ್ಲಿ.
- ಮುಖ್ಯವಾಗಿ ಚುನಾವಣೆ ನಡೆಸಲು ಅಧಿಸೂಚನೆ ಹೊರಡಿಸುವುದಕ್ಕೆ ಮುಂಚಿತವಾಗಿಯೇ ಎಫ್‌ಎಲ್‌ಸಿ ಯನ್ನು ಪೂರ್ಣಗೊಳಿಸತಕ್ಕದ್ದು.

**2.3 ಎಫ್‌ಎಲ್‌ಸಿಯ ವೇಳಾಪಟ್ಟಿ:**

- ಸಿಇಓ/ಡಿಇಓ ರವರು ಇವಿಎಂ ತಯಾರಕರ (ಇಸಿಐಎಲ್ ಮತ್ತು ಬಿಇಎಲ್) ಜೊತೆ ಸಮಾಲೋಚನೆ ನಡೆಸಿ ಎಫ್‌ಎಲ್‌ಸಿಗಾಗಿ ವೇಳಾಪಟ್ಟಿಯೊಂದನ್ನು ಸಿದ್ಧಪಡಿಸಬೇಕು.

**ರಾಜಕೀಯ ಪಕ್ಷಗಳಿಗೆ ಸೂಚನೆ:**

- ಎಫ್‌ಎಲ್‌ಸಿ ನಡೆಸುವ ಕಾಲದಲ್ಲಿ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಉಪಸ್ಥಿತರಿರುವುದನ್ನು ಖಚಿತಪಡಿಸಿಕೊಳ್ಳಬೇಕು.
- ಎಫ್‌ಎಲ್‌ಸಿ ವೇಳಾಪಟ್ಟಿಯ ಬಗ್ಗೆ ಎಫ್‌ಎಲ್‌ಸಿ ಆರಂಭವಾಗುವುದಕ್ಕಿಂತ ಕನಿಷ್ಠ 2 ದಿನಗಳ ಮುಂಚೆ ಲಿಖಿತವಾಗಿ ಮಾನ್ಯತೆಪಡೆದ ಎಲ್ಲಾ ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ರಾಜಕೀಯ ಪಕ್ಷದ ಜಿಲ್ಲಾ ಕೇಂದ್ರ ಕಚೇರಿಗೆ ಮಾಹಿತಿ ನೀಡಬೇಕು ಮತ್ತು ಅದರ ಪ್ರತಿಯನ್ನು ರಾಜ್ಯ ಕೇಂದ್ರ ಕಚೇರಿಗೆ ಕಳುಹಿಸಬೇಕು.
- ಅನುಬಂಧ–3 ರಲ್ಲಿ, ಎಫ್‌ಎಲ್‌ಸಿ ಸಭಾಂಗಣದಲ್ಲಿ ಇಟ್ಟಿರುವ ರಿಜಿಸ್ಟರ್‌ನಲ್ಲಿ ಪ್ರತಿದಿನ ಅವರ ಸಹಿಗಳನ್ನು ದಾಖಲಿಸಬೇಕು.
- ರಜಾದಿನಗಳನ್ನು ಒಳಗೊಂಡಂತೆ ಎಲ್ಲಾ ದಿನಗಳಂದು ಬೆಳಗ್ಗೆ 9ರಿಂದ ರಾತ್ರಿ 7ರ ತನಕ ಎಫ್‌ಎಲ್‌ಸಿಯ ಸಮಯವು ಇರುವುದನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು.

**2.4 ಎಫ್‌ಎಲ್‌ಸಿ ಆವರಣದಲ್ಲಿ ಏರ್ಪಾಡುಗಳು:**

ಎ. ಇವಿಎಂಗಳು/ವಿವಿಪ್ಯಾಟ್‌ಗಳು, ಡಿಇಓ ರವರು ನಾಮನಿರ್ದೇಶಿಸಿದ ಅಧಿಕಾರಿಗಳು, ಬಿಇಎಲ್/ಇಸಿಐಎಲ್‌ನ ಎಂಜಿನಿಯರ್‌ಗಳು ಮತ್ತು ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಎಲ್ಲರಿಗೂ ಸಾಕಾಗುವಷ್ಟು ವಿಶಾಲವಾದ ಸ್ಥಳಾವಕಾಶ ಇರಬೇಕು.

ಬಿ. ಉತ್ತಮ ಬೆಳಕು, ಗಾಳಿಯಾಡುವ ಮತ್ತು ಧೂಳು ರಹಿತವಾದ ದೊಡ್ಡ ಸಭಾಂಗಣವಿರಬೇಕು.ಪ್ರತಿಯೊಂದು ಮೇಜು ಪ್ರಕಾಶಮಾನವಾಗಿ ಕಾಣುವ ಹಾಗೆ ಉಜ್ವಲವಾಗಿ ಬೆಳಗುವ ಹೆಚ್ಚು ಬಿಸಿಯಾಗದ ಎಲ್‌ಇಡಿ ದೀಪಗಳನ್ನು ಅಳವಡಿಸಬೇಕು.

ಸಿ. ಎಫ್‌ಎಲ್‌ಸಿ ಪ್ರದೇಶಕ್ಕೆ ಪೊಲೀಸರು ಸಂಪೂರ್ಣವಾಗಿ ಬ್ಯಾರಿಕೇಡ್ ಹಾಕಿ, ಸ್ಯಾನಿಟೈಸ್ ಮಾಡಬೇಕು.

ಡಿ. ಎಫ್‌ಎಲ್‌ಸಿ ಪ್ರಕ್ರಿಯೆ ಮುಂತಾದವನ್ನು ನಮೂದಿಸುವ ಉದ್ದೇಶಕ್ಕಾಗಿ ಆಯೋಗವು ಅನುಮತಿಸಿದ ಯಾವುದೇ ವಿದ್ಯುನ್ಮಾನ ಸಾಧನಗಳನ್ನು ಹೊರತುಪಡಿಸಿ, ಸಭಾಂಗಣವು ವಿದ್ಯುನ್ಮಾನ ಸಾಧನಗಳಿಂದ ಮುಕ್ತವಾಗಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

ಇ. ಸಭಾಂಗಣದ ಒಳಗೆ ಮತ್ತು ಹೊರಗೆ ಕುಡಿಯುವ ನೀರು, ಶೌಚಾಲಯಗಳು, ಪ್ರಥಮ ಚಿಕಿತ್ಸೆ, ಅಗ್ನಿಶಾಮಕಗಳು,

ಅಗ್ನಿ ಎಚ್ಚರಿಕೆ ಗಂಟೆಗಳ ಸೌಲಭ್ಯಗಳನ್ನು ಸಮರ್ಪಕವಾಗಿ ವ್ಯವಸ್ಥೆಗೊಳಿಸಿರಬೇಕು.

ಎಫ್. ಸಭಾಂಗಣಕ್ಕೆ ಒಂದೇ ಒಂದು ಪ್ರವೇಶದ್ವಾರ ಮತ್ತು ನಿರ್ಗಮನ ದ್ವಾರವಿರಬೇಕು.ಜೊತೆಗೆ ಅದಕ್ಕೆ 247 ಅವಧಿಯ ಸಿಸಿಟಿವಿ ಕವರೇಜ್‌ನೊಂದಿಗೆ ಸಶಸ್ತ್ರ ಪೊಲೀಸ್ ಪಡೆಯ (ಕನಿಷ್ಠ ಒಂದು ತುಕಡಿ) ಕಾವಲಿರಬೇಕು.

ಜಿ. ಎಫ್‌ಎಲ್‌ಸಿ ಹಾಲ್‌ನಲ್ಲಿ ಸೂಚನೆಗಳನ್ನು ಹಂತ ಹಂತವಾಗಿ ನಮೂದಿಸಿರುವ ಸವಿವರವಾದ ಮಾದರಿಕಾರ್ಯ ವಿಧಾನದ (ಎಸ್‌ಒಪಿ) ಪ್ರತಿಯನ್ನು ಅಂಟಿಸಬೇಕು.

ಹೆಚ್. ಅಧಿಕೃತ ಅಧಿಕಾರಿಯ ಗುರುತಿನ ಚೀಟಿ/ಡಿಇಒ ರವರಿಂದ ನೀಡಿದ ಪಾಸುಗಳನ್ನು ಹಾಜರುಪಡಿಸಿ ಲೋಹಶೋಧಕ ಬಾಗಿಲು ಚೌಕಟ್ಟಿನ (ಡಿಎಫ್‌ಎಂಡಿ) ಮೂಲಕ ಸಭಾಂಗಣಕ್ಕೆ ಪ್ರವೇಶಿಸಬೇಕು.

ಐ. ಪ್ರತಿಯೊಬ್ಬ ವ್ಯಕ್ತಿ / ಅಧಿಕಾರಿ / ಇಂಜಿನಿಯರ್‌ರನ್ನು ಪ್ರತಿ ಪ್ರವೇಶ ಸಂದರ್ಭದಲ್ಲಿ ಸೂಕ್ತ ತಪಾಸಣೆ ಮಾಡಬೇಕು ಜೊತೆಗೆ ಪ್ರತಿ ಆಗಮನ ಮತ್ತು ನಿರ್ಗಮನವನ್ನು ಲಾಗ್ ಪುಸ್ತಕದಲ್ಲಿ ದಾಖಲಿಸಬೇಕು.

ಜೆ. ಸೆಲ್‌ಫೋನ್‌ಗಳು, ಕ್ಯಾಮೆರಾಗಳು, ಸ್ಪೈ ಪೆನ್ ಇತ್ಯಾದಿಗಳನ್ನು ಎಫ್‌ಎಲ್‌ಸಿ ಸಭಾಂಗಣದೊಳಗೆ ಒಯ್ಯಲು ಅವಕಾಶ ನೀಡಬಾರದು ಮತ್ತು ಅವುಗಳನ್ನು ಸಭಾಂಗಣದ ಹೊರಗೆ ಸಂಗ್ರಹ ಕೇಂದ್ರವನ್ನು ನಿರ್ಮಿಸಿ ಅಲ್ಲಿ ಇರಿಸಬೇಕು. ಆದರೆ, **ಸೂಕ್ತ ಕಾರಣದೊಂದಿಗೆ ಮೊಬೈಲ್ ಆ್ಯಪ್ ಬಳಸಿ ಇಎಂಎಸ್‌ನಲ್ಲಿ ಎಫ್‌ಎಲ್‌ಸಿ – ಓಕೆ ಗುರುತನ್ನು ನಮೂದಿಸುವುದಕ್ಕಾಗಿ ಡಿಇಒ ರವರು ನಾಮನಿರ್ದೇಶನ ಮಾಡಿದ ಚುನಾವಣಾ ಅಧಿಕಾರಿಗಳು ಬಳಸಬೇಕಾದ ಎರಡು ಮೊಬೈಲ್‌ಗಳನ್ನು ಬಳಸಲು ಮತ್ತು ಎಫ್‌ಎಲ್‌ಸಿ ರಿಜೆಕ್ಟ್‌ಗುರುತು ಮಾಡಲು ಬಿಇಎಲ್/ಇಸಿಐಎಲ್ ಎಂಜಿನಿಯರ್‌ವರೆಗೆ ಒಂದು ಮೊಬೈಲ್ ಬಳಸಲು ಅವಕಾಶವಿದೆ.**

ಕೆ. ಸಭಾಂಗಣದ ಒಳಗೆ ಎಫ್‌ಎಲ್‌ಸಿ ಮಾದರಿ ಕಾರ್ಯವಿಧಾನ (ಎಸ್‌ಒಪಿ)ದಲ್ಲಿ ನಮೂದಿಸಿರುವಂತಹುಗಳನ್ನು ಹೊರತುಪಡಿಸಿ ಇತರ ಯಾವುದೇ ಸಾಧನವನ್ನು ಒಯ್ಯುವುದಕ್ಕೆ ಅನುಮತಿಯಿರುವುದಿಲ್ಲ.

ಎಲ್. ಒಟ್ಟಾರೆ ಎಫ್‌ಎಲ್‌ಸಿ ಪ್ರಕ್ರಿಯೆಯನ್ನು ವೆಬ್ ಕಾಸ್ಟಿಂಗ್ ಮಾಡಬೇಕು ಮತ್ತು ನಿಯಂತ್ರಣ ಕೊಠಡಿಯಲ್ಲಿ ಅದನ್ನು ಡಿಇಒ ಮತ್ತು ಸಿಇಒ ಮಟ್ಟದಲ್ಲಿ ಮೇಲ್ವಿಚಾರಣೆ ಮಾಡಬೇಕು ಮತ್ತು ವರದಿಯನ್ನು ಭಾರತ ಚುನಾವಣಾ ಆಯೋಗಕ್ಕೆ ಸಲ್ಲಿಸಬೇಕು.

**ಎಮ್. ಎಫ್‌ಎಲ್‌ಸಿಯ ಸನ್ನದ್ಧತೆ ಮತ್ತು ಗುಣಮಟ್ಟದ ಪರಿಶೀಲನೆ:**

- ಸಂಸತ್ತು/ವಿಧಾನಸಭಾ ಕ್ಷೇತ್ರಕ್ಕೆ(ಗಳಿಗೆ) ಉಪ–ಚುನಾವಣೆಯ(ಗಳ) ಸಂದರ್ಭದಲ್ಲಿ, ಸಂಬಂಧಪಟ್ಟ ರಾಜ್ಯ/ ಕೇಂದ್ರಾಡಳಿತ ಪ್ರದೇಶದ ಇವಿಎಂ ನೋಡಲ್ ಅಧಿಕಾರಿಯು ಪರಿಶೀಲನೆ ನಡೆಸತಕ್ಕದ್ದು.
- ಲೋಕಸಭೆ/ರಾಜ್ಯ ವಿಧಾನಸಭೆಗೆ ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ, ಇತರ ರಾಜ್ಯಗಳ/ಕೇಂದ್ರಾಡಳಿತ ಪ್ರದೇಶಗಳ ನೋಡಲ್ ಅಧಿಕಾರಿಯ(ಗಳ)ನ್ನು ಅನಿರೀಕ್ಷಿತ ಪರಿಶೀಲನೆ ಮಾಡಲು ನಿಯೋಜಿಸತಕ್ಕದ್ದು. ಲೋಕಸಭೆ ಚುನಾವಣೆಯಲ್ಲಿ ರಾಜ್ಯ ಅಧಿಕಾರಿಗಳು/ಎನ್‌ಎಲ್‌ಎಮ್‌ಟಿಗಳು/ಇಸಿಐ ಸಮಾಲೋಚಕರನ್ನು ಸಹ ನಿಯೋಜಿಸಬಹುದು.
- **ಅನುಬಂಧ–4** ರಲ್ಲಿ ಅವರು ಆಯೋಗಕ್ಕೆ ವರದಿಯನ್ನು ಸಲ್ಲಿಸಬೇಕು.

**2.5 ಎಫ್‌ಎಲ್‌ಸಿಯಲ್ಲಿ ಸಿಬ್ಬಂದಿ ಬಳಕೆ:**

ಎ. ಎಫ್‌ಎಲ್‌ಸಿಯನ್ನು ಬಿಇಎಲ್ ಮತ್ತು ಇಸಿಐಎಲ್‌ನ ಅಧಿಕೃತಗೊಳಿಸಿದ ಇಂಜಿನಿಯರ್‌ಗಳು ಮಾತ್ರ ನಡೆಸಬೇಕು. ತನ್ನ ಇಂಜಿನಿಯರ್‌ಗಳ ಸಮಗ್ರತೆ, ಕಾರ್ಯದಕ್ಷತೆ ಮತ್ತು ಸಕ್ಷಮತೆಗೆ ಬಿಇಎಲ್ ಮತ್ತು ಇಸಿಐಎಲ್ ಸಂಪೂರ್ಣ ಜವಾಬ್ದಾರಿಯಾಗಿರತಕ್ಕದ್ದು.

ಬಿ. ಎಫ್‌ಎಲ್‌ಸಿ ನಡೆಸುವುದಕ್ಕೆ ಜಿಲ್ಲಾ ಮಟ್ಟದ ಹಂಚಿಕೆಗಾಗಿ ಸಿಇಒ ರವರು ಬಿಇಎಲ್/ಇಸಿಐಎಲ್ ನಿಯೋಜಿಸಿರುವ ಇಂಜಿನಿಯರ್‌ಗಳ ಯಾದೃಚ್ಛಿಕ ಆಯ್ಕೆ ಮಾಡಿ, ಪಟ್ಟಿಯನ್ನು ತಯಾರಿಸಿ, ಆ ಇಂಜಿನಿಯರ್‌ಗಳ ದೂರವಾಣಿ ಸಹಿತ ಈ ಪಟ್ಟಿಯನ್ನು ಡಿಇಒ ರವರಿಗೆ ಕಳುಹಿಸಬೇಕು.

ಸಿ. ಎಫ್‌ಎಲ್‌ಸಿಯನ್ನು ಮೇಲ್ವಿಚಾರಣೆ ಮಾಡುವುದಕ್ಕೆ ಬಿಇಎಲ್/ಇಸಿಐಎಲ್ ನಿಂದ ರಾಜ್ಯ ಕೇಂದ್ರ ಕಾರ್ಯಸ್ಥಾನದಲ್ಲಿ ಮತ್ತು ಪ್ರತೀ ಜಿಲ್ಲಾ ಕೇಂದ್ರ ಕಾರ್ಯಸ್ಥಾನಗಳಲ್ಲಿ ಹಿರಿಯ ಶ್ರೇಣಿಯ ಇಂಜಿನಿಯರುಗಳನ್ನು ನಿಯುಕ್ತಿಗೊಳಿಸುವುದು.

ಡಿ. ದೈನಂದಿನ ಮೇಲ್ವಿಚಾರಣೆ ಮತ್ತು ಸಮನ್ವಯಕ್ಕಾಗಿ ಕ್ಷೇತ್ರದಲ್ಲಿಯೇ ಉಳಿಯಲು 4–5 ಜಿಲ್ಲೆಗಳಿಗೆ ಒಬ್ಬ ಮ್ಯಾನೇಜರ್‌ನನ್ನು ಬಿಇಎಲ್/ಇಸಿಐಎಲ್ ನಿಯೋಜಿಸಬೇಕು.

ಇ. ಬಿಇಎಲ್ ಮತ್ತು ಇಸಿಐಎಲ್‌ನ ಅಧಿಕೃತ ಇಂಜಿನಿಯರುಗಳು/ತಾಂತ್ರಿಕ ಸಿಬ್ಬಂದಿಗಳನ್ನು ಹೊರತುಪಡಿಸಿ ಯಾರೇ ಇಂಜಿನಿಯರ್‌ಗಳು, ತಂತ್ರಜ್ಞರು ಅಥವಾ ಇತರೆ ತಾಂತ್ರಿಕ ಸಿಬ್ಬಂದಿಯವರು ಎಫ್‌ಎಲ್‌ಸಿ ಸಭಾಂಗಣಕ್ಕೆ ಪ್ರವೇಶಿಸುವಂತಿಲ್ಲ.

ಎಫ್. ಡಿಇಓ ರವರು ತಯಾರಕರುಗಳೊಂದಿಗೆ ಸಮಾಲೋಚಿಸಿ, ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಶುಚಿಗೊಳಿಸುವುದಕ್ಕೆ, ಪ್ಯಾಕ್ ಬಿಚ್ಚಲು ಮತ್ತು ಪ್ಯಾಕ್ ಮಾಡಲು ಸಾಕಷ್ಟು ಕೌಶಲ್ಯರಹಿತ ಕಾರ್ಮಿಕರನ್ನು ನಿಯೋಜಿಸಬೇಕು.

**2.6 ಎಫ್‌ಎಲ್‌ಸಿ ವೇಳೆ ಮಾಡಬೇಕಾದ ಕಾರ್ಯ:**

ಎ) **ಮತಯಂತ್ರಗಳನ್ನು ಸ್ವಚ್ಛಗೊಳಿಸುವುದು ಎಂದರೆ;** ಎಫ್‌ಎಲ್‌ಸಿಯ ಪ್ರಭಾರಿ ಅಧಿಕಾರಿ ಮತ್ತು ಇಂಜಿನಿಯರ್‌ಗಳ ಮೇಲ್ವಿಚಾರಣೆಯಲ್ಲಿ ಸುರಕ್ಷಿತ ಸ್ಥಳದಲ್ಲಿ ವಿಳಾಸದ ಟ್ಯಾಗ್‌ಗಳು, ಮತಪತ್ರಗಳನ್ನು ತೆಗೆದು ಹಾಕುವುದು, ಸಿಯು ಮತ್ತು ಬಿಯುಗಳ ಮೇಲು ಬರಹಗಳನ್ನು ಅಳಿಸುವುದು, ಹಿಂದಿನ ಮತದಾನ ದತ್ತಾಂಶ ವಿವರಗಳನ್ನು ಅಳಿಸಿ ಹಾಕುವುದು, ಸಿಯು ಮತ್ತು ಬಿಯುಗಳ ಮೇಲಿನ ಧೂಳು, ತೆಗೆಯುವುದು, ಇತ್ಯಾದಿ.

ಬಿ) ಸಾಗಿಸುವ ಪೆಟ್ಟಿಗೆಗಳು, ಇವಿಎಂ, ವಿವಿಪ್ಯಾಟ್, ಸಂಪರ್ಕ ಕಲ್ಪಿಸುವ ಕೇಬಲ್‌ಗಳು, ಕನೆಕ್ಟರ್, ಲ್ಯಾಚ್‌ಗಳು ಮುಂತಾದವುಗಳ ಪ್ಲಾಸ್ಟಿಕ್ ಭಾಗಗಳು, ಲ್ಯಾಚ್‌ಗಳು, ಸ್ವಿಚ್‌ಗಳು ಇತ್ಯಾದಿ ಭೌತಿಕ ರಚನೆಯ ಭಾಗಗಳು ಒಡೆದು ಹೋಗಿಲ್ಲವೆಂಬುದನ್ನು ಖಾತ್ರಿಪಡಿಸಿಕೊಳ್ಳಲು ಅವುಗಳ ಭೌತಿಕ ಪರಿಶೀಲನೆ ಮಾಡುವುದು.

ಸಿ) **ಸಂಪೂರ್ಣ ಕಾರ್ಯನಿರ್ವಹಣೆ ಬಗ್ಗೆ ತಪಾಸಣೆಗಳು:**

- ತಯಾರಕರು ನಿಗದಿಪಡಿಸಿದಂತೆ ಪ್ರತೀ ಬಿಯು, ಸಿಯು ಮತ್ತು ವಿವಿಪ್ಯಾಟ್‌ನ ಡಯಾಗ್ನೊಸ್ಟಿಕ್ ಪರೀಕ್ಷೆ.
- ಸಿಯು, ಬಿಯು ನಲ್ಲಿರುವ ಎಲ್ಲ ಸ್ವಿಚ್ಚುಗಳು, ಬಾಗಿಲುಗಳು (ಫ್ಲಾಪ್‌ಗಳು), ಮೊಹರು ಮಾಡಲು ಒದಗಿಸಿದ ಏರ್ಪಾಟುಗಳು ಅಕ್ರಿಲಿಕ್ ಪರದೆ ಮೇಲಿನ ಸ್ಕ್ರಾಚ್‌ಗಳು ಇತ್ಯಾದಿಗಳನ್ನು ತಪಾಸಣೆ ಮಾಡಬೇಕು.
- ಎಲ್ಲ ಸ್ವಿಚ್ಚುಗಳ ಕಾರ್ಯಸ್ಪಂದನೆಯನ್ನು ತಪಾಸಣೆ ಮಾಡಬೇಕು ಮತ್ತು ಇವಿಎಂನ ಎಲ್ಲ ಘಟಕ ಭಾಗಗಳು ಅಸಲಿ ಎಂಬುದನ್ನು ದೃಢಪಡಿಸಿಕೊಳ್ಳಲು ಇಂಜಿನಿಯರ್‌ಗಳು, ಎಸ್‌ಒಪಿಯ ಅನುಸಾರ ತಯಾರಕರುಗಳು ನಿಗದಿಪಡಿಸಿರುವ ಪರೀಕ್ಷೆಗಳನ್ನು ನಡೆಸಬೇಕು.
- ಎಫ್‌ಎಲ್‌ಸಿ ನಡೆಸುವ ವೇಳೆ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ಅಧಿಕೃತ ಇಂಜಿನಿಯರ್‌ಗಳು ಬಿಯು ಮತ್ತು ಸಿಯುನ ಪ್ಲಾಸ್ಟಿಕ್ ಕ್ಯಾಬಿನೆಟ್‌ಗಳನ್ನು ತೆರೆದು ಖಚಿತಪಡಿಸಬೇಕು ಮತ್ತು ಪಿಸಿಬಿ ಮತ್ತು ಇತರ ಘಟಕ ಭಾಗಗಳನ್ನು ಅವರಿಗೆ ತೋರಿಸಬೇಕು ಮತ್ತು ಅದನ್ನು ಅನುಬಂಧ–5ರಲ್ಲಿ ಪ್ರಮಾಣೀಕರಿಸಬೇಕು.
- 16 ಅಭ್ಯರ್ಥಿಗಳ ಬಟನ್‌ಗಳ ಎದುರು ಪ್ರತಿಯೊಂದಕ್ಕೂ 1 (ಒಂದು) ಮತ ಚಲಾವಣೆ ಮಾಡಿ, ಫಲಿತಾಂಶವನ್ನು ವೀಕ್ಷಣೆ ಮಾಡುವುದು ಮತ್ತು ಪ್ರತಿ ಇವಿಎಂ (ಬಿಯು+ಸಿಯು)ನ ಅಣಕು ಮತದಾನದ ದತ್ತಾಂಶವನ್ನು ಅಳಿಸಿ ಹಾಕುವುದು.
- ವಿವಿಪ್ಯಾಟ್ ಸಂದರ್ಭದಲ್ಲಿ, ಪ್ರತಿಯೊಂದು ಅಭ್ಯರ್ಥಿಯ ಬಟನ್‌ನ ಎದುರು 6 ಮತಗಳನ್ನು ಚಲಾಯಿಸಿ ಅಣಕು ಮತದಾನವನ್ನು ನಡೆಸುವುದು ಮತ್ತು ವಿದ್ಯುನ್ಮಾನಿತ ಮತಗಳ ಲೆಕ್ಕವನ್ನು ಪ್ರತಿ ವಿವಿಪ್ಯಾಟ್‌ನ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳೊಂದಿಗೆ ತಾಳೆ ನೋಡತಕ್ಕದ್ದು.
- ಎಫ್‌ಎಲ್‌ಸಿ–ಓಕೆ ಆದ ಯಂತ್ರಗಳ ಮೇಲೆ ಹಸಿರು ಎಫ್‌ಎಲ್‌ಸಿ–ಓಕೆ ಸ್ಟಿಕ್ಕರ್‌ಗಳನ್ನು ಮತ್ತು ಎಫ್‌ಎಲ್‌ಸಿ–ರಿಜೆಕ್ಟ್ ಆದ ಯಂತ್ರಗಳ ಮೇಲೆ ಕೆಂಪು ಎಫ್‌ಎಲ್‌ಸಿ–ರಿಜೆಕ್ಟ್ ಸ್ಟಿಕ್ಕರ್‌ಗಳನ್ನು ಅಂಟಿಸಬೇಕು ಮತ್ತು ಬಿಇಎಲ್/ಇಸಿಐಎಲ್ ಇಂಜಿನಿಯರ್‌ಗಳು ಮತ್ತು ಎಫ್‌ಎಲ್‌ಸಿ ಮೇಲ್ವಿಚಾರಕರು ಸಹಿ ಹಾಕಿರುವುದನ್ನು ಖಚಿತಪಡಿಸಿಕೊಳ್ಳಬೇಕು.

ಡಿ) **ಅಣಕು ಮತದಾನ ನಡೆಸುವುದು:**


- ಮೇಲ್ಕಂಡ ಕಾರ್ಯಗಳ ಜೊತೆಗೆ, ವಿವಿಪ್ಯಾಟ್‌ಗಳನ್ನು ಬಳಸಿ, ಯಾದೃಚ್ಛಿಕವಾಗಿ ಆಯ್ಕೆ ಮಾಡಿದ ಶೇ.5 ರಷ್ಟು ಇವಿಎಂಗಳಲ್ಲಿ ಅಣಕು ಮತದಾನವನ್ನು (ಎಂದರೆ, ಶೇ.1 ರಷ್ಟು ಇವಿಎಂಗಳಲ್ಲಿ 1200 ಮತಗಳು, ಶೇ.2 ರಷ್ಟು ಇವಿಎಂಗಳಲ್ಲಿ 1000 ಮತಗಳು ಮತ್ತು ಶೇ.2 ರಷ್ಟು ಇವಿಎಂಗಳಲ್ಲಿ 500 ಮತಗಳು) ರಾಜಕೀಯ ಪಕ್ಷಗಳ ಉಪಸ್ಥಿತಿಯಲ್ಲಿ ನಡೆಸತಕ್ಕದ್ದು. ಪ್ರತಿಯೊಂದು ವಿವಿಪ್ಯಾಟ್‌ನ ಮುದ್ರಿತ ಬ್ಯಾಲೆಟ್ ಸ್ಲಿಪ್‌ಗಳನ್ನು ಎಣಿಕೆ ಮಾಡಿ ಸಿಯುನ ವಿದ್ಯುನ್ಮಾನ ಫಲಿತಾಂಶದೊಂದಿಗೆ ತಾಳೆ ನೋಡತಕ್ಕದ್ದು ಮತ್ತು ಹಾಜರಿದ್ದ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಅದನ್ನು ತೋರಿಸತಕ್ಕದ್ದು ಮತ್ತು ವಿದ್ಯುನ್ಮಾನ ಎಣಿಕೆ ಮತ್ತು ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ನಡುವೆ ಯಾವುದೇ ವ್ಯತ್ಯಾಸ ಇಲ್ಲ ಎಂಬ ಅವರ ದೃಢೀಕರಣಕ್ಕಾಗಿ ಅನುಬಂಧ–6 ರಲ್ಲಿನ ರಿಜಿಸ್ಟರ್‌ನಲ್ಲಿ ಅವರ ಸಹಿಗಳನ್ನು ಪಡೆಯಬೇಕು.
- ಅಣಕು ಮತದಾನದ ಉದ್ದೇಶಕ್ಕಾಗಿ ಪ್ರತಿನಿಧಿಗಳು ಯಂತ್ರಗಳನ್ನು ಯಾದೃಚ್ಛಿಕವಾಗಿ ಆಯ್ದುಕೊಳ್ಳಲು ಮತ್ತು ಅವರು ಸಹ ಸ್ವತಃ ಅಣಕು ಮತದಾನ ಮಾಡಲು ಇಚ್ಛಿಸಿದರೆ ಮತದಾನ ಮಾಡಲು ಅವರಿಗೆ ಅವಕಾಶ ನೀಡಬೇಕು ಮತ್ತು ಅನುಕ್ರಮವಾಗಿ ಅನುಬಂಧ–7 ಮತ್ತು ಅನುಬಂಧ–8 ರಲ್ಲಿನ ರಿಜಿಸ್ಟರ್‌ನಲ್ಲಿ ಅವರ ಸಹಿಗಳನ್ನು ಪಡೆಯಬೇಕು.

ಇ) ಎಫ್‌ಎಲ್‌ಸಿ ಕಾರ್ಯದ ಅವಧಿಯಲ್ಲಿ ಉತ್ಪತ್ತಿಯಾದ ವಿವಿಪ್ಯಾಟ್‌ನ ಪೇಪರ್ ಸ್ಲಿಪ್‌ಗಳನ್ನು ಆಯಾಯ ದಿನದಂದೇ

ಚೂರು ಮಾಡುವ ಯಂತ್ರವನ್ನು ಬಳಸಿ ನಾಶ ಮಾಡಬೇಕು.

**2.7 ಇವಿಎಂನ ಕಂಟ್ರೋಲ್ ಯೂನಿಟ್‌ನ ಪ್ಲಾಸ್ಟಿಕ್ ಕ್ಯಾಬಿನೆಟ್ ಅನ್ನು ಗುಲಾಬಿ ಬಣ್ಣದ ಕಾಗದದ ಮೊಹರಿನಿಂದ ಸೀಲ್ ಮಾಡುವುದು:**

**ಇವಿಎಂಗಳ ಕಂಟ್ರೋಲ್ ಯೂನಿಟ್‌ನ ಪ್ಲಾಸ್ಟಿಕ್ ಕ್ಯಾಬಿನೆಟ್ ಅನ್ನು ಗುಲಾಬಿ ಬಣ್ಣದ ಕಾಗದದ ಮೊಹರಿನಿಂದ ಸೀಲ್ ಮಾಡುವುದು:**




- ಸಿಯುನ ಅಭ್ಯರ್ಥಿ ಸೆಟ್ ವಿಭಾಗ ಮತ್ತು ಫಲಿತಾಂಶ ವಿಭಾಗದ ನಡುವಣ ಭಾಗದ ಮೇಲೆ (ನಾಸಿಕ್‌ನ ಇಂಡಿಯನ್ ಸೆಕ್ಯೂರಿಟಿ ಪ್ರೆಸ್ ಪೂರೈಸಿರುವ) ಗುಲಾಬಿ ಬಣ್ಣದ ಕಾಗದದ ಮೊಹರಿನೊಂದಿಗೆ ಸಿಯು ಅನ್ನು ಮೊಹರು ಮಾಡಬೇಕು.
- ಇಂಜಿನಿಯರ್ ಮತ್ತು ಹಾಜರಿರುವ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಹಿಗಳ ಕೆಳಗೆ ಸಂಕ್ಷಿಪ್ತಾಕ್ಷರದಲ್ಲಿ ಪಕ್ಷದ ಹೆಸರಿನೊಂದಿಗೆ ಅವರ ಸಹಿಗಳನ್ನು ತೆಗೆದುಕೊಳ್ಳಬೇಕು. ಗುಲಾಬಿ ಬಣ್ಣದ ಕಾಗದದ ಮೊಹರಿನ ಕ್ರಮಸಂಖ್ಯೆಯನ್ನು ಬರೆದುಕೊಳ್ಳಲು ಅವಕಾಶ ನೀಡಬೇಕು.
- ಸಿಯುನ ವಿಶಿಷ್ಟ ಗುರುತು ಸಂಖ್ಯೆ ಮತ್ತು ಗುಲಾಬಿ ಬಣ್ಣದ ಕಾಗದದ ಮೊಹರಿನ ಕ್ರಮಸಂಖ್ಯೆಯನ್ನು ನಮೂದಿಸುವುದಕ್ಕಾಗಿ ಅನುಬಂಧ–9 ರಲ್ಲಿ ಒಂದು ರಿಜಿಸ್ಟರ್‌ನ್ನು ನಿರ್ವಹಣೆ ಮಾಡಬೇಕು ಮತ್ತು ಅದರಲ್ಲಿ ಅವರ ಸಹಿಯನ್ನು ತೆಗೆದುಕೊಳ್ಳಬೇಕು ಮತ್ತು ಅದರ ಒಂದು ಪ್ರತಿಯನ್ನು ಅವರಿಗೆ ಒದಗಿಸಬೇಕು.
- ನಾಮಪತ್ರ ಹಿಂದಕ್ಕೆ ಪಡೆಯುವ ಕೊನೆ ದಿನಾಂಕ ಮುಕ್ತಾಯಗೊಂಡ ಕೂಡಲೇ ರಾಜಕೀಯ ಪಕ್ಷಗಳಿಗೆ ಮತ್ತು ಸ್ಪರ್ಧೆಯಲ್ಲಿರುವ ಎಲ್ಲಾ ಅಭ್ಯರ್ಥಿಗಳಿಗೆ ಅದರ ಪ್ರತಿಯನ್ನು ನೀಡಬೇಕು ಮತ್ತು ಅವರಿಂದ ಸ್ವೀಕೃತಿಯನ್ನು ಪಡೆಯಬೇಕು.
- ಇವಿಎಂಗಳು/ವಿವಿಪ್ಯಾಟ್‌ಗಳನ್ನು ಸಿದ್ಧಪಡಿಸುವ ಸಮಯದಲ್ಲಿ ಆ ರಿಜಿಸ್ಟರ್‌ನ ಪ್ರತಿಯು ಲಭ್ಯವಿರುವುದನ್ನು ಖಚಿತ ಪಡಿಸಬೇಕು.

**ದೋಷಪೂರ್ಣ ಯೂನಿಟ್‌ಗಳು**

- ಎಫ್‌ಎಲ್‌ಸಿ ಅವಧಿಯಲ್ಲಿ ಇವಿಎಂಗಳು/ವಿವಿಪ್ಯಾಟ್‌ಗಳ ಯಾವುದೇ ವಿದ್ಯುನ್ಮಾನ ರಿಪೇರಿಯನ್ನು ಮಾಡಬಾರದು. ಆದಾಗ್ಯೂ, ಯಾಂತ್ರಿಕ ರಿಪೇರಿಗಳು ಎಂದರೆ, ಮುರಿದ/ಹಾನಿಗೊಂಡ ಸ್ವಿಚ್‌ಗಳು, ಬಟನ್‌ಗಳು, ಲ್ಯಾಚ್‌ಗಳು, ಹುಡ್, ಕೇಬಲ್, ಆರ್‌ಟಿಸಿ ಸೆಲ್, ಸ್ಪಿಂಡಲ್ ಇತ್ಯಾದಿಗಳನ್ನು ಅವುಗಳ ಬೆಸುಗೆ ಹಾಕುವುದು ಅಗತ್ಯವಿಲ್ಲದಿರುವಾಗ ಬದಲಾವಣೆ ಮಾಡಲು ಅವಕಾಶವಿರುತ್ತದೆ. ಆದ್ದರಿಂದ ಬಿಇಎಲ್/ಇಸಿಐಎಲ್ ಸಾಕಷ್ಟು ಸಂಖ್ಯೆಯ ಬಿಡಿ ಭಾಗಗಳೊಂದಿಗೆ ಇಂಜಿನಿಯರ್‌ಗಳನ್ನು ನಿಯೋಜಿಸಬೇಕು.
- ಇಎಂಎಸ್ ನಲ್ಲಿ ದೋಷಪೂರ್ಣ ಯೂನಿಟ್‌ಗಳನ್ನು (ಗಮನಿಸಿದ ದೋಷಗಳೊಂದಿಗೆ ಬಿಯು/ಸಿಯು/ವಿವಿಪ್ಯಾಟ್‌ನ ಘಟಕ ಐಡಿಯನ್ನು ಒಳಗೊಂಡಿರುವಂತೆ) ಗುರುತು ಮಾಡುವುದು.
- ಯಾವುದೇ ಇವಿಎಂ ನಲ್ಲಿ ದೋಷ ಕಂಡುಬಂದರೆ, ಅದನ್ನು ಪ್ರತ್ಯೇಕಿಸಿ ಇಡಬೇಕು ಮತ್ತು ಎಫ್‌ಎಲ್‌ಸಿ ಮುಕ್ತಾಯವಾದ 7 ದಿನಗಳ ಒಳಗೆ ಕಾರ್ಖಾನೆಗೆ ಹಿಂದಿರುಗಿಸಬೇಕು.
- ಸಾರಿಗೆಯನ್ನು ಮಿತವ್ಯಯಗೊಳಿಸಲು ಒಂದಕ್ಕಿಂತ ಹೆಚ್ಚು ಜಿಲ್ಲೆಗಳ ರವಾನೆಗಳನ್ನು ಒಂದುಗೂಡಿಸಿ ರವಾನೆ ಮಾಡಬೇಕು.

**2.8 ಎಫ್‌ಎಲ್‌ಸಿಯ ಮೇಲುಸ್ತುವಾರಿ:**

- ಡಿಇಒ ರವರ ನೇರ ಮತ್ತು ನಿಕಟ ಮೇಲ್ವಿಚಾರಣೆಯಲ್ಲಿ ನಡೆಸಬೇಕು.
- ಎಫ್‌ಎಲ್‌ಸಿಯ ಮೇಲ್ವಿಚಾರಕನು (ಹೆಚ್ಚುವರಿ/ಉಪ–ಡಿಇಒ ರವರ ದರ್ಜೆಗಿಂತ ಕೆಳಗಿರದ ಅಧಿಕಾರಿ) ಮಾಡಿರುವ ಎಫ್‌ಎಲ್‌ಸಿ ಮೇಲ್ವಿಚಾರಣೆ ಮತ್ತು ಏರ್ಪಾಟುಗಳನ್ನು ಇಸಿಐ ಸೂಚನೆಗಳ ಅನುಸಾರವಾಗಿ ಮಾಡಲಾಗಿದೆ ಎಂಬುದನ್ನು ಖಚಿತಪಡಿಸಬೇಕು ಮತ್ತು ಡಿಇಒ ರವರ ಮುಖಾಂತರ ಸಿಇಒ ರವರಿಗೆ ಅನುಬಂಧ–10 ರಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
- ಡಿಇಒ ರವರು ಎಫ್‌ಎಲ್‌ಸಿಯ ಸ್ಥಳ ಮತ್ತು ಪ್ರಕ್ರಿಯೆಯನ್ನು ದಿನನಿತ್ಯ ಪರಿಶೀಲನೆ ಮಾಡಬೇಕು.
- ಡಿಇಒ/ಸಿಇಒ ರವರು ವೆಬ್ ಪ್ರಸಾರದ ಮೂಲಕ ಮೇಲ್ವಿಚಾರಣೆ ಮಾಡಬೇಕು.
- ಸಂಪರ್ಕ ಸಮಸ್ಯೆಯ ಕಾರಣದಿಂದಾಗಿ ವೆಬ್ ಪ್ರಸಾರ ಸಾಧ್ಯವಾಗದಿದ್ದರೆ ಆಗ ಸಂಬಂಧಪಟ್ಟ ಸಿಇಒ ರವರ ಅನುಮೋದನೆಯೊಂದಿಗೆ ಮೇಲ್ವಿಚಾರಣೆ ಮಾಡುವ ಮತ್ತು ದಾಖಲಿಸುವ ಉದ್ದೇಶಕ್ಕಾಗಿ ಸಿಸಿಟಿವಿ ಕವರೇಜ್‌ನ್ನು ಮಾಡತಕ್ಕದ್ದು.
- ಮೇಲಿಚಾರಣೆ ಮಾಡುವುದಕ್ಕಾಗಿ ಸಿಇಒ/ಡಿಇಒ ರವರ ಕಚೇರಿಗಳಲ್ಲಿ ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಬೇಕು.
- ಎಫ್‌ಎಲ್‌ಸಿ ಪ್ರಕ್ರಿಯೆಯನ್ನು ಅನಿರೀಕ್ಷಿತ ಪರಿಶೀಲನೆಗಳಿಗೊಳಪಡಿಸಬೇಕು ಮತ್ತು ವರದಿಗಳನ್ನು ಆಯೋಗಕ್ಕೆ ಕಳುಹಿಸಬೇಕು.
- ಅನುಬಂಧ–11 ರಲ್ಲಿ ನೀಡಲಾಗಿರುವ ನಮೂನೆಯಲ್ಲಿ ಆಯೋಗಕ್ಕೆ ಎಫ್‌ಎಲ್‌ಸಿ ಪೂರ್ಣಗೊಂಡ ಪ್ರಮಾಣಪತ್ರವನ್ನು ಕಳುಹಿಸಬೇಕು. ಮೊಬೈಲ್ ಆ್ಯಪ್ ಬಳಸಿ ದೈನಂದಿನ ಆಧಾರದಲ್ಲಿ ಇಎಂಎಸ್ ನಲ್ಲಿ ಇವಿಎಂಗಳ ಎಫ್‌ಎಲ್‌ಸಿ ಸ್ಥಿತಿಗತಿಯನ್ನು (ಎಫ್‌ಎಲ್‌ಸಿ ಓಕೆ ಅಥವಾ ಎಫ್‌ಎಲ್‌ಸಿ ರಿಜೆಕ್ಟ್) ಅಪಡೇಟ್ ಮಾಡಬೇಕು.

**ಟಿಪ್ಪಣಿ: ವಿಧಾನಸಭಾ ಕ್ಷೇತ್ರದ ಉಪ–ಚುನಾವಣೆಗಾಗಿ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಎಫ್‌ಎಲ್‌ಸಿ**
ಮೊದಲ ಹಂತದ ಪರಿಶೀಲನೆ (ಎಫ್‌ಎಲ್‌ಸಿ) ಉದ್ದೇಶಕ್ಕಾಗಿ, ವಿಧಾನಸಭಾ ಕ್ಷೇತ್ರದ ಮತದಾನ ಕೇಂದ್ರಗಳ ಸಂಖ್ಯೆಯ ಶೇ.200 ರಷ್ಟು ಇವಿಎಂಗಳು ಮತ್ತು ವಿವಿಪ್ಯಾಟ್‌ಗಳು ಅಗತ್ಯವಿರತಕ್ಕದ್ದು.

**ಟಿಪ್ಪಣಿ: ಸಾರ್ವತ್ರಿಕ ಚುನಾವಣೆಗಾಗಿ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಎಫ್‌ಎಲ್‌ಸಿ**
ಮೊದಲ ಹಂತದ ಪರಿಶೀಲನೆಯ (ಎಫ್‌ಎಲ್‌ಸಿ) ಉದ್ದೇಶಕ್ಕಾಗಿ, ಮತದಾನ ಕೇಂದ್ರಗಳ ಸಂಖ್ಯೆಯ ಶೇ.125 ರಷ್ಟು ಇವಿಎಂಗಳು ಮತ್ತು ಶೇ.135 ರಷ್ಟು ವಿವಿಪ್ಯಾಟ್‌ಗಳು ಅಗತ್ಯವಿರತಕ್ಕದ್ದು.

# ಅಧ್ಯಾಯ – 3

# ಇವಿಎಂ/ವಿವಿಪ್ಯಾಟ್‌ಗಳ ಮೊದಲ ಯಾದೃಚ್ಛೀಕರಣ

**3.1 ಮೊದಲ ಯಾದೃಚ್ಛೀಕರಣದ ಹಂತಗಳನ್ನು ಡಿಇಒ ರವರು ಮಾಡಬೇಕು:–**

**ಮೊದಲ ಯಾದೃಚ್ಛೀಕರಣದ ಮುಂಚೆ, ತರಬೇತಿ ಮತ್ತು ಜಾಗೃತಿ ಮೂಡಿಸುವ ಉದ್ದೇಶಕ್ಕಾಗಿ ಶೇ.10 ರಷ್ಟು ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಹೊರತೆಗೆಯಬೇಕು ಮತ್ತು ಅವುಗಳಿಗೆ ಇವಿಎಂ ವ್ಯವಸ್ಥಾಪನಾ ಸಾಫ್ಟ್‌ವೇರ್‌ನಲ್ಲಿ (ಇಎಂಎಸ್) "ತರಬೇತಿ ಮತ್ತು ಜಾಗೃತಿ" ಎಂದು ಗುರುತು ಮಾಡಬೇಕು.**

↓

**ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಮೊದಲ ಯಾದೃಚ್ಛೀಕರಣಗಳಿಗಾಗಿ ಇಎಂಎಸ್‌ನ ಬಳಕೆ**

↓

**ಅಧಿಕೃತ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಉಪಸ್ಥಿತಿಯಲ್ಲಿ ಮೊದಲ ಯಾದೃಚ್ಛೀಕರಣವನ್ನು ನಡೆಸಬೇಕು**

| | | | |
|---|---|---|---|
| ವಿಧಾನಸಭಾ ಕ್ಷೇತ್ರದ ಸಾರ್ವತ್ರಿಕ/ಉಪ–ಚುನಾವಣೆಯ ಸಂದರ್ಭದಲ್ಲಿ, ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ವಿದಾನಸಭಾ ಕ್ಷೇತ್ರವಾರು ಹಂಚಿಕೆ ಮಾಡುವುದು | ಲೋಕಸಭಾ ಸಾರ್ವತ್ರಿಕ/ ಉಪ–ಚುನಾವಣೆಗಳ ಸಂದರ್ಭದಲ್ಲಿ, ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ವಿಧಾನಸಭಾ ವಿಭಾಗ–ವಾರು ಹಂಚಿಕೆ ಮಾಡುವುದು. | ಒಂದು ವೇಳೆ ಲೋಕಸಭೆ ಮತ್ತು ರಾಜ್ಯ ವಿಧಾನಸಭಾ ಕ್ಷೇತ್ರಕ್ಕೆ ಏಕಕಾಲದಲ್ಲಿ ಚುನಾವಣೆಗಳು ನಡೆದರೆ, (ಸಂಸದೀಯ ಚುನಾವಣಾ ಕ್ಷೇತ್ರಕ್ಕಾಗಿ) ವಿಧಾನಸಭಾ ವಿಭಾಗ–ವಾರು ಇವಿಎಂಗಳ ಹಂಚಿಕೆ, ಹಾಗೆಯೇ, (ರಾಜ್ಯ ವಿಧಾನಸಭೆ ಕ್ಷೇತ್ರಕ್ಕಾಗಿ) ವಿಧಾನಸಭಾ ಕ್ಷೇತ್ರವಾರು ಇವಿಎಂಗಳ ಹಂಚಿಕೆ. . | ವಿಶೇಷ ಸಂದರ್ಭಗಳು: ವಿಧಾನಸಭಾ ಕ್ಷೇತ್ರ/ ವಿಭಾಗವು ಎರಡು ಅಥವಾ ಹೆಚ್ಚು ಜಿಲ್ಲೆಗಳ ವ್ಯಾಪ್ತಿಗೆ ಬಂದ ಸಂದರ್ಭದಲ್ಲಿ (ನಿದರ್ಶನ–4ನ್ನು ನೋಡಿ) |

↓

**ಆಯೋಗದಿಂದ ಚುನಾವಣೆಯ (ಗಳು) ಘೋಷಣೆಯಾದ ತರುವಾಯ, ಡಿಇಒ ರವರು ವೇಳಾಪಟ್ಟಿಯನ್ನು ನಿಗದಿ ಮಾಡಬೇಕು.**

↓

**ಪ್ರತಿ ವಿಧಾನಸಭೆ ಕ್ಷೇತ್ರ (ಎಸಿ)/ವಿಧಾನಸಭೆ ವಿಭಾಗ (ಎಎಸ್)ಕ್ಕಾಗಿ ಅಗತ್ಯವಿರುವ ಮೀಸಲು ಮತಯಂತ್ರಗಳೂ ಒಳಗೊಂಡಂತೆ ಮತದಾನ ದಿನದ ಅಗತ್ಯತೆಗಳಿಗೆ ಹೊಂದುವಂತೆ ಇಎಂಎಸ್‌ನ್ನು ಬಳಸಿ ಸಿಯುಗಳು, ಬಿಯುಗಳು ಮತ್ತು ವಿವಿಪ್ಯಾಟ್‌ಗಳನ್ನು ಯಾದೃಚ್ಛಿಕವಾಗಿ ಆಯ್ಕೆ ಮಾಡಿದ ರೀತಿಯಲ್ಲಿ ಯಾದೃಚ್ಛೀಕರಣ ಪ್ರಕ್ರಿಯೆಯನ್ನು ಕಾರ್ಯಗತಗೊಳಿಸುವುದು.**

↓

**ಪ್ರತೀ ಅಧಿಕೃತ ರಾಜಕೀಯ ಪಕ್ಷಕ್ಕೆ ಬಿಯುಗಳು, ಸಿಯುಗಳು ಮತ್ತು ವಿವಿಪ್ಯಾಟ್‌ಗಳ ಯಾದೃಚ್ಛೀಕರಣಗೊಳಿಸಿದ ಪಟ್ಟಿಯನ್ನು ಒದಗಿಸಬೇಕು ಮತ್ತು ಲಿಖಿತದಲ್ಲಿ ಸ್ವೀಕೃತಿಯನ್ನು ಪಡೆಯಬೇಕು**

**ಸಂದರ್ಭಾನುಸಾರ, ಆರ್‌ಒಗಳು/ಎಆರ್‌ಒ ಗಳು ಇವಿಎಂಗಳ ಪ್ರಭಾರವನ್ನು ವಹಿಸಿಕೊಳ್ಳಬೇಕು.**

**ಮೊಬೈಲ್ ಆ್ಯಪ್‌ನ್ನು ಬಳಸಿ ಎಸಿ/ಎಎಸ್ ಭದ್ರತಾ ಕೊಠಡಿಯಲ್ಲಿನ ಯಾದೃಚ್ಛೀಕರಣಗೊಳಿಸಿದ ಯಂತ್ರಗಳನ್ನು ಸ್ವೀಕರಿಸುವುದು.**

ಲೋಕಸಭೆಗೆ ಸಾರ್ವತ್ರಿಕ ಚುನಾವಣೆಗಳು ನಡೆಯುವ ಕಾಲದಲ್ಲಿ, ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಕೆಳಕಂಡ ನಿದರ್ಶನಗಳಿಗೆ ಎದುರಾಗಬೇಕಾಗಬಹುದು:

**ನಿದರ್ಶನ ಸಂಖ್ಯೆ.1:** ಸಂಸದೀಯ ಚುನಾವಣಾ ಕ್ಷೇತ್ರಕ್ಕೆ ಒಂದುಸಮಗ್ರ ಜಿಲ್ಲೆಯು ಸೇರಿರುವಾಗ, ಜಿಲ್ಲಾ ಚುನಾವಣಾ ಅಧಿಕಾರಿ (ಡಿಇಒ) ಯವರು ಆ ಜಿಲ್ಲೆಯ ಇವಿಎಂಗಳು/ವಿವಿಪ್ಯಾಟ್‌ಗಳ ಅಭಿರಕ್ಷಕರಾಗಿರುತ್ತಾರೆ ಮತ್ತು ಆ ಸಂಸದೀಯ ಚುನಾವಣಾ ಕ್ಷೇತ್ರದ ರಿಟರ್ನಿಂಗ್ ಅಧಿಕಾರಿ ಆಗಿರುತ್ತಾರೆ.

**ಉದಾ:** ಸಂಸದೀಯ ಚುನಾವಣಾ ಕ್ಷೇತ್ರವು ಜಿಲ್ಲೆ– ಎ ಎಂಬ 9 ವಿಧಾನಸಭೆ ವಿಭಾಗಗಳನ್ನು (ಎಎಸ್) ಹೊಂದಿರುವ ಒಂದೇ ಒಂದು ಜಿಲ್ಲೆಯನ್ನು ಒಳಗೊಂಡಿದ್ದಾಗ (ಎ, ಬಿ, ಸಿ, ಡಿ, ಇ, ಎಫ್, ಜಿ, ಹೆಚ್ ಮತ್ತು ಐ).

ಜಿಲ್ಲೆ – ಎ (1–ಸಂಸದೀಯ ಚುನಾವಣಾ ಕ್ಷೇತ್ರ = ಸಂಪೂರ್ಣವಾಗಿ ಜಿಲ್ಲೆ – ಎ ಗೆ ಸೇರಿದ: 9 ವಿಧಾನಸಭೆ ವಿಭಾಗ (ಎಎಸ್))

| | | |
|---|---|---|
| ಎ | ಬಿ | ಸಿ |
| ಖ | ಇ | ಎಫ್ |
| ಈ | ಹೆಚ್ | ಐ |

ಶೇಡ್ ಮಾಡಲಾದ ಪ್ರದೇಶವು ಸಂಸದೀಯ ಚುನಾವಣಾ ಕ್ಷೇತ್ರವಾಗಿದೆ

**ನಿದರ್ಶನ ಸಂಖ್ಯೆ.2:** ಸಂಸದೀಯ ಚುನಾವಣಾ ಕ್ಷೇತ್ರವು ಸಂಪೂರ್ಣವಾಗಿ ಎರಡು ಅಥವಾ ಹೆಚ್ಚು ಜಿಲ್ಲೆಗಳನ್ನು ಒಳಗೊಂಡಿರುವಾಗ, ಡಿಇಒ ರವರು ಸಂಬಂಧಪಟ್ಟ ಜಿಲ್ಲೆಯ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಅಭಿರಕ್ಷಕರಾಗಿರುತ್ತಾರೆ ಮತ್ತು ಒಂದು ಜಿಲ್ಲೆಯ ಡಿಇಒ ರವರು ಆ ಸಂಸದೀಯ ಚುನಾವಣಾ ಕ್ಷೇತ್ರದ ರಿಟರ್ನಿಂಗ್ ಅಧಿಕಾರಿ ಆಗಿರುತ್ತಾರೆ.

**ಉದಾ:** ಸಂಸದೀಯ ಚುನಾವಣಾ ಕ್ಷೇತ್ರವು ಎ ಮತ್ತು ಬಿ ಜಿಲ್ಲೆಗಳನ್ನು ಒಳಗೊಂಡಿದೆ. ಎ–ಜಿಲ್ಲೆ 9 ವಿಧಾನಸಭೆ ವಿಭಾಗಗಳನ್ನು (ಎ, ಬಿ, ಸಿ, ಡಿ, ಇ, ಎಫ್, ಜಿ, ಹೆಚ್ ಮತ್ತು ಐ) ಹೊಂದಿರುತ್ತದೆ. ಮತ್ತು ಬಿ–ಜಿಲ್ಲೆ 4 ವಿಧಾನಸಭೆ ವಿಭಾಗಗಳನ್ನು (ಜೆ, ಕೆ, ಎಲ್ ಮತ್ತು ಎಮ್) ಹೊಂದಿದೆ. ಎ–ಜಿಲ್ಲೆಯ ಡಿಇಒ ಸಂಸದೀಯ ಚುನಾವಣಾ ಕ್ಷೇತ್ರದ ಆರ್‌ಒ ಆಗಿರುತ್ತಾರೆ.

**ಎ–ಜಿಲ್ಲೆ ಬಿ–ಜಿಲ್ಲೆ**

| | | | | |
|---|---|---|---|---|
| ಎ | ಬಿ | ಸಿ | ಜೆ | ಕೆ |
| ಡಿ | ಇ | ಎಫ್ | ಎಲ್ | ಎಮ್ |
| ಜಿ | ಹೆಚ್ | ಐ | | |

ಶೇಡ್ ಮಾಡಲಾದ ಪ್ರದೇಶವು ಸಂಸದೀಯ ಚುನಾವಣಾ ಕ್ಷೇತ್ರವಾಗಿದೆ.

**ನಿದರ್ಶನ ಸಂಖ್ಯೆ.3:** ಸಂಸದೀಯ ಚುನಾವಣಾ ಕ್ಷೇತ್ರವು ಒಂದು ಸಮಗ್ರ ಜಿಲ್ಲೆಯನ್ನು ಹಾಗೆಯೇ ಪಕ್ಕದ ಕೆಲವು ಜಿಲ್ಲೆ/ಜಿಲ್ಲೆಗಳಿಗೆ ಸೇರಿರುವ ಕೆಲವು ವಿಧಾನಸಭೆ ವಿಭಾಗಗಳನ್ನು ಒಳಗೊಂಡಿರುವಾಗ ಮತ್ತು ಈ ಜಿಲ್ಲೆಯ ಡಿಇಒ ಸಂಸದೀಯ ಚುನಾವಣಾ ಕ್ಷೇತ್ರದ ರಿಟರ್ನಿಂಗ್ ಅಧಿಕಾರಿ ಆಗಿರುತ್ತಾರೆ.

**ಉದಾ:** ಸಂಸದೀಯ ಚುನಾವಣಾ ಕ್ಷೇತ್ರವು ಸಮಗ್ರ ಎ–ಜಿಲ್ಲೆಯನ್ನು (ಎ, ಬಿ, ಸಿ, ಡಿ, ಎ, ಎಫ್, ಜಿ, ಹೆಚ್ ಮತ್ತು ಐ) ಮತ್ತು ಬಿ–ಜಿಲ್ಲೆಯ ಕೆಲವು ವಿಧಾನಸಭೆ ವಿಭಾಗವನ್ನು (ವಿಧಾನಸಭೆ ವಿಭಾಗ–ಜೆ ಮಾತ್ರ) ಮತ್ತು ಸಿ–ಜಿಲ್ಲೆಯ ಕೆಲವು ವಿಧಾನಸಭೆಯ ವಿಭಾಗವನ್ನು (ವಿಧಾನಸಭೆ ವಿಭಾಗ–ಒ ಮತ್ತು ಪಿ ಮಾತ್ರ). ಒಳಗೊಂಡಿರುವಾಗ ಎ–ಜಿಲ್ಲೆಯ ಡಿಇಒ ಸಂಸದೀಯ ಚುನಾವಣಾ ಕ್ಷೇತ್ರದ ರಿಟರ್ನಿಂಗ್ ಅಧಿಕಾರಿ ಆಗಿರುತ್ತಾರೆ.

ಎ–ಜಿಲ್ಲೆ ಬಿ–ಜಿಲ್ಲೆ

| | | | | |
|---|---|---|---|---|
| ಎ | ಬಿ | ಸಿ | ಜೆ | ಕೆ |
| ಡಿ | ಇ | ಎಫ್ | ಎಲ್ | ಎಮ್ |
| ಜಿ | ಹೆಚ್ | ಐ | | |
| ಎನ್ | ಒ | ಪಿ | | |
| ಕ್ಯೂ | ಆರ್ | ಎಸ್ | | |

ಶೇಡ್ ಮಾಡಲಾದ ಪ್ರದೇಶವು ಸಂಸದೀಯ ಚುನಾವಣಾ ಕ್ಷೇತ್ರವಾಗಿದೆ.

**ನಿದರ್ಶನ ಸಂಖ್ಯೆ.4:**ಸಂಸದೀಯ ಚುನಾವಣಾ ಕ್ಷೇತ್ರವುಒಂದುಸಮಗ್ರ ಜಿಲ್ಲೆಯನ್ನು ಹಾಗೂ ಪಕ್ಕದ ಜಿಲ್ಲೆ/ ಜಿಲ್ಲೆಗಳ ವಿಧಾನಸಭಾ ವಿಭಾಗದ ಕೆಲವು ಭಾಗಗಳನ್ನು ಒಳಗೊಂಡಿದ್ದಾಗ ಈ ಜಿಲ್ಲೆಯ ಡಿಇಒ ಸಂಸದೀಯ ಚುನಾವಣಾ ಕ್ಷೇತ್ರದ ಆರ್‌ಒ ಆಗಿರುತ್ತಾರೆ.

**ಉದಾ:** ಸಂಸದೀಯ ಚುನಾವಣಾ ಕ್ಷೇತ್ರವು ಎ–ಜಿಲ್ಲೆಯನ್ನು (ಎ, ಬಿ, ಸಿ, ಡಿ, ಇ, ಎಫ್, ಜಿ, ಹೆಚ್ ಹಾಗೂ ಐ) ಒಳಗೊಂಡಿದ್ದು, ಎ–ಜಿಲ್ಲೆಯ ಸಿ ವಿಧಾನಸಭಾ ವಿಭಾಗದ ಕೆಲವು ಭಾಗಗಳು ಎಂದರೆ, ಸಿ **(ii)** ಬಿ–ಜಿಲ್ಲೆಯಲ್ಲಿ ಹಾಗೂ ಕೆಲವು ವಿಧಾನಸಭಾ ವಿಭಾಗಗಳು ಸಿ–ಜಿಲ್ಲೆಯಲ್ಲಿರುತ್ತವೆ (ಎಎಸ್–ಒ ಮತ್ತು ಪಿ ಮಾತ್ರ). ಆಗ ಎ–ಜಿಲ್ಲೆಯ ಡಿಇಒ ಸಂಸದೀಯ ಚುನಾವಣಾ ಕ್ಷೇತ್ರದ ಆರ್‌ಒ ಆಗಿರುತ್ತಾರೆ.

ಎ–ಜಿಲ್ಲೆ ಬಿ–ಜಿಲ್ಲೆ

| | | | | | |
|---|---|---|---|---|---|
| ಎ | ಬಿ | ಸಿ | ಸಿ | ಜೆ | ಕೆ |
| ಡಿ | ಇ | ಎಫ್ | ಎಲ್ | ಎಮ್ | |
| ಜಿ | ಎಚ್ | ಐ | | | |
| ಎನ್ | ಒ | ಪಿ | | | |
| ಕ್ಯೂ | ಆರ್ | ಎಸ್ | | | |

ಸಿ–ಜಿಲ್ಲೆ

ಶೇಡ್ ಮಾಡಲಾದ ಪ್ರದೇಶವು ಸಂಸದೀಯ ಚುನಾವಣಾ ಕ್ಷೇತ್ರವಾಗಿದೆ.

## 3.2. ಮೊದಲ ಯಾದೃಚ್ಛೀಕರಣಕ್ಕಾಗಿ ಇಡಬೇಕಾದ ಇವಿಎಂಗಳ (120%) ಮತ್ತು ವಿವಿಪ್ಯಾಟ್‌ಗಳ (130%) ಶೇಕಡಾವಾರು ಕುರಿತಾದ ಸ್ಪಷ್ಟೀಕರಣ.

(ಎ) ಜಿಲ್ಲೆಯಲ್ಲಿ ಲಭ್ಯವಿರುವ ಎಲ್ಲಾ ಸಿಯುಗಳು ಮತ್ತು ವಿವಿಪ್ಯಾಟ್‌ಗಳನ್ನು ವಿಧಾನಸಭೆ ಕ್ಷೇತ್ರ /ವಿಧಾನಸಭೆ ವಿಭಾಗವಾರು ಹಂಚಿಕೆಗಾಗಿ ಯಾದೃಚ್ಛೀಕರಣ ಮಾಡಬೇಕು. ಆದ್ದರಿಂದ, ಸಾಧ್ಯವಾದಷ್ಟು ಮಟ್ಟಿಗೆ ಕಂಟ್ರೋಲ್ ಯೂನಿಟ್‌ಗಳನ್ನು ಶೇಕಡಾವಾರು ಸಮಾನವಾಗಿ, ಜಿಲ್ಲಾ ಮಟ್ಟದಲ್ಲಿ ಯಾವುದೇ ಸಿಯುವನ್ನು ಉಳಿಸಿಕೊಳ್ಳದೆ ಎಲ್ಲಾ ವಿಧಾನಸಭೆ ಕ್ಷೇತ್ರಗಳಿಗೂ/ವಿಧಾನಸಭೆ ವಿಭಾಗಗಳಿಗೂ ಹಂಚಿಕೆ ಮಾಡಬೇಕು.

(ಬಿ) ಇವಿಎಂಗಳ ಪೈಕಿ ಬಿಯುಗಳ ಸಂದರ್ಭದಲ್ಲಿ, ವಿಧಾನಸಭೆ ಕ್ಷೇತ್ರ/ವಿಧಾನಸಭೆ ವಿಭಾಗವಾರು ಹಂಚಿಕೆ ಮಾಡುವುದಕ್ಕಾಗಿ ಇರುವ ಸಿಯುಗಳ ಸಂಖ್ಯೆಗೆ ಸಮನಾದ ಬಿಯುಗಳನ್ನು ಯಾದೃಚ್ಛೀಕರಣ ಮಾಡಬೇಕು ಎಂದರೆ, ಪ್ರತಿ ವಿಧಾನಸಭೆ ಕ್ಷೇತ್ರ/ವಿಧಾನಸಭೆ ವಿಭಾಗದಲ್ಲಿ ಸಿಯುಗಳ ಶೇಕಡಾವಾರಿಗೆ ಬಿಯುಗಳ ಶೇಕಡಾವಾರು ಸಮವಾಗಿರತಕ್ಕದ್ದು.

(ಸಿ) ಉಮೇದುವಾರಿಕೆಯನ್ನು ಹಿಂತೆಗೆದುಕೊಂಡ ತರುವಾಯ ಒಂದಕ್ಕಿಂತ ಹೆಚ್ಚು ಬಿಯು ಅಗತ್ಯವಿರುವಲ್ಲಿ ಸಂಸದೀಯ ಚುನಾವಣಾ ಕ್ಷೇತ್ರ/ವಿಧಾನಸಭೆ ಕ್ಷೇತ್ರಕ್ಕೆ ಹಂಚಿಕೆ ಮಾಡುವುದಕ್ಕಾಗಿ ಜಿಲ್ಲಾ ಮಟ್ಟದಲ್ಲಿನ ಎಫ್‌ಎಲ್‌ಸಿ ಭದ್ರತಾ ಕೊಠಡಿಯಲ್ಲಿ ಉಳಿದಿರುವ ಬಿಯುಗಳು ಲಭ್ಯವಿರತಕ್ಕದ್ದು. ಆದರೆ, ಉಮೇದುವಾರಿಕೆ ಹಿಂತೆಗೆದುಕೊಂಡ ತರುವಾಯ ಮಾಡಿದ ಈ ಹೆಚ್ಚುವರಿ ಹಂಚಿಕೆಯೂ ಸಹ ಯಾದೃಚ್ಛೀಕರಣವಾಗತಕ್ಕದ್ದು.

## 3.3.ಏಕಕಾಲದಲ್ಲಿ ನಡೆಯುವ ಚುನಾವಣೆಗಳಿಗಾಗಿ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಗುರುತಿಸುವಿಕೆ ಮತ್ತು ಮಾನ್ಯಗೊಳಿಸುವಿಕೆ

ಏಕಕಾಲದಲ್ಲಿ ನಡೆಯುವ ಚುನಾವಣೆಗಳಿಗಾಗಿ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಸ್ಪಷ್ಟವಾಗಿ ಗುರುತು ಮಾಡುವುದಕ್ಕಾಗಿ ಮತ್ತು ಮಾನ್ಯತೆಗೊಳಿಸುವುದಕ್ಕಾಗಿ:

**i)** **ಬಿಯು, ಸಿಯು** ಮತ್ತು **ವಿವಿಪ್ಯಾಟ್**‌ಗಳನ್ನು ಸಾಗಿಸುವ ಪೆಟ್ಟಿಗೆಗಳ ಮೇಲೆ, ಸಂದರ್ಭಾನುಸಾರ, **'ಲೋಕಸಭೆ'** ಅಥವಾ **'ವಿಧಾನಸಭೆ'** ಎಂಬ ಪದಗಳನ್ನು ಬರೆದಿರುವ ಪ್ರತ್ಯೇಕ ವಿಶಿಷ್ಟ ಬಣ್ಣದ (ಬ್ಯಾಲೆಟ್ ಪೇಪರ್‌ನ ಬಣ್ಣದ್ದೇ ಆದ) ಸ್ವಯಂ ಅಂಟಿಕೊಳ್ಳುವ ಸ್ಟಿಕ್ಕರ್‌ಗಳನ್ನು ಅಂಟಿಸಬೇಕು.

**ii)** ಮೇಲಿನದರ ಜೊತೆಗೆ, ಸಂದರ್ಭಾನುಸಾರ, ಸಿಯುನ 'ಬ್ಯಾಟರಿ ಸೆಕ್ಷನ್' ಮೇಲು ಕವರ್‌ನ ಮೇಲ್ಭಾಗದಲ್ಲಿ ಮತ್ತು **ವಿವಿಪ್ಯಾಟ್**‌ನ ಮೇಲ್ಭಾಗದಲ್ಲಿ, **'ಲೋಕಸಭೆ'** ಅಥವಾ **'ವಿಧಾನಸಭೆ'** ಎಂಬ ಪದಗಳನ್ನು ಬರೆದಿರುವ ಪ್ರತ್ಯೇಕ ವಿಶಿಷ್ಟ ಬಣ್ಣಗಳಲ್ಲಿರುವ (ಬ್ಯಾಲೆಟ್ ಪೇಪರ್‌ನ ಬಣ್ಣದ್ದೇ ಆದ) ಸ್ವಯಂ ಅಂಟಿಕೊಳ್ಳುವ ಸ್ಟಿಕ್ಕರ್‌ಗಳನ್ನು ಅಂಟಿಸಬೇಕು.

**iii)** ಸ್ವಯಂ ಅಂಟಿಕೊಳ್ಳುವ ಸ್ಟಿಕ್ಕರ್‌ನ ಅಳತೆಯು **6 ಸೆ.ಮೀ×3 ಸೆ.ಮೀ.** ಇರಬೇಕು.

# ಅಧ್ಯಾಯ – 4

# ದೋಷಪೂರ್ಣ ಇವಿಎಂ ಮತ್ತು ವಿವಿಪ್ಯಾಟ್‌ಗಳನ್ನು ರಿಪೇರಿ ಮಾಡುವುದು

ದೋಷಪೂರ್ಣ ಇವಿಎಂಗಳನ್ನು ಇವಿಎಂಗಳು/ ವಿವಿಪ್ಯಾಟ್‌ಗಳ ಸಂಬಂಧಪಟ್ಟ ಉತ್ಪಾದಕರ ಎಂದರೆ ಬಿಇಎಲ್ ಹಾಗೂ ಇಸಿಐಎಲ್ ನ ಕಾರ್ಖಾನೆಗೆ ಅಗತ್ಯ ರಿಪೇರಿಗಳಿಗಾಗಿ ಕಳುಹಿಸುವುದು.

ದೋಷಪೂರ್ಣ ಇವಿಎಂಗಳು/ವಿವಿಪ್ಯಾಟ್‌ಗಳಿಗೆ ಸಂಬಂಧಿಸಿದ ಈ ಕೆಳಕಂಡ ಶಿಷ್ಟತೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು:–

1. ಆ ಜಿಲ್ಲೆಯಲ್ಲಿ ಎಫ್‌ಎಲ್‌ಸಿ ಮುಕ್ತಾಯಗೊಂಡ 7 ದಿನಗಳೊಳಗೆ ದುರಸ್ತಿಗಾಗಿ ತಯಾರಕರುಗಳಿಗೆ ಎಫ್‌ಎಲ್‌ಸಿ ತಿರಸ್ಕೃತ ಇವಿಎಂಗಳು/ವಿವಿಪ್ಯಾಟ್‌ಗಳನ್ನು ಕಳುಹಿಸಬೇಕು. ಸಿಇಒ ರವರು ಕಾರ್ಖಾನೆಗೆ ರವಾನಿಸುವುದಕ್ಕಾಗಿ ಬಹು ಜಿಲ್ಲೆಗಳ ದೋಷಪೂರ್ಣ ಯಂತ್ರಗಳನ್ನು ಸಮನ್ವಯಗೊಳಿಸಬೇಕು ಮತ್ತು ಒಂದುಗೂಡಿಸಬೇಕು.

2. ಕ್ಯಾಂಡಿಡೇಟ್ ಸೆಟ್ಟಿಂಗ್ ಮಾಡುವುದು ಪ್ರಾರಂಭವಾದ ದಿನದಿಂದ ಎಣಿಕೆಯ ದಿನದವರೆಗಿನ ಅವಧಿಯಲ್ಲಿ ಯಾವುದೇ (ದೋಷಪೂರ್ಣ ಅಥವಾ ದೋಷರಹಿತ) **ಇವಿಎಂಗಳು/ವಿವಿಪ್ಯಾಟ್‌ಗಳನ್ನು ಸಾಗಾಟ ಮಾಡುವಂತಿಲ್ಲ. ತರುವಾಯದ ಹಂತಗಳಲ್ಲಿ ಮತ ಹಾಕಲು ಬಳಸುವುದಕ್ಕಾಗಿ ಅಗತ್ಯವಿರುವ ಇವಿಎಂಗಳು/ವಿವಿಪ್ಯಾಟ್‌ಗಳನ್ನು ಮಾತ್ರ** ರಾಜಕೀಯ ಪಕ್ಷಗಳು/ಅಭ್ಯರ್ಥಿಗಳಿಗೆ ಸೂಚನೆಯನ್ನು ನೀಡಿ ಸಾಗಿಸಲು ಅವಕಾಶವಿರುತ್ತದೆ.

3. ಮತ ಹಾಕಲು ಬಳಸದ ಎಲ್ಲ ದೋಷಪೂರ್ಣ ಇವಿಎಂಗಳು/ವಿವಿಪ್ಯಾಟ್‌ಗಳನ್ನು ಪ್ರತ್ಯೇಕ ಕೊಠಡಿ/ಸಂಗ್ರಹಾಗಾರಗಳು, ಅದಕ್ಕೂ ಮಿಗಿಲಾಗಿ ಪ್ರತ್ಯೇಕ ಕ್ಯಾಂಪಸ್‌ನಲ್ಲಿ ಇಡಬೇಕು ಮತ್ತು ಸುಸ್ಥಿತಿಯಲ್ಲಿ ಕಾರ್ಯನಿರ್ವಹಿಸುವ ಇವಿಎಂ/ವಿವಿಪ್ಯಾಟ್‌ಗಳ ಜೊತೆಗೆ ಒಂದುಗೂಡಿಸಬಾರದು.

4. **ಚುನಾವಣೆಯ ನಂತರ ದುರಸ್ತಿ:** ಚುನಾವಣೆಯ ನಂತರ, ದುರಸ್ತಿಗಾಗಿ ಸಂಬಂಧಿಸಿದ ಕಾರ್ಖಾನೆಗೆ ಎಲ್ಲ ದೋಷಪೂರ್ಣ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಕಳುಹಿಸಬೇಕು.

5. ದುರಸ್ತಿ ಮಾಡಿದ ನಂತರ, ಎಲ್ಲಾ ದುರಸ್ತಿಯಾದ ಯಂತ್ರಗಳಿಗೂ ಸಹ ಹೊಸ ಇವಿಎಂ/ ವಿವಿಪ್ಯಾಟ್‌ಗಳಿಗೆ ಅನುಸರಿಸುವ ಪರೀಕ್ಷಾ ಶಿಷ್ಟತೆಗಳನ್ನೇ ನಿಖರವಾಗಿ ಪಾಲಿಸಬೇಕು.

6. ತಯಾರಕರು ದುರಸ್ತಿಯಾದ ಯಾವುದೇ ಇವಿಎಂಗಳು/ವಿವಿಪ್ಯಾಟ್‌ಗಳನ್ನು ಸಂಬಂಧಪಟ್ಟ ರಾಜ್ಯ/ಕೇಂದ್ರಾಡಳಿತ ಪ್ರದೇಶಕ್ಕೆ ಹಿಂದಿರುಗಿಸುವಂತಿಲ್ಲ ಮತ್ತು ಈ ದುರಸ್ತಿಯಾದ ಇವಿಎಂಗಳು/ವಿವಿಪ್ಯಾಟ್‌ಗಳನ್ನು ಕಾರ್ಖಾನೆಯಲ್ಲಿಯೇ ಇಟ್ಟುಕೊಳ್ಳಬೇಕು. ದುರಸ್ತಿಗಾಗಿ ಕಾರ್ಖಾನೆಗೆ ಕಳುಹಿಸಿದ ಇವಿಎಂಗಳು/ವಿವಿಪ್ಯಾಟ್‌ಗಳನ್ನು ಹಿಂತೆಗೆದುಕೊಳ್ಳುವಂತೆ ಸಿಇಒಗಳು/ ಡಿಇಒಗಳನ್ನು ಅಗತ್ಯಪಡಿಸುವಂತಿಲ್ಲ. **ದುರಸ್ತಿಯಾದ ಈ ಇವಿಎಂಗಳು/ವಿವಿಪ್ಯಾಟ್‌ಗಳ ಹಂಚಿಕೆಯನ್ನು ಮುಂದೆ ಆಯೋಗವು ಮಾತ್ರವೇ ಮಾಡುತ್ತದೆ.**

7. ತಯಾರಕರು ದುರಸ್ತಿಯಾದ ಇವಿಎಂಗಳು/ವಿವಿಪ್ಯಾಟ್ ಬಗೆಗಿನ ವರದಿಯನ್ನು ಆಯೋಗಕ್ಕೆ ಒದಗಿಸಬೇಕು.

**ದೋಷಪೂರ್ಣ ಇವಿಎಂಗಳು/ವಿವಿಪ್ಯಾಟ್‌ಗಳ ದುರಸ್ತಿಯ ಮೇಲಿನ ವೆಚ್ಚ:** ಎಲ್ಲ ದೋಷಪೂರ್ಣ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ದುರಸ್ತಿಯ ವೆಚ್ಚವನ್ನು ಅದನ್ನು ಕಳುಹಿಸಿರುವ ರಾಜ್ಯವೇ ಭರಿಸಬೇಕು. ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ದುರಸ್ತಿ/ನಿರ್ವಹಣೆ ವೆಚ್ಚಗಳನ್ನು ಭರಿಸುವುದಕ್ಕಾಗಿ ಆ ರಾಜ್ಯಗಳಲ್ಲಿ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಚಾಲ್ತಿಯಲ್ಲಿರುವ ಯಾವುದೇ ನಿರ್ದಿಷ್ಟ ಲೆಕ್ಕಶೀರ್ಷಿಕೆ ಇಲ್ಲದಿರುವಲ್ಲಿ, ಆ ಉದ್ದೇಶಕ್ಕಾಗಿ ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ **"ಇವಿಎಂಗಳ ನಿರ್ವಹಣೆ"** ಎಂಬ ಅವಶ್ಯಕ ಉಪ–ಲೆಕ್ಕಶೀರ್ಷಿಕೆಯೊಂದನ್ನು ಸೃಜಿಸಬೇಕು.

**ಎಫ್‌ಎಲ್‌ಸಿ ಸಮಯದಲ್ಲಿ ಯಾವುದೇ ವಿದ್ಯುನ್ಮಾನ ದುರಸ್ತಿಯನ್ನು ಮಾಡುವಂತಿಲ್ಲ**
**(ಯಾಂತ್ರಿಕ ದುರಸ್ತಿಯನ್ನು ಹೊರತುಪಡಿಸಿ).**
**ಇಎಂಎಸ್‌ನ ಮೂಲಕ ಮಾತ್ರವೇ ಈ ದೋಷಪೂರ್ಣ ಇವಿಎಂಗಳು/ವಿವಿಪ್ಯಾಟ್‌ಗಳನ್ನು ಸ್ಥಳಾಂತರಿಸಬೇಕು.**

# ಅಧ್ಯಾಯ – 5

## ತರಬೇತಿ ಮತ್ತು ಜಾಗೃತಿ

- ತರಬೇತಿ ಮತ್ತು ಜಾಗೃತಿಯನ್ನು ಮೂಡಿಸುವ ಉದ್ದೇಶಕ್ಕಾಗಿ, **ಎಫ್‌ಎಲ್‌ಸಿ ಓಕೆ** ಯಂತ್ರಗಳನ್ನು (ಜಿಲ್ಲೆಯಲ್ಲಿರುವ ಮತದಾನ ಕೇಂದ್ರಗಳ ಒಟ್ಟು ಸಂಖ್ಯೆಯ ಶೇ.10 ರಷ್ಟು ಗರಿಷ್ಠ ಪರಿಮಿತಿಗೊಳಪಟ್ಟು) ಮಾತ್ರ ಹೊರ ತೆಗೆಯಬೇಕು ಮತ್ತು ಈ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಯಾದೃಚ್ಛೀಕರಣಕ್ಕಾಗಿ ಬಳಸದ ಹಾಗೆ ಇಎಂಎಸ್ ನಲ್ಲಿ "ತರಬೇತಿ ಮತ್ತು ಜಾಗೃತಿ"ಎಂಬುದಾಗಿಅವುಗಳ ಸ್ಥಿತಿಯನ್ನು ಬದಲಾಯಿಸಬೇಕು.
- ತರಬೇತಿ ಮತ್ತು ಜಾಗೃತಿಯನ್ನು ಮೂಡಿಸುವ ಉದ್ದೇಶಕ್ಕಾಗಿ ಗರಿಷ್ಠ ಸಂಖ್ಯೆಯ ಇವಿಎಂಗಳು/ವಿವಿಪ್ಯಾಟ್‌ಗಳನ್ನು ಬಳಸಿಕೊಳ್ಳಲು ತರಬೇತಿ ಮತ್ತು ಜಾಗೃತಿ ಇವಿಎಂಗಳು/ವಿವಿಪ್ಯಾಟ್‌ಗಳ ನಡುವೆ ಯಾವುದೇ ವ್ಯತ್ಯಾಸ ಇರತಕ್ಕದ್ದಲ್ಲ.
- ಅಂಥ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಮೇಲೆ "ತರಬೇತಿ/ಜಾಗೃತಿ" ಎಂದು ನಮೂದಿಸಿರುವ ಹಳದಿ ಬಣ್ಣದ ಸ್ಟಿಕ್ಕರ್‌ನ್ನು ಅಂಟಿಸಬೇಕು ಮತ್ತು ಎಫ್‌ಎಲ್‌ಸಿ ಓಕೆ ಇವಿಎಂಗಳು ಮತ್ತು ವಿವಿಪ್ಯಾಟ್‌ನ್ನು ಇಟ್ಟಿರುವ ಭದ್ರತಾ ಕೊಠಡಿಗೆ ಅನುಸರಿಸುವಂಥ ಶಿಷ್ಟತಾ ನಿಯಮಗಳನ್ನೇ ಅನುಸರಿಸಿ ಪ್ರತ್ಯೇಕವಾಗಿ ನಿಯೋಜಿಸಲಾದ ಸಂಗ್ರಹಾಗಾರದಲ್ಲಿ ಇಡಬೇಕು. ಕೀಗಳು ಇಬ್ಬರು ಪ್ರತ್ಯೇಕ ಅಧಿಕಾರಿಗಳ ಬಳಿ ಇರಬೇಕು.
- ತರಬೇತಿ ಮತ್ತು ಜಾಗೃತಿಯನ್ನು ಮೂಡಿಸುವ ಉದ್ದೇಶಕ್ಕಾಗಿ ಯಂತ್ರಗಳನ್ನು ಹೊರಗೆ ತೆಗೆಯುವ ಪ್ರಕ್ರಿಯೆಗೆ ಸಾಕ್ಷಿಯಾಗಿರಲು ರಾಜಕೀಯ ಪಕ್ಷಗಳು, ಅಭ್ಯರ್ಥಿಗಳು/ಅವರ ಪ್ರತಿನಿಧಿಗಳನ್ನು ಆಹ್ವಾನಿಸಬೇಕು ಮತ್ತು ಅಂಥ ಯಂತ್ರಗಳ ಪಟ್ಟಿಯನ್ನು ಎಲ್ಲರಿಗೂ ಹಂಚಬೇಕು. ಅಂತಿಮಗೊಳಿಸಿದ ಜಾಗೃತಿಯ ವೇಳಾಪಟ್ಟಿಯ ಪ್ರತಿಯನ್ನು ಪರಿಚಲನೆ ಮಾಡಬೇಕು ಮತ್ತು ಇಡೀ ಪ್ರಕ್ರಿಯೆಯನ್ನು ವಿಡಿಯೋ ಚಿತ್ರೀಕರಣ ಮಾಡಬೇಕು.
- ತರಬೇತಿ ಮತ್ತು ಜಾಗೃತಿ ಕಾರ್ಯಕ್ರಮಗಳು ನಡೆಯುವ ಕಾಲದಲ್ಲಿ ಪ್ರತಿ ದಿನದ ಕೊನೆಯಲ್ಲಿ ಡಿಇಒ ರವರು ಈ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಸರ್ಕಾರದ ಕಚೇರಿ/ಸರ್ಕಾರದ ಕಟ್ಟಡದಲ್ಲಿ ಸುರಕ್ಷಿತವಾಗಿ ಇಡಲಾಗಿದೆ ಎಂದು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ಅದು ಸಾಧ್ಯವಾಗದಿದ್ದರೆ, ಆಗ ಸೂಕ್ತ ಭದ್ರತೆಯೊಂದಿಗೆ ಹತ್ತಿರದ ಬ್ಲಾಕ್/ ತಾಲ್ಲೂಕು ಕೇಂದ್ರ ಕಾರ್ಯಸ್ಥಾನಗಳಲ್ಲಿ ಇಡಬೇಕು.
- ಸೂಕ್ತ ಲಾಗ್ ಪುಸ್ತಕವನ್ನು ನಿರ್ವಹಿಸುವುದು.

**ವಿವಿಪ್ಯಾಟ್ ಕುರಿತ ಪ್ರಾತ್ಯಕ್ಷಿಕೆ**

- ಸೂಕ್ತ ಸ್ಥಳಗಳಲ್ಲಿ ಅನುಕ್ರಮವಾಗಿ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ಮತ್ತು ಮತದಾರರಿಗಾಗಿ ಡಿಇಒಗಳು ಮತ್ತು ಆರ್‌ಒಗಳು ವಿವಿಪ್ಯಾಟ್ ಕುರಿತು ಪ್ರಾತ್ಯಕ್ಷಿಕೆ ನೀಡಲು ವ್ಯವಸ್ಥೆ ಮಾಡತಕ್ಕದ್ದು.
- "ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಬಳಸಿ ನಿಮ್ಮ ಮತ ಚಲಾಯಿಸುವುದು ಹೇಗೆ" ಎಂಬ ಬಗ್ಗೆ ಪೋಸ್ಟರನ್ನು **(ಅನುಬಂಧ–12)** ಚುನಾವಣಾ ಕ್ಷೇತ್ರಗಳಲ್ಲಿನ ಪ್ರಮುಖ ಸ್ಥಳಗಳಲ್ಲಿ ಮತ್ತು ಮತದಾರರು ಮತ ಚಲಾಯಿಸುವುದಕ್ಕಾಗಿ ಸರದಿ ಸಾಲಿನಲ್ಲಿ ಕಾಯುವಾಗ ಸೂಚನೆಗಳನ್ನು ಓದಲು ಸಾಧ್ಯವಾಗುವಂತೆ ಪ್ರತಿಯೊಂದು ಮತಕೇಂದ್ರಗಳಲ್ಲಿ ಅಂಟಿಸಬೇಕು.
- ಡಿಇಒ ಮತ್ತು ಆರ್‌ಒ ರವರು ವಿವಿಪ್ಯಾಟ್‌ನೊಂದಿಗೆ ಇವಿಎಂ ಬಳಕೆಯ ಕುರಿತಾದ ಜಾಗೃತಿಗಾಗಿ ಮುದ್ರಣ ಮಾಧ್ಯಮ ಮತ್ತು ಸ್ಥಳೀಯ ಕೇಬಲ್–ಸಂಪರ್ಕಜಾಲ ಇತ್ಯಾದಿಯಲ್ಲಿ ಸಹ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಈ ಉದ್ದೇಶದಿಂದ ಪ್ರಾದೇಶಿಕ ಭಾಷೆಯಲ್ಲಿ ಇವಿಎಂನೊಂದಿಗೆ ವಿವಿಪ್ಯಾಟ್ ಅನ್ನು ಬಳಸಿಕೊಂಡು ನಿಮ್ಮ ಮತ ಚಲಾಯಿಸುವುದು ಹೇಗೆ ಎಂಬ ಬಗ್ಗೆ ಕಿರುಚಿತ್ರವನ್ನು ಮಾಡತಕ್ಕದ್ದು.

**ಅನುಸರಿಸಬೇಕಾದ ಶಿಷ್ಟತೆಗಳು:**

i) ಡಿಇಒ ರವರು ತರಬೇತಿ ಮತ್ತು ಜಾಗೃತಿಯನ್ನು ಮೂಡಿಸುವ ಉದ್ದೇಶಕ್ಕಾಗಿ ಸಂಪೂರ್ಣ ತರಬೇತಿ ಪಡೆದ ಅಧಿಕೃತ ಅಧಿಕಾರಿಗಳನ್ನು ನಿಯೋಜಿಸಬೇಕು.

ii) ವಿವಿಪ್ಯಾಟ್‌ಗಳನ್ನು ನೇರವಾದ ಸೂರ್ಯನ ಬೆಳಕು ಬೀಳದಂತೆ ರಕ್ಷಿಸಬೇಕಿರುವುದರಿಂದ ಅವುಗಳ ಪ್ರಾತ್ಯಕ್ಷಿಕೆಯನ್ನು ತೆರೆದ ಸ್ಥಳಗಳಲ್ಲಿ ನೀಡಬಾರದು.

iii) ಬ್ಯಾಲೆಟ್ ಯೂನಿಟ್ ಮತ್ತು ವಿವಿಪ್ಯಾಟ್ ಅನ್ನು ಒಟ್ಟಿಗೆ ಇರಿಸತಕ್ಕದ್ದು ಇದರಿಂದ ಮತದಾರರು ವಿವಿಪ್ಯಾಟ್‌ನಲ್ಲಿ ಮುದ್ರಿತವಾಗುವ ಕಾಗದದ ಸ್ಲಿಪ್ ಅನ್ನು ನೋಡಲು ಸಾಧ್ಯವಾಗುತ್ತದೆ.

iv) ವಿವಿಪ್ಯಾಟ್‌ನೊಂದಿಗೆ ಇವಿಎಂ ಬಳಸುವ ಪ್ರಕ್ರಿಯೆಯ ಬಗ್ಗೆ ಮತದಾರರಿಗೆ ಮಾಹಿತಿ ನೀಡಬೇಕು ಮತ್ತು ಚುನಾವಣೆಗಳಲ್ಲಿ ಇವಿಎಂನೊಂದಿಗೆ ವಿವಿಪ್ಯಾಟ್ ಬಳಸುವ ಕುರಿತಾಗಿ ಸಹ ಅವರಿಗೆ ತಿಳಿಸಬೇಕು.

v) ಪ್ರಾತ್ಯಕ್ಷಿಕೆ ಪ್ರಕ್ರಿಯೆಯ ಅವಧಿಯಲ್ಲಿ ಭಾಗವಹಿಸುವ ಎಲ್ಲರ ಮತಗಳನ್ನು ಮತ್ತು ಸಹಿಗಳನ್ನು ದಾಖಲಿಸುವುದಕ್ಕಾಗಿ ಒಂದು ರಿಜಿಸ್ಟರ್ ಅನ್ನು ಪ್ರತಿನಿತ್ಯವು ನಿರ್ವಹಿಸಬೇಕು.

vi) ಇಂಜಿನಿಯರು(ಗಳು) ಬ್ಯಾಲೆಟ್ ಪೇಪರ್ (ಗಳು) ಮತ್ತು ವಿವಿಪ್ಯಾಟ್‌ಗಾಗಿ ಈ ಕೆಳಕಂಡಂತೆ ಡಮ್ಮಿ ಚಿಹ್ನೆಗಳನ್ನು ಮಾತ್ರ ಬಳಸತಕ್ಕದ್ದು:

ಎ) ಅಭ್ಯರ್ಥಿಗಳ ಹೆಸರಿಗಾಗಿ –ಂಂಂ, ಃಃಃ, ಅಅಅ, . . . . . . .ಹೀಗೆಯೇ ಮುಂದುವರೆಸುವುದು;

ಬಿ) ಅಭ್ಯರ್ಥಿಗಳ ಚಿಹ್ನೆಗಾಗಿ – ಆಲ್ಫಾ (∝), ಬೀಟಾ (β), ಗಾಮಾ (γ) . . . . . ಹೀಗೆ ಮುಂದುವರೆಸುವುದು.

ಮಾದರಿ ನಮೂನೆ:

| ತರಬೇತಿ / ಪ್ರಾತ್ಯಕ್ಷಿಕೆ / ಜಾಗೃತಿಗಾಗಿ | | |
|---|---|---|
| 1 | AAA | A |
| 2 | BBB | B |
| 3 | CCC | T |
| - | --- | --- |
| - | --- | --- |

- ಇಂಜಿನಿಯರುಗಳು ಚಿಹ್ನೆಯನ್ನು ಲೋಡ್ ಮಾಡುವ ಘಟಕ (ಎಸ್‌ಎಲ್‌ಯು) ಅಥವಾ ಚಿಹ್ನೆಯನ್ನು ಲೋಡ್ ಮಾಡುವುದಕ್ಕೆ ಮತ್ತು ಮಾದರಿ ಬ್ಯಾಲೆಟ್ ಪೇಪರ್‌ಗಳ ಸಿದ್ಧತೆಯ ಕಾರ್ಯವನ್ನು ನೆರವೇರಿಸುವುದು.
- ಪ್ರಾತ್ಯಕ್ಷಿಕೆ ಕೊನೆಯಲ್ಲಿ, ಸಿಯುನ ಎಲೆಕ್ಟ್ರಾನಿಕ್ ಫಲಿತಾಂಶವನ್ನು ಅಳಿಸಿ ಹಾಕತಕ್ಕದ್ದು ಮತ್ತು ವಿವಿಪ್ಯಾಟ್ ಡ್ರಾಪ್‌ಬಾಕ್ಸ್ ನಿಂದ ವಿವಿಪ್ಯಾಟ್ ಸ್ಲಿಪ್‌ಗಳನ್ನು ತೆಗೆದು ಹಾಕತಕ್ಕದ್ದು. ಅಷ್ಟೇ ಅಲ್ಲದೆ, ಮರುದಿನ ಇದೇ ಪ್ರಕ್ರಿಯೆಯು ಪುನರಾವರ್ತನೆಯಾಗುವಂತೆ ನೋಡಿಕೊಳ್ಳಬೇಕು.
- ದೈನಂದಿನ ಆಧಾರದ ಮೇಲೆ ವಿವಿಪ್ಯಾಟ್‌ನ ಪೇಪರ್ ಸ್ಲಿಪ್‌ಗಳನ್ನು ಪೇಪರ್ ಚೂರು ಮಾಡುವ ಯಂತ್ರವನ್ನು ಬಳಸಿ ನಾಶ ಮಾಡಬೇಕು.

**ತರಬೇತಿ ಮತ್ತು ಜಾಗೃತಿಯ ಪ್ರಕ್ರಿಯೆಯ ಅವಧಿಯಲ್ಲಿ ಆ ಉದ್ದೇಶಕ್ಕಾಗಿ ನಿಯೋಜಿಸಿದ ಅಧಿಕಾರಿಗಳಿಗೆ ಒದಗಿಸಲಾಗುವ ತಪ್ಪಿಸಬಹುದಾದ ತಪ್ಪುಗಳ ಪಟ್ಟಿ**

**ತಪ್ಪಿಸಬಹುದಾದ ತಪ್ಪುಗಳು**

- 64 ಡಮ್ಮಿ ಚಿಹ್ನೆಗಳನ್ನು (ನೋಟಾ ಸೇರಿದಂತೆ) ಹೊಂದಿರುವ 4 ಬ್ಯಾಲೆಟ್ ಯೂನಿಟ್‌ಗಳ ಸಹಿತ ಪರೀಕ್ಷೆ ಮಾಡುವುದಕ್ಕಾಗಿ ಬಳಸಲಾಗುವ ಶೇ.1 ರಷ್ಟು ವಿವಿಪ್ಯಾಟ್‌ಗಳಲ್ಲಿ 16 ಅಭ್ಯರ್ಥಿಗಳ (ನೋಟಾ ಸೇರಿದಂತೆ) ಡಮ್ಮಿ ಚಿಹ್ನೆಗಳನ್ನು ರೀ–ಲೋಡ್ ಮಾಡುವುದು. ಬಳಸಲಾದ ಡಮ್ಮಿ ಬ್ಯಾಲೆಟ್ ಪೇಪರ್‌ಗಳ ಅನುಸಾರವೇ ವಿವಿಪ್ಯಾಟ್ ಸ್ಲಿಪ್‌ಗಳು ಮುದ್ರಿತವಾಗುತ್ತವೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.
- ಡಮ್ಮಿ ಚಿಹ್ನೆಗಳನ್ನು ಅನಿಯತವಾಗಿ ಬಳಕೆ ಮಾಡುವುದು. ಬಳಸಲಾದ ಡಮ್ಮಿ ಬ್ಯಾಲೆಟ್ ಪೇಪರ್‌ಗಳ ಅನುಸಾರವೇ ವಿವಿಪ್ಯಾಟ್ ಸ್ಲಿಪ್‌ಗಳು ಮುದ್ರಿತವಾಗುತ್ತವೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.
- ಎಂ3 ಇವಿಎಂಗಳ ಸಂದರ್ಭದಲ್ಲಿ, ಇವಿಎಂಗಳನ್ನು ಸಿದ್ಧಪಡಿಸುವಾಗ ಎಂ3 ವಿವಿಪ್ಯಾಟ್‌ಗಳ ಸಂಪರ್ಕವನ್ನೇ ಕಲ್ಪಿಸಬೇಕು. ಇಲ್ಲದಿದ್ದರೆ, ತದನಂತರದ ಹಂತದಲ್ಲಿ ಇವಿಎಂ, ವಿವಿಪ್ಯಾಟ್ ಅನ್ನು ಅಂಗೀಕರಿಸುವುದಿಲ್ಲ. ಆದ್ದರಿಂದ, ಜಾಗೃತಿ ಮೂಡಿಸುವ ಉದ್ದೇಶಕ್ಕಾಗಿ ಎಂ3 ಇವಿಎಂಗಳಲ್ಲಿ ಕ್ಯಾಂಡಿಡೇಟ್ ಸೆಟ್ಟಿಂಗ್ ಅನ್ನು ಬ್ಯಾಲೆಟ್ ಯೂನಿಟ್ ಮತ್ತು ವಿವಿಪ್ಯಾಟ್ ಉಪಯೋಗಿಸಿಕೊಂಡು ಮಾಡಬೇಕು.
- ವಿವಿಪ್ಯಾಟ್ ಅನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸುವಾಗ ಪೇಪರ್ ರೋಲ್ ಅನ್ನು ಲಾಕ್ ಮಾಡಬೇಕು. ಇಲ್ಲವಾದರೆ, ವಿವಿಪ್ಯಾಟ್ ಎರರ್ ಮೋಡ್‌ಗೆ ಹೋಗಬಹುದು.
- ವಿವಿಪ್ಯಾಟ್ ಅನ್ನು ಹಗಲಿನ ಪ್ರಖರ ಬೆಳಕಿನಲ್ಲಿ ಅಥವಾ ಬಲ್ಬ್ ಅಥವಾ ಹ್ಯಾಲೋಜಿನ್ ಲ್ಯಾಂಪ್‌ನ ಅಡಿಯಲ್ಲಿ ನೇರವಾಗಿ ಸ್ವಿಚ್ ಆನ್ ಮಾಡಬಾರದು. ಹಾಗೆ ಮಾಡಿದಾಗ ವಿವಿಪ್ಯಾಟ್ ಎರರ್ ಮೋಡ್‌ಗೆ ಹೋಗಬಹುದು. ಆದ್ದರಿಂದ, ಇವಿಎಂ ಮತ್ತು ವಿವಿಪ್ಯಾಟ್‌ನ ಜಾಗೃತಿ ಮೂಡಿಸುವ ಪ್ರಕ್ರಿಯೆಯನ್ನು ನೆರಳಿನ/ಮುಚ್ಚಿದ ಸ್ಥಳದಲ್ಲಿ ಮಾಡುವಂತೆ ನೋಡಿಕೊಳ್ಳತಕ್ಕದ್ದು.
- ವಿವಿಪ್ಯಾಟ್ ಅನ್ನು ಪದೇ ಪದೇ ಸ್ವಿಚ್ ಆನ್ ಮತ್ತು ಆಫ್ ಮಾಡಬಾರದು. ಅದರಿಂದ ಬ್ಯಾಟರಿ ಕ್ಷೀಣಿಸುತ್ತದೆ ಹಾಗೆಯೇ ಪೇಪರ್ ರೋಲ್ ಖಾಲಿಯಾಗುತ್ತದೆ.

- ಇವಿಎಂಗಳು/ ವಿವಿಪ್ಯಾಟ್‌ಗಳನ್ನು ಸಂಪರ್ಕ ಕಲ್ಪಿಸುವಾಗ ಅಥವಾ ಸಂಪರ್ಕ ಕಡಿತಗೊಳಿಸುವಾಗ ಕಂಟ್ರೋಲ್ ಯೂನಿಟ್ ಅನ್ನು ಸ್ವಿಚ್ ಆಫ್ ಮಾಡಬೇಕು ಮತ್ತು ಸಂಪರ್ಕ ತೆಗೆಯುವಾಗ ಕೇಬಲ್ ಅನ್ನು ಎಳೆಯಬಾರದು.

**ಟಿಪ್ಪಣಿ:**

➢ 100 ಅಥವಾ ಅದಕ್ಕಿಂತ ಹೆಚ್ಚು ಮತಕೇಂದ್ರಗಳನ್ನು ಹೊಂದಿರುವ ವಿಧಾನಸಭಾ ಚುನಾವಣಾ ಕ್ಷೇತ್ರಗಳಲ್ಲಿ, ತರಬೇತಿ ಮತ್ತು ಜಾಗೃತಿ ಉದ್ದೇಶಕ್ಕಾಗಿ ಹೊರತೆಗೆದಿರುವ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಪೈಕಿ ಕನಿಷ್ಠ ಶೇ.5 ರಷ್ಟನ್ನು ಆಯೋಗದ ಚಾಲ್ತಿಯಲ್ಲಿರುವ ಸೂಚನೆಗಳಿಗನುಸಾರವಾಗಿ ಹೊಸದಾಗಿ ಎಫ್‌ಎಲ್‌ಸಿ, ಯಾದೃಚ್ಛೀಕರಣ, ಅಭ್ಯರ್ಥಿ ಸೆಟ್ಟಿಂಗ್ ಇತ್ಯಾದಿಯನ್ನು ಮಾಡಿದ ನಂತರ ಮತದಾನ ದಿನದಂದು ಮೀಸಲುಗಳಾಗಿ ಮರು ಬಳಕೆ ಮಾಡುವುದನ್ನು ಡಿಇಒ ಅವರು ಖಚಿತಪಡಿಸಿಕೊಳ್ಳುವುದು ಕಡ್ಡಾಯವಾಗಿರತಕ್ಕದ್ದು. 100ಕ್ಕಿಂತ ಕಡಿಮೆ ಮತಕೇಂದ್ರಗಳನ್ನು ಹೊಂದಿರುವ ವಿಧಾನಸಭಾ ಕ್ಷೇತ್ರಗಳಿಗಾಗಿ ತರಬೇತಿ/ಜಾಗೃತಿ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಪೈಕಿ ಮತದಾನ ದಿನದ ಮೀಸಲು ಸಂಚಯವಾಗಿ ಮರುಬಳಕೆ ಮಾಡಿಕೊಳ್ಳಬೇಕಾದಂತಹ ಸಂಖ್ಯೆಯನ್ನು ಡಿಇಒ ರವರು ಆಯಾ ಸ್ಥಳದ ನಿರ್ದಿಷ್ಟ ಅವಶ್ಯಕತೆಗೆ ಅನುಸಾರವಾಗಿ ನಿರ್ಣಯಿಸಬಹುದಾಗಿರುತ್ತದೆ. ಯಾವುದೇ ಸಂದರ್ಭದಲ್ಲಿಯೂ, ಮತದಾನಕ್ಕಾಗಿ ಮತಯಂತ್ರಗಳ ಗರಿಷ್ಠ ಬಳಕೆ ಮಾಡುವ ಸಲುವಾಗಿ, ತರಬೇತಿ/ಜಾಗೃತಿಗಾಗಿ ಬಳಕೆಯಾದ ಯಂತ್ರಗಳ ರಾಶಿಯಿಂದ ಗರಿಷ್ಠ ಯಂತ್ರಗಳನ್ನು ಮತದಾನ ದಿನದಂದು ಮೀಸಲುಗಳಾಗಿ ಮರುಬಳಕೆ ಮಾಡಿಕೊಳ್ಳುವಂತೆ ನೋಡಿಕೊಳ್ಳುವ ಪ್ರಯತ್ನಗಳನ್ನು ಮಾಡಬೇಕಿರುತ್ತದೆ ಮತ್ತು ಅಂಥ ಎಲ್ಲಾ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಪಟ್ಟಿಯನ್ನು ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ನೀಡಿ ಅವರಿಂದ ಸ್ವೀಕೃತಿ ಪಡೆಯತಕ್ಕದ್ದು.

➢ ರಾಜಕೀಯ ಪಕ್ಷಗಳು/ಸ್ಪರ್ಧಾಕಣದಲ್ಲಿರುವ ಅಭ್ಯರ್ಥಿಗಳು/ ಅವರ ಏಜೆಂಟರ ಉಪಸ್ಥಿತಿಯಲ್ಲಿ, ಎಫ್‌ಎಲ್‌ಸಿ ಪ್ರಕ್ರಿಯೆ, ಯಾದೃಚ್ಛೀಕರಣ ಮತ್ತು ಕ್ಯಾಂಡಿಡೇಟ್ ಸೆಟ್ ಮಾಡಿದ ನಂತರವೇ, ಅಗತ್ಯವಿದ್ದಲ್ಲಿ, ತರಬೇತಿ ಮತ್ತು ಜಾಗೃತಿ ಇವಿಎಂಗಳು/ವಿವಿಪ್ಯಾಟ್‌ಗಳನ್ನು ಮತದಾನಕ್ಕೆ ಮೀಸಲಿಟ್ಟಿರುವ ಯಂತ್ರಗಳೊಂದಿಗೆ ಸೇರ್ಪಡೆಗೊಳಿಸಬೇಕು.

**ಪ್ರಧಾನ ತರಬೇತುದಾರರು, ಮತದಾನ ಸಿಬ್ಬಂದಿ, ಮತಎಣಿಕೆ ಸಿಬ್ಬಂದಿ ಮತ್ತು ಸಂಗ್ರಹಣಾ ಸಿಬ್ಬಂದಿಯ ತರಬೇತಿ**

- ಪ್ರಿಸೈಡಿಂಗ್ ಅಧಿಕಾರಿಗಳು, ಪೋಲಿಂಗ್ ಅಧಿಕಾರಿಗಳು, ರಿಟರ್ನಿಂಗ್ ಅಧಿಕಾರಿ, ಸಹಾಯಕ ರಿಟರ್ನಿಂಗ್ ಅಧಿಕಾರಿಗಳು, ಸೆಕ್ಟರ್ ಅಧಿಕಾರಿಗಳು ಮತ್ತು ಮತಎಣಿಕೆ ಸಿಬ್ಬಂದಿಗೆ ವಿವಿಪ್ಯಾಟ್‌ಗಳೊಂದಿಗೆ ಇವಿಎಂಗಳನ್ನು ಬಳಸುವುದರ ಬಗ್ಗೆ ಅವರ ಪಾತ್ರ/ಕರ್ತವ್ಯಗಳಿಗೆ ಸಂಬಂಧಿಸಿದಂತೆ ತರಬೇತಿ ನೀಡಬೇಕು.
- ಪ್ರತಿಯೊಬ್ಬ ಅಧಿಕಾರಿಗೆ ವಿವಿಪ್ಯಾಟ್ ಯಂತ್ರದೊಂದಿಗೆ ಇವಿಎಂ ಯಂತ್ರವನ್ನು ಚಾಲನೆ ಮಾಡುವುದಕ್ಕೆ ಮತ್ತು ವಿವಿಪ್ಯಾಟ್ ಬಳಸಿಕೊಂಡು ಮತ ದಾಖಲಿಸುವ ಪ್ರಕ್ರಿಯೆಯನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಅವಕಾಶ ನೀಡಬೇಕು.
- ವಿವಿಪ್ಯಾಟ್ ಯಂತ್ರದಿಂದ ಮುದ್ರಿತವಾದ ಕಾಗದದ ಸ್ಲಿಪ್‌ಗಳನ್ನು ಎಣಿಕೆ ಮಾಡುವುದಕ್ಕಾಗಿ ಮತ್ತು ಕಂಟ್ರೋಲ್ ಯೂನಿಟ್‌ನ ಎಣಿಕೆಯೊಂದಿಗೆ ವಿವಿಪ್ಯಾಟ್ ಕಾಗದದ ಸ್ಲಿಪ್‌ಗಳ ಎಣಿಕೆಯನ್ನು ತಾಳೆ ಮಾಡುವುದಕ್ಕಾಗಿ ಪ್ರತ್ಯೇಕವಾದ ತರಬೇತಿಯನ್ನು ನೀಡಬೇಕು.
- ತರಬೇತಿ ಅವಧಿಯಲ್ಲಿ ಎಲ್ಲಾ ಅಧಿಕಾರಿಗಳಿಗೆ ವಿವಿಪ್ಯಾಟ್ ಕಿರುಹೊತ್ತಿಗೆ (ಅನುಬಂಧ–13)ಯ ಪ್ರತಿಯನ್ನು ನೀಡಬೇಕು ಮತ್ತು ಅವರು ಮತದಾನ ದಿನದಂದು ಮತಕೇಂದ್ರದಲ್ಲಿ ಲಭ್ಯವಿರುವಂತೆ ಮಾಡಬೇಕು.
- ವಿವಿಪ್ಯಾಟ್‌ಗಳ ಕಾರ್ಯಾಚರಣೆ ಮತ್ತು ಬಳಕೆಯ ಕುರಿತಾಗಿ, ರಾಜ್ಯ ಸಾರ್ವಜನಿಕ ಆಡಳಿತ ಸಂಸ್ಥೆಗಳ ತರಬೇತಿ ಮಾಡ್ಯೂಲ್‌ನಲ್ಲಿ ಒಂದು ತರಬೇತಿ ಸೆಷನ್ ಅನ್ನು ಸೇರಿಸಬಹುದು.

**ಎಣಿಕೆ ಸಿಬ್ಬಂದಿಯ ತರಬೇತಿಯ ಅವಧಿಯಲ್ಲಿ ಹಾಗೆಯೇ ಮತಗಳ ಎಣಿಕೆಯ ಅಣಕು ಪ್ರದರ್ಶನದ ಸಮಯದಲ್ಲಿ ವಿವಿಪ್ಯಾಟ್ ಸ್ಲಿಪ್‌ಗಳನ್ನು ಎಣಿಕೆ ಕುರಿತಾದ ಪ್ರಾತ್ಯಕ್ಷಿಕೆ ತರಬೇತಿ**

- ತರಬೇತಿ ಮತ್ತು ಜಾಗೃತಿಗೆ ಸಂಬಂಧಿಸಿದ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಮಾತ್ರ ಬಳಸತಕ್ಕದ್ದು.
- ಆಯೋಗದಿಂದ ಗೊತ್ತುಪಡಿಸಿದ ಡಮ್ಮಿ ಚಿಹ್ನೆಗಳನ್ನು ಮಾತ್ರ ಬಳಸತಕ್ಕದ್ದು.
- ವಿವಿಪ್ಯಾಟ್ ಸ್ಲಿಪ್‌ಗಳ ಎಣಿಕೆಯ ಅಣಕು ಪ್ರದರ್ಶನಕ್ಕಾಗಿ, ಡಮ್ಮಿ ವಿವಿಪ್ಯಾಟ್ ಎಣಿಕೆ ಬೂತ್ (ವಿಸಿಬಿ) ಅನ್ನು ನಿರ್ಮಿಸತಕ್ಕದ್ದು.
- ಅಣಕು ಪ್ರದರ್ಶನಕ್ಕಾಗಿ ಕನಿಷ್ಠ 500 ವಿವಿಪ್ಯಾಟ್ ಸ್ಲಿಪ್‌ಗಳನ್ನು ಸೃಜಿಸತಕ್ಕದ್ದು.
- ವಿವಿಪ್ಯಾಟ್ ನ ಅಣಕು ಪ್ರದರ್ಶನವನ್ನು ಇಸಿಐ ವೀಕ್ಷಕರ ಸಮಕ್ಷಮದಲ್ಲಿ ಆಯೋಜಿಸತಕ್ಕದ್ದು.

**ತರಬೇತಿ ಮತ್ತು ಜಾಗೃತಿ ಅವಧಿಯಲ್ಲಿ ಸೃಜಿಸಿದ ವಿವಿಪ್ಯಾಟ್ ಸ್ಲಿಪ್‌ಗಳನ್ನು ನಾಶ ಮಾಡುವುದು**

- ಡಿಇಒ ಅವರಿಂದ ಕ್ರಮಬದ್ಧವಾಗಿ ನಾಮನಿರ್ದೇಶಿತನಾದ ಪತ್ರಾಂಕಿತ ಅಧಿಕಾರಿಯ ಉಪಸ್ಥಿತಿಯಲ್ಲಿ, ಆಯಾಯ ದಿನವೇ ಕಾಗದವನ್ನು ಚೂರು ಮಾಡುವ ಯಂತ್ರವನ್ನು ಬಳಸಿ ತರಬೇತಿ ಮತ್ತು ಜಾಗೃತಿ ಅವಧಿಯಲ್ಲಿ ರಚಿಸಿದ ವಿವಿಪ್ಯಾಟ್ ಸ್ಲಿಪ್‌ಗಳನ್ನು ನಾಶ ಮಾಡಬೇಕು.
- ಆಯೋಗದ ನಿರ್ದೇಶನದಂತೆ ಎಲ್ಲ ವಿವಿಪ್ಯಾಟ್‌ನ ದೈನಂದಿನ ನಾಶದ ಬಗ್ಗೆ ತರಬೇತಿ ಮತ್ತು ಜಾಗೃತಿ ನಡೆಸುವ ಪ್ರಭಾರಿ ನೋಡಲ್ ಅಧಿಕಾರಿಯವರು ಪ್ರಮಾಣಪತ್ರವನ್ನು ನೀಡಬೇಕು.
- ಅಲ್ಲದೇ, ಈ ಸೂಚನೆಗಳನ್ನು ಪಾಲಿಸಿರುವುದನ್ನು ದೃಢೀಕರಿಸಿ ಸಮಗ್ರ ಜಿಲ್ಲೆಯ ಮತದಾರರ 3ನೇ (ಪಿ–3) ದಿನದಂದು ಸಂಬಂಧಪಟ್ಟ ಸಿಇಒ ರವರಿಗೆ ಪ್ರಮಾಣಪತ್ರವನ್ನು ಸಲ್ಲಿಸತಕ್ಕದ್ದು.

**ಟಿಪ್ಪಣಿ: ತರಬೇತಿ, ಜಾಗೃತಿ ಮತ್ತು ಪ್ರಾತ್ಯಕ್ಷಿಕೆ ಉದ್ದೇಶಗಳಿಗಾಗಿ ಕಲ್ಪಿತ (ಡಮ್ಮಿ) ಚಿಹ್ನೆಗಳುಳ್ಳ ಎಫ್‌ಎಲ್‌ಸಿ–ಓಕೆ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಮಾತ್ರ ಬಳಸುವುದು.**

# ಭಾಗ –II

## ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಎರಡನೇ ಯಾದೃಚ್ಛೀಕರಣದಿಂದ ಮತ ಎಣಿಕೆಯವರೆಗು


| ಕ್ರಮ ಸಂಖ್ಯೆ | ಅಧ್ಯಾಯ ಸಂಖ್ಯೆ | ಪರಿವಿಡಿ | ಪುಟ ಸಂಖ್ಯೆ |
|---|---|---|---|
| 1 | ಅಧ್ಯಾಯ 6 | ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಸಂಗ್ರಹಣೆ ಹಾಗೂ ಇವಿಎಂ ಸಂಗ್ರಹಾಗಾರವನ್ನು ತೆರೆಯುವುದು ಮತ್ತು ಚುನಾವಣಾ ಅವಧಿಯಲ್ಲಿ ಮತ್ತು ತುರ್ತು ಸಂದರ್ಭದಲ್ಲಿ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಚಲನವಲನ | |
| 2 | ಅಧ್ಯಾಯ 7 | ಇವಿಎಮ್/ವಿವಿಪ್ಯಾಟ್‌ಗಳ ಎರಡನೇ ಯಾದೃಚ್ಛೀಕರಣ | |
| 3 | ಅಧ್ಯಾಯ 8 | ಇವಿಎಮ್‌ಗಳು (ಕ್ಯಾಂಡಿಡೇಟ್ ಸೆಟ್) ಹಾಗೂ ವಿವಿಪ್ಯಾಟ್‌ಗಳ ಕಾರ್ಯಸಿದ್ಧತೆ | |
| 4 | ಅಧ್ಯಾಯ 9 | ಇವಿಎಂಗಳು ಹಾಗೂ ವಿವಿಪ್ಯಾಟ್‌ಗಳ ವಿತರಣೆ | |
| 5 | ಅಧ್ಯಾಯ 10 | ಮತದಾನ ಕೇಂದ್ರಗಳಲ್ಲಿ ಬಳಸಿದ ಮತದಾನದ ಅಂಕಣಗಳು | |
| 6 | ಅಧ್ಯಾಯ 11 | ಮತದಾನದ ದಿನ | |
| 7 | ಅಧ್ಯಾಯ 12 | ಮತದಾನದ ನಂತರ ಮತಗಳು ದಾಖಲಾಗಿರುವ ಮತ್ತು ಮತಗಳು ದಾಖಲಾಗದಿರುವ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಸಂಗ್ರಹಣೆ | |
| 8 | ಅಧ್ಯಾಯ 13 | ಮರು ಮತದಾನದ ಸಂದರ್ಭದಲ್ಲಿ ಇವಿಎಂ/ವಿವಿಪ್ಯಾಟ್‌ನ ಬಳಕೆ | |
| 9 | ಅಧ್ಯಾಯ 14 | ಮತಗಳ ಎಣಿಕೆ | |
| 10 | ಅಧ್ಯಾಯ 15 | ವಿವಿಪ್ಯಾಟ್‌ನ ಬಳಕೆಯ ಸಂದರ್ಭದಲ್ಲಿ ಮಾಡಬೇಕಾದ್ದು ಮತ್ತು ಮಾಡಬಾರದ್ದು | |
| 11 | ಅಧ್ಯಾಯ 16 | ಗಂಭೀರ ತಪ್ಪುಗಳ ಉದಾಹರಣೆಗಳು | |

# ಅಧ್ಯಾಯ – 6

# ಇವಿಮ್ ಮತ್ತು ವಿವಿಪ್ಯಾಟ್‌ಗಳ ಸಂಗ್ರಹಣೆ ಹಾಗೂ ಸಾಗಣೆ ಮತ್ತು ಇವಿಎಮ್ ಸಂಗ್ರಹಾಗಾರವನ್ನು ತೆರೆಯುವುದು

## 6.1 ಚುನಾವಣಾ ಅವಧಿ

### 6.1.1 ಮತದಾನ ಪೂರ್ವ ಸಂಗ್ರಹಣೆ: ಇವಿಎಮ್‌ಗಳು ಮತ್ತು ವಿವಿಪ್ಯಾಟ್‌ಗಳ ಮೊದಲ ಯಾದೃಚ್ಛೀಕರಣದ ತರುವಾಯ ಮತದಾನ ಸಿಬ್ಬಂದಿಯು ತೆರಳುವವರೆಗೆ

ಎ. ಇವಿಎಮ್‌ಗಳ ಮೊದಲ ಯಾದಚ್ಛೀಕರಣದ ತರುವಾಯ, ಇವಿಎಮ್‌ಗಳು ಹಾಗೂ ವಿವಿಪ್ಯಾಟ್‌ಗಳನ್ನು ಸಂದರ್ಭಾನುಸಾರ ಸಂಬಂಧಪಟ್ಟ ಆರ್.ಒ/ಎಆರ್‌ಒ ಗಳಿಗೆ ಯುಕ್ತ ಸಶಸ್ತ್ರ ಪೊಲೀಸ್ ಬೆಂಗಾವಲಿನಲ್ಲಿ ಹಸ್ತಾಂತರಿಸುವುದು.

ಅನುಸರಿಸಬೇಕಾದ ಮಾರ್ಗಸೂಚಿಗಳು:

- ಇವಿಎಮ್‌ಗಳು/ವಿವಿಪ್ಯಾಟ್‌ಗಳನ್ನು, ರಾಷ್ಟ್ರ/ರಾಜ್ಯ ಮಟ್ಟದ ರಾಜಕೀಯ ಪಕ್ಷಗಳ ಉಪಸ್ಥಿತಿಯಲ್ಲಿ ವಿಡಿಯೋ ಚಿತ್ರೀಕರಣದ ಸಹಿತ ಭದ್ರತಾ ಕೊಠಡಿಯಲ್ಲಿ ಸಂಗ್ರಹಣೆ ಮಾಡುವುದು.
- ತರಬೇತಿ ಮತ್ತು ಜಾಗೃತಿಗಾಗಿ ಮೀಸಲಿಟ್ಟಿರುವ ಇವಿಎಮ್ ಮತ್ತು ವಿವಿಪ್ಯಾಟ್‌ಗಳನ್ನು ಪ್ರತ್ಯೇಕ ಭದ್ರತಾ ಕೊಠಡಿಯಲ್ಲಿ ಇಡುವುದು.
- 1 ಸೆಕ್ಷನ್ ಭದ್ರತೆ ಹಾಗೂ 247 ಅವಧಿಯ ಸಿಸಿಟಿವಿ ಕವರೇಜ್.

ಬಿ. ವಿಧಾನಸಭಾ ಮತಕ್ಷೇತ್ರವಾರು (ಎಸಿ)/ವಿಧಾನಸಭಾ ವಲಯವಾರು (ಎಎಸ್) ಪ್ರತ್ಯೇಕ ಭದ್ರತಾ ಕೊಠಡಿಗಳಲ್ಲಿ ಇವಿಎಮ್ ಮತ್ತು ವಿವಿಪ್ಯಾಟ್‌ಗಳನ್ನು ಸಂಗ್ರಹಣೆ ಮಾಡಬೇಕು.

ಸಿ. ಏಕಕಾಲದಲ್ಲಿ ಬರುವ ಚುನಾವಣೆಗಳ ಸಂದರ್ಭದಲ್ಲಿ ಪ್ರತ್ಯೇಕವಾಗಿ ಎಸಿ/ಎಎಸ್‌ಗಳಿಗೆ ಸಂಬಂಧಿಸಿದ ಇವಿಎಮ್ ಮತ್ತು ವಿವಿಪ್ಯಾಟ್‌ಗಳನ್ನು ಪ್ರತ್ಯೇಕ ಭದ್ರತಾ ಕೊಠಡಿಯಲ್ಲಿ ಸಂಗ್ರಹಣೆ ಮಾಡುವುದು.

ಡಿ. ವಿಶೇಷ ಸಂದರ್ಭಗಳಲ್ಲಿ ಮಾತ್ರ, ಆಯೋಗದ ಪೂರ್ವಾನುಮೋದನೆಯೊಂದಿಗೆ ದೊಡ್ಡದಾದ ಭದ್ರತಾ ಕೊಠಡಿಯೊಳಗೆ ಪ್ರತಿ ಎಸಿ/ಎಎಸ್‌ಗಾಗಿ ಪ್ರತ್ಯೇಕ ಪ್ರವೇಶದ್ವಾರವುಳ್ಳ ಪ್ರತ್ಯೇಕ ತಾತ್ಕಾಲಿಕ ಭದ್ರತಾ ಕೊಠಡಿಗಳನ್ನು ಮಾಡುವುದು.

ಇ. ಇವಿಎಂ ಮತ್ತು ವಿವಿಪ್ಯಾಟ್‌ಗಳನ್ನು ಸಿದ್ಧಪಡಿಸುವ ಸಮಯದಲ್ಲಿ ಭದ್ರತಾ ಕೊಠಡಿಯನ್ನು ತೆರೆಯುವುದು.

**ಎಫ್**. ಸಿದ್ಧಗೊಳಿಸಿದ ತರುವಾಯ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಪುನಃ ಭದ್ರತಾ ಕೊಠಡಿಯಲ್ಲಿ ಇರಿಸುವುದು ಹಾಗೂ ವಿಲೇವಾರಿಯ ದಿನದಂದು, ಅಭ್ಯರ್ಥಿಗಳ ಅಥವಾ ಅವರ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯುವುದು.

### 6.1.2 ಮತದಾನ ನಂತರದ ಸಂಗ್ರಹಣೆ (ಮತ ಹಾಕಿದ ಇವಿಎಮ್ / ವಿವಿಪ್ಯಾಟ್‌ಗಳ ಸಂಗ್ರಹಣೆ):

**ಮತ್ತು ಮತದಾನದ ನಂತರ ಎಣಿಕೆ ದಿನದವರೆಗೆ,**

ಎ. ಮತದಾನ ಮುಕ್ತಾಯವಾದ ನಂತರ, ನಿರ್ದಿಷ್ಟ ಮತದಾನ ಕೇಂದ್ರದ ಮತಯಂತ್ರ (ಬ್ಯಾಲೆಟಿಂಗ್ ಯೂನಿಟ್, ಕಂಟ್ರೋಲ್ ಯೂನಿಟ್ ಮತ್ತು ವಿವಿಪ್ಯಾಟ್)ಗಳ ಇಡೀ ಸೆಟ್ ಅನ್ನು ಬೆಂಗಾವಲಿನೊಂದಿಗೆ ಮತದಾನವಾಗಿರುವ ಮತಯಂತ್ರಗಳ ಭದ್ರತಾ ಕೊಠಡಿಗೆ ಸಾಗಿಸಬೇಕು.

ಬಿ. ಬಳಸದೆ ಇರುವ ಇವಿಎಮ್‌ಗಳು ಹಾಗೂ ವಿವಿಪ್ಯಾಟ್‌ಗಳನ್ನು, ಬೇರೆ ಸ್ಥಳದಲ್ಲಿರುವ ಪ್ರತ್ಯೇಕ "ಮೀಸಲು ಇವಿಎಮ್" ಭದ್ರತಾ ಕೊಠಡಿಯಲ್ಲಿ ಇರಿಸತಕ್ಕದ್ದು.

ಸಿ. ನಿರ್ದಿಷ್ಟ ಮತದಾನ ಕೇಂದ್ರಗಳಿಂದ ಸ್ವೀಕರಿಸಿದ ಮತಯಂತ್ರಗಳನ್ನು ಅವುಗಳ ಕ್ರಮಸಂಖ್ಯೆಗಳೊಂದಿಗೆ ಜೋಡಿಸಿಡುವುದಕ್ಕಾಗಿ ಭದ್ರತಾ ಕೊಠಡಿಯಲ್ಲಿ ಚೌಕಾಕಾರದಲ್ಲಿರುವ ಒಂದೇ ಚೌಕಟ್ಟಿನ ನಿರ್ದಿಷ್ಟ ಭಾಗಗಳನ್ನು ಗುರುತು ಮಾಡುವುದು, ಒಂದೇ ಭದ್ರತಾ ಕೊಠಡಿಯಲ್ಲಿ ಎಲ್ಲಾ ಇವಿಎಮ್‌ಗಳು/ವಿವಿಪ್ಯಾಟ್‌ಗಳನ್ನು ಸಂಗ್ರಹಿಸಲು ಕಾರ್ಯಸಾಧ್ಯವಾಗದಿದ್ದಲ್ಲಿ ಈ ಕೆಳಗೆ ನಮೂದಿಸಿದ ಸೂಚನೆಗಳನ್ನು ಅನುಸರಿಸುವುದು:

- ಮತ ಹಾಕಿದ ಇವಿಎಮ್ ಮತ್ತು ವಿವಿಪ್ಯಾಟ್‌ಗಳ(ದೋಷಪೂರಿತ ಮತದಾನವೂ ಸೇರಿ)ನ್ನು,

ಒಂದಕ್ಕೊಂದು ಹೊಂದಿಕೊಂಡಂತಿರುವ ಬಹುಸಂಖ್ಯೆಯ ಭದ್ರತಾ ಕೊಠಡಿಗಳಲ್ಲಿ ಇಡುವುದು ಮತ್ತು ಪ್ರತಿಯೊಂದು ಕೊಠಡಿಯ ಹೊರಗೆ ಚುನಾವಣೆಯ ವಿವರಗಳನ್ನು ಅಂದರೆ ಅಲ್ಲಿ ಇಡಲಾಗಿರುವ ಇವಿಎಮ್ ಮತ್ತು ವಿವಿಪ್ಯಾಟ್‌ಗಳು ಯಾವ ಎಸಿಗೆ/ಎಎಸ್‌ಗೆ ಸಂಬಂಧಿಸಿದ್ದು, ಅದರ ಹೆಸರು ಮತ್ತು ಸಂಖ್ಯೆಯನ್ನು ಮತ್ತು ಯಾವ ಮತದಾನ ಕೇಂದ್ರಕ್ಕೆ ಸಂಬಂಧಿಸಿದ್ದು, ಆ ಮತದಾನ ಕೇಂದ್ರದ ಕ್ರಮಸಂಖ್ಯೆಯನ್ನು ಸೂಚಿಸುವ ನೋಟೀಸನ್ನು ಅಂಟಿಸುವುದು.

• ಭಾರತ ಚುನಾವಣಾ ಆಯೋಗದ (ಇಎಸ್‌ಐ) ನಿರ್ದಿಷ್ಟ ವಿವರಣೆಗಳಿನುಸಾರವಾಗಿ ಮತ ಚಲಾಯಿಸಲಾದ ಇವಿಎಮ್ ಮತ್ತು ವಿವಿಪ್ಯಾಟ್‌ಗಳನ್ನು ಸಂಗ್ರಹಿಸಿಡಲು ಮಾಡಿದ ಸ್ಟೀಲ್/ಕಬ್ಬಿಣ/ಮರದ ಬಹು ಹಂತದ ಸಂಗ್ರಹಣಾ ರ್‍ಯಾಕ್ ಅನ್ನು ಸಿದ್ಧಪಡಿಸುವುದು.




### 6.1.3 ಮತಹಾಕಿದ ಇವಿಎಮ್ ಮತ್ತು ವಿವಿಪ್ಯಾಟ್‌ಗಳನ್ನು ಇಡಲಾದ ಭದ್ರತಾ ಕೊಠಡಿಗೆ ಮಾಡಬೇಕಾದ ಭದ್ರತೆ ಹಾಗೂ ಸುರಕ್ಷತಾ ಕ್ರಮಗಳು:

- ಒಂದೇ ಪ್ರವೇಶ/ಹೊರಹೋಗುವ ದ್ವಾರವಿದ್ದು, ಇತರ ಎಲ್ಲಾ ಬಾಗಿಲುಗಳು/ಕಿಟಕಿಗಳನ್ನು ಇಟ್ಟಿಗೆಕಲ್ಲು/ಕಾಂಕ್ರೀಟ್‌ನಿಂದ ಮುಚ್ಚುವುದು.
- ಡಬಲ್ ಲಾಕ್ ವ್ಯವಸ್ಥೆ.
- ಲಾಕ್-1ನ ಎಲ್ಲಾ ಕೀಲಿಕೈಗಳು ಆರ್‌ಒ ಬಳಿಯಲ್ಲಿ ಹಾಗೂ ಲಾಕ್-2ನ ಎಲ್ಲಾ ಕೀಲಿಕೈಗಳು ಎಆರ್‌ಒ ಬಳಿಯಲ್ಲಿ ಇರುವುದು.
- ಕನಿಷ್ಠ ಒಂದು ಸಶಸ್ತ್ರ ಪೊಲೀಸ್ ತುಕಡಿಯು 24 7 ಕಾಲ ಇರುವುದು.
- ದಿನದ 24 ಗಂಟೆಗಳ ಕಾಲ ಎರಡು ಸುತ್ತಿನ ಬಿಗಿ ಭದ್ರತೆಯನ್ನು ಏರ್ಪಡಿಸುವುದು. ಒಳ ಆವರಣದ ಕಾವಲನ್ನು ಸಿಪಿಎಎಫ್‌ನಿಂದ ಹೊರ ಆವರಣದ ಕಾವಲನ್ನು ರಾಜ್ಯ ಸಶಸ್ತ್ರ ಪೊಲೀಸಿನವರಿಂದ ಏರ್ಪಡಿಸುವುದು.
- ಐಪಿ ನಿಯಂತ್ರಣದಲ್ಲಿರುವ ಡಿವಿಆರ್ ಸಹಿತ ಸಿಸಿಟಿವಿ ಕ್ಯಾಮೆರಾ ವ್ಯವಸ್ಥೆ ಹಾಗೂ ತಡೆ ರಹಿತ ವಿದ್ಯುತ್ ಪೂರೈಕೆ ವ್ಯವಸ್ಥೆ.
- ಭದ್ರತಾ ಕೊಠಡಿಗೆ ಹೊಂದಿಕೊಂಡಂತೆ ಕಾರ್ಯಕಾರಿ ನಿಯಂತ್ರಣ ಕೊಠಡಿ ಇರುವುದು.
- ಪ್ರತಿ ಪ್ರವೇಶ, ನಿರ್ಗಮನಕ್ಕಾಗಿ ಲಾಗ್-ಬುಕ್ ಅನ್ನು ಹಾಗೂ ಭದ್ರತಾ ಸಿಬ್ಬಂದಿಗಾಗಿ ಕರ್ತವ್ಯ ಸರದಿ ವಹಿಯನ್ನು ಇಡುವುದು.
- ವಿಡಿಯೋ ಚಿತ್ರೀಕರಣ ಸಹಿತ ಎರಡನೇ ಭದ್ರತಾ ಸುತ್ತನ್ನು ಅಂದರೆ ಮಧ್ಯ ಪರಿಧಿಯನ್ನು ದಾಟುವ (ವೀಕ್ಷಕರುಗಳು, ಡಿಇಒಗಳು ಅಥವಾ ಎಸ್‌ಪಿಗಳು ಸೇರಿದಂತೆ) ಅಧಿಕೃತ ಅಧಿಕಾರಿಗಳಿಗಾಗಿ ಪ್ರತ್ಯೇಕ ಲಾಗ್-ಬುಕ್ ವ್ಯವಸ್ಥೆ.
- ಭದ್ರತಾ ಕೊಠಡಿಯನ್ನು ತೆರೆಯುವ ಹಾಗೂ ಮುಚ್ಚುವ ವೇಳೆಯಲ್ಲಿ ವಿಡಿಯೋ ಚಿತ್ರೀಕರಣ ಮಾಡುವುದು.
- ಭದ್ರತಾ ಕೊಠಡಿಯ ಒಳಗೆ ಹಾಗೂ ಹೊರಗೆ ಅಗ್ನಿಶಾಮಕಗಳನ್ನು ಹಾಗೂ ಕೊಠಡಿಯ ಒಳಗೆ ಅಗ್ನಿ ಎಚ್ಚರಿಕೆ ಸೂಚಕವನ್ನು ಅಳವಡಿಸುವುದು.
- ವಿಐಪಿಗಳು ಹಾಗೂ ಅಧಿಕಾರಿಗಳೂ ಒಳಗೊಂಡಂತೆ ಯಾವುದೇ ವಾಹನಗಳ ಪ್ರವೇಶವಿರುವುದಿಲ್ಲ.

**6.1.4 ಮತ ಹಾಕಿದ ಇವಿಎಮ್‌ಗಳಿಗಾಗಿ ನಿಯಮಾವಳಿ:**

- ಎಲ್ಲಾ ಸ್ಪರ್ಧಿಸುವ ಅಭ್ಯರ್ಥಿಗಳಿಗೆ, ಭದ್ರತಾ ಕೊಠಡಿಯ ಭದ್ರತಾ ವ್ಯವಸ್ಥೆಗಳನ್ನು ಗಮನಿಸಲು ಅವರ ಪ್ರತಿನಿಧಿಗಳನ್ನು ನಿಯೋಜಿಸುವುದಕ್ಕಾಗಿ 24 ಗಂಟೆಗಳ ಮುಂಚಿತವಾಗಿ ಸೂಚನೆ ನೀಡುವುದು ಮತ್ತು ಅವರು ಒಳ ಪರಿಧಿಯ ಹೊರ ಭಾಗದಲ್ಲಿ ಇರಲು ಅನುಮತಿ ನೀಡುವುದು ಭದ್ರತಾ ಕೊಠಡಿಯ ಪ್ರವೇಶ ದ್ವಾರವು ಅವರಿಗೆ ಕಾಣಿಸದಿದ್ದಲ್ಲಿ ಅವರಿಗೆ ಸಿಸಿಟಿವಿ ಡಿಸ್‌ಪ್ಲೇ ಏರ್ಪಾಡು ಮಾಡುವುದು.
- ಕುಡಿಯುವ ನೀರು, ಶಾಮಿಯಾನ/ಟೆಂಟ್ ಮುಂತಾದಂಥ ಸೂಕ್ತ ವ್ಯವಸ್ಥೆಗಳನ್ನು ಮಾಡುವುದು.
- ತುರ್ತು ಸಂದರ್ಭಗಳಿಗಾಗಿ, ಇಸಿಐನಲ್ಲಿ ಪ್ರಭಾರದಲ್ಲಿರುವ ಸಿಇಓ, ಹೆಚ್ಚುವರಿ ಸಿಇಓಗಳು, ಡಿಇಸಿ ಮತ್ತು ಸಂಬಂಧಪಟ್ಟ ಡಿಇಒ/ಸಿಓಎಸ್‌ಪಿ/ಆರ್‌ಓಗಳ ದೂರವಾಣಿ ಸಂಖ್ಯೆಗಳನ್ನು ಪ್ರಚುರಪಡಿಸುವುದು.
- ವೆಬ್ ಕ್ಯಾಮೆರಾವನ್ನು ಬಳಸಿ ಭದ್ರತಾ ಕೊಠಡಿಗಳಲ್ಲಿನ (ಬಾಗಿಲುಗಳು ಮುಂತಾದ) ಎಲ್ಲಾ ಪ್ರವೇಶ ದ್ವಾರಗಳನ್ನು ನಿರಂತರವಾಗಿ ವಿಡಿಯೋ ಚಿತ್ರೀಕರಣ ಮಾಡುವುದು.
- ರಿಟರ್ನಿಂಗ್ ಅಧಿಕಾರಿಯು ಲಾಗ್–ಬುಕ್ ಮತ್ತು ವಿಡಿಯೋ ಚಿತ್ರೀಕರಣವನ್ನು ಪರಿಶೀಲಿಸಲು ಬೆಳಿಗ್ಗೆ ಮತ್ತು ಸಂಜೆ ದಿನಕ್ಕೆ ಎರಡು ಬಾರಿ ಸಂಗ್ರಹಣಾ ಆವರಣಕ್ಕೆ ಭೇಟಿ ನೀಡಿ, ಪ್ರತಿದಿನ ಅದರ ಸ್ಥಿತಿಗತಿಯ ಬಗ್ಗೆ ಡಿಇಒ ರವರಿಗೆ ವರದಿಯನ್ನು ಕಳುಹಿಸುವುದು.
- ಭದ್ರತಾ ಕೊಠಡಿಗಳು ಜಿಲ್ಲಾ ಕೇಂದ್ರದಲ್ಲಿ ಅಥವಾ ಜಿಲ್ಲಾ ಕೇಂದ್ರದ ಹೊರಗೆ ಇದ್ದ ಸಂದರ್ಭದಲ್ಲಿ ಸಾಧ್ಯವಾದಷ್ಟು ನಿರಂತರವಾಗಿ ಅಥವಾ ಆಗಿಂದಾಗ್ಗೆ ಮತ್ತು ಕನಿಷ್ಠಪಕ್ಷ 3–4 ದಿನಗಳಿಗೊಮ್ಮೆ ಭೇಟಿ ನೀಡುವುದು ಡಿಇಒ ರವರ ಜವಾಬ್ದಾರಿಯಾಗಿರುತ್ತದೆ.
- ಜಿಲ್ಲಾ ವ್ಯಾಪ್ತಿಯಲ್ಲಿರುವ ಭದ್ರತಾ ಕೊಠಡಿಯ ಭದ್ರತೆ ಮತ್ತು ಶಿಷ್ಟಾಚಾರದ ಸೂಕ್ಷ್ಮ ಪಾಲನೆಯು ಡಿಸಿಗಳು ಹಾಗೂ ಎಸ್‌ಪಿಗಳ ಜವಾಬ್ದಾರಿಯಾಗಿರುತ್ತದೆ. ಕೈಪಿಡಿಯ ಪ್ರತಿಯನ್ನು ಎಲ್ಲಾ ಅಭ್ಯರ್ಥಿಗಳು, ಡಿಇಒಗಳು ಆರ್‌ಓ ಮತ್ತು ಸಿಪಿಎಫ್ ಕಮಾಂಡೆಂಟ್ ಕೊಡತಕ್ಕದ್ದು.
- ಮತ ಎಣಿಕೆಯು ಪೂರ್ಣಗೊಂಡ ತರುವಾಯ, ಚಾಲ್ತಿಯಲ್ಲಿರುವ ಆಯೋಗದ ಸೂಚನೆಗಳಿಗನುಸಾರವಾಗಿ ಕಂಟ್ರೋಲ್ ಯೂನಿಟ್ ಅನ್ನು ಸೀಲು ಮಾಡುವುದು. ನಂತರ ಇವಿಎಮ್‌ಗಳು ಹಾಗೂ ವಿವಿಪ್ಯಾಟ್‌ಗಳನ್ನು ಭದ್ರತಾ ಕೊಠಡಿಗೆ ಸ್ಥಳಾಂತರಿಸುವುದು.
- ನೈಜ ಮತ ಎಣಿಕೆ ಹಾಗೂ ಮರುಎಣಿಕೆ ಏನಾದರೂ ಆದಲ್ಲಿ ಅವುಗಳ ನಡವಿನ ಮಧ್ಯಂತರ ಅವಧಿಯಲ್ಲಿ ಮತ ಯಂತ್ರಗಳನ್ನು ಸಂಗ್ರಹಣೆ ಮಾಡುವುದಕ್ಕೆ ಈ ಮೇಲ್ಕಂಡ ಸೂಚನೆಗಳನ್ನೇ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯಿಸತಕ್ಕದ್ದು.

**6.1.5 ಇವಿಎಮ್‌ಗಳು ಹಾಗೂ ವಿವಿಪ್ಯಾಟ್‌ಗಳ ಸಂಗ್ರಹಣೆ ಹಾಗೂ ಭದ್ರತಾ ವ್ಯವಸ್ಥೆಯ ಬಗ್ಗೆ ಪರಿವೀಕ್ಷಕರ ವರದಿ:**

- ವಹಿಸಲಾದ ಚುನಾವಣಾ ಕ್ಷೇತ್ರವನ್ನು(ಗಳನ್ನು) ತಲುಪಿದ 3 ದಿನಗಳೊಳಗೆ, ಅನುಬಂಧ–14 ರಲ್ಲಿ ಇಸಿಐನ ಸಾಮಾನ್ಯ ಪರಿವೀಕ್ಷಕರು ಹಾಗೂ ಪೊಲೀಸ್ ಪರಿವೀಕ್ಷಕರ ಜಂಟಿ ಭೇಟಿ ವರದಿಯನ್ನು ಸಲ್ಲಿಸುವುದು.
- ಮತ ಎಣಿಕೆಯ 2 ದಿನಗಳ ಮುಂಚೆ ಇಎಸ್‌ಐ ಸಾಮಾನ್ಯ ಪರಿವೀಕ್ಷಕರು ಅನುಬಂಧ–15 ರಲ್ಲಿ ವರದಿಯನ್ನು ಸಲ್ಲಿಸತಕ್ಕದ್ದು.

**6.2 ಮತ ಎಣಿಕೆಯ ತರುವಾಯ ಚುನಾವಣಾ ಅವಧಿಯವರೆಗೆ:**

- **ಚುನಾವಣೆಗಳನ್ನು ನಡೆಸುವ ನಿಯಮಗಳು, 1961ರ 92ನೇ ನಿಯಮದ (1ಎ) ಮತ್ತು 2(ಸಿಸಿ) ಉಪ–ನಿಯಮಗಳು – ಸದರಿ ನಿಯಮದ 57ಸಿ ನಿಯಮದ ಉಪಬಂಧಗಳ ಮೇರೆಗೆ ಎಲ್ಲಾ ಸೀಲ್ ಮಾಡಿದ ಮತಯಂತ್ರಗಳನ್ನು ಹಾಗೂ ಮುದ್ರಿತ ಪೇಪರ್ ಸ್ಲಿಪ್‌ಗಳನ್ನು ಸಂಬಂಧಪಟ್ಟ ಡಿಇಒ ರವರ ಅಭಿರಕ್ಷೆಯಲ್ಲಿರಿಸುವುದು.**
- ಡಿಇಒ ರವರು, ಇವಿಎಮ್‌ಗಳು ಹಾಗೂ ವಿವಿಪ್ಯಾಟ್‌ಗಳ ಅಭಿರಕ್ಷಕರಾಗಿರುತ್ತಾರೆ.

**6.2.1 ಮತ ಎಣಿಕೆಯ ತರುವಾಯ ಇವಿಎಮ್‌ಗಳು ಹಾಗೂ ವಿವಿಪ್ಯಾಟ್‌ಗಳನ್ನು ಸಂಗ್ರಹಿಸುವುದಕ್ಕಾಗಿ:**

i) ಇವಿಎಮ್ ಮತ್ತು ವಿವಿಪ್ಯಾಟ್‌ಗಳ ಭದ್ರತಾ ಕೊಠಡಿಯ ಸ್ಥಳದ ಬಗ್ಗೆ ಎಲ್ಲಾ ಸ್ಪರ್ಧಿಸುವ ಅಭ್ಯರ್ಥಿಗಳಿಗೆ/ಅವರ ಏಜೆಂಟರುಗಳಿಗೆ ಲಿಖಿತದಲ್ಲಿ ಮುಂಚಿತವಾಗಿ ಸೂಕ್ತ ತಿಳುವಳಿಕೆ ನೀಡುವುದು. ಡಬಲ್ ಲಾಕ್ ಸಿಸ್ಟಂಗೆ ತಮ್ಮ ಮೊಹರುಗಳನ್ನು ಹಾಕಲು ಅವರಿಗೆ ಅವಕಾಶ ನೀಡುವುದು.

ii) ಭದ್ರತಾ ಕೊಠಡಿಯು, ಮತಎಣಿಕೆ ಕೇಂದ್ರಕ್ಕಿಂತ ಬೇರೆ ಸ್ಥಳದಲ್ಲಿದ್ದಲ್ಲಿ ಈ ಮುಂದಿನ ಮಾರ್ಗಸೂಚಿಗಳನ್ನು ಅನುಸರಿಸರಿಸಬೇಕು.

(ಎ) ಇವಿಎಮ್‌ಗಳು ಮತ್ತು ವಿವಿಪ್ಯಾಟ್‌ಗಳನ್ನು ಕೊಂಡೊಯ್ಯುವ ವಾಹನಗಳ ಹಿಂದೆ ಬರಲು ಸ್ಪರ್ಧಿಸಿರುವ ಅಭ್ಯರ್ಥಿಗಳಿಗೆ/ಅವರ ಏಜೆಂಟರುಗಳಿಗೆ ಅನುಮತಿ ನೀಡುವುದು ಮತ್ತು ಲಿಖಿತದಲ್ಲಿ ಮಾಹಿತಿ ನೀಡುವುದು.

(ಬಿ) ಮತ ಎಣಿಕೆಯು ಮುಕ್ತಾಯವಾದ ತರುವಾಯ, ಇವಿಎಮ್‌ಗಳು ಹಾಗೂ ವಿವಿಪ್ಯಾಟ್‌ಗಳನ್ನು ಕೊಂಡೊಯ್ಯುವ ವಾಹನಗಳಿಗೆ ವಿಡಿಯೋ ಚಿತ್ರೀಕರಣ ಸಹಿತ ಯುಕ್ತ ಸಶಸ್ತ್ರ ಬೆಂಗಾವಲು ಪಡೆಯ ರಕ್ಷಣೆಯನ್ನು ಒದಗಿಸುವುದು.

iii) 2 ಅಥವಾ 2ಕ್ಕಿಂತ ಹೆಚ್ಚು ವಿಧಾನಸಭಾ ವಲಯಗಳು/ಕ್ಷೇತ್ರಗಳ ಇವಿಎಮ್‌ಗಳು ಮತ್ತು ವಿವಿಪ್ಯಾಟ್‌ಗಳನ್ನು, ಚುನಾವಣಾ ಅವಧಿಯು (ಇಪಿ) ಪೂರ್ಣವಾಗುವವರೆಗೆ ಒಂದೇ ಭದ್ರತಾ ಕೊಠಡಿಯಲ್ಲಿ ಇಡಬಾರದು.

iv) ಏಕಕಾಲದಲ್ಲಿ ಬರುವ ಚುನಾವಣೆಗಳ ಸಂದರ್ಭದಲ್ಲಿ ವಿಧಾನಸಭಾ ಕ್ಷೇತ್ರ (ಎಸಿ) ಮತ್ತು ವಿಧಾನಸಭಾ ವಿಭಾಗಕ್ಕೆ (ಎಎಸ್) ಸಂಬಂಧಿಸಿದ ಇವಿಎಮ್ ಹಾಗೂ ವಿವಿಪ್ಯಾಟ್‌ಗಳನ್ನು ಪ್ರತ್ಯೇಕ ಭದ್ರತಾ ಕೊಠಡಿಗಳಲ್ಲಿ ಇಡುವುದು, ಎಂದರೆ ಎಸಿಗೆ ಸಂಬಂಧಿಸಿದ ಇವಿಎಮ್‌ಗಳು ಹಾಗೂ ವಿವಿಪ್ಯಾಟ್‌ಗಳನ್ನು, ಸಂಸದೀಯ ಚುನಾವಣಾ ಕ್ಷೇತ್ರದ (ಪಿಸಿ) ಎಎಸ್‌ಗೆ ಸಂಬಂಧಿಸಿದ ಇವಿಮ್‌ಗಳು ಹಾಗೂ ವಿವಿಪ್ಯಾಟ್‌ಗಳ ಜೊತೆಯಲ್ಲಿ ಒಂದೇ ಭದ್ರತಾ ಕೊಠಡಿಯಲ್ಲಿ ಇಡಬಾರದು.

v) 1 ಇಸಿ/ಪಿಎಸ್‌ಗೆ ಸಂಬಂಧಿಸಿದ ಇವಿಎಮ್‌ಗಳು ಮತ್ತು ವಿವಿಪ್ಯಾಟ್‌ಗಳನ್ನು ಒಂದೇ ಭದ್ರತಾ ಕೊಠಡಿಯಲ್ಲಿ ಇಡದಿರುವ ಸಂದರ್ಭದಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳು:

(ಎ) ಇವಿಎಮ್‌ಗಳು ಮತ್ತು ವಿವಿಪ್ಯಾಟ್‌ಗಳನ್ನು ಇಡಲು ಸ್ಟೀಲ್/ಕಬ್ಬಿಣ/ಮರದ ಬಹು ಹಂತಗಳ ರ್‍ಯಾಕ್ ಅನ್ನು ಸಿದ್ಧಪಡಿಸುವುದು.

(ಬಿ) ಒಂದೇ ಕಟ್ಟಡದೊಳಗೆ ಒಂದಕ್ಕೊಂದು ಹೊಂದಿಕೊಂಡಂತಿರುವ ಎರಡು ಭದ್ರತಾ ಕೊಠಡಿಗಳಲ್ಲಿ ಇವಿಎಮ್‌ಗಳು ಹಾಗೂ ವಿವಿಪ್ಯಾಟ್‌ಗಳನ್ನು ಇಡುವುದು ಮತ್ತು ಅಂಥ ಎಲ್ಲಾ ಭದ್ರತಾ ಕೊಠಡಿಗಳ ಹೊರಭಾಗದಲ್ಲಿ ಎಸಿ/ಎಎಸ್ ಹೆಸರು ಮತ್ತು ಸಂಖ್ಯೆ ಹಾಗೂ ಮತದಾನ ಕೇಂದ್ರಗಳ ಕ್ರಮಸಂಖ್ಯೆ ಮುಂತಾದ ಚುನಾವಣಾ ವಿವರಗಳನ್ನು ಸೂಚಿಸುವ ನೋಟೀಸನ್ನು ಅಂಟಿಸುವುದು.

**ಚುನಾವಣೆಯಲ್ಲಿ ಬಳಸಿದ ನಂತರ ಇವಿಎಮ್‌ಗಳನ್ನು ತರುವಾಯದ ಚುನಾವಣೆಗಳಲ್ಲಿ ಬಳಸಿಕೊಳ್ಳುವುದಕ್ಕಾಗಿ ಅವುಗಳನ್ನು(ಚುನಾವಣೆಗಳನ್ನು ನಡೆಸುವ ನಿಯಮಗಳು, 1961ರ 94 (ಎಎ) ನಿಯಮದ ಮೇರೆಗೆ) ಹಾಗೇ ಉಳಿಸಿಕೊಂಡಿರುವ ಅವಧಿಯ ಬಗ್ಗೆ ಆಯೋಗದ ಮಾರ್ಗಸೂಚಿಗಳು ಈ ಕೆಳಕಂಡಂತಿವೆ:**

**ಎ.** ಚುನಾವಣಾ ತಕರಾರು ಅರ್ಜಿಗಳನ್ನು (ಇಸಿ) ಸಲ್ಲಿಸುವ ಅವಧಿಯು ಅಂದರೆ ಫಲಿತಾಂಶ ಘೋಷಣೆಯ ದಿನಾಂಕದಿಂದ 45 ದಿನಗಳು ಪೂರ್ಣಗೊಂಡ ತರುವಾಯ, ಸಂಬಂಧಪಟ್ಟ ಉಚ್ಚ ನ್ಯಾಯಾಲಯದಿಂದ ಚುನಾವಣಾ ತಕರಾರು ಅರ್ಜಿ (ಇಪಿ)ಯ ಸ್ಥಿತಿಗತಿಯು ಖಚಿತವಾಗುವವರೆಗೆ, ಭದ್ರತೆಯ ಸೂಕ್ತ ಶಿಷ್ಟಾಚಾರದ ಮೇರೆಗೆ ಡಿಇಒ ರವರ ಅಭಿರಕ್ಷೆಯಲ್ಲಿರುವ, ಚುನಾವಣೆಯಲ್ಲಿ ಬಳಸಿದ ಯಾವುದೇ ಇವಿಎಮ್ ಮತ್ತು ವಿವಿಪ್ಯಾಟ್‌ಗಳನ್ನು ಮುಟ್ಟುವಂತಿಲ್ಲ.

**ಬಿ.** ಇಪಿ ಅವಧಿಯು ಮುಕ್ತಾಯವಾದ ಕೂಡಲೇ, ಸಂಬಂಧಪಟ್ಟ ಉಚ್ಚನ್ಯಾಯಾಲಯ/ ನ್ಯಾಯಾಲಯದಿಂದ ಚುನಾವಣೆಗೆ ಸಂಬಂಧಿಸಿದ ಇಪಿ/ನ್ಯಾಯಾಲಯ ಪ್ರಕರಣಗಳ ವರದಿಗಳನ್ನು ಪಡೆಯುವುದು.

**ಸಿ.** ಸಂಬಂಧಪಟ್ಟ ನ್ಯಾಯಾಲಯದಿಂದ ಇಪಿ/ನ್ಯಾಯಾಲಯ ಮೊಕದ್ದಮೆಗಳ ಸ್ಥಿತಿಗತಿಯನ್ನು ಖಚಿತಪಡಿಸಿಕೊಂಡ ತರುವಾಯ,–

**(ಎ.)** 10 ದಿನಗಳೊಳಗಾಗಿ, ಯಾವುದೇ ಇಪಿ/ ನ್ಯಾಯಾಲಯ ಮೊಕದ್ದಮೆಗಳಿಗೆ ಒಳಪಡದ ಎಲ್ಲಾ ದೋಷಪೂರಿತ ಇವಿಎಮ್‌ಗಳು ವಿವಿಪ್ಯಾಟ್‌ಗಳನ್ನು (ವಿಯು/ಸಿಯು/ವಿವಿಪ್ಯಾಟ್‌ಗಳ ವಿಶಿಷ್ಟ ಐಡಿಯನ್ನು ಒಳಗೊಂಡಿರುವ ಪಟ್ಟಿಯೊಂದಿಗೆ) ಬಿಇಎಲ್/ಇಸಿಐಎಲ್‌ಗೆ ಕಳುಹಿಸಿಕೊಡತಕ್ಕದ್ದು.

**(ಬಿ)** ಯಾವುದೇ ಇಪಿ/ನ್ಯಾಯಾಲಯ ಮೊಕದ್ದಮೆಗಳಿಗೆ ಸಂಬಂಧಿಸಿದ ದೋಷಪೂರಿತ ಇವಿಎಮ್/ವಿವಿಪ್ಯಾಟ್‌ಗಳನ್ನು ಇರಿಸಿರುವ ಭದ್ರತಾ ಕೊಠಡಿಯನ್ನು ತೆರೆಯುವಂತಿಲ್ಲ.

**ಡಿ.** ಚುನಾವಣಾ ತಕರಾರು ಅರ್ಜಿಯನ್ನು ಸಲ್ಲಿಸಿರದಿದ್ದಲ್ಲಿ ಅಥವಾ ಯಾವುದೇ ನ್ಯಾಯಾಲಯ ಪ್ರಕರಣಗಳು ಬಾಕಿ ಇಲ್ಲದಿದ್ದಲ್ಲಿ, ಮೇಲೆ ತಿಳಿಸಿದ ಅವಧಿಯ ನಂತರ ಯಾವುದೇ ಮುಂದಿನ ಚುನಾವಣೆಗಾಗಿ ಇವಿಎಮ್‌ಗಳು ಮತ್ತು ವಿವಿಪ್ಯಾಟ್‌ಗಳ ಬಳಕೆ, ಸ್ಥಳಾಂತರ, ಭೌತಿಕ ಪರಿಶೀಲನೆ ಮುಂತಾದಂಥ ಯಾವುದೇ ಇತರ ಉದ್ದೇಶಕ್ಕಾಗಿ ಇವಿಎಮ್

ಮತ್ತು ವಿವಿಪ್ಯಾಟ್‌ಗಳನ್ನು ಬಳಸುವುದು.

ಇ. ಚುನಾವಣಾ ತಕರಾರು ಅರ್ಜಿ(ಇಪಿ)ಯನ್ನು ಸಲ್ಲಿಸಿದ್ದಲ್ಲಿ, ಕೆಳಕಂಡ ಕ್ರಮವನ್ನು ಕೈಗೊಳ್ಳುವುದು

**i)** ಇವಿಎಮ್‌ಗಳು, ಚುನಾವಣಾ ತಕರಾರು ಅರ್ಜಿಗೆ ಒಳಪಟ್ಟಿದ್ದಲ್ಲಿ, ನ್ಯಾಯಾಲಯಗಳು ಇಪಿಯನ್ನು ಅಂತಿಮವಾಗಿ ವಿಲೇವಾರಿ ಮಾಡುವವರೆಗೆ ಚುನಾವಣಾ ಕ್ಷೇತ್ರದಲ್ಲಿನ ಎಲ್ಲಾ ಮತದಾನಕೇಂದ್ರಗಳಲ್ಲಿ ಬಳಸಿದ ಇವಿಎಮ್‌ಗಳು ಮತ್ತು ವಿವಿಪ್ಯಾಟ್‌ಗಳು ಡಿಇಒ ರವರ ಸುರಕ್ಷಿತ ಅಭಿರಕ್ಷೆಯಲ್ಲಿರುವುದನ್ನು ಮುಂದುವರೆಸುವುದು.

**ii)** ಚುನಾವಣಾ ತಕರಾರು ಅರ್ಜಿ/ನ್ಯಾಯಾಲಯ ಪ್ರಕರಣಗಳು ವಿಲೇವಾರಿಯಾದ ತರುವಾಯ, ಸಿಇಒ ರವರು ಈ ಕೆಳಕಂಡ ಕ್ರಮವನ್ನು ಕೈಗೊಳ್ಳತಕ್ಕದ್ದು:

- ಸರ್ವೋಚ್ಚ ನ್ಯಾಯಾಲಯದ ಅಪೀಲಿನ ಸ್ಥಿತಿಗತಿಯನ್ನು ಖಚಿತಪಡಿಸಿಕೊಳ್ಳುವುದು.
- ಅಪೀಲನ್ನು ಸಲ್ಲಿಸಿಲ್ಲದಿದ್ದರೆ, ಡಿಇಒ ರವರು, ಅವಶ್ಯವಿದ್ದಲ್ಲಿ ಸಂಗ್ರಹಾಗಾರವನ್ನು ತೆರೆಯಲು ಅನುಮತಿ ನೀಡತಕ್ಕದ್ದು.
- ಇಪಿ/ನ್ಯಾಯಾಲಯ ಮೊಕದ್ದಮೆಯ ಅರ್ಜಿದಾರರು/ಎದುರುದಾರರಿಗೆ ಭದ್ರತಾಕೊಠಡಿಯನ್ನು ತೆರೆಯುವ ಬಗ್ಗೆ ನೋಟೀಸ್ ನೀಡುವ ಮುಖಾಂತರ ಅವರನ್ನು ಆಹ್ವಾನಿಸತಕ್ಕದ್ದು.

**iii)** ಇವಿಎಂಗಳು/ ವಿವಿಪ್ಯಾಟ್‌ಗಳು ಚುನಾವಣಾ ತಕರಾರು ಅರ್ಜಿಗೆ ಒಳಪಟ್ಟಿರದಿದ್ದಲ್ಲಿ, ಮುಂದಿನ ಯಾವುದೇ ಚುನಾವಣೆಗಾಗಿ ಅಥವಾ ಯಾವುದೇ ಇತರೆ ಉದ್ದೇಶಕ್ಕಾಗಿ ಭದ್ರತಾ ಕೊಠಡಿಯಿಂದ ಇವಿಎಂಗಳು ಹಾಗೂ ವಿವಿಪ್ಯಾಟ್‌ಗಳನ್ನು ಹೊರತೆಗೆಯುವುದಕ್ಕಾಗಿ ಸಂಬಂಧಪಟ್ಟ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸುವುದು.

**iv)** ಒಂದೇ ಜಾಗದಲ್ಲಿ ಸಂಗ್ರಹಿಸಿಟ್ಟಿರುವ, ಚುನಾವಣಾ ತಕರಾರು ಅರ್ಜಿಗೆ/ ನ್ಯಾಯಾಲಯ ಮೊಕದ್ದಮೆಗೆ ಒಳಪಟ್ಟಿರದ ಇವಿಎಮ್‌ಗಳನ್ನು, ಚುನಾವಣಾ ತಕರಾರು ಅರ್ಜಿಗೆ/ನ್ಯಾಯಾಲಯ ಮೊಕದ್ದಮೆಗೆ ಒಳಪಟ್ಟಿರುವ ಇವಿಎಮ್‌ಗಳಿಂದ ಬೇರ್ಪಡಿಸುವುದಕ್ಕಾಗಿ ಈ ಕೆಳಕಂಡ ವಿಧಾನವನ್ನು ಅನುಸರಿಸುವುದು:–

(ಎ) ಜಿಲ್ಲಾ ತಕರಾರು ಅರ್ಜಿಗೆ/ನ್ಯಾಯಾಲಯ ಮೊಕದ್ದಮೆಗೆ ಸಂಬಂಧಿಸಿದ ಅರ್ಜಿದಾರರಿಗೆ/ಪ್ರತಿವಾದಿಗಳಿಗೆ ಮತ್ತು ಎಲ್ಲಾ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಚುನಾವಣಾ ತಕರಾರು ಅರ್ಜಿ/ನ್ಯಾಯಾಲಯ ಮೊಕದ್ದಮೆಗೆ ಒಳಪಟ್ಟಿರುವ ಇವಿಎಮ್‌ಗಳನ್ನು ಇಟ್ಟಿರುವ ಭದ್ರತಾ ಕೊಠಡಿಯನ್ನು ತೆರೆಯುವ ಬಗ್ಗೆ ಮಾಹಿತಿ ನೀಡಿ ಹಾಗೂ ಭದ್ರತಾ ಕೊಠಡಿಯನ್ನು ತೆರೆಯುವ ವೇಳೆಯಲ್ಲಿ ಹಾಜರಿರುವಂತೆ ಕೋರಿ, ಕನಿಷ್ಠ 72 ಗಂಟೆಗಳು ಮುಂಚಿತವಾಗಿ ಅವರೆಲ್ಲರಿಗೂ ಲಿಖಿತ ನೋಟೀಸು ನೀಡಬೇಕು.

(ಬಿ) ಭದ್ರತಾ ಕೊಠಡಿಯನ್ನು ಜಿಲ್ಲಾ ಚುನಾವಣಾಧಿಕಾರಿ (ಡಿಇಒ), ಚುನಾವಣಾ ತಕರಾರು ಅರ್ಜಿಯ/ ನ್ಯಾಯಾಲಯ ಪ್ರಕರಣದ ಅರ್ಜಿದಾರರು/ಪ್ರತಿವಾದಿಗಳು ಮತ್ತು ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯಬೇಕು.

(ಸಿ) ಭದ್ರತಾ ಕೊಠಡಿಯಲ್ಲಿ ಚುನಾವಣಾ ತಕರಾರು ಅರ್ಜಿ/ನ್ಯಾಯಾಲಯದ ಮೊಕದ್ದಮೆಗೆ ಒಳಪಟ್ಟಿರದ ಇವಿಎಮ್‌ಗಳನ್ನು ಚುನಾವಣಾ ತಕರಾರು ಅರ್ಜಿ/ನ್ಯಾಯಾಲಯ ಮೊಕದ್ದಮೆಗೆ ಒಳಪಟ್ಟಿರುವ ಇವಿಎಮ್‌ಗಳಿಂದ ವಿಡಿಯೋ ಚಿತ್ರೀಕರಣ ಸಹಿತ ಬೇರ್ಪಡಿಸಿ ಹೊರತೆಗೆಯುವುದು ಹಾಗೂ ಚುನಾವಣಾ ತಕರಾರು ಅರ್ಜಿಯ/ನ್ಯಾಯಾಲಯ ಮೊಕದ್ದಮೆಯ ಅರ್ಜಿದಾರನಿಗೆ/ಪ್ರತಿವಾದಿಗೆ, ಭದ್ರತಾ ಕೊಠಡಿಯಿಂದ ಇವಿಎಂಗಳನ್ನು ಹೊರತೆಗೆದ ಸಿದ್ಧತಾಪಟ್ಟಿಯ ಪ್ರತಿಯನ್ನು ನೀಡಬೇಕು ಹಾಗೂ ಅವರಿಂದ ಸ್ವೀಕೃತಿಯನ್ನು ಪಡೆಯಬೇಕು.

**ಎಫ್.** ಮತಗಟ್ಟೆ ವಶಪಡಿಸಿಕೊಳ್ಳುವಿಕೆ ಮುಂತಾದ ಯಾವುದೇ ಇತರ ನ್ಯಾಯಾಲಯ ಪ್ರಕರಣವು ಬಾಕಿ ಇದ್ದಲ್ಲಿ, ಆ ಪ್ರಕರಣಕ್ಕೆ ಯಾವುದೇ ಇವಿಎಂ ಒಳಪಟ್ಟಿದ್ದರೆ, ಸಂಬಂಧಪಟ್ಟ ಇವಿಎಮ್ ಅನ್ನು ಅಥವಾ ಅಂಥ ಮತ ಕೇಂದ್ರ(ಗಳಲ್ಲಿ) ಬಳಸಿದ ಇವಿಎಂ ಅನ್ನು(ಗಳನ್ನು) ಸದರಿ ಪ್ರಕರಣವು ಅಂತಿಮವಾಗಿ ಇತ್ಯರ್ಥವಾಗುವವರೆಗೆ ಇಟ್ಟುಕೊಂಡಿರುವುದು. ಚುನಾವಣಾ ತಕರಾರು ಅರ್ಜಿಗಳು ಅಥವಾ ಸಂದರ್ಭಾನುಸಾರ, ಇತರ ನ್ಯಾಯಾಲಯ ಪ್ರಕರಣಗಳು ಅಂತಿಮವಾಗಿ ಇತ್ಯರ್ಥವಾದ ನಂತರ, ಮೇಲೆ ತಿಳಿಸಿರುವಂತೆ ಇವಿಎಂಗಳನ್ನು ತರುವಾಯದ ಚುನಾವಣೆಗಳಿಗೆ ಬಳಸುವುದು.

### 6.2.2 ಕಳೆದುಹೋದ/ಕಳುವಾದ ಇವಿಎಮ್‌ಗಳು

ಕಳೆದುಹೋದ/ಕಳುವಾದ ಇವಿಎಮ್‌ಗಳನ್ನುಪತ್ತೆ ಮಾಡಿದ ಅಥವಾ ಮರಳಿ ಪಡೆದ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಕ್ರಮ

- ಆಯೋಗಕ್ಕೆ ವಿವರವಾದ ವರದಿಯನ್ನು ಸಲ್ಲಿಸುವುದು.
- ಮರಳಿ ಪಡೆದ/ಪತ್ತೆ ಮಾಡಿದ ಯೂನಿಟ್‌ಗಳನ್ನು ಪ್ರತ್ಯೇಕ ಸಂಗ್ರಹಣಾ ಕೊಠಡಿಯಲ್ಲಿ ಇಡುವುದು ಮತ್ತು ಅದು ಈಗಾಗಲೇ ದಾಸ್ತಾನು ವಿವರಣಾ ಪಟ್ಟಿಯಲ್ಲಿ ಇಲ್ಲದಿದ್ದರೆ, ಅದನ್ನು ದಾಸ್ತಾನು ಲೆಕ್ಕಕ್ಕೆ ತೆಗೆದುಕೊಳ್ಳಬಾರದು.

- ಅದನ್ನು ನಾಶಪಡಿಸುವುದಕ್ಕಾಗಿ ಕಾರ್ಖಾನೆಗೆ ಕಳುಹಿಸಿ ಕೊಡುವುದು.

**6.3 ಇವಿಎಂಗಳು ಹಾಗೂ ವಿವಿಪ್ಯಾಟ್‌ಗಳ ಸಾಗಣೆ/ಸ್ಥಳಾಂತರ**

**ಈ ಕೆಳಕಂಡ ಸಾಮಾನ್ಯ ಸೂಚನೆಗಳನ್ನು ಅನುಸರಿಸುವುದು**

(ಎ) ಇವಿಎಮ್ ಹಾಗೂ ವಿವಿಪ್ಯಾಟ್‌ಗಳನ್ನು ಇವಿಎಮ್ ಮೇಲ್ವಿಚಾರಣಾ ವ್ಯವಸ್ಥೆ (ಇವಿಎಮ್‌ಎಸ್)ಮೂಲಕ ಸಾಗಿಸುವುದು.

(ಬಿ) ಸಮರ್ಪಕವಾದ ಬೀಗ ವ್ಯವಸ್ಥೆಯನ್ನು ಮಾಡಲು ಸಾಧ್ಯವಿರುವಂಥ ಕಂಟೇನರ್ ಉಳ್ಳ ಟ್ರಕ್ಕುಗಳು ಅಥವಾ ಮೊಹರು ಮಾಡುವ ಟ್ರಕ್ಕುಗಳನ್ನು ಮಾತ್ರವೇ ಬಳಸುವುದು.

(ಸಿ) ಇವಿಎಮ್‌ಗಳು/ವಿವಿಪ್ಯಾಟ್‌ಗಳನ್ನು ಸಾಗಿಸುವ ಎಲ್ಲಾ ಟ್ರಕ್ಕುಗಳಿಗೆ ಬೀಗ ಹಾಕುವುದು ಹಾಗೂ ಕಾಗದದ ಮೊಹರುಗಳಿಂದ ಸೀಲ್ ಮಾಡುವುದು.

(ಡಿ) ಇವಿಎಮ್ ಮತ್ತು ವಿವಿಪ್ಯಾಟ್‌ಗಳ ಸಾಗಣೆಗೆ ಜಿಪಿಎಸ್ ವ್ಯವಸ್ಥೆ ಹೊಂದಿರುವ ವಾಹನಗಳನ್ನು ಬಳಸುವುದು.

(ಇ) ಇವಿಎಮ್‌ಗಳು ಮತ್ತು ವಿವಿಪ್ಯಾಟ್‌ಗಳನ್ನು ಸ್ಥಳಾಂತರಿಸುವಾಗ ಸಂಗ್ರಹಾಗಾರವನ್ನು ತೆರೆಯುವ, ದಾಸ್ತಾನು ಮಾಡುವ ಮತ್ತು ಮೊಹರು ಮಾಡುವ ಬಗ್ಗೆ ರಾಜಕೀಯ ಪಕ್ಷಗಳಿಗೆ ಮುಂಚಿತವಾಗಿಯೇ ಮಾಹಿತಿ ನೀಡುವುದು. ಆದರೆ, ಯಾರೇ ಪ್ರತಿನಿಧಿಯು ಹಾಜರಾಗದಿದ್ದರೆ, ಈ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಬಾರದು.

(ಎಫ್) ಡಿಇಒರವರು ಇವಿಎಮ್‌ನ ವರ್ಗಾವಣೆ/ಸ್ವೀಕೃತಿಯ ಇಡೀ ಪ್ರಕ್ರಿಯೆಯನ್ನು ವಿಡಿಯೋ ಚಿತ್ರೀಕರಣ ಮಾಡಬೇಕು.

**ಸಾರಿಗೆ**

- ಹೊಸ ಇವಿಎಮ್‌ಗಳು/ವಿವಿಪ್ಯಾಟ್‌ಗಳನ್ನು ಸಾಗಿಸಲು ತಯಾರಕರೇ ಏರ್ಪಾಟುಗಳನ್ನು ಮಾಡುವುದು.
- ಸರಕು ಗ್ರಾಹಕ ರಾಜ್ಯ/ಕೇಂದ್ರಾಡಳಿತ ಪ್ರದೇಶವು ಭದ್ರತಾ ಸಿಬ್ಬಂದಿಯೊಂದಿಗೆ ತನ್ನ ಸಿಬ್ಬಂದಿಯನ್ನು ಕಾರ್ಖಾನೆಗೆ ನಿಯೋಜಿಸುವುದು.
- ದುರಸ್ತಿಯಾದಇವಿಎಮ್‌ಗಳು ಮತ್ತು ವಿವಿಪ್ಯಾಟ್‌ಗಳನ್ನು ಸಾಗಿಸುವ ಸಾಗಣೆ ವೆಚ್ಚವನ್ನು ರಾಜ್ಯ/ ಕೇಂದ್ರಾಡಳಿತ ಪ್ರದೇಶವೇ ಭರಿಸುವುದು.

**ರಾಜ್ಯದೊಳಗೆ ಮತ್ತು ಜಿಲ್ಲೆಯೊಳಗೆ ಸಾಗಣೆ**

- ಆಯೋಗದ ಸೂಚನೆ ಮೇರೆಗೆ, ಸಾಗಣೆ ಮಾಡುವುದಕ್ಕಾಗಿ ಡಿಇಒ ರವರಿಗೆ ಅನುಮತಿ ನೀಡಲು ಸಿಇಒ ರವರು ಸಕ್ಷಮ ಪ್ರಾಧಿಕಾರಿಯಾಗಿರುತ್ತಾರೆ.
- ಇವಿಎಮ್ ಹಾಗೂ ವಿವಿಪ್ಯಾಟ್‌ಗಳ ಪಟ್ಟಿಯನ್ನು ರಾಜಕೀಯ ಪಕ್ಷಗಳಿಗೆ/ಅಭ್ಯರ್ಥಿಗಳಿಗೆ/ಅವರ ಪ್ರತಿನಿಧಿಗಳಿಗೆ ಹಂಚುವುದು.
- ಭೌತಿಕ ಹಾನಿಯನ್ನು ತಪ್ಪಿಸಲು ಸಾಗಣೆಯನ್ನು ಜಾಗರೂಕತೆಯಿಂದ ಮಾಡುವುದು.
- ನಾಮನಿರ್ದೇಶಿತ ಅಧಿಕಾರಿಯು, ಮುಖ್ಯ ಸಂಗ್ರಹಣಾ ರಿಜಿಸ್ಟರ್ / ಚಲನ-ವಲನ ರಿಜಿಸ್ಟರಿನಲ್ಲಿ ಇವಿಎಮ್‌ಗಳು ಹಾಗೂ ವಿವಿಪ್ಯಾಟ್‌ಗಳ ಸಾಗಣೆಯ ಬಗ್ಗೆ ಅವುಗಳನ್ನು ಪಡೆದ ಅಧಿಕಾರಿಯಿಂದ ಸ್ವೀಕೃತಿ ಪಡೆದಿರುವುದೂ ಸೇರಿದಂತೆ ಯುಕ್ತ ನಮೂದು ಮಾಡಿರುವುದನ್ನು ಖಾತ್ರಿಪಡಿಸಿಕೊಳ್ಳುವುದು.

**ಅಂತರ್–ರಾಜ್ಯ ಸಾಗಣೆ**

- ನಿರಂತರ ಹಾಗೂ ಸುಗಮವಾದ ಸಾಗಣೆಗಾಗಿ ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ನೋಡಲ್ ಅಧಿಕಾರಿಯನ್ನು ನೇಮಿಸುವುದು.
- ಇವಿಎಮ್‌ಗಳನ್ನು ಪಡೆಯುವ ರಾಜ್ಯ/ಕೇಂದ್ರಾಡಳಿತ ಪ್ರದೇಶವು, ಇವಿಎಮ್‌ಗಳನ್ನು ಕಳುಹಿಸುವ ರಾಜ್ಯ/ಕೇಂದ್ರಾಡಳಿತ ಪ್ರದೇಶಕ್ಕೆ ಭದ್ರತಾ ಸಿಬ್ಬದಿಯೊಂದಿಗೆ ತನ್ನ ಸಿಬ್ಬಂದಿಯನ್ನು ನಿಯೋಜಿಸುವುದು.
- ಇವಿಎಂಗಳು/ ವಿವಿಪ್ಯಾಟ್‌ಗಳನ್ನು ಸಂಗ್ರಹಿಸುವ ಜಿಲ್ಲೆಗಳ ಸ್ಥಳವು ಒಂದು ಗುಚ್ಛವಾಗಿದೆ ಅಥವಾ ಒಂದೇ ಮಾರ್ಗದಲ್ಲಿವೆ ಎಂಬುದನ್ನು ಖಾತ್ರಿಪಡಿಸಿಕೊಳ್ಳುವುದು.
- ಮತಯಂತ್ರಗಳನ್ನು ಪಡೆಯುವಂಥ ರಾಜ್ಯ/ ಕೇಂದ್ರಾಡಳಿತ ಪ್ರದೇಶಕ್ಕೆ ದೋಷಪೂರಿತವಾದ ಹಾಗೂ ಇಎಂಎಸ್‌ನಲ್ಲಿ ಸಂದಿಗ್ಧತೆಯಲ್ಲಿರುವ ಇವಿಎಂಗಳು ಹಾಗೂ ವಿವಿಪ್ಯಾಟ್‌ಗಳನ್ನು ಕಳುಹಿಸಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುವುದು.

**ಮೊದಲ ಹಂತದ ಪರಿಶೀಲನೆ(ಎಫ್‌ಎಲ್‌ಸಿ) ಪೂರ್ಣಗೊಂಡ ಇವಿಎಮ್/ವಿವಿಪ್ಯಾಟ್‌ಗಳನ್ನು ರಾಜ್ಯದೊಳಗೆ ಸ್ಥಳಾಂತರಿಸುವುದು:**

(i) ಯೂನಿಟ್‌ಗಳನ್ನು ಯಾವ ಜಿಲ್ಲೆಗೆ ಸಾಗಿಸಲಾಗುತ್ತಿದೆಯೋ ಆ ಜಿಲ್ಲೆಯಲ್ಲಿ ಅವುಗಳ ಎಫ್‌ಎಲ್‌ಸಿಯನ್ನು ಮತ್ತೊಮ್ಮೆ ಹೊಸದಾಗಿ ಮಾಡುವುದು.

(ii) ಲೋಕಸಭಾ ಚುನಾವಣಾ ಅವಧಿಯಲ್ಲಿ, ಲೋಕಸಭಾ ಚುನಾವಣಾ ಕ್ಷೇತ್ರ (ಒಂದಕ್ಕಿಂತ ಹೆಚ್ಚು ಜಿಲ್ಲೆಗಳನ್ನು ಒಳಗೊಂಡಿರುವ)ದ ವ್ಯಾಪ್ತಿಯಲ್ಲಿ,–

- ಇವಿಎಮ್‌ಗಳು/ವಿವಿಪ್ಯಾಟ್‌ಗಳ ಮೊದಲ ಯಾದೃಚ್ಛೀಕರಣಕ್ಕೂ ಮೊದಲೇ ಇವಿಎಮ್‌ಗಳು/ವಿವಿಪ್ಯಾಟ್‌ಗಳ ಎಫ್‌ಎಲ್‌ಸಿ ಯನ್ನು ಮತ್ತೆ ಹೊಸದಾಗಿ ಮಾಡಲಾಗಿದೆ ಎಂಬುದನ್ನು ಖಚಿತಪಡಿಸುವುದು.
- ಇವಿಎಮ್/ವಿವಿಪ್ಯಾಟ್‌ಗಳ ಮೊದಲ ಯಾದೃಚ್ಛೀಕರಣದ ತರುವಾಯ, ಇವಿಎಮ್‌ಗಳು/ವಿವಿಪ್ಯಾಟ್‌ಗಳ ಎಫ್‌ಎಲ್‌ಸಿಯು ಅಗತ್ಯವಿರುವುದಿಲ್ಲ.

**ಎಫ್‌ಎಲ್‌ಸಿ ಪೂರ್ಣಗೊಂಡ ಇವಿಎಮ್‌ಗಳು/ವಿವಿಪ್ಯಾಟ್‌ಗಳನ್ನು ಜಿಲ್ಲೆಯೊಳಗೆ ಸ್ಥಳಾಂತರಿಸುವ ಸಂದರ್ಭದಲ್ಲಿ:**

**(i)** ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು, ಈ ಇವಿಎಮ್/ವಿವಿಪ್ಯಾಟ್‌ಗಳ ಮೊದಲ ಹಂತದ ಪರಿಶೀಲನೆಯ ಅಗತ್ಯವಿರುವುದಿಲ್ಲ.

(ಎ) ರಾಜ್ಯ ವಿಧಾನಸಭೆಯ ಸಾರ್ವತ್ರಿಕ ಚುನಾವಣೆಯ ಸಂಬಂಧದಲ್ಲಿ ಇವಿಎಮ್‌ಗಳು/ವಿವಿಪ್ಯಾಟ್‌ಗಳನ್ನು ಮೊದಲನೇ ಯಾದೃಚ್ಛೀಕರಣದ ನಂತರ, ಒಂದು ವಿಧಾನಸಭಾ ಚುನಾವಣಾ ಕ್ಷೇತ್ರದಿಂದ ಮತ್ತೊಂದು ವಿಧಾನಸಭಾ ಚುನಾವಣಾ ಕ್ಷೇತ್ರಕ್ಕೆ ಸ್ಥಳಾಂತರಿಸುತ್ತಿದ್ದಲ್ಲಿ, ಇವಿಎಮ್‌ಗಳು/ವಿವಿಪ್ಯಾಟ್‌ಗಳ ಮೊದಲ ಹಂತದ ಪರಿಶೀಲನೆಯನ್ನು ಮತ್ತೊಮ್ಮೆ ಹೊಸದಾಗಿ ಮಾಡುವುದು.

(ಬಿ) ಲೋಕಸಭಾ ಚುನಾವಣೆಯ ಸಂಬಂಧದಲ್ಲಿ, ಇವಿಎಮ್‌ಗಳು ಮತ್ತು ವಿವಿಪ್ಯಾಟ್‌ಗಳ ಮೊದಲನೇ ಯಾದೃಚ್ಛೀಕರಣದ ನಂತರ ಅವುಗಳನ್ನು ಒಂದು ಲೋಕಸಭಾ ಚುನಾವಣಾ ಕ್ಷೇತ್ರದಿಂದ ಮತ್ತೊಂದು ಲೋಕಸಭಾ ಚುನಾವಣಾ ಕ್ಷೇತ್ರಕ್ಕೆ ವರ್ಗಾವಣೆ ಮಾಡಿದ ಸಂದರ್ಭದಲ್ಲಿ ಮೊದಲ ಹಂತದ ಪರಿಶೀಲನೆಯನ್ನು ಮತ್ತೊಮ್ಮೆ ಹೊಸದಾಗಿ ಮಾಡುವುದು.

**(ii)** ವಿಧಾನಸಭೆ ಮತ್ತು ಲೋಕಸಭಾ ಚುನಾವಣಾ ಕ್ಷೇತ್ರಗಳಿಗೆ ಏಕಕಾಲದಲ್ಲಿ ಚುನಾವಣೆಗಳು ನಡೆಯುವ ಸಂದರ್ಭದಲ್ಲಿ, ವಿಧಾನಸಭಾ ಚುನಾವಣೆಗೆ ಸಂಬಂಧಪಟ್ಟ ಇವಿಎಮ್‌ಗಳು/ವಿವಿಪ್ಯಾಟ್‌ಗಳನ್ನು ಲೋಕಸಭಾ ಚುನಾವಣಾ ಕ್ಷೇತ್ರದಲ್ಲಿ ಬಳಸಬೇಕಾದ ಅಥವಾ ತದ್ವಿರುದ್ಧವಾಗಿ ಬಳಸಬೇಕಾದ ಅವಶ್ಯಕತೆ ಇದ್ದರೆ, ಅಂತಹ ಇವಿಎಮ್‌ಗಳು/ವಿವಿಪ್ಯಾಟ್‌ಗಳ ಮೊದಲ ಹಂತದ ಪರಿಶೀಲನೆಯನ್ನು ನಡೆಸುವುದು.

**6.4. ಇವಿಎಮ್‌ಗಳು ಮತ್ತು ವಿವಿಪ್ಯಾಟ್‌ಗಳ ಸಾಗಣೆಗಾಗಿ ಜಿಪಿಎಸ್ ಜಾಡು ಪತ್ತೆ/ಮೊಬೈಲ್ ಆ್ಯಪ್ ಆಧಾರಿತ ಜಿಪಿಎಸ್**

**ಜಾಡುಪತ್ತೆಯುಳ್ಳ ವಾಹನಗಳನ್ನು ಬಳಸಿಕೊಳ್ಳುವುದು**

**ಎ)** ಮೀಸಲು ಇವಿಎಮ್‌ಗಳು ಹಾಗೂ ವಿವಿಪ್ಯಾಟ್‌ಗಳೂ ಸೇರಿದಂತೆ ಎಲ್ಲಾ ಇವಿಎಮ್‌ಗಳು ಹಾಗೂ ವಿವಿಪ್ಯಾಟ್‌ಗಳನ್ನು ಸಾಗಿಸುವ, ಜಿಪಿಎಸ್ ಜಾಡುಪತ್ತೆಯುಳ್ಳ ಎಲ್ಲಾ ವಾಹನಗಳ ಪ್ರತಿಯೊಂದು ಚಲನವಲನವನ್ನು ಎಲ್ಲಾ ಸಮಯಗಳಲ್ಲಿಯೂ ಮೇಲ್ವಿಚಾರಣೆ ಮಾಡುವುದು.

**ಬಿ)** ಡಿಇಒ ಮತ್ತು ಸಿಇಒ ಮಟ್ಟದಲ್ಲಿ ಇವಿಎಮ್ ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಿ, ಅದರಲ್ಲಿ ಜಿಇಎಸ್ ಮಾನಿಟರ್‌ಗಳು ಮತ್ತು ಇನ್ನಿತರ ಐಡಿ ಮೂಲಸೌಕರ್ಯ/ಅಪ್ಲಿಕೇಷನ್‌ಗಳ ಮೂಲಕ ದಿನದ 24 ಗಂಟೆಗಳ ಕಾಲವೂ ಮೇಲ್ವಿಚಾರಣೆ ಮಾಡುವುದು ಮತ್ತು ಜಾಡುಪತ್ತೆ ಮಾಡುವುದು.

**ಸಿ)** ಚುನಾವಣಾ ಉದ್ದೇಶಕ್ಕಾಗಿ ಅಥವ ನಿಯೋಜಿತ ಸ್ಥಳಗಳಲ್ಲಿ ಸುರಕ್ಷಿತ ಸಂಗ್ರಹಣೆಗಾಗಿ ಅಗತ್ಯವಿರುವ ಸ್ಥಳಗಳಲ್ಲಿ ಹೊರತುಪಡಿಸಿ, ಸೆಕ್ಟರ್ ಅಧಿಕಾರಿಗಳು ಅಧಿಕೃತ ವಾಹನಗಳಿಂದ ಇವಿಎಮ್‌ಗಳು ಮತ್ತು ವಿವಿಪ್ಯಾಟ್‌ಗಳನ್ನು ಹೊರತೆಗೆಯತಕ್ಕದ್ದಲ್ಲ.

**ಡಿ)** ಡಿಇಒರವರು, ಸೆಕ್ಟರ್ ಅಧಿಕಾರಿಯ ಹೆಸರಿನ ಸಹಿತ, ಮೀಸಲು ಇವಿಎಮ್‌ಗಳು/ವಿವಿಪ್ಯಾಟ್‌ಗಳನ್ನು ಕೊಂಡೊಯ್ಯುವ ಎಲ್ಲಾ ವಾಹನಗಳ ನೋಂದಣಿ ಸಂಖ್ಯೆ ಹಾಗೂ ವಿವರಗಳನ್ನು ಎಲ್ಲಾ ರಾಜಕೀಯ ಪಕ್ಷಗಳಿಗೆ/ಅಭ್ಯರ್ಥಿಗಳಿಗೆ ಮತ್ತು ಜಿಲ್ಲೆಯ ವೀಕ್ಷಕರಿಗೆ ಅಧಿಸೂಚಿಸುವುದು.

**ಇ)** ಡಿಇಒ ರವರು, ಪ್ರತಿಯೊಂದು ಚಲನವಲನದ ಜಿಪಿಎಸ್ ಆಧಾರಿತ ಜಾಡುಪತ್ತೆಯನ್ನು ಮತ್ತು ಮೇಲ್ವಿಚಾರಣೆಯನ್ನು ಪರಿಣಾಮಕಾರಿಯಾಗಿ ಮಾಡುವುದಕ್ಕೆ ಬಾಧ್ಯರಾಗಿರುತ್ತಾರೆ.

**ಎಫ್)** ಸಾಮಾನ್ಯ ವೀಕ್ಷಕರು, ಈ ಸೂಚನಾವಳಿಗಳ ಅನುಪಾಲನೆಯನ್ನು ಮೇಲ್ವಿಚಾರಣೆ ಮಾಡುವುದು ಹಾಗೂ ಅದನ್ನು ಸಾಮಾನ್ಯ ವೀಕ್ಷಕರ ದಿನಚರಿಯಲ್ಲಿ ದಾಖಲಿಸುವುದು.

# ಅಧ್ಯಾಯ – 7
## ಇವಿಎಮ್/ವಿವಿಪ್ಯಾಟ್‌ಗಳ ಎರಡನೇ ಯಾದೃಚ್ಛೀಕರಣ

**ಇವಿಎಮ್/ವಿವಿಪ್ಯಾಟ್‌ಗಳನ್ನು ಮತದಾನ ಕೇಂದ್ರಗಳಿಗೆ ಯಾದೃಚ್ಛಿಕವಾಗಿ ಹಂಚಿಕೆ ಮಾಡುವುದೇ ಎರಡನೇ ಯಾದೃಚ್ಛೀಕರಣದ ಉದ್ದೇಶವಾಗಿದೆ.**

**ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯನ್ನು ಅಂತಿಮಗೊಳಿಸಿದ ತರುವಾಯ ಹಾಗೂ ಇವಿಎಮ್ ಮತ್ತು ವಿವಿಪ್ಯಾಟ್‌ಗಳನ್ನು ಸಿದ್ದಪಡಿಸುವ ಸ್ವಲ್ಪ ಮುಂಚೆ ಇಎಮ್ಎಸ್ ಬಳಸಿ ಎರಡನೇ ಯಾದೃಚ್ಛೀಕರಣವನ್ನು ಮಾಡುವುದು**

↓

**ಸ್ಪರ್ಧಿಸಿದ ಅಭ್ಯರ್ಥಿಗಳು/ಅವರ ಪ್ರತಿನಿಧಿಗಳ ಸಮ್ಮುಖದಲ್ಲಿ ಆರ್‌ಒರವರು ಎರಡನೇ ಯಾದೃಚ್ಛೀಕರಣವನ್ನು ನಡೆಸುವರು**

| | | | |
|---|---|---|---|
| ವಿಧಾನಸಭೆಯ ಸಾರ್ವತ್ರಿಕ/ಉಪ-ಚುನಾವಣೆಯ ಸಂದರ್ಭದಲ್ಲಿ, ಸಂಬಂಧಪಟ್ಟ ವಿಧಾನಸಭಾ ಚುನಾವಣಾ ಕ್ಷೇತ್ರದ ಆರ್‌ಒ ರವರಿಂದ | ಲೋಕಸಭೆಯ ಸಾರ್ವತ್ರಿಕ/ಉಪ-ಚುನಾವಣೆಯ ಸಂದರ್ಭದಲ್ಲಿ ಸಂಬಂಧಪಟ್ಟ ಲೋಕಸಭಾ ಚುನಾವಣಾ ಕ್ಷೇತ್ರದ ಆರ್‌ಒ ರವರಿಂದ | ಏಕಕಾಲದಲ್ಲಿ ನಡೆಯುವ ಲೋಕಸಭೆ ಹಾಗೂ ರಾಜ್ಯಸಭಾ ಚುನಾವಣೆಗಳ ಸಂದರ್ಭದಲ್ಲಿ, (ರಾಜ್ಯ ವಿಧಾನಸಭಾ ಚುನಾವಣೆಗಾಗಿ) ವಿಧಾನಸಭೆ ಚುನಾವಣಾ ಕ್ಷೇತ್ರದ ಆರ್‌ಒ ರವರಿಂದ ಹಾಗೂ (ಲೋಕಸಭಾ ಚುನಾವಣೆಗಾಗಿ)ಲೋಕಸಭಾ ಚುನಾವಣಾ ಕ್ಷೇತ್ರದ ಆರ್‌ಒ ರವರಿಂದ | ಲೋಕಸಭೆಯ ಸಾರ್ವತ್ರಿಕ/ಉಪ-ಚುನಾವಣೆಯ ಅಸಾಧಾರಣ ಸಂದರ್ಭದಲ್ಲಿ ಎಆರ್‌ಒ ರವರಿಂದ |

↓

**ಅಭ್ಯರ್ಥಿಗಳು ನಾಮಪತ್ರಗಳನ್ನು ಹಿಂತೆಗೆದುಕೊಳ್ಳುವ ಕೊನೆಯ ದಿನಾಂಕದ ಮತ್ತು ಮತಪತ್ರಗಳನ್ನು ಅಂತಿಮಗೊಳಿಸುವುದಕ್ಕೆ ಇರುವ ಕೊನೆಯ ದಿನಾಂಕದ ನಂತರ ಆರ್‌ಓ ರವರು ಸ್ಪರ್ಧಿಸಿದ ಎಲ್ಲಾ ಅಭ್ಯರ್ಥಿಗಳಿಗೂ ಕನಿಷ್ಠಪಕ್ಷ 48 ಗಂಟೆಗಳ ಮುಂಚಿತವಾಗಿ ಲಿಖಿತಮಾಹಿತಿ ನೀಡಿ ಚುನಾವಣೆಗಾಗಿ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು (ಕ್ಯಾಂಡಿಡೇಟ್ ಸೆಟ್) ಸಿದ್ಧಪಡಿಸುವುದಕ್ಕಾಗಿ ನಿರ್ದಿಷ್ಟ ದಿನಾಂಕವನ್ನು ಗೊತ್ತುಪಡಿಸುವುದು**

↓

**ಪ್ರತಿ ವಿಧಾನಸಭೆ ಕ್ಷೇತ್ರ (ಎಸಿ)/ವಿಧಾನಸಭೆ ವಿಭಾಗ (ಎಎಸ್)ಕ್ಕಾಗಿ ಅಗತ್ಯವಿರುವ ಮೀಸಲು ಮತಯಂತ್ರಗಳೂ ಒಳಗೊಂಡಂತೆ ಮತದಾನ ದಿನದ ಅಗತ್ಯತೆಗಳಿಗೆ ಹೊಂದುವಂತೆ ಇಎಂಎಸ್‌ನ್ನು ಬಳಸಿ ಸಿಯುಗಳು, ಬಿಯುಗಳು ಮತ್ತು ವಿವಿಪ್ಯಾಟ್‌ಗಳನ್ನು ಯಾದೃಚ್ಛಿಕವಾಗಿ ಆಯ್ಕೆ ಮಾಡಿದ ರೀತಿಯಲ್ಲಿ ಯಾದೃಚ್ಛೀಕರಣ ಪ್ರಕ್ರಿಯೆಯನ್ನು ಕಾರ್ಯಗತಗೊಳಿಸುವುದು.**

# ಅಧ್ಯಾಯ – 8

# ಇವಿಎಮ್‌ಗಳು (ಕ್ಯಾಂಡಿಡೇಟ್ ಸೆಟ್) ಹಾಗೂ ವಿವಿಪ್ಯಾಟ್‌ಗಳ ಕಾರ್ಯಸಿದ್ಧತೆ

## 8.1 ನಾಮಪತ್ರಗಳನ್ನು ಹಿಂತೆಗೆದುಕೊಳ್ಳುವ ಕೊನೆಯ ದಿನಾಂಕದ ತರುವಾಯ ಇವಿಎಮ್‌ಗಳು ಹಾಗೂ ವಿವಿಪ್ಯಾಟ್‌ಗಳನ್ನು ಸಿದ್ಧಪಡಿಸುವುದು

ಎ. ಆರ್‌ಒ ರವರು ಇವಿಎಮ್‌ಗಳು/ವಿವಿಪ್ಯಾಟ್‌ಗಳನ್ನು ಸಿದ್ಧಪಡಿಸುವುದಕ್ಕಾಗಿ ಒಂದು ವೇಳಾಪಟ್ಟಿಯನ್ನು ಸಿದ್ಧಪಡಿಸಬೇಕು.

ಬಿ. ಎಲ್ಲಾ ವಿಧಾನಸಭಾ ಚುನಾವಣಾ ಕ್ಷೇತ್ರಗಳು/ವಿಭಾಗಗಳಿಗಾಗಿ ಇವಿಎಮ್‌ಗಳು/ವಿವಿಪ್ಯಾಟ್‌ಗಳನ್ನು ಪ್ರತ್ಯೇಕ ಸಭಾಂಗಣದಲ್ಲಿ ಸಿದ್ಧಪಡಿಸಬೇಕು.

ಸಿ. ಮತಯಂತ್ರಗಳ ಸಿದ್ಧತೆಯನ್ನು ವೀಕ್ಷಿಸಲು ಹಾಗೂ ಅಣಕು ಮತದಾನ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಹಾಜರಿರುವುದಕ್ಕಾಗಿ ಎಲ್ಲಾ ಅಭ್ಯರ್ಥಿಗಳಿಗೂ ವೇಳಾಪಟ್ಟಿಯ ಬಗ್ಗೆ ಲಿಖಿತವಾಗಿ ಮಾಹಿತಿ ನೀಡಬೇಕು ಹಾಗೂ ಅನುಬಂಧ – 16ರ ಅನುಸಾರವಾಗಿ ನಿರ್ವಹಿಸಿದ ರಿಜಿಸ್ಟರಿನಲ್ಲಿ ಅವರ ಸಹಿಯನ್ನು ಪಡೆಯಬೇಕು.

ಡಿ. ಸಂಸತ್ ಚುನಾವಣೆಗಳ ಸಂದರ್ಭದಲ್ಲಿ, ಎಆರ್‌ಒ ರವರು ವಿಧಾನಸಭಾ ವಲಯಕ್ಕೆ ಇವಿಎಮ್‌ಗಳ ಸಿದ್ಧತೆಯ ಮೇಲ್ವಿಚಾರಣೆ ಮಾಡುವರು.

## 8.2 ಇವಿಎಮ್/ವಿವಿಪ್ಯಾಟ್‌ಗಳನ್ನು ಸಿದ್ಧಪಡಿಸುವ ಆವರಣದಲ್ಲಿನ ಏರ್ಪಾಟುಗಳು

ಎ. ಇವಿಎಮ್‌ಗಳು ಹಾಗೂ ವಿವಿಪ್ಯಾಟ್‌ಗಳು, ಡಿಇಒ ರವರು ನಾಮನಿರ್ದೇಶಿಸಿದ ಅಧಿಕಾರಿಗಳು, ಸಂಬಂಧಪಟ್ಟ ತಯಾರಕರುಗಳಇಂಜಿನಿಯರುಗಳು ಹಾಗೂ ಅಭ್ಯರ್ಥಿಗಳ ಪ್ರತಿನಿಧಿಗಳಿಗೆ ಸಾಕಾಗುವಷ್ಟು ದೊಡ್ಡ ಸಿದ್ಧತಾ ಸಭಾಂಗಣವಿರಬೇಕು.

ಬಿ. ಸಭಾಂಗಣವು ಯಾವುದೇ ವಿದ್ಯುನ್ಮಾನ ಘಟಕಗಳಿಂದ ಅಥವಾ ಸಾಧನಗಳಿಂದ ಮುಕ್ತವಾಗಿರುವಂತೆ ನೋಡಿಕೊಳ್ಳಲು ಸಭಾಂಗಣವನ್ನು ಸ್ವಚ್ಛಗೊಳಿಸಬೇಕು.

ಸಿ. 247 ಅವಧಿಯಾದ್ಯಂತ ಸಿಸಿಟಿವಿ ಕವರೇಜ್ ಇರುವ, ದಿನದ 24 ಗಂಟೆಗಳ ಕಾಲವೂ ಸಶಸ್ತ್ರ ಪೋಲೀಸ್ ಪಡೆಗಳ ಸಂಪೂರ್ಣ ಭದ್ರತೆಯಿಂದ ಕೂಡಿದ, ಪ್ರವೇಶಿಸಲು ಹಾಗೂ ಹೊರಹೋಗಲು ಒಂದೇ ದ್ವಾರವಿರಬೇಕು.

ಡಿ. ಅಧಿಕೃತ ಅಧಿಕಾರಿಗಳ ಗುರುತಿನ ಚೀಟಿ/ಡಿಇಒ ರವರು ನೀಡಿದ ಪಾಸ್‌ಗಳನ್ನು ತೋರಿಸುವ ಮೂಲಕ ಬಾಗಿಲ ಚೌಕಟ್ಟಿಗೆ ಅಳವಡಿಸಿರುವ ಲೋಹ ಶೋಧಕದ ಮೂಲಕ ಸಭಾಂಗಣಕ್ಕೆ ಪ್ರವೇಶಿಸಲು ಅನುಮತಿಸಬೇಕು.

ಇ. ಪ್ರತಿಯೊಂದು ಬಾರಿ ಪ್ರವೇಶಿಸುವಾಗಲೂ ಅವರನ್ನು ಶೋಧಿಸಬೇಕು.

ಎಫ್. ಯಾರೇ ವ್ಯಕ್ತಿಯು ಸಭಾಂಗಣದ ಒಳಗೆ ಯಾವುದೇ ವಿದ್ಯುನ್ಮಾನ ಸಾಧನವನ್ನು ಒಯ್ಯಲು ಅಥವಾ ಸಿದ್ಧತೆ ನಡೆಯುತ್ತಿರುವ ಸಭಾಂಗಣದಿಂದ ಹೊರಗೆ ಏನನ್ನೂ ಒಯ್ಯಲು ಅವಕಾಶ ನೀಡುವಂತಿಲ್ಲ.

ಜಿ. ಆರ್‌ಒ ಕೇಂದ್ರಕಾರ್ಯಸ್ಥಾನ ವ್ಯಾಪ್ತಿಗೆ ಬರುವ ಸಂಸದೀಯ ಚುನಾವಣಾ ಕ್ಷೇತ್ರದ ವಿಧಾನಸಭಾ ವಿಭಾಗಕ್ಕೆ ಸಂಬಂಧಿಸಿದ ಇವಿಎಮ್‌ಗಳು/ವಿವಿಪ್ಯಾಟ್‌ಗಳ ಕಾರ್ಯಸಿದ್ಧತೆಯನ್ನು ಅಭ್ಯರ್ಥಿಗಳು/ಅವರ ಪ್ರತಿನಿಧಿಗಳ ಸಮ್ಮುಖದಲ್ಲಿ ಆರ್‌ಒ ಮಟ್ಟದ ನೇರ ಮೇಲ್ವಿಚಾರಣೆಯ ಅಡಿಯಲ್ಲಿ ಎಆರ್‌ಒ ಮಟ್ಟದಲ್ಲಿ ನಡೆಸಬಹುದು. ಉಳಿದಿರುವ ವಿಧಾನಸಭಾ ವಿಭಾಗದ ಇವಿಎಮ್‌ಗಳು ಮತ್ತು ವಿವಿಪ್ಯಾಟ್‌ಗಳ ಕಾರ್ಯಸಿದ್ಧತೆಯನ್ನು, ಅಭ್ಯರ್ಥಿಗಳು/ಅವರ ಪ್ರತಿನಿಧಿಗಳ ಸಮ್ಮುಖದಲ್ಲಿ ಸಂಬಂಧಪಟ್ಟ ಎಆರ್‌ಒಗಳು ಮಾಡಬಹುದು.

## 8.3 ಕಾರ್ಯಸಿದ್ಧತೆಗೊಳಿಸುವುದಕ್ಕಾಗಿ ಮಾನವಸಂಪನ್ಮೂಲದ ಬಳಕೆ

ಎ. ಬಿಇಎಲ್ ಮತ್ತು ಇಸಿಐಎಲ್ ಸಂಸ್ಥೆಗಳ ಅಧಿಕೃತ ಇಂಜಿನಿಯರುಗಳು ಮಾತ್ರ ಇವಿಎಂ/ವಿವಿಪ್ಯಾಟ್‌ಗಳ ಕಾರ್ಯಸಿದ್ಧತಾ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕು.

ಬಿ. ಒಂದು ಜಿಲ್ಲೆಯಲ್ಲಿನ ಇವಿಎಮ್‌ಗಳು/ವಿವಿಪ್ಯಾಟ್‌ಗಳನ್ನು ಕಾರ್ಯಸಿದ್ಧತೆಗೊಳಿಸುವ ಅವಧಿಯಲ್ಲಿ ಆ ಕಾರ್ಯವನ್ನು ನಿರ್ವಹಿಸಲು ನಿಯೋಜಿಸಿದ ಇಂಜಿನಿಯರುಗಳ ಗುರುತಿನ ಚೀಟಿಯ ಸಂಖ್ಯೆಗಳು ಮುಂತಾದ ವಿವರಗಳ ಸಹಿತ ಅವರ ಪಟ್ಟಿಯನ್ನು ಬಿಇಎಲ್/ಇಸಿಐಎಲ್ ಸಂಸ್ಥೆಯು ಡಿಇಒ ರವರಿಗೆ ಕಳುಹಿಸುವುದು.

ಸಿ. ಬಿಇಎಲ್ ಮತ್ತು ಇಸಿಐಎಲ್‌ನ ಅಧಿಕೃತ ಎಂಜಿನಿಯರುಗಳು/ತಾಂತ್ರಿಕ ಸಿಬ್ಬಂದಿಗೆ ಮಾತ್ರ ಕಾರ್ಯಸಿದ್ಧತಾ ಸಭಾಂಗಣವನ್ನು ಪ್ರವೇಶಿಸಲು ಅನುಮತಿಸುವುದು.

**ಡಿ.** ಅಣಕು ಮತದಾನದ ಸಮಯದಲ್ಲಿ, ಪ್ರತಿಯೊಂದು ಇವಿಎಂನಲ್ಲಿ 1000 ಮತಗಳನ್ನು ಚಲಾಯಿಸಲು ಪ್ರತ್ಯೇಕ ತಂಡವನ್ನು ರಚಿಸುವುದು.

## 8.4 ಕಾರ್ಯಸಿದ್ಧತಾ ಸಮಯದಲ್ಲಿ ಕೈಗೊಳ್ಳಬೇಕಾದ ಹೆಚ್ಚುವರಿ ಕಾರ್ಯಗಳು


ಇವಿಎಮ್‌ಗಳು, ಬ್ಯಾಲೆಟಿಂಗ್ ಯೂನಿಟ್‌ಗಳು ಮತ್ತು ಕಂಟ್ರೋಲ್ ಯೂನಿಟ್‌ಗಳನ್ನು ಕಾರ್ಯಸಿದ್ಧತೆಗೊಳಿಸುವ ಸಮಯದಲ್ಲಿ ನಿರ್ವಹಿಸಬೇಕಾದ ಕಾರ್ಯಗಳ ಬಗ್ಗೆ ವಿವರವಾದ ಸೂಚನೆಗಳನ್ನು 'ಚುನಾವಣಾಧಿಕಾರಿಗಳ ಕೈಪಿಡಿ'ಯಲ್ಲಿ ಒದಗಿಸಲಾಗಿದೆ. ಈ ಕೆಳಕಂಡ ಹೆಚ್ಚುವರಿ ಕಾರ್ಯಗಳನ್ನು ನಿರ್ವಹಿಸುವುದು:


### 8.4.1 ಬ್ಯಾಲೆಟಿಂಗ್ ಯೂನಿಟ್‌ಗಳನ್ನು ಪರಿಶೀಲಿಸುವುದು (ಬಿಯುಗಳು)–

ಎ. ಬಿಇಎಲ್ ಮತ್ತು ಇಸಿಐಎಲ್ ಇಂಜಿನಿಯರುಗಳು ಬ್ಯಾಲೆಂಟಿಗ್ ಯೂನಿಟ್‌ಗಳ ಹೊರ ಹೊದಿಕೆಯನ್ನು ತೆರೆದು ಅವುಗಳನ್ನು ತಪಾಸಣೆ ಮಾಡುವುದು ಹಾಗೂ ಅನುಬಂಧ – 17ರಲ್ಲಿ ಸೂಚಿಸಿರುವಂತೆ ಬ್ಯಾಲೆಟಿಂಗ್ ಯೂನಿಟ್‌ಗಳ ಎಲ್ಲಾ ಘಟಕಗಳು ಅಸಲಿಯಾಗಿರುವುವೆಂದು ಪ್ರಮಾಣೀಕರಿಸುವುದು ಮತ್ತು ಅದನ್ನು ಅಭ್ಯರ್ಥಿಗಳಿಗೆ/ಅವರ ಪ್ರತಿನಿಧಿಗಳಿಗೆ ತೋರಿಸುವುದು.

ಬಿ. ಬಿಇಎಲ್ ಮತ್ತು ಇಸಿಐಎಲ್‌ಗಳು, ಅವರ ಸಂಬಂಧಪಟ್ಟ ಬ್ಯಾಲೆಟಿಂಗ್ ಯೂನಿಟ್‌ಗಳ ಪರಿಶೀಲನೆಗಾಗಿ ಮತ್ತು ಸಿದ್ಧತಾ ಸಭಾಂಗಣದೊಳಗೆ ಕೊಂಡೊಯ್ಯಬೇಕಾದ ಸಾಧನ ಸಲಕರಣೆಗಳ ಪಟ್ಟಿಯ ಕುರಿತಾಗಿ ವಿವರವಾದ ಸೂಚನೆಗಳನ್ನು ಪ್ರತ್ಯೇಕವಾಗಿ ನೀಡುವುದು.

(ಎ) ಬ್ಯಾಲೆಟಿಂಗ್ ಯೂನಿಟ್‌ನ ಬ್ಯಾಲೆಟ್ ಪೇಪರ್ ಸ್ಕ್ರೀನ್ ಅನ್ನು ದಾರ ಮತ್ತು ಅಡ್ರೆಸ್ ಟ್ಯಾಗ್‌ನಿಂದ ಸೀಲ್ ಮಾಡುವುದು.






ಬ್ಯಾಲೆಟ್ ಪೇಪರ್ ಅನ್ನು ಸ್ಥಿರವಾಗಿ ಅಳವಡಿಸಿದ ತರುವಾಯ, ಮೇಲ್ಭಾಗದಲ್ಲಿ ಬ್ಯಾಲೆಟ್ ಪೇಪರ್ ಸ್ಕ್ರೀನ್‌ನಿಂದ ಮುಚ್ಚಿ ಆರ್‌ಒರವರ ಮೊಹರಿನೊಂದಿಗೆ ಚುನಾವಣೆಯ ವಿವರಗಳನ್ನು ಸೂಚಿಸುವ ಅಡ್ರೆಸ್ ಟ್ಯಾಗ್ ಅನ್ನು ಬಳಸಿ, ಎರಡು ರಂಧ್ರಗಳ ಮೂಲಕ ದಾರವನ್ನು ಪೋಣಿಸಿ, ಸ್ಕ್ರೀನ್ ಅನ್ನು ಸೀಲ್ ಮಾಡುವುದು.


**(ಬಿ) ಬ್ಯಾಲೆಟಿಂಗ್ ಯೂನಿಟ್‌ನ ಪ್ಲಾಸ್ಟಿಕ್ ಕ್ಯಾಬಿನೆಟ್ ಅನ್ನು ದಾರ ಮತ್ತು ಅಡ್ರೆಸ್ ಟ್ಯಾಗ್‌ನಿಂದ ಸೀಲ್ ಮಾಡುವುದು**



ಅಭ್ಯರ್ಥಿ ಗುಂಡಿಗಳ ಮುಚ್ಚಳವನ್ನು ತೆರೆದಿಟ್ಟ ತರುವಾಯ, ಬ್ಯಾಲೆಟಿಂಗ್ ಯೂನಿಟ್‌ನ ಮೇಲ್ಭಾಗವನ್ನು, ಬಲಭಾಗದ ಅಂಚಿನಲ್ಲಿ ಮೇಲ್ಭಾಗ ಹಾಗೂ ಕೆಳಭಾಗದ ತುದಿಯಲ್ಲಿರುವ ಎರಡು ರಂಧ್ರಗಳ ಮೂಲಕ ದಾರವನ್ನು ತೂರಿಸಿ ಆರ್‌ಒ ರವರ ಮೊಹರಿನೊಂದಿಗೆ ಚುನಾವಣೆಯ ವಿವರಗಳನ್ನು ಸೂಚಿಸುವ ಅಡ್ರೆಸ್ ಟ್ಯಾಗ್‌ಗಳನ್ನು ಬಳಸಿ ಸೀಲು ಮಾಡುವುದು.

**(ಸಿ) ಬ್ಯಾಲೆಟಿಂಗ್ ಯೂನಿಟ್‌ನ ಪ್ಲಾಸ್ಟಿಕ್ ಯೂನಿಟ್‌ಅನ್ನು ಗುಲಾಬಿ ಬಣ್ಣದ ಪೇಪರ್ ಸೀಲ್‌ನಿಂದ ಮೊಹರು ಮಾಡುವುದು**








ಇದರೊಂದಿಗೆ, ಬ್ಯಾಲೆಟಿಂಗ್ ಯೂನಿಟ್‌ನ ಕೆಳಭಾಗದಲ್ಲಿ ಯಾವುದೇ ಅಭ್ಯರ್ಥಿ ಗುಂಡಿ ಅಥವಾ ಚಿಹ್ನೆಯ ಹೆಸರು ಮರೆಯಾಗದ ಹಾಗೆ ವಿಶೇಷ ಗುಲಾಬಿ ಬಣ್ಣದ ಪೇಪರ್ ಸೀಲ್ ಅನ್ನು ಅಳವಡಿಸಿ ಸೀಲ್‌ಮಾಡುವುದು.

**(ಡಿ) ಕಂಟ್ರೋಲ್ ಯೂನಿಟ್‌ನ ಕ್ಯಾಂಡಿಡೇಟ್ ಸೆಟ್ ವಿಭಾಗ ಹಾಗೂ ಬ್ಯಾಟರಿ ವಿಭಾಗವನ್ನು ದಾರ ಮತ್ತು ಅಡ್ರೆಸ್ ಟ್ಯಾಗ್‌ನಿಂದ ಸೀಲ್ ಮಾಡುವುದು**






**8.4.2 ವಿವಿಪ್ಯಾಟ್‌ನ ಸಿದ್ಧತೆ – ಚುನಾವಣೆಗಳನ್ನು ನಡೆಸುವ ನಿಯಮಗಳು, 1961ರ ನಿಯಮ 49ಬಿ [4(ಸಿ) (i) - (iii)]**



ಪೇಪರ್ ರೋಲರ್ ಅಳವಡಿಕೆ



ಪವರ್ ಪ್ಯಾಕ್‌ನ ಜೋಡಣೆ

ಎ) ವಿವಿಪ್ಯಾಟ್ ಯೂನಿಟ್‌ಗೆ ಹೊಸ ಬ್ಯಾಟರಿ ಪವರ್ ಪ್ಯಾಕ್ ಅನ್ನು ಜೋಡಿಸಿ ಬ್ಯಾಟರಿ ಕಂಪಾರ್ಟ್‌ಮೆಂಟ್‌ನ ಬಾಗಿಲನ್ನು ಮುಚ್ಚುವುದು. ಬ್ಯಾಟರಿ ಪವರ್ ಕಡಿಮೆಯಾದ ಸಂದರ್ಭದಲ್ಲಿ ಪವರ್ ಪ್ಯಾಕ್ ಅನ್ನು ಬದಲಿಸಬೇಕಾಗುವುದರಿಂದ ಬ್ಯಾಟರಿ ಕಂಪಾರ್ಟ್‌ಮೆಂಟನ್ನು ಸೀಲ್ ಮಾಡಬಾರದು.

ಬಿ) ಬಳಕೆದಾರರ ಕೈಪಿಡಿ (ಅನುಬಂಧ – 18)ಯಲ್ಲಿ ನಮೂದಿಸಿರುವ ಪ್ರಕ್ರಿಯೆಗನುಸಾರವಾಗಿ ಪ್ರಿಂಟರ್ ಯೂನಿಟ್‌ನಲ್ಲಿ ಹೊಸ ಪೇಪರ್ ರೋಲ್ ಅನ್ನು ಅಳವಡಿಸುವುದು.

ಸಿ) ಹಂಚಿಕೆಯಾಗಿರುವ ಕ್ರಮಸಂಖ್ಯೆಗಳು, ಅಭ್ಯರ್ಥಿಗಳ ಹೆಸರುಗಳು ಮತ್ತು ಚಿಹ್ನೆಗಳನ್ನು ಸಿಂಬಲ್ ಲೋಡಿಂಗ್ ಯೂನಿಟ್ (ಎಸ್‌ಎಲ್‌ಯು) ಅನ್ನು ಬಳಸಿ, ಇಂಜಿನಿಯರುಗಳ ಸಹಾಯದೊಂದಿಗೆ ವಿವಿಪ್ಯಾಟ್‌ನಲ್ಲಿ ಲೋಡ್ ಮಾಡುವುದು.ಆರ್‌ಒ/ಎಆರ್‌ಒ ರವರು ಅದರ ಟೆಸ್ಟ್ ಪ್ರಿಂಟ್‌ಔಟ್ ತೆಗೆದು ಅದನ್ನು ಬ್ಯಾಲೆಟಿಂಗ್ ಯೂನಿಟ್‌ನಲ್ಲಿನ ಬ್ಯಾಲೆಟ್ ಪೇಪರ್‌ನೊಂದಿಗೆ ಪರಿಶೀಲಿಸಿ, ಸಹಿ ಮಾಡಿ ಅದನ್ನು ಪ್ರಮಾಣೀಕರಿಸುವುದು.

**ವಿವಿಪ್ಯಾಟ್‌ನ ರೋಲ್ ಪೇಪರ್ ಕಂಪಾರ್ಟ್‌ಮೆಂಟನ್ನು ಸೀಲ್ ಮಾಡುವುದು:**

**ವಿವಿಪ್ಯಾಟ್ ಅನ್ನು ಸಿದ್ಧಪಡಿಸುವ ಅವಧಿಯಲ್ಲಿ ಪೇಪರ್‌ರೋಲ್ ಕಂಪಾರ್ಟ್‌ಮೆಂಟನ್ನು ಸೀಲ್ ಮಾಡುವುದು**





ವಿವಿಪ್ಯಾಟ್‌ನ ಪೇಪರ್ ರೋಲ್ ಕಂಪಾರ್ಟ್‌ಮೆಂಟ್‌ನಲ್ಲಿ ಪೇಪರ್ ರೋಲ್ ಅನ್ನು ಅಳವಡಿಸಿದ ತರುವಾಯ, ಆರ್‌ಓ ರವರ ಮೊಹರಿನೊಂದಿಗೆ ಚುನಾವಣಾ ವಿವರಗಳನ್ನು ಸೂಚಿಸುವ ಅಡ್ರೆಸ್ ಟ್ಯಾಗ್ ಅನ್ನು ಬಳಸಿ, ಲಾಚ್‌ಗಳ ಮೇಲೆ ಒದಗಿಸಿರುವ ರಂಧ್ರಗಳ ಮೂಲಕ ದಾರವನ್ನು ಪೋಣಿಸಿ ಪೇಪರ್ ರೋಲ್ ಕಂಪಾರ್ಟ್‌ಮೆಂಟ್‌ನ ಲಾಚ್‌ಗಳನ್ನು ಸೀಲ್ ಮಾಡುವುದು. (ಪೇಪರ್ ರೋಲ್ ಕಂಪಾರ್ಟ್‌ಮೆಂಟ್‌ನ್ನು ಸೀಲು ಮಾಡುವ ಮೊದಲು, ಕಂಟ್ರೋಲ್ ಯೂನಿಟ್ ಸ್ವಿಚ್-ಆಫ್ ಆಗಿರುವುದನ್ನು ಖಚಿತಪಡಿಸಿಕೊಳ್ಳಿ)

**ಟಿಪ್ಪಣಿ:** *ಇವಿಎಮ್‌ಗಳು ಮತ್ತು ವಿವಿಪ್ಯಾಟ್‌ಗಳನ್ನು ಸಿದ್ಧಪಡಿಸುವ ಸಮಯದಲ್ಲಿ ಬಳಸಿದ ಎಲ್ಲಾ ಸೀಲುಗಳಿಗೂ ರಿಟರ್ನಿಂಗ್ ಆಫೀಸರ್‌ಗಳು, ಅಭ್ಯರ್ಥಿಗಳು/ಅವರ ಏಜೆಂಟರುಗಳು ಸಹಿ ಮಾಡಿರತಕ್ಕದ್ದು.*

### 8.4.3 ಕಂಟ್ರೋಲ್ ಯೂನಿಟ್‌ಗಳಲ್ಲಿ ಕ್ಯಾಂಡಿಡೇಟ್ ಸೆಟ್ಟಿಂಗ್:

**ಎ)** ಕಂಟ್ರೋಲ್ ಯೂನಿಟ್‌ನಲ್ಲಿ ಹೊಸ ಪವರ್ ಪ್ಯಾಕ್ ಅನ್ನು ಅಳವಡಿಸುವುದು.

**ಬಿ)** ವಿವಿಪ್ಯಾಟ್‌ನ ಕೇಬಲ್ ಅನ್ನು ಕಂಟ್ರೋಲ್ ಯೂನಿಟ್‌ನೊಂದಿಗೆ ಹಾಗೂ ಬ್ಯಾಲೆಟಿಂಗ್ ಯೂನಿಟ್‌ನ ಕೇಬಲನ್ನು ವಿವಿಪ್ಯಾಟ್‌ನೊಂದಿಗೆ ಜೋಡಿಸಬೇಕು.

**ಸಿ)** ವಿವಿಪ್ಯಾಟ್‌ನ ಪೇಪರ್ ರೋಲ್ ನಾಬ್ ಅನ್ನು ಅನ್‌ಲಾಕ್ ಮಾಡುವುದು ("ಕಾರ್ಯ ನಿರ್ವಹಣಾ ಸ್ಥಿತಿ"ಗೆ ತಿರುಗಿಸುವುದು)

**ಡಿ)** ಕಂಟ್ರೋಲ್ ಯೂನಿಟ್ ಅನ್ನು ಸ್ವಿಚ್-ಆನ್ ಮಾಡುವುದು.

**ಇ)** ಕಂಟ್ರೋಲ್ ಯೂನಿಟ್‌ನ ಕ್ಯಾಂಡಿಡೇಟ್ ಸೆಟ್ ಬಟನ್ ಅನ್ನು ಒತ್ತುವುದು. ಕಂಟ್ರೋಲ್ ಯೂನಿಟ್‌ನ ಡಿಸ್‌ಪ್ಲೇ ಪ್ಯಾನೆಲ್, ಸೆಟ್ ಕ್ಯಾಂಡಿಡೇಟ್_ _ _ ಅನ್ನು ತೋರಿಸುವುದು.

**ಎಫ್)** ಕಂಟ್ರೋಲ್ ಯೂನಿಟ್‌ನಲ್ಲಿ ಕ್ಯಾಂಡಿಡೇಟ್ ಅನ್ನು ಸೆಟ್ ಮಾಡಲು ಬ್ಯಾಲೆಟಿಂಗ್ ಯೂನಿಟ್‌ನ ಕೊನೆಯ ಕ್ಯಾಂಡಿಡೇಟ್ ಬಟನ್ (ನೋಟಾ ಬಟನ್) ಅನ್ನು ಒತ್ತುವುದು.

**ಜಿ)** ಪೇಪರ್ ಸ್ಲಿಪ್‌ಗಳನ್ನು ವಿವಿಪ್ಯಾಟ್ ಸರಿಯಾಗಿ ಮುದ್ರಿಸುತ್ತಿದೆಯೇ ಎಂಬುದನ್ನು ಪರೀಕ್ಷಿಸಲು ಪ್ರತಿಯೊಬ್ಬ ಅಭ್ಯರ್ಥಿಗೆ ಒಂದೊಂದು ಮತವನ್ನು ಹಾಕುವ ಮೂಲಕ ಅಣಕು ಮತದಾನವನ್ನು ಮಾಡುವುದು.

**ಹೆಚ್)** ಕಂಟ್ರೋಲ್ ಯೂನಿಟ್ ಅನ್ನು ಸ್ವಿಚ್-ಆಫ್ ಮಾಡುವುದು.

**ಐ)** ವಿವಿಪ್ಯಾಟ್‌ನ ಪೇಪರ್ ರೋಲ್ ಕಂಪಾರ್ಟ್‌ಮೆಂಟ್‌ನ ಲ್ಯಾಚ್‌ಗಳನ್ನು ಹಾಗೂ ಕಂಟ್ರೋಲ್ ಯೂನಿಟ್‌ನ ಬ್ಯಾಟರಿ ಹಾಗೂ ಕ್ಯಾಂಡಿಡೇಟ್ ಸೆಟ್ ಕಂಪಾರ್ಟ್‌ಮೆಂಟ್‌ಗಳ ಲ್ಯಾಚ್‌ಗಳನ್ನು, ದಾರದ ಸೀಲುಗಳು ಮತ್ತು ಅಡ್ರೆಸ್ ಟ್ಯಾಗ್‌ಗಳನ್ನು ಬಳಸಿ ಸೀಲ್ ಮಾಡುವುದು.

**ಜೆ)** ಅಡ್ರೆಸ್ ಟ್ಯಾಗ್‌ನ ಮೇಲೆ ಪಕ್ಷದ ಸಂಕ್ಷಿಪ್ತಾಕ್ಷರಗಳೊಂದಿಗೆ ತಮ್ಮ ಸಹಿ ಹಾಕಲು, ಅಭ್ಯರ್ಥಿಗಳಿಗೆ/ಅವರ ಏಜೆಂಟರುಗಳಿಗೆ ಅವಕಾಶ ಮಾಡಿಕೊಡುವುದು.

### 8.4.4. ಸಿಂಬಲ್ ಲೋಡಿಂಗ್ ಯೂನಿಟ್‌ನ ಸುರಕ್ಷಾ ಅಭಿರಕ್ಷೆ:

ಇವಿಎಮ್‌ಗಳು ಹಾಗೂ ವಿವಿಪ್ಯಾಟ್‌ಗಳ ಸಿದ್ಧತೆಯು ಪೂರ್ಣಗೊಂಡ ತರುವಾಯ, ಬಿಇಎಲ್/ಇಸಿಐಎಲ್‌ನ ಮೇಲ್ವಿಚಾರಕರು ಎಲ್ಲಾ ಎಸ್‌ಎಲ್‌ಯುಗಳನ್ನು ಸಂಬಂಧಪಟ್ಟ ಡಿಇಒರವರಿಗೆ ಹಸ್ತಾಂತರಿಸುವುದು.ಡಿಇಒ ರವರು, ಬಿಇಎಲ್/

ಮೇಲ್ವಿಚಾರಕರುಗಳಿಂದ ಸ್ವೀಕರಿಸಿದ ಎಸ್‌ಎಲ್‌ಯುಗಳನ್ನು ಅವರ ಸುರಕ್ಷಿತ ಅಭಿರಕ್ಷೆಯಲ್ಲಿಟ್ಟುಕೊಳ್ಳುವುದು ಹಾಗೂ ಮತದಾನದ ತರುವಾಯದ ದಿನದಂದು ಎಂದರೆ ಪಿ+1 ದಿನದಂದು ಅವರಿಗೆ ಅಥವಾ ಬಿಇಎಲ್/ಇಸಿಐಎಲ್‌ನಿಂದ ಅಧಿಕೃತಗೊಂಡ ಇಂಜಿನಿಯರುಗಳಿಗೆ ಅದನ್ನು ಹಿಂದಿರುಗಿಸುವುದು. ಡಿಇಒ ರವರು ಮತದಾನದ ದಿನದಂದು ವಲಯದಲ್ಲಿ ಬಿಇಎಲ್/ಇಸಿಐಎಲ್‌ನ ಇಂಜಿನಿಯರ್ ಅಥವಾ ಯಾರೇ ಇತರ ವ್ಯಕ್ತಿಯು ಎಸ್‌ಎಲ್‌ಯುವನ್ನು ತೆಗೆದುಕೊಂಡು ಹೋಗಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳುವುದು ಹಾಗೂ:–

ಎ) ಎಲ್ಲಾ ಎಸ್‌ಎಲ್‌ಯುಗಳನ್ನು ಮುಂದಿನ ಹಂತದ ವಿಧಾನಸಭಾ ಕ್ಷೇತ್ರ/ವಿಧಾನಸಭಾ ವಿಭಾಗಕ್ಕೆ ತೆಗೆದುಕೊಂಡು ಹೋಗಲು ಸಾಧ್ಯವಾಗುವಂತೆ ಮತದಾನದ ಮಾರನೆಯ ದಿನದಂದು ಬಿಇಎಲ್/ಇಸಿಐಎಲ್‌ನ ಮೇಲ್ವಿಚಾರಕರಿಗೆ ಎಲ್ಲಾ ಎಸ್‌ಎಲ್‌ಯುಗಳನ್ನು ಬಿಡುಗಡೆ ಮಾಡಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು.

ಬಿ) ಪ್ರತಿಯೊಂದು ವಿಧಾನಸಭಾ ಕ್ಷೇತ್ರ/ವಿಧಾನಸಭಾ ವಿಭಾಗದ ತಂಡಕ್ಕೆ ಹಂಚಲಾಗಿರುವ ಎಸ್‌ಎಲ್‌ಯುಗಳ ವಿವರಗಳನ್ನು ಬಿಇಎಲ್ ಮತ್ತು ಇಸಿಐಎಲ್‌ಗಳು ಸಂಬಂಧಪಟ್ಟ ಡಿಇಒರವರಿಗೆ ಲಿಖಿತದಲ್ಲಿ ನೀಡುವುದು.

**8.4.5. ಹೆಚ್ಚಿನ ಪ್ರಮಾಣದ ಅಣಕು ಮತದಾನ ನಡೆಸುವುದು:**

ಎ. ಶೇ.100ರಷ್ಟು ವಿವಿಪ್ಯಾಟ್‌ನಲ್ಲಿ ವಿವಿಪ್ಯಾಟ್‌ಗಳನ್ನು ಪರೀಕ್ಷಿಸುವುದು, ವಿವಿಪ್ಯಾಟ್‌ನಲ್ಲಿ ಪೇಪರ್ ಸ್ಲಿಪ್‌ಗಳ ಮುದ್ರಣವು ಸರಿಯಾಗಿ ಆಗುತ್ತಿದೆ ಎಂಬುದನ್ನು ಪರೀಕ್ಷಿಸುವುದಕ್ಕೆ ಪ್ರತಿಯೊಬ್ಬ ಅಭ್ಯರ್ಥಿಗೆ ಒಂದೊಂದು ಮತವನ್ನು ಚಲಾಯಿಸತಕ್ಕದ್ದು.

ಬಿ. ಯಾದೃಚ್ಛಿಕವಾಗಿ ಆಯ್ಕೆ ಮಾಡಿದ ಶೇ.5ರಷ್ಟು ಇವಿಎಮ್ ಹಾಗೂ ವಿವಿಪ್ಯಾಟ್‌ಗಳಲ್ಲಿ 1000 ಮತಗಳ ಅಣಕು ಮತದಾನವನ್ನು ಮಾಡುವುದು.

ಸಿ. ವಿದ್ಯುನ್ಮಾನ ಫಲಿತಾಂಶವನ್ನು ಪೇಪರಿನ ಎಣಿಕೆಯೊಂದಿಗೆ ಹೋಲಿಸುವುದು. ಈ ಉದ್ದೇಶಕ್ಕಾಗಿ ಮತಯಂತ್ರವನ್ನು ಯಾದೃಚ್ಛಿಕವಾಗಿ ಎತ್ತಿಕೊಳ್ಳಲು ಅಭ್ಯರ್ಥಿಗಳಿಗೆ/ಅವರ ಪ್ರತಿನಿಧಿಗಳಿಗೆ ಅನುಮತಿಸುವುದು.

ಡಿ. ಅಭ್ಯರ್ಥಿಗಳ ಪ್ರತಿನಿಧಿಗಳಿಗೂ ಸ್ವತಃ ಅಣಕು ಮತದಾನ ಮಾಡಲು ಅನುಮತಿಸುವುದು ಹಾಗೂ ಮತದಾನವನ್ನು ತಾವು ಖುದ್ದಾಗಿ ಮಾಡಿರುವುದರ ಸೂಚಕವಾಗಿ ಅನುಬಂಧ–19 ರಲ್ಲಿರುವ ರಿಜಿಸ್ಟರಿನಲ್ಲಿ ಅವರ ಸಹಿಯನ್ನು ಪಡೆದುಕೊಳ್ಳುವುದು.

ಇ. ಎಫ್‌ಎಲ್‌ಸಿಯ ಸಮಯದಲ್ಲಿ ಕಂಟ್ರೋಲ್ ಯೂನಿಟ್‌ಗೆ ಅಳವಡಿಸಲಾಗಿರುವ ಗುಲಾಬಿ ಬಣ್ಣದ ಪೇಪರ್ ಸೀಲ್, ಕಾರ್ಯಸಿದ್ಧತಾ ಅವಧಿಯಲ್ಲಿ ಯಾವುದೇ ರೀತಿಯಲ್ಲೂ ಹಾನಿಗೊಳಗಾಗದಂತೆ ನೋಡಿಕೊಳ್ಳುವುದು.

**8.4.6. ಸಿದ್ಧತೆಗಳ ಮೇಲ್ವಿಚಾರಣೆ:** ವಿಡಿಯೋ ಚಿತ್ರೀಕರಣದ ಅಡಿಯಲ್ಲಿ ಆರ್‌ಒ ಅಥವಾ ಎಆರ್‌ಒಗಳ ಪೈಕಿ ಒಬ್ಬರು, ಇವಿಎಮ್‌ಗಳು ಹಾಗೂ ವಿವಿಪ್ಯಾಟ್‌ಗಳ ಕಾರ್ಯಸಿದ್ಧತೆಗಳ ಮೇಲ್ವಿಚಾರಣೆಯನ್ನು ಮಾಡುವರು.

**8.4.7. ಇವಿಎಮ್‌ನಲ್ಲಿ ಅಂಧರ ಸಂಕೇತಾಕ್ಷರ ವೈಶಿಷ್ಟ್ಯಗಳನ್ನು ಪರಿಚಯಿಸುವುದು: ಅಂಧ ಮತದಾರರು ತಮ್ಮ ಮತದಾನದ ಹಕ್ಕನ್ನು ಚಲಾಯಿಸಲು ಅನುಕೂಲವಾಗುವಂತೆ ಹೆಚ್ಚುವರಿ ವ್ಯವಸ್ಥೆಗಳನ್ನು ಕಲ್ಪಿಸುವುದು.**

(ಎ) ಬ್ಯಾಲೆಟಿಂಗ್ ಯೂನಿಟ್‌ಗಳ ಮೇಲಿರುವ ನೀಲಿ ಬಟನ್‌ನ (ಮತದಾನ ಬಟನ್) ಬಲಭಾಗದಲ್ಲಿ ಬ್ರೈಲ್ ಲಿಪಿಯಲ್ಲಿ ಅಭ್ಯರ್ಥಿಗಳ ಕ್ರಮ ಸಂಖ್ಯೆಯನ್ನು ಉಬ್ಬಚ್ಚು ಮಾಡಿರುವುದರಿಂದ ಬ್ರೈಲ್ ಲಿಪಿಯ ಮೇಲೆ **ಯಾವುದೇ ಬಗೆಯ ಸ್ಟಿಕರ್ ಅನ್ನು ಅಂಟಿಸಬಾರದು.**

(ಬಿ) ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಪಟ್ಟಿಯನ್ನು ಅಂತಿಮಗೊಳಿಸಿದ ಕೂಡಲೇ, ಬ್ಯಾಲೆಟಿಂಗ್ ಯೂನಿಟ್‌ನ ಮೇಲಿರುವ ಮತಪತ್ರದ ಮೇಲೆ ಕಾಣಿಸುವಂತಹ ಅಭ್ಯರ್ಥಿಗಳ ಹೆಸರುಗಳ ಅದೇ ಕ್ರಮ ಸಂಖ್ಯೆಯಲ್ಲಿಯೇ ವ್ಯವಸ್ಥೆಗೊಳಿಸಿದ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಕ್ರಮಸಂಖ್ಯೆ, ಅಭ್ಯರ್ಥಿಗಳ ಹೆಸರನ್ನು ಒಳಗೊಂಡಿರುವ **ಡಮ್ಮಿ ಮತಪತ್ರಗಳನ್ನು ಸಿದ್ಧಪಡಿಸುವುದಕ್ಕಾಗಿ,** ದೇವ್ನಾರ್ ಫೌಂಡೇಷನ್ ಫಾರ್ ಬ್ಲೈಂಡ್/ರಾಷ್ಟ್ರೀಯ ಅಂಧರ ಸಂಸ್ಥೆ ಅಥವಾ ಲಭ್ಯವಿರುವ ಯಾವುದೇ ಇತರ ಮೂಲದ ಸಂಸ್ಥೆಗೆ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಪಟ್ಟಿಯನ್ನು ಕೂಡಲೇ ಕಳುಹಿಸುವುದು.

(ಸಿ) ಪ್ರತಿಯೊಬ್ಬ ಅಭ್ಯರ್ಥಿಗಳ ಹೆಸರುಗಳ ಎದುರಿಗೆ ಸಂಬಂಧಪಟ್ಟ ರಾಜಕೀಯ ಪಕ್ಷದ ಹೆಸರನ್ನು ಮುದ್ರಿಸುವ ಮೂಲಕ ಅಭ್ಯರ್ಥಿಗಳು ಯಾವ ಪಕ್ಷದವರು ಎಂಬುದನ್ನು ಸೂಚಿಸುವುದು.ಸ್ವತಂತ್ರ ಅಭ್ಯರ್ಥಿಯಾಗಿದ್ದಪಕ್ಷದಲ್ಲಿ **"ಸ್ವತಂತ್ರ"**ಎಂಬ ಪದವನ್ನು ಮುದ್ರಿಸುವುದು.

(ಡಿ) ನಕಲಿ (ಡಮ್ಮಿ) ಮತಪತ್ರವನ್ನು ಇಂಗ್ಲೀಷ್ ಭಾಷೆಯ ಜೊತೆಗೆ ಪ್ರಾದೇಶಿಕ ಭಾಷೆಗಳಲ್ಲಿ (ಎಂದರೆ, ನೈಜ ಮತಪತ್ರದ ಮೇಲೆ ಮುದ್ರಿಸಿದ ಭಾಷೆ) ಸಿದ್ಧಪಡಿಸುವುದು. ಮತ್ತು ಅದರ ಪ್ರತಿಯನ್ನು ಪ್ರತಿಯೊಂದು ಮತದಾನ ಕೇಂದ್ರಗಳಿಗೂ ಪೂರೈಸುವುದು.

(ಇ) ಮತದಾನ ಕೇಂದ್ರದಲ್ಲಿ ಒಂದಕ್ಕಿಂತ ಹೆಚ್ಚು **ಬ್ಯಾಲೆಂಟಿಗ್ ಯೂನಿಟ್** ಬಳಕೆ ಮಾಡಿದರೆ, ಪ್ರತಿಯೊಂದು ಬ್ಯಾಲೆಟಿಂಗ್ ಯೂನಿಟ್‌ಗೆ ಪ್ರತ್ಯೇಕ ನಕಲಿ (ಡಮ್ಮಿ) ಮತಪತ್ರವನ್ನು ಮುದ್ರಿಸುವುದು.

**8.5 ನಕಲಿ (ಡಮ್ಮಿ) ಮತಪತ್ರದ ಸಿದ್ಧತೆ:**

**(i)** ಪ್ರತಿಯೊಂದು ಡಮ್ಮಿ ಮತಪತ್ರದಲ್ಲಿ 01 ರಿಂದ 16 ರವರೆಗೆ ಕ್ರಮಸಂಖ್ಯೆಯನ್ನು ನೀಡುವುದು. ಎಂದರೆ, ಸ್ಪರ್ಧಿಸುವ ಅಭ್ಯರ್ಥಿಗಳ ಸಂಖ್ಯೆ ನೋಟಾ ಸೇರಿದಂತೆ 19 ಆಗಿದ್ದಲ್ಲಿ, ಮೊದಲನೇ ಡಮ್ಮಿ ಮತಪತ್ರದಲ್ಲಿನ ಅಭ್ಯರ್ಥಿಗಳಿಗೆ ಸಂಬಂಧಿಸಿದ ಕ್ರಮಸಂಖ್ಯೆಯನ್ನು, ಮೊದಲನೇ ಬ್ಯಾಲೆಟಿಂಗ್ ಯೂನಿಟ್‌ನ ಮತಪತ್ರದ ಮೇಲೆ ನಮೂದಿಸಲಾದಂತೆ 1 ರಿಂದ 16 ಎಂಬುದಾಗಿ ಸಂಖ್ಯೆಗಳನ್ನು ಕೊಡುವುದು.2ನೇ ಬ್ಯಾಲೆಟಿಂಗ್ ಯೂನಿಟ್‌ನಲ್ಲಿನ 17 ರಿಂದ 19 ರವರೆಗಿನ ಕ್ರಮಸಂಖ್ಯೆಯಲ್ಲಿರುವ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳಿಗಾಗಿ ಕ್ರಮಸಂಖ್ಯೆಗಳನ್ನು 2ನೇ ಡಮ್ಮಿ ಮತಪತ್ರದ ಮೇಲೆ 01 ರಿಂದ ಪ್ರಾರಂಭಿಸುವುದು.

**(ii)** 01 ಕ್ಕಿಂತ ಹೆಚ್ಚು ಬ್ಯಾಲೆಟಿಂಗ್ ಯೂನಿಟ್ ಅನ್ನು ಬಳಸಿದ್ದಲ್ಲಿ, ಮೊದಲನೇ ಡಮ್ಮಿ ಮತಪತ್ರದ ಮೇಲಿನ ಮಧ್ಯ ಭಾಗ ದಲ್ಲಿ ಬಿಯು–01 ಎಂದು ಹಾಗೂ ಎರಡನೇ ಡಮ್ಮಿ ಮತಪತ್ರದ ಮೇಲಿನ ಮಧ್ಯ ಭಾಗ ದಲ್ಲಿ ಬಿಯು–02 ಎಂದು ಬ್ರೈಲ್ ಲಿಪಿಯಲ್ಲಿ ಮುದ್ರಿಸುವುದು.

**(iii)** ಅದೇ ರೀತಿಯಾಗಿ, ಬ್ರೈಲ್ ಸ್ಟಿಕರ್‌ಗಳನ್ನು ಬ್ಯಾಲೆಟಿಂಗ್ ಯೂನಿಟ್–01,ಬ್ಯಾಲೆಟಿಂಗ್ ಯೂನಿಟ್–02 ಹೀಗೇ ಮುಂದುವರಿದಂತೆ ಮುದ್ರಿಸುವುದು ಹಾಗೂ ಅದನ್ನು ಬ್ಯಾಲೆಟಿಂಗ್ ಯೂನಿಟ್‌ಗಳ ಮೇಲ್ಭಾಗದ ಮಧ್ಯಭಾಗದಲ್ಲಿ ಅಂಟಿಸತಕ್ಕದ್ದು.

**(iv)** ಮೇಲೆ ಹೇಳಲಾದಂತೆ ಡಮ್ಮಿ ಮತಪತ್ರಗಳನ್ನು, ರಾಜ್ಯ/ಕೇಂದ್ರಾಡಳಿತ ಪ್ರದೇಶದ ಸಿಇಒ ರವರು ನಿಯೋಜಿಸಿದ ಜವಾಬ್ದಾರಿಯುತ ಒಬ್ಬ ಅಧಿಕಾರಿಯ ಮೇಲ್ವಿಚಾರಣೆಯಲ್ಲಿ, ದೇವ್ನಾರ್ ಅಂಧರ ಶಾಲೆ/ರಾಷ್ಟ್ರೀಯ ಅಸೋಸಿಯೇಷನ್ ಅಥವಾ ಲಭ್ಯವಿರುವ ಯಾವುದೇ ಮೂಲದ ಸಂಸ್ಥೆಯು ಬ್ರೈಲ್ ಲಿಪಿಯಲ್ಲಿ ಮುದ್ರಿಸುವುದು. ಡಮ್ಮಿ ಮತಪತ್ರಗಳ ಮೇಲ್ಭಾಗದಲ್ಲಿ ಸಾಮಾನ್ಯ ಲಿಪಿಯಲ್ಲಿ ಚುನಾವಣಾ ಕ್ಷೇತ್ರದ ಹೆಸರನ್ನು ಬರೆಯುವುದು.

**(v)** ಪ್ರತಿಯೊಂದು ಮತಕೇಂದ್ರಕ್ಕಾಗಿ ಸಿದ್ಧಪಡಿಸಿದಂಥ ಪ್ರತಿಯೊಂದು ಮತಪತ್ರವನ್ನು ಸಂಬಂಧಪಟ್ಟ ರಾಜ್ಯದ ವಿಕಲಚೇತನ ಆಯುಕ್ತರು ಅಥವಾ ಬ್ರೈಲ್ ಲಿಪಿ ಗೊತ್ತಿರುವಂಥ ಒಬ್ಬ ಅಧಿಕಾರಿಯಾಗಿರುವ ಆತನ ಅಧಿಕೃತ ಪ್ರತಿನಿಧಿಯು ಪ್ರಮಾಣೀಕರಿಸತಕ್ಕದ್ದು.

**(vi)** ಅಂಧ ಮತದಾರರಿಗೆ ಕಲ್ಪಿಸಲಾಗಿರುವ ಈ ಸೌಲಭ್ಯಗಳ ಬಗ್ಗೆ ಪ್ರಿಸೈಡಿಂಗ್ ಅಧಿಕಾರಿ ಹಾಗೂ ಮತಗಟ್ಟೆ ಅಧಿಕಾರಿಗಳಿಗೆ ತಿಳಿಸುವ ವಿವರವಾದ ತರಬೇತಿ ಮತ್ತು ಸಂಕ್ಷಿಪ್ತವಾಗಿ ತಿಳಿಸುವ ಅಧಿವೇಶನಗಳನ್ನು ನಡೆಸುವುದು.

**(vii)** ಅಂಧರಿಗಾಗಿ ಮಾಡಲಾಗಿರುವ ವ್ಯವಸ್ಥೆಗಳನ್ನು ಅಂಧ ಮತದಾರರಿಗೆ ತಿಳಿಸಲು ವೃತ್ತಪತ್ರಿಕೆಗಳು ಮತ್ತು ದೂರದರ್ಶನ ಇತ್ಯಾದಿಗಳಲ್ಲಿ ಜಾಹಿರಾತುಗಳನ್ನು ನೀಡುವುದರ ಮೂಲಕ ಈ ಕ್ರಮಗಳ ವ್ಯಾಪಕ ಪ್ರಚಾರಕ್ಕಾಗಿ ವ್ಯವಸ್ಥೆ ಮಾಡುವುದು.

**(viii)** ಚುನಾವಣೆಗಳನ್ನು ನಡೆಸುವ ನಿಯಮಗಳು, 1961ರ 49ಎನ್ ನಿಯಮದಲ್ಲಿ ಉಪಬಂಧಿಸಲಾದಂತೆ ಅಂಧ ಮತದಾರರು ಮತದಾನ ಕೇಂದ್ರಕ್ಕೆ ಒಬ್ಬ ಸಂಗಡಿಗನೊಂದಿಗೆ ಬರುವ ಸೌಲಭ್ಯವನ್ನು ಪಡೆದುಕೊಳ್ಳಲು ಅನುಮತಿಸುವುದು.

**(ix)** ಅಂಧ ಮತದಾರರು ಬ್ರೈಲ್ ಲಿಪಿಯಲ್ಲಿರುವ ಡಮ್ಮಿ ಮತಪತ್ರದ ಸಹಾಯದಿಂದ ತಮ್ಮ ಮತ ಚಲಾಯಿಸಲು ಬಯಸಿದರೆ ಅವರಿಗೆ ಅದನ್ನು ನೀಡುವುದು. ಅಂಧ ಮತದಾರರು ಡಮ್ಮಿ ಮತಪತ್ರದ ಒಳಾಂಶಗಳನ್ನು ಓದಿಕೊಂಡ ನಂತರ, ಮತ ಚಲಾಯಿಸಲು ವೋಟಿಂಗ್ ಕಂಪಾರ್ಟ್‌ಮೆಂಟ್‌ಗೆ ಹೋಗಲು ಅವರನ್ನು ಅನುಮತಿಸುವುದು.

**(x)** ಡಮ್ಮಿ ಮತಪತ್ರವನ್ನು ಓದಿಕೊಂಡ ತರುವಾಯವೇ ಅಂಥ ಮತದಾರರು ಇವಿಎಮ್ ಮೇಲೆ ಅಂಟಿಸಿದ ಸಂಖ್ಯಾ ಸ್ಟಿಕರಿನ ಮೇಲಿರುವ ಅವರ ಆಯ್ಕೆಯ ಅಭ್ಯರ್ಥಿಯ ಕ್ರಮ ಸಂಖ್ಯೆಯನ್ನು ಓದಿಕೊಳ್ಳುವುದರ ಮೂಲಕ ತಮ್ಮ ಮತವನ್ನು ಚಲಾಯಿಸಲು ಸಾಧ್ಯವಾಗುತ್ತದೆ.

**(xi)** ಮತದಾರರು ತಮ್ಮ ಮತವನ್ನು ಚಲಾಯಿಸಿದ ತರುವಾಯ, ಅವರಿಗೆ ನೀಡಿದ ಡಮ್ಮಿ ಮತಪತ್ರವನ್ನು ಪ್ರಿಸೈಡಿಂಗ್ ಅಧಿಕಾರಿಗೆ ಹಿಂದಿರುಗಿಸಿದ್ದಾನೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು.

**(xii)** ಮತದಾನ ಮುಕ್ತಾಯಗೊಂಡ ತರುವಾಯ, ಡಮ್ಮಿ ಮತಪತ್ರವನ್ನು ಪ್ರತ್ಯೇಕ ಲಕೋಟೆಯಲ್ಲಿಟ್ಟು ಅದರ ಮೇಲೆ ಅಂಧರಿಗೆ ಸಂಬಂಧಿಸಿದ "ಡಮ್ಮಿ ಮತಪತ್ರ" ಎಂದು ಬರೆದು ಸೀಲ್ ಮಾಡುವುದು ಹಾಗೂ ಅದನ್ನು ಶಾಸನಬದ್ಧವಲ್ಲದ ನಮೂನೆಗಳೊಂದಿಗೆ ರಿಟರ್ನಿಂಗ್ ಅಧಿಕಾರಿಗೆ ಕಳುಹಿಸುವುದು.

**(xiii)** ಎಲ್ಲಾ ಅಂಧ ಮತದಾರರ (ಬ್ರೈಲ್ ಲಿಪಿ ಮತಪತ್ರದ ಸೌಲಭ್ಯವನ್ನು ಪಡೆದುಕೊಂಡವರು) ದಾಖಲೆಗಳನ್ನು ಈ ಕೆಳಕಂಡ ಪ್ರಪತ್ರದಲ್ಲಿ ಇಟ್ಟುಕೊಳ್ಳುವುದು ಹಾಗೂ ಅದನ್ನು ಇವಿಎಮ್‌ನ ಜೊತೆಗೆ ರಿಟರ್ನಿಂಗ್ ಅಧಿಕಾರಿಗೆ ಸಲ್ಲಿಸುವುದು. ರಿಟರ್ನಿಂಗ್ ಅಧಿಕಾರಿಯು ಈ ಸಂಬಂಧವಾಗಿ ಪ್ರಿಸೈಡಿಂಗ್ ಅಧಿಕಾರಿಗಳು ನೀಡಿದ ಎಲ್ಲಾ ಮಾಹಿತಿಯನ್ನು ಕ್ರೋಢೀಕರಿಸುವುದು ಮತ್ತು ಅದನ್ನು ಚುನಾವಣಾ ಫಲಿತಾಂಶ ಘೋಷಣೆಯಾದ ತರುವಾಯ ಅದನ್ನು ಮುಖ್ಯ ಚುನಾವಣಾಧಿಕಾರಿಯ ಮೂಲಕ ಆಯೋಗಕ್ಕೆ ಸಲ್ಲಿಸುವುದು.

**ಅಂಥ ಮತದಾರರು ಮತ ಚಲಾಯಿಸಿರುವುದರ ಕುರಿತ ವರದಿಗೆ ಸಂಬಂಧಿಸಿದ ಪ್ರಪತ್ರ**

ವಿಧಾನಸಭಾ/ಲೋಕಸಭಾ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು . . . . . . . . . . . . .

ವಿಧಾನಸಭಾ ವಿಭಾಗದ ಸಂಖ್ಯೆ ಮತ್ತು ಹೆಸರು . . . . . . . . . . . . . . . . . . . . . . .

*(ಲೋಕಸಭಾ ಚುನಾವಣಾ ಕ್ಷೇತ್ರ ಆಗಿದ್ದ ಪಕ್ಷದಲ್ಲಿ)*

ಮತದಾನ ಕೇಂದ್ರದ ಸಂಖ್ಯೆ ಮತ್ತು ಹೆಸರು . . . . . . . . . . . . . . . . . . . . . . . .

ಪ್ರಿಸೈಡಿಂಗ್ ಅಧಿಕಾರಿಯ ಹೆಸರು . . . . . . . . . . . . . . . . . . . . . . . . . . .

| ಕ್ರ. ಸಂ. | ಮತ ಚಲಾಯಿಸಲು ಬಂದ ಅಂಥ ಮತದಾರರ ಸಂಖ್ಯೆ | ಬ್ರೈಲ್ ಲಿಪಿಯಲ್ಲಿರುವ ಡಮ್ಮಿ ಮತಪತ್ರವನ್ನು ಬಳಸಿರುವಂಥ ಅಂಥ ಮತದಾರರ ಸಂಖ್ಯೆ | ಡಮ್ಮಿ ಮತಪತ್ರವನ್ನು ಬಳಸದೆ ನಿಯಮ 49 ಎನ್ ನ ಉಪಬಂಧವನ್ನು ಬಳಸಿಕೊಂಡು ಮತ ಚಲಾಯಿಸಿರುವಂಥ ಮತದಾರರ ಸಂಖ್ಯೆ | ಎರಡೂ ಸೌಲಭ್ಯಗಳನ್ನು ಬಳಸಿಕೊಂಡಂಥ ಮತದಾರರ ಸಂಖ್ಯೆ |
|---|---|---|---|---|
| | | | | |

(ಪ್ರಿಸೈಡಿಂಗ್ ಅಧಿಕಾರಿಯ ಸಹಿ)

**8.6 ಇವಿಎಮ್‌ಗಳು ಮತ್ತು ವಿವಿಪ್ಯಾಟ್‌ಗಳನ್ನು ಸಿದ್ಧಗೊಳಿಸುವ ಅವಧಿಯಲ್ಲಿ ಹೊರತೆಗೆಯಲಾದ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ನಾಶಪಡಿಸುವುದು:** ಇವಿಎಮ್ ಮತ್ತು ವಿವಿಪ್ಯಾಟ್‌ಗಳನ್ನು ಸಿದ್ಧಪಡಿಸುವ ಅವಧಿಯಲ್ಲಿ ವಿವಿಪ್ಯಾಟ್ ಸ್ಲಿಪ್‌ಗಳನ್ನು, ರಿಟರ್ನಿಂಗ್ ಅಧಿಕಾರಿ/ಸಹಾಯಕ ರಿಟರ್ನಿಂಗ್ ಅಧಿಕಾರಿಯ ಸಮ್ಮುಖದಲ್ಲಿ ಪ್ರತಿದಿನ ಪೇಪರ್ ಶ್ರೆಡ್ಡಿಂಗ್ ಯಂತ್ರವನ್ನು ಬಳಸಿ ವಿಲೇವಾರಿ ಮಾಡುವುದು.

**ಟಿಪ್ಪಣಿ:**

ಇವಿಎಂಗಳು ಮತ್ತು ವಿವಿಪ್ಯಾಟ್ ಅನ್ನು ಕಾರ್ಯಸಿದ್ಧಗೊಳಿಸುವ ಅವಧಿಯಲ್ಲಿ ಅಥವಾ ಮತದಾನದ ತಂಡಗಳಿಗೆ ಅವುಗಳನ್ನು ವಿತರಿಸುವ ಅವಧಿಯಲ್ಲಿ ಅಥವಾ ಮತದಾನ ಕೇಂದ್ರದ ಅಣಕು ಮತದಾನದ ಅವಧಿಯಲ್ಲಿ ಯಾವುದೇ ಬ್ಯಾಲೆಟಿಂಗ್ ಯೂನಿಟ್ ಅಥವಾ ಕಂಟ್ರೋಲ್ ಯೂನಿಟ್ ಸೂಕ್ತವಾಗಿ ಕಾರ್ಯನಿರ್ವಹಿಸದಿದ್ದ ಸಂದರ್ಭದಲ್ಲಿ ಸಂಬಂಧಪಟ್ಟ ಯೂನಿಟನ್ನು (ಅಂದರೆ ಬ್ಯಾಲೆಟಿಂಗ್ ಯೂನಿಟ್ ಅಥವಾ ಕಂಟ್ರೋಲ್ ಯೂನಿಟ್ ಸೂಕ್ತವಾಗಿ ಕಾರ್ಯನಿರ್ವಹಿಸದಿದ್ದ ಸಂದರ್ಭದಲ್ಲಿ, ಸಂಬಂಧಪಟ್ಟ ಬ್ಯಾಲೆಟಿಂಗ್ ಯೂನಿಟ್ ಅಥವಾ ಕಂಟ್ರೋಲ್ ಯೂನಿಟ್ ಅನ್ನು ಮಾತ್ರ) ಮೀಸಲು ಯೂನಿಟ್‌ನಿಂದ ಬದಲಾಯಿಸುವುದು.

# ಅಧ್ಯಾಯ – 9

# ಇವಿಎಂಗಳು ಹಾಗೂ ವಿವಿಪ್ಯಾಟ್‌ಗಳ ವಿಲೇವಾರಿ

**9.1 ಮತದಾನ ಕೇಂದ್ರಗಳಿಗೆ ರವಾನೆ ಮಾಡುವುದಕ್ಕಾಗಿ ವಿವಿಪ್ಯಾಟ್‌ಗಳನ್ನು ಭದ್ರತಾ ಕೊಠಡಿಯಿಂದ ಹೊರ ತೆಗೆಯುವಾಗ ಭದ್ರತಾ ಕೊಠಡಿಯನ್ನು ತೆರೆಯುವ ದಿನಾಂಕ ಮತ್ತು ಸಮಯವನ್ನು ಅಭ್ಯರ್ಥಿಗಳಿಗೆ / ಏಜೆಂಟರುಗಳಿಗೆ ಲಿಖಿತದಲ್ಲಿ ಸೂಚಿಸುವುದು.**

**9.2 ರವಾನೆಯ ಸಮಯದಲ್ಲಿ ಪ್ರಿಸೈಡಿಂಗ್ ಅಧಿಕಾರಿಗಳಿಗೆ ಸಲಹೆ:**

**(ಎ)** ಲೋಹದ ಗುರುತು ಪಟ್ಟಿಯ ಮೇಲೆ ಕೆತ್ತಲಾಗಿರುವ ಮತ್ತು ಅಂಟಿದ ಸ್ಟಿಕರ್ ಮೇಲೆ ಇರುವ ಯಂತ್ರದ ಸಂಖ್ಯೆಗಳನ್ನು ತಾಳೆ ಮಾಡಿ ಪರಿಶೀಲಿಸುವುದು.

**(ಬಿ)** ಇವಿಎಮ್/ವಿವಿಪ್ಯಾಟ್‌ಗಳನ್ನು ಸ್ವೀಕರಿಸುವ ಮುನ್ನ ಸ್ಟಿಕರ್ ಮೇಲೆ ನಮೂದಿಸಿರುವ ಮತದಾನ ಕೇಂದ್ರದ ಸಂಖ್ಯೆಯನ್ನು ಪರಿಶೀಲಿಸುವುದು ಹಾಗೂ ಅದನ್ನು ಅಡ್ರೆಸ್ ಟ್ಯಾಗ್‌ನಲ್ಲಿ ನಮೂದಿಸಿರುವ ಪಿಎಸ್ ಸಂಖ್ಯೆಯೊಂದಿಗೆ ಹೋಲಿಸುವುದು.

**(ಸಿ)** ಯಾವುದೇ ವ್ಯತ್ಯಾಸಗಳು ಕಂಡುಬಂದಲ್ಲಿ, ಅದನ್ನು ರವಾನೆಯ ವ್ಯವಸ್ಥೆಯ ಜವಾಬ್ದಾರಿಯನ್ನು ಹೊತ್ತಿರುವ ಅಧಿಕಾರಿಗಳ ಗಮನಕ್ಕೆ ತಂದು ಪರಿಹರಿಸಿಕೊಳ್ಳುವುದು.

**(ಡಿ)** ನಿರ್ದಿಷ್ಟ ಮತಕೇಂದ್ರಗಳಿಗೆ ಹಂಚಿಕೆ ಮಾಡಿದ ಇವಿಎಮ್ (ಕಂಟ್ರೋಲ್ ಯೂನಿಟ್ ಹಾಗೂ ಬ್ಯಾಲೆಟಿಂಗ್ ಯೂನಿಟ್ ಎರಡೂ)/ವಿವಿಪ್ಯಾಟ್‌ಗಳ ಯಂತ್ರ ಸಂಖ್ಯೆಯನ್ನು ಅಭ್ಯರ್ಥಿಗಳು, ಅವರು ನಿಯೋಜಿಸಿದ ಪೋಲಿಂಗ್ ಏಜೆಂಟರುಗಳಿಗೆ ನೀಡುವಂತೆ ಸಲಹೆ ನೀಡುವುದು.

### ಮತಗಟ್ಟೆ ಸಿಬ್ಬಂದಿ ತಂಡಗಳ ಪಾತ್ರ

1. ಮತಗಟ್ಟೆ ಸಿಬ್ಬಂದಿ ತಂಡಗಳು ಹೊರಡುವ ಸಮಯದಲ್ಲಿ, ತೊಂದರೆ ನಿವಾರಕ ಸೂಚನೆಗಳು (ಅನುಬಂಧ–22) ಮತ್ತು ಮತದಾನ ಸಾಮಗ್ರಿಗಳ ಹೆಚ್ಚುವರಿ ಸಾಮಗ್ರಿಗಳ ಪಟ್ಟಿಯ(ಅನುಬಂಧ–24) ಎರಡು ಪ್ರತಿಗಳನ್ನು ಪ್ರಿಸೈಡಿಂಗ್ ಅಧಿಕಾರಿಗಳಿಗೆ ಹಸ್ತಾಂತರಿಸುವುದು.
2. ವಿವಿಪ್ಯಾಟ್‌ಗಳಿಂದ ಹೊರತೆಗೆಯಲಾದ ಅಣಕು ಮತದಾನದ ಪೇಪರ್ ಬ್ಯಾಲೆಟ್ ಸ್ಲಿಪ್‌ಗಳನ್ನು ಸಂಗ್ರಹಿಸಿಡಲು ಸಾಕಷ್ಟು ಸಂಖ್ಯೆಯ ಕಪ್ಪು ಬಣ್ಣದ ಪೇಪರ್ ಲಕೋಟೆಗಳು ಹಾಗೂ ಪ್ಲಾಸ್ಟಿಕ್ ಬಾಕ್ಸ್‌ಗಳನ್ನು ಪಡೆದುಕೊಳ್ಳುವುದು.

**ಮತಗಟ್ಟೆ ಸಿಬ್ಬಂದಿ ತಂಡವು, ಮತದಾನಕ್ಕೆ ಮುನ್ನ ಮತ್ತು ತರುವಾಯ ಮಧ್ಯಂತರ ಸ್ಥಳದಲ್ಲಿ, ಇವಿಎಮ್‌ಗಳು/ವಿವಿಪ್ಯಾಟ್‌ಗಳೊಂದಿಗೆ ಇರುವುದಕ್ಕಾಗಿ ಇವಿಎಮ್–ಮಧ್ಯಂತರ ಭದ್ರತಾ ಕೊಠಡಿಗಳ ವ್ಯವಸ್ಥೆ.**

**ಪಿ–2/ಪಿ–3 ವಿಲೇವಾರಿ ಮತ್ತು ಪಿ+1 ಮತಗಟ್ಟೆ ಸಿಬ್ಬಂದಿ ತಂಡಗಳ ತಲುಪುವಿಕೆಗಾಗಿ ಮಾದರಿ ಕಾರ್ಯವಿಧಾನ (ಎಸ್‌ಒಪಿ)**

- ಮತಗಟ್ಟೆ ಸಿಬ್ಬಂದಿ ತಂಡಗಳಿಗಾಗಿ ಹಾಗೂ ಪಿ–2/ಪಿ–3 ಮತದಾನ ಕೇಂದ್ರಗಳಿಗೆ ವಿಲೇವಾರಿ ಮಾಡುವ ಇವಿಎಂಗಳು ಹಾಗೂ ವಿವಿಪ್ಯಾಟ್‌ಗಳಿಗಾಗಿ ಒಂದು ಕೇಂದ್ರಬಿಂದುವಿನಲ್ಲಿರುವ ಸರ್ಕಾರಿ ಕಟ್ಟಡವನ್ನು ಮೀಸಲಿಡುವುದು ಹಾಗೂ ರಿಟರ್ನಿಂಗ್ ಅಧಿಕಾರಿಯು ಅದನ್ನು ಎಲ್ಲಾ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳಿಗೆ ಲಿಖಿತದಲ್ಲಿ ತಿಳಿಸುವುದು. ಅಂಥ ಕೇಂದ್ರ ಬಿಂದುವಿನ ಸ್ಥಳಗಳಿಗೆ ಪೊಲೀಸ್ ಠಾಣೆಗಳನ್ನು ಬಳಸಬಾರದು.
- ಪಿ–2/ಪಿ–3 ಮತದಾನ ಕೇಂದ್ರಗಳ ಇವಿಎಮ್‌ಗಳು ಹಾಗೂ ವಿವಿಪ್ಯಾಟ್‌ಗಳನ್ನು ಸಂಗ್ರಹಿಸಿಡುವುದಕ್ಕಾಗಿ ಗೊತ್ತುಪಡಿಸಿರುವ ಈ ಸರ್ಕಾರಿ ಕಟ್ಟಡಗಳನ್ನೇ ಭದ್ರತಾ ಕೊಠಡಿಯಾಗಿ ಮೀಸಲಿರಿಸಬೇಕು. ಎಲ್ಲಾ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಸದರಿ ಭದ್ರತಾ ಕೊಠಡಿಯಲ್ಲಿಟ್ಟು ಸೆಕ್ಟರ್ ಅಧಿಕಾರಿಗಳ ಹಾಜರಿಯಲ್ಲಿ ಸೀಲ್ ಮಾಡುವುದು ಮತ್ತು ಈ ಎಲ್ಲ ಪ್ರಕ್ರಿಯೆಗಳನ್ನು ವಿಡಿಯೋ ಚಿತ್ರೀಕರಣ ಮಾಡುವುದು. ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳಿಗೆ, ಅವರು ಬಯಸಿದಲ್ಲಿ ಇಡೀ ಪ್ರಕ್ರಿಯೆಯನ್ನು ವೀಕ್ಷಿಸಲು ಅವರ ಪ್ರತಿನಿಧಿಯನ್ನು ನಾಮನಿರ್ದೇಶಿಸುವಂತೆ ಅನುಮತಿಸುವುದು.
- ಒಂದಕ್ಕಿಂತ ಹೆಚ್ಚು ವಿಧಾನಸಭಾ ವಿಭಾಗವನ್ನು ಒಳಗೊಂಡಿರುವ ಸಂದರ್ಭದಲ್ಲಿ, ಸದರಿ ಭದ್ರತಾ ಕೊಠಡಿಯ ಪ್ರತಿಯೊಂದು ವಿಧಾನಸಭಾ ವಿಭಾಗಕ್ಕಾಗಿ ಡಬಲ್ ಲಾಕ್ ವ್ಯವಸ್ಥೆ/ಸೀಲ್‌ಗಳು, ಇತ್ಯಾದಿಯಿಂದ ಸೂಕ್ತ ರೀತಿಯಲ್ಲಿ ಭದ್ರವಾಗಿಸಬಹುದಾದಂಥ ದೃಢವಾದ ವಿಭಜನಾ ಗೋಡೆಯನ್ನು ರಚಿಸುವುದು. ಯಾವುದೇ ಸಂದರ್ಭಗಳಲ್ಲಿಯೂ ಒಂದು ವಿಧಾನಸಭಾ ವಿಭಾಗದ ಯೂನಿಟ್‌ಗಳನ್ನು ಇನ್ನೊಂದು ವಿಧಾನಸಭಾ ವಿಭಾಗದ ಯೂನಿಟ್‌ಗಳೊಂದಿಗೆ ಒಂದೇ ಭದ್ರತಾ ಕೊಠಡಿಯಲ್ಲಿ ಮಿಶ್ರಣ ಮಾಡಿ ಇಡುವಂತಿಲ್ಲ.
- ಸದರಿ ಭದ್ರತಾ ಕೊಠಡಿಯನ್ನು ತೆರೆಯುವುದಕ್ಕೆ ಹಾಗೂ ಮುಚ್ಚುವುದಕ್ಕಾಗಿ ಒಂದು ಲಾಗ್–ಬುಕ್ಕನ್ನು ನಿರ್ವಹಿಸುವುದು.
- ಮತಗಟ್ಟೆ ಸಿಬ್ಬಂದಿ ತಂಡಗಳ ಪಿ+1 ಆಗಮನಕ್ಕಾಗಿ ಮೇಲೆ ಹೇಳಿದ ಕಾರ್ಯವಿಧಾನವನ್ನು ಅನುಸರಿಸುವುದು.ಮತ

ಹಾಕಲಾದ ಇವಿಎಮ್‌ಗಳನ್ನು ಸಂಗ್ರಹಿಸಲಾಗಿರುವ ಮಧ್ಯಂತರ ಭದ್ರತಾ ಕೊಠಡಿಗೆ ಕನಿಷ್ಠ ಅರ್ಧ ತುಕಡಿಯ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ ರಕ್ಷಣೆಯನ್ನು ಒದಗಿಸತಕ್ಕದ್ದು.

**ಸೂಚನೆ:** ವಿಲೇವಾರಿ ಸಮಯದಲ್ಲಿ ಮತ್ತು ಮತದಾನ ಕೇಂದ್ರದಲ್ಲಿ ಅಣಕು ಮತದಾನದ ಮುಂಚೆ ಯಾವುದೇ ಕಾರಣಕ್ಕೂ ವಿವಿಪ್ಯಾಟ್ ಅನ್ನು ಪರೀಕ್ಷಿಸಬಾರದು ಎಂದು ಮತದಾನ ತಂಡಕ್ಕೆ ಸೂಚನೆ ನೀಡುವುದು.

# ಅಧ್ಯಾಯ – 10

## ಮತದಾನ ಕೇಂದ್ರಗಳಲ್ಲಿ ಬಳಸಿದ ಮತದಾನದ ಅಂಕಣಗಳು (ವೋಟಿಂಗ್ ಕಂಪಾರ್ಟ್‌ಮೆಂಟ್)

ಮತದಾನ ಮಾಡುವಾಗ ಮತದ ರಹಸ್ಯವನ್ನು ಕಾಪಾಡುವ ಹಾಗೂ ಮತದಾನದ ಅಂಕಣಗಳ ಬಳಕೆಯ ಏಕರೂಪತೆಯನ್ನು ಕಾಪಾಡುವ ದೃಷ್ಟಿಯಿಂದ ಮತದಾನ ಕೇಂದ್ರಗಳಲ್ಲಿ ಮತದಾನದ ಅಂಕಣಗಳನ್ನು ಬಳಸುವುದಕ್ಕಾಗಿ ಈ ಕೆಳಕಂಡ ಸೂಚನೆಗಳನ್ನು ಅನುಸರಿಸುವುದು:–

ಎ. ಮತದಾನದ ಅಂಕಣಗಳು ಮಡಿಕೆಗಳಿರುವ ಬೂದುಬಣ್ಣದ ಅಪಾರದರ್ಶಕವಾದ ಮತ್ತು ಮರುಬಳಕೆಯಾಗಬಲ್ಲ ಪ್ಲಾಸ್ಟಿಕ್ ಹಾಳೆ (ಫ್ಲೆಕ್ಸ್–ಬೋರ್ಡ್) ಮಾತ್ರ ಆಗಿರಬೇಕು.ಮತದಾನದ ಅಂಕಣವನ್ನು ಮಾಡುವುದಕ್ಕಾಗಿ ಬಳಸುವ ಮಡಿಕೆಗಳಿರುವ ಫ್ಲೆಕ್ಸ್‌ಫಲಕದ ಗಾತ್ರವು 3 ಎಂಎಂ ಆಗಿರತಕ್ಕದ್ದು.

ಬಿ. ಮತದಾನದ ಅಂಕಣವು ಮೂರು ಮಡಿಕೆಗಳನ್ನು ಹೊಂದಿದ್ದು, ಪ್ರತಿ ಮಡಿಕೆಯು 24"24"30 (ಉದ್ದಅಗಲಎತ್ತರ) ಗಳ ಆಯಾಮಗಳನ್ನು ಹೊಂದಿರಬೇಕು. 30"ಗಳಷ್ಟು ಅಂಕಣವನ್ನು ಎತ್ತರಿಸುವುದು ಕಡ್ಡಾಯವಾಗಿರುತ್ತದೆ.

ಸಿ. ಮತದಾನದ ಅಂಕಣಗಳ ಎಲ್ಲಾ ಮೂರು ಬದಿಗಳಲ್ಲಿ ಅನುಬಂಧ–20 ರಲ್ಲಿ ಸೂಚಿಸಿರುವಂತೆ ಸ್ವಯಂ ಅಂಟಿಕೊಳ್ಳುವ ಸ್ಟಿಕ್ಕರ್‌ಗಳನ್ನು ಅಳವಡಿಸುವುದು.

ಡಿ. ಮತದಾನದ ಅಂಕಣವನ್ನು ಇರಿಸಲಾಗುವ ಮೇಜಿನ ಎತ್ತರವು ಅನುಬಂಧ–20 ರಲ್ಲಿ ಸೂಚಿಸಿರುವಂತೆ 30"ಇರಬೇಕು.

ಇ. ಮತದಾನಕ್ಕಾಗಿ ಒಂದಕ್ಕಿಂತ ಹೆಚ್ಚಿನ ಸಂಖ್ಯೆಯ ಬ್ಯಾಲೆಟಿಂಗ್ ಯೂನಿಟ್‌ಗಳನ್ನು ಬಳಸಲಾಗಿದ್ದಲ್ಲಿ, ಪ್ರತಿಯೊಂದು ಹೆಚ್ಚುವರಿ ಬ್ಯಾಲೆಟಿಂಗ್ ಯೂನಿಟ್‌ಗಾಗಿ ಮತದಾನದ ಅಂಕಣದ ಅಗಲವನ್ನು 12"ಗಳಷ್ಟು ಹೆಚ್ಚಿಸುವುದು. ಹೆಚ್ಚುವರಿ ಬ್ಯಾಲೆಟಿಂಗ್ ಯೂನಿಟ್‌ಗಳನ್ನು ಬಳಸಿರುವಲ್ಲಿ ಅನುಬಂಧ–20 ರಲ್ಲಿ ಸೂಚಿಸಿರುವಂತೆ ಅದನ್ನು ವ್ಯವಸ್ಥೆಗೊಳಿಸುವುದು. ಮತದಾನದ ಅಂಕಣದಲ್ಲಿ ಇವಿಎಂ ಅನ್ನು ಇರಿಸುವಾಗ ಮತದಾನದ ಗೌಪ್ಯತೆಯು ಉಲ್ಲಂಘಿತವಾಗದೇ ಇರುವುದನ್ನು ಖಚಿತಪಡಿಸುವುದು ಹಾಗೂ ಅದು ಮತದಾನ ಕೇಂದ್ರದ ಯಾವುದೇ ಕಿಟಕಿ ಅಥವಾ ಬಾಗಿಲಿನ ಸಮೀಪವಿರದಂತೆ ನೋಡಿಕೊಳ್ಳುವುದು.

ಎಫ್. ಬ್ಯಾಲೆಟಿಂಗ್ ಯೂನಿಟ್/ವಿವಿಪ್ಯಾಟ್‌ನ ಪರಸ್ಪರ ಸಂಪರ್ಕ ಒದಗಿಸುವ ಕೇಬಲನ್ನು, ಮತದಾನ ಕೇಂದ್ರದೊಳಗೆ ಬರುವ ಮತದಾರರ ಚಲನೆಗೆ ಅಡ್ಡಿಯಾಗದಂತೆ ಹಾಗೂ ಅವುಗಳನ್ನು ಕಾಲಿಗೆ ತೊಡಕಾಗದಂತೆ ಅಥವಾ ಎಡವದಂತೆ ಹಾಕಬೇಕು. ಆದರೆ ಆ ಕೇಬಲ್ಲಿನ ಸಂಪೂರ್ಣ ಉದ್ದಳತೆಯು ಕಾಣುವಂತಿರಬೇಕು ಹಾಗೂ ಯಾವುದೇ ಸಂದರ್ಭದಲ್ಲಿಯೂ ಅದನ್ನು ಯಾವುದೇ ಬಟ್ಟೆಯಿಂದ ಅಥವಾ ಮೇಜಿನ ಕೆಳಗೆ ಮರೆಮಾಚಿರಬಾರದು.

ಜಿ. ಬ್ಯಾಲೆಟಿಂಗ್ ಯೂನಿಟ್, ಕಂಟ್ರೋಲ್ ಯೂನಿಟ್ ಹಾಗೂ ವಿವಿಪ್ಯಾಟ್‌ಗಳ ಪರಸ್ಪರ ಸಂಪರ್ಕಿಸುವ ವೈರ್‌ಗಳನ್ನು, ಅವುಗಳು ಗಾಳಿಗೆ ತೂಗಾಡದ ರೀತಿಯಲ್ಲಿ ಮತ್ತು ತೂಗಾಡುವ ವೈರ್‌ಗಳ ಭಾರದಿಂದ ಬ್ಯಾಲೆಟಿಂಗ್ ಯೂನಿಟ್ ವಿವಿಪ್ಯಾಟ್‌ಗಳನ್ನು ಸಂಪರ್ಕ ಸ್ವಿಚ್‌ಗೆ ಯಾವುದೇ ಪರಿಣಾಮ ಉಂಟಾಗದಂತೆ ಅರ್ಧ ಇಂಚಿನ ಅಗಲದ "ಪಾರದರ್ಶಕ ಅಂಟಿನ ಪಟ್ಟಿ"ಯಿಂದ ತೂಗಾಡುವ ವೈರ್‌ಗಳನ್ನು ಮೇಜಿನ ಕಾಲಿಗೆ ಅಂಟಿಸುವುದು.

**ಹೆಚ್ಚುವರಿ ನಿರ್ದೇಶನಗಳು**

i) ಮತದಾನ ಕೇಂದ್ರಗಳಲ್ಲಿ ಸೂಕ್ತ ವಿದ್ಯುತ್ ವ್ಯವಸ್ಥೆಗಳನ್ನು ಮಾಡುವುದು.

ii) ಮತದಾನದ ಅಂಕಣಗಳ ಮೇಲ್ಭಾಗದಲ್ಲಿ ಅಥವಾ ಮುಂಭಾಗದಲ್ಲಿ ಹೈ ವೋಲ್ಟೇಜ್‌ನ ಪ್ರಖರವಾದ ಬಲ್ಬ್‌ಗಳು/ ಟ್ಯೂಬ್‌ಲೈಟ್‌ಗಳನ್ನು ಹಾಕಬಾರದು.


iii) ಮತದಾನದ ಅಂಕಣಗಳ ಒಳಗೆ ಸಾಕಷ್ಟು ಬೆಳಕಿನ ವ್ಯವಸ್ಥೆ ಇರುವಂಥ ರೀತಿಯಲ್ಲಿ ಹಾಗೂ ಮತದಾನದ ಅಂಕಣದ ಮೇಲೆ ಅಥವಾ ಮುಂಭಾಗದಲ್ಲಿ ಯಾವುದೇ ನೇರ ಬೆಳಕು ಬೀಳದಂಥ ರೀತಿಯಲ್ಲಿ ಮತದಾನದ ಅಂಕಣವನ್ನು ಇಡಬೇಕು.

**ಸೂಚನೆ:** ಮೇಲೆ ಗೊತ್ತುಪಡಿಸಿದಂತೆ ಮತದಾನದ ಅಂಕಣದ ಅಳತೆಯು ವಿವಿಪ್ಯಾಟ್ ಬಳಕೆಯ ಸ್ಥಳಾವಕಾಶವನ್ನು ಒಳಗೊಂಡಿರಬೇಕು.

# ಅಧ್ಯಾಯ – 11

# ಮತದಾನದ ದಿನ

## 11.1 ಮತದಾನ ಕೇಂದ್ರದ ವಿನ್ಯಾಸ




## 11.2 ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ವ್ಯವಸ್ಥೆಗೊಳಿಸುವುದು




ಎ. ಸಿಯು – ಮತದಾನ ಅಧಿಕಾರಿ (ಪಿಒ3)

ಬಿ. ಬಿಯು + ವಿವಿಪ್ಯಾಟ್ – ವೋಟಿಂಗ್ ಕಂಪಾರ್ಟ್‌ಮೆಂಟ್.

## 11.3 ಮತದಾನ ದಿನದಂದು ಜಿಲ್ಲಾ ಚುನಾವಣಾ ಅಧಿಕಾರಿ ಮತ್ತು ಪ್ರಿಸೈಡಿಂಗ್ ಅಧಿಕಾರಿಯ ಜವಾಬ್ದಾರಿಗಳು / ಹೊಣೆಗಾರಿಕೆಗಳು

ಪ್ರಿಸೈಡಿಂಗ್ ಆಫೀಸರ್‌ಗಳು ಮತ್ತು ಇತರೆ ಮತದಾನ ಸಿಬ್ಬಂದಿಯ ವರ್ತನೆ, ಮತಗಳ ರಹಸ್ಯತೆಗೆ ಅನುಗುಣವಾಗಿದೆ ಎಂದು ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ, ಮುಂದಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಅನುಸರಿಸತಕ್ಕದ್ದು:–

### 11.3.1 ಪ್ರಿಸೈಡಿಂಗ್ ಆಫೀಸರ್‌ಗೆ ಡಮ್ಮಿ ಬ್ಯಾಲೆಟ್ ಪೇಪರ್‌ನ ಪೂರೈಕೆ

ಎ) ರವಾನೆ ಸಮಯದಲ್ಲಿ ಇತರೆ ಮತದಾನ ಸಾಮಗ್ರಿಗಳ ಜೊತೆಗೆ ಎಲ್ಲ ಪ್ರಿಸೈಡಿಂಗ್ ಆಫೀಸರ್‌ಗಳಿಗೆ ಕಾರ್ಡ್‌ಬೋರ್ಡ್

(ನೈಜ ಗಾತ್ರ) ಮೇಲೆ ಅಂಟಿಸಲಾದ ಇವಿಎಂ ಬ್ಯಾಲೆಟಿಂಗ್ ಯೂನಿಟ್‌ನ ಮುದ್ರಿತ ನಮೂನೆಯನ್ನು ಪೂರೈಸುವುದು.

ಬಿ) ಅಂಥ ಮಾದರಿ ಬ್ಯಾಲೆಟ್ ಅನ್ನು ಮುದ್ರಿಸುವಾಗ, ಡಮ್ಮಿ ಹೆಸರು ಮತ್ತು ಡಮ್ಮಿ ಚಿಹ್ನೆಗಳು ಬಳಕೆಯಲ್ಲಿರದ, ಬಳಸದಿರುವ ಮತ್ತು ಯಾವುದೇ ನಿಜವಾದ ಹೆಸರುಗಳು ಅಥವಾ ಚಿಹ್ನೆಗಳಿಲ್ಲದಿರುವವುಗಳಾಗಿವೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು ಹಾಗೂ 'ನೀಲಿ ಬಟನ್'"ಹಸಿರು ಲೈಟ್' ಮತ್ತು 'ಕೆಂಪು ಲೈಟ್' ಮುಂತಾದವುಗಳು ಬಣ್ಣಗಳಲ್ಲಿ ಸ್ಪಷ್ಟವಾಗಿ ಕಾಣುವಂತೆ ಮುದ್ರಿಸಬೇಕು.

### 11.3.2. ಪ್ರಿಸೈಡಿಂಗ್ ಆಫೀಸರ್‌ನ ಜವಾಬ್ದಾರಿಗಳು

ಪ್ರಿಸೈಡಿಂಗ್ ಆಫೀಸರ್‌ಗಳು, ಮತದಾನ ಕೇಂದ್ರದಲ್ಲಿ ಮತದಾನ ನಡೆಸುವುದಕ್ಕೆ ಜವಾಬ್ದಾರರಾಗಿರುತ್ತಾರೆ ಮತ್ತು ಅವರು ಮತದಾನ ಕಾರ್ಯವಿಧಾನಗಳ ಉತ್ತಮ ಜ್ಞಾನ ಹೊಂದಿರಬೇಕು.

ಎ) ಯಾರೇ ಮತದಾರನು, ಇವಿಎಂ ಉಪಯೋಗಿಸಿ ಮತ ಚಲಾಯಿಸಲು ಸಹಾಯ ಕೇಳಿದಾಗಲೆಲ್ಲ ಅಥವಾ ಅಸಮರ್ಥತೆಯನ್ನು ವ್ಯಕ್ತ ಪಡಿಸಿದಾಗಲೆಲ್ಲ, ಮತದಾರನು ತಿಳಿದುಕೊಳ್ಳಲು ಸಾಧ್ಯವಾಗುವಂಥ ರೀತಿಯಲ್ಲಿ ಇವಿಎಂ ಬ್ಯಾಲೆಟ್‌ನ ಕಾರ್ಡ್‌ಬೋರ್ಡ್ ಮಾದರಿಯನ್ನು ಬಳಸಿ ಮತದಾನ ಪ್ರಕ್ರಿಯೆಯನ್ನು ಮತದಾರನಿಗೆ ವಿವರಿಸುವುದು. ಇದನ್ನು, ಮತದಾನ ಏಜೆಂಟರುಗಳ ಉಪಸ್ಥಿತಿಯಲ್ಲಿ ಮಾತ್ರ ಮತದಾನ ಕಂಪಾರ್ಟ್‌ಮೆಂಟ್‌ನ ಹೊರಗಡೆ ಮಾಡತಕ್ಕದ್ದು.

ಬಿ) ಯಾರೇ ಮತದಾರ ಮತದಾನ ಕಂಪಾರ್ಟ್‌ಮೆಂಟ್‌ನ ಒಳಗಡೆ ಇಲ್ಲದಿರುವಾಗ, ಕಾಲಕಾಲಕ್ಕೆ ಮತದಾನ ಏಜೆಂಟರುಗಳ ಉಪಸ್ಥಿತಿಯಲ್ಲಿ ಬಿಯುನ ಪರಿಶೀಲನೆಯನ್ನು ಖಚಿತಪಡಿಸಿಕೊಳ್ಳುವುದು.

ಸಿ) ಮತದಾನ ಕೇಂದ್ರಗಳಿಗೆ ಹಂಚಿಕೆ ಮಾಡಲಾದ ಎಲ್ಲ ಸಿಯುಗಳು/ಬಿಯುಗಳು/ವಿವಿಪ್ಯಾಟ್‌ಗಳು ಹಾಗೂ ಮೀಸಲಿರಿಸಿದ ಯಂತ್ರಗಳನ್ನು, ಅಭ್ಯರ್ಥಿಗಳು/ಏಜೆಂಟುಗಳ ಸಮ್ಮುಖದಲ್ಲಿ ಭದ್ರತಾ ಕೊಠಡಿಯಲ್ಲಿ ಇಡತಕ್ಕದ್ದು.

ಡಿ) ಮತದಾನ ಕೇಂದ್ರದಲ್ಲಿ ಮತದಾನ ಸಿಬ್ಬಂದಿಯ ವರ್ತನೆ ಬಗೆಗಿನ ಎಲ್ಲ ದೂರುಗಳನ್ನು ವಿಚಾರಣೆ ಮಾಡುವುದು. ವೀಕ್ಷಕರು ಅಂಥ ದೂರುಗಳು ಮತ್ತು ವರ್ತನೆಗಳನ್ನು ಗಂಭೀರವಾಗಿ ತೆಗೆದುಕೊಳ್ಳುವಂತೆ ಅಥವಾ ಅಂಥ ಆಪಾದನೆಗಳ ವಿಚಾರಣೆ ಮಾಡುವಂತೆ ಸೂಚಿಸಿರುತ್ತಾರೆ ಮತ್ತು ಆಯೋಗಕ್ಕೆ ವರದಿಗಳನ್ನು ಒಪ್ಪಿಸುತ್ತಾರೆ.

ಇ) ಯಾರೇ ಮತದಾರನು, ಪ್ರಿಂಟರ್ ಸಂಪರ್ಕ ಕಲ್ಪಿಸಿರುವ ಬ್ಯಾಲೆಟಿಂಗ್ ಯೂನಿಟ್ ಮೇಲೆ ಸಂಬಂಧಿಸಿದ ನೀಲಿ (ಅಭ್ಯರ್ಥಿ) ಬಟನ್ ಅನ್ನು ಒತ್ತಿದ ಮೇಲೆ ಪ್ರಿಂಟರ್ ಮೂಲಕ ಮುದ್ರಿತವಾದ ವಿವಿಪ್ಯಾಟ್ ಪೇಪರ್ ಸ್ಲಿಪ್‌ನಲ್ಲಿ ಅಭ್ಯರ್ಥಿಯ ವಿವರಗಳು ಮತ್ತು /ಅಥವಾ ಆ ಅಭ್ಯರ್ಥಿಯ ಚಿಹ್ನೆ ತಪ್ಪಾಗಿ ಮುದ್ರಿತವಾಗಿರುವ ಬಗ್ಗೆ ಆಪಾದಿಸಿದರೆ, ಅವನಿಗೆ 'ಘೋಷಣಾ ಪ್ರಪತ್ರ' (ಅನುಬಂಧ–23)ವನ್ನು ಒದಗಿಸುವುದು ಮತ್ತು ಚುನಾವಣೆಗಳನ್ನು ನಡೆಸುವ ನಿಯಮಗಳು, 1961ರ 49ಎಂಎ ನಿಯಮದ ಅನುಸಾರವಾಗಿ ಕ್ರಮ ತೆಗೆದುಕೊಳ್ಳುವುದು.

### 11.3.3 ಮತದಾನ ಅಧಿಕಾರಿ–I ಯ ಜವಾಬ್ದಾರಿಗಳು/ಹೊಣೆಗಾರಿಕೆಗಳು

ಮೊದಲನೆ ಮತದಾರ ನಮೂನೆ 17ಎ (ಮತದಾರರ ರಿಜಿಸ್ಟರ್) ನಲ್ಲಿ ಸಹಿ ಮಾಡುವ ಮುಂಚೆ, ಮತದಾನಾಧಿಕಾರಿ–ಖ ಯು, ಪ್ರಿಸೈಡಿಂಗ್ ಆಫೀಸರ್‌ರಿಂದ ಪರಿಶೀಲನೆ ಮಾಡಿಸತಕ್ಕದ್ದು ಮತ್ತು "ಕಂಟ್ರೋಲ್ ಯೂನಿಟ್‌ನಲ್ಲಿ ಟೋಟಲ್ ಅನ್ನು ಪರಿಶೀಲಿಸಲಾಗಿ ಸೊನ್ನೆ ಎಂದು ಕಂಡುಬಂದಿರುತ್ತದೆ" ಎಂದು ನಮೂನೆ 17ಎ ನಲ್ಲಿ ಇಂಕ್‌ನಲ್ಲಿ ದಾಖಲಿಸತಕ್ಕದ್ದು.

## 11.4. ಮತದಾನದ ದಿನದಂದು ಅಣಕು ಮತದಾನ

1. ಇಬ್ಬರು ಅಥವಾ ಹೆಚ್ಚು ಮತದಾನದ ಏಜೆಂಟರುಗಳು ಲಭ್ಯವಿದ್ದರೆ, ನಿಗದಿಪಡಿಸಿದ ಮತದಾನ ಸಮಯದ 90 ನಿಮಿಷಗಳ ಮುಂಚೆ ಅಣಕು ಮತದಾನವನ್ನು ಪ್ರಾರಂಭಿಸುವುದು

2. ಒಬ್ಬರು ಅಥವಾ ಯಾರೇ ಮತದಾನ ಏಜೆಂಟರುಗಳು ಲಭ್ಯವಿಲ್ಲದಿದ್ದರೆ, 15 ನಿಮಿಷಗಳವರೆಗೆ ಕಾಯುವುದು

3. ನೈಜ ಮತದಾನ ಕಂಪಾರ್ಟ್‌ಮೆಂಟ್‌ನಲ್ಲಿ ಬಿಯು ಮತ್ತು ವಿವಿಪ್ಯಾಟ್ ಅನ್ನು ಇಡುವುದು. ಇವುಗಳನ್ನು ಅಣಕು ಮತದಾನದ ತರುವಾಯ ಬೇರೆ ಸ್ಥಳದಲ್ಲಿ ಇಡಬಾರದು.

4. ಪ್ರಿಸೈಡಿಂಗ್ ಆಫೀಸರ್ / ಮತಗಟ್ಟೆ ಅಧಿಕಾರಿ (ಸಿಯುನ ಮೇಲುಸ್ತುವಾರಿ) ಯ ಮೇಜಿನ ಮೇಲೆ ಕಂಟ್ರೋಲ್ ಯೂನಿಟ್ ಅನ್ನು ಇಡುವುದು.

5. ಬಿಯು ಕೇಬಲ್ ಅನ್ನು ವಿವಿಪ್ಯಾಟ್‌ನೊಂದಿಗೆ ಮತ್ತು ವಿವಿಪ್ಯಾಟ್ ಕೇಬಲ್ ಅನ್ನು ಕಂಟ್ರೋಲ್ ಯೂನಿಟ್‌ನೊಂದಿಗೆ ಸಂಪರ್ಕ ಕಲ್ಪಿಸುವುದು.

6. ವಿವಿಪ್ಯಾಟ್‌ನ ಪೇಪರ್ ರೋಲ್ ನಾಬ್ ಅನ್ನು (ಕೆಲಸದ ಸ್ಥಿತಿ) ಅನ್‌ಲಾಕ್ ಮಾಡುವುದು.

7. ವಿವಿಪ್ಯಾಟ್ ಖಾಲಿ ಇದೆ ಎಂದು ತೋರಿಸುವುದು

8. ಕಂಟ್ರೋಲ್ ಯೂನಿಟ್‌ನ ಸ್ವಿಚ್ ಆನ್ ಮಾಡುವುದು

9. ಕಂಟ್ರೋಲ್ ಯೂನಿಟ್‌ನಲ್ಲಿ ಯಾವುದೇ ಮತವಿಲ್ಲ ಎಂದು ಪ್ರದರ್ಶಿಸುವುದು

10. ಕನಿಷ್ಠಪಕ್ಷ 50 ಮತಗಳನ್ನು ಚಲಾಯಿಸುವುದು ಮತ್ತು ಪ್ರತಿಯೊಬ್ಬರಿಗೆ ನೀಡಲಾದ ಮತಗಳ ಸಂಖ್ಯೆಯನ್ನು ದಾಖಲಿಸುವುದು (ನೋಟಾ ಸೇರಿದಂತೆ ಸ್ಪರ್ಧಿಸಿರುವ ಪ್ರತಿಯೊಬ್ಬ ಅಭ್ಯರ್ಥಿಗಳಿಗೆ ದಾಖಲಾದ ಮತಗಳನ್ನು ಖಚಿತಪಡಿಸಿಕೊಳ್ಳುವುದು)

11. ಅಣಕು ಮತದಾನದ ಮತಗಳ ತರುವಾಯ, ಕಂಟ್ರೋಲ್ ಯೂನಿಟ್‌ನ 'ಕ್ಲೋಸ್' ಬಟನ್ ಅನ್ನು ಒತ್ತುವುದು

12. ತದನಂತರ, ಅಣಕು ಮತದಾನ ಫಲಿತಾಂಶವನ್ನೆ ದಾಖಲಾತಿಯೊಂದಿಗೆ ತಾಳೆಯಾಗುವುದನ್ನು ಖಚಿತಪಡಿಕೊಳ್ಳಲು ಕಂಟ್ರೋಲ್ ಯೂನಿಟ್‌ನ 'ರಿಸಲ್ಟ್' ಬಟನ್ ಅನ್ನು ಒತ್ತುವುದು

13. ವಿವಿಪ್ಯಾಟ್‌ನಿಂದ ಅಣಕು ಮತದಾನದ ವಿವಿಪ್ಯಾಟ್ ಸ್ಲಿಪ್‌ಗಳನ್ನು ತೆಗೆದು ಕಂಟ್ರೋಲ್ ಯೂನಿಟ್ ಫಲಿತಾಂಶದೊಂದಿಗೆ ತಾಳೆ ಮಾಡುವುದು

14. ಕಂಟ್ರೋಲ್ ಯೂನಿಟ್‌ನಿಂದ ಅಣಕು ಮತದಾನದ ಫಲಿತಾಂಶವನ್ನು ಅಳಿಸಲು ಕಂಟ್ರೋಲ್ ಯೂನಿಟ್‌ನ 'ಕ್ಲಿಯರ್' ಬಟನ್ ಅನ್ನು ಒತ್ತುವುದು ಮತ್ತು ಮತದಾನ ಏಜೆಂಟರುಗಳಿಗೆ ತೋರಿಸುವುದು

15. ಅಣಕು ಮತದಾನ ವಿವಿಪ್ಯಾಟ್ ಸ್ಲಿಪ್‌ಗಳ ಮೇಲೆ 'ಅಣಕು ಮತದಾನ ಸ್ಲಿಪ್' ಎಂಬ ಮುದ್ರೆಯನ್ನು ಒತ್ತುವುದು

16. ಅಣಕು ಮತದಾನ ವಿವಿಪ್ಯಾಟ್ ಸ್ಲಿಪ್‌ಗಳನ್ನು ಕಪ್ಪು ಲಕೋಟೆಯಲ್ಲಿ ಅಥವಾ ಜೈವಿಕವಾಗಿ ಕರಗಬಹುದಾದ ಅಪಾರದರ್ಶಕ ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ನಂತರ ಪ್ಲಾಸ್ಟಿಕ್ ಚೀಲವನ್ನು ಗುಲಾಬಿ ಬಣ್ಣದ ಕಾಗದ ಸೀಲ್ ನಿಂದ ಮೊಹರು ಮಾಡುವುದು

17. ಕಂಟ್ರೋಲ್ ಯೂನಿಟ್‌ನ ಸ್ವಿಚ್ ಆಫ್ ಮಾಡಿ, ಹಸಿರು ಪೇಪರ್ ಸೀಲ್, ಸ್ಪೆಷಲ್ ಟ್ಯಾಗ್ ಮತ್ತು ಔಟರ್ (ಹೊರಗಿನ) ಪೇಪರ್ ಸ್ಟ್ರಿಪ್ ಸೀಲ್‌ನಿಂದ ಕಂಟ್ರೋಲ್ ಯೂನಿಟ್ ಅನ್ನು ಮೊಹರು ಮಾಡುವುದು.

18. ವಿವಿಪ್ಯಾಟ್‌ನ ಖಾಲಿ ಡ್ರಾಪ್ ಬಾಕ್ಸ್ ಅನ್ನು ತೋರಿಸುವುದು ಮತ್ತು ನಂತರ ಅಡ್ರೆಸ್ ಟ್ಯಾಗ್‌ನಿಂದ ಡ್ರಾಪ್ ಬಾಕ್ಸ್‌ನ್ನು ಮೊಹರು ಮಾಡುವುದು

19. ಜಾಗರೂಕತೆಯಿಂದ ಪ್ರಿಸೈಡಿಂಗ್ ಆಫೀಸರ್‌ಗಳ ವರದಿ ಅನುಬಂಧ–21 ರ ಅಣಕು ಮತದಾನ ಪ್ರಮಾಣಪತ್ರ ಭಾಗ–I ನ್ನು ಭರ್ತಿ ಮಾಡುವುದು

20. ನೈಜ ಮತದಾನಕ್ಕಗಿ ಕಂಟ್ರೋಲ್ ಯೂನಿಟ್‌ನ ಸ್ವಿಚ್ ಆನ್ ಮಾಡುವುದು ಮತ್ತು "ಟೋಟಲ್" ಬಟನ್ ಅನ್ನು ಒತ್ತಿ 0(ಸೊನ್ನೆ) ಮತಗಳು ಎಂಬುದನ್ನು ಖಚಿತಪಡಿಸುವುದು.

21. ನೈಜ ಮತದಾನಕ್ಕಾಗಿ ಕಂಟ್ರೋಲ್ ಯೂನಿಟ್‌ನ ಸ್ವಿಚ್ ಆನ್ ಮಾಡುವುದು

### 11.5 ಇವಿಎಂ/ವಿವಿಪ್ಯಾಟ್ ಅನ್ನು ಬದಲಿಸುವ ಸಂದರ್ಭದಲ್ಲಿ ಅಣಕು ಮತದಾನ

- ಅಣಕು ಮತದಾನದ ಅವಧಿಯಲ್ಲಿ ಸಿಯು ಅಥವಾ ಬಿಯು ಅಥವಾ ವಿವಿಪ್ಯಾಟ್ ಸಮರ್ಪಕವಾಗಿ ಕಾರ್ಯನಿರ್ವಹಿಸದಿರುವ ಸಂದರ್ಭದಲ್ಲಿ, ಸಂಬಂಧಪಟ್ಟ ಘಟಕವನ್ನು ಮಾತ್ರ ಬದಲಿಸುವುದು.
- ನೈಜ ಮತದಾನದ ಅವಧಿಯಲ್ಲಿ ಸಿಯು ಅಥವಾ ಬಿಯು ಸಮರ್ಪಕವಾಗಿ ಕಾರ್ಯನಿರ್ವಹಿಸದಿರುವ ಸಂದರ್ಭದಲ್ಲಿ, ಸಿಯು, ಬಿಯು ಮತ್ತು ವಿವಿಪ್ಯಾಟ್‌ನ ಪೂರ್ತಿ ಸೆಟ್ ಅನ್ನು ಬದಲಿಸುವುದು. ಅಂಥ ಸಂದರ್ಭದಲ್ಲಿ ಅಣಕು ಮತದಾನದಲ್ಲಿ ನೋಟಾ ಸೇರಿದಂತೆ ಸ್ಪರ್ಧಿಸಿರುವ ಪ್ರತಿಯೊಬ್ಬ ಅಭ್ಯರ್ಥಿಗೆ ಒಂದು ಮತವನ್ನು ಮಾತ್ರ ಚಲಾಯಿಸತಕ್ಕದ್ದು ಮತ್ತು ಅಣಕು ಮತದಾನದ ಇತರೆ ಸೂಚನೆಗಳನ್ನು ಅನುಸರಿಸತಕ್ಕದ್ದು.
- ನೈಜ ಮತದಾನದ ಅವಧಿಯಲ್ಲಿ ವಿವಿಪ್ಯಾಟ್ ಸಮರ್ಪಕವಾಗಿ ಕಾರ್ಯನಿರ್ವಹಿಸದಿರುವ ಸಂದರ್ಭದಲ್ಲಿ, ವಿವಿಪ್ಯಾಟ್ ಅನ್ನು ಮಾತ್ರ ಬದಲಿಸುವುದು. ವಿವಿಪ್ಯಾಟ್ ಅನ್ನು ಮಾತ್ರ ಬದಲಿಸಿದ ಸಂದರ್ಭದಲ್ಲಿ ಯಾವುದೇ ಅಣಕು ಮತದಾನದ ಅಗತ್ಯವಿರುವುದಿಲ್ಲ.

### 11.6. ಮತದಾನ ಪ್ರಾರಂಭ ಮತ್ತು ಮತದಾನ ಮುಕ್ತಾಯದ ದಿನಾಂಕ ಮತ್ತು ಸಮಯವನ್ನು ದಾಖಲಿಸುವುದು

ಪ್ರಿಸೈಡಿಂಗ್ ಆಫೀಸರ್‌ರವರು, ಮತದಾನ ಕೇಂದ್ರದಲ್ಲಿ ಅಣಕು ಮತದಾನದ ಮುಕ್ತಾಯದಲ್ಲಿ, ಕಂಟ್ರೋಲ್ ಯೂನಿಟ್‌ನ ಪ್ರದರ್ಶಕದಲ್ಲಿ ತೋರಿಸಲಾದ ದಿನಾಂಕ ಮತ್ತು ಸಮಯ ಮತ್ತು ವಾಸ್ತವಿಕ ದಿನಾಂಕ ಹಾಗೂ ಸಮಯ ಇವೆರಡರ ನಡುವೆ ಯಾವುದೇ ವ್ಯತ್ಯಾಸ ಏನಾದರೂ ಇದ್ದರೆ, ಅಣಕು ಮತದಾನ ಪ್ರಮಾಣಪತ್ರ (ಅನುಬಂಧ–21) ದಲ್ಲಿ ಸಹ ಹಾಗೂ ಪ್ರಿಸೈಡಿಂಗ್ ಆಫೀಸರ್ ಡೈರಿಯಲ್ಲಿ ಸಹ ಪರೀಕ್ಷಿಸತಕ್ಕದ್ದು ಮತ್ತು ಗಮನಿತಕ್ಕದ್ದು.

### 11.7. ಗಂಭೀರ ದೋಷಗಳು


- ಅಣಕು ಮತದಾನದ ನಂತರ ಸಿಯುನ ಕ್ಲೋಸ್ ಬಟನ್ ಅನ್ನು ಒತ್ತದಿರುವುದು.
- ಸಿಯುನ ಅಣಕು ಮತದಾನದ ಫಲಿತಾಂಶವನ್ನು ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳೊಂದಿಗೆ ತಾಳೆ ಮಾಡದಿರುವುದು.
- ವಿವಿಪ್ಯಾಟ್‌ನಿಂದ ಅಣಕು ಮತದಾನ ಪೇಪರ್ ಸ್ಲಿಪ್‌ಗಳನ್ನು ತೆಗೆಯದಿರುವುದು.
- ಕಂಟ್ರೋಲ್ ಯೂನಿಟ್‌ನಿಂದ ಅಣಕು ಮತದಾನದ ದತ್ತಾಂಶವನ್ನು ಅಳಿಸದಿರುವುದು.
- ಮತದಾನ ಕೇಂದ್ರಗಳಲ್ಲಿ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಸಜ್ಜುಗೊಳಿಸುವಾಗ, ವಿವಿಪ್ಯಾಟ್ ಮೇಲೆ ನೇರ ಬೆಳಕು ಬೀಳದ ಹಾಗೆ ಅದನ್ನು ಸೂಕ್ತ ಸ್ಥಾನದಲ್ಲಿಡಬೇಕು.

- ವಿವಿಪ್ಯಾಟ್ ಅನ್ನು ತೆರೆದ ಕಿಟಕಿಯ ಹತ್ತಿರ ಅಥವಾ ನೇರವಾಗಿ ಬಲ್ಬ್‌ನ ಅಥವಾ ಹ್ಯಾಲೋಜನ್

**ಟಿಪ್ಪಣಿ:**

- ಅಣಕು ಮತದಾನದ ಪ್ರಾರಂಭಕ್ಕೆ ಮುಂಚೆ ಹಾಜರಿರುವ ಏಜೆಂಟರುಗಳಿಗೆ ಯಂತ್ರ ಸಂಖ್ಯೆಗಳನ್ನು ತೋರಿಸುವಂತೆ ಪ್ರಿಸೈಡಿಂಗ್ ಆಫೀಸರ್‌ಗೆ ಸಲಹೆ ಕೊಡುವುದು.
- ಪ್ರಿಸೈಡಿಂಗ್ ಆಫೀಸರ್, ಅವನ/ಅವಳ ಡೈರಿಯಲ್ಲಿ ಮತದಾನ ಕೇಂದ್ರದಲ್ಲಿ ಬಳಸಿದ ಸಿಯು, ಬಿಯು ಮತ್ತು ವಿವಿಪ್ಯಾಟ್‌ನ ಸಂಖ್ಯೆ ಮತ್ತು ಕ್ರಮಸಂಖ್ಯೆಯನ್ನು ಬರೆದುಕೊಳ್ಳುವುದು.

## 11.8. ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಮೊಹರು ಮಾಡಲು ಬಳಸಿದ ವಿವಿಧ ರೀತಿಯ ಸೀಲುಗಳು




Various Type of Seals used for Sealing Electronic Voting Machine

**ವಿದ್ಯುನ್ಮಾನ ಮತಯಂತ್ರವನ್ನು ಮೊಹರು ಮಾಡಲು ಬಳಸಿದ ವಿವಿಧ ರೀತಿಯ ಸೀಲುಗಳು**

**ಬಿಯು/ಸಿಯು/ವಿವಿಪ್ಯಾಟ್‌ಗೆ ಸಾಮಾನ್ಯ ಅಡ್ರೆಸ್ ಟ್ಯಾಗ್**


ಎಸ್‌ಆರ್. ಸಂಖ್ಯೆ. 00000000
ಲೋಕಸಭಾ / ವಿಧಾನಸಭಾ ಚುನಾವಣೆ
__________ ಸಂಸದೀಯ / ವಿಧಾನಸಭಾ ಚುನಾವಣಾ ಕ್ಷೇತ್ರದಿಂದ
ಬಿಯು/ಸಿಯು/ವಿವಿಪ್ಯಾಟ್‌ನ ಸಂಖ್ಯೆ. ____________
ಬಳಸಿಕೊಂಡಿರುವ ಮತದಾನ ಕೇಂದ್ರದ ಕ್ರಮಸಂಖ್ಯೆ ಮತ್ತು ಹೆಸರು
__________________
ಮತದಾನದ ದಿನಾಂಕ ________________________

## 11.9. ಮತದಾನದ ದಿನದಂದು ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಮೊಹರು ಮಾಡುವುದು

**ಎ. ಅಣಕು ಮತದಾನದ ತರುವಾಯ ಮತದಾನ ದಿನದಂದು ಮತದಾನ ಕೇಂದ್ರಗಳಲ್ಲಿ,–**

**(i) ಅಣಕು ಮತದಾನದ ಮುದ್ರಿತ ಬ್ಯಾಲೆಟ್ ಸ್ಲಿಪ್‌ಗಳನ್ನು ಹೊಂದಿರುವ ಪ್ಲಾಸ್ಟಿಕ್ ಬಾಕ್ಸ್ ಅನ್ನು ಗುಲಾಬಿ ಪೇಪರ್ ಸೀಲ್‌ನಿಂದ ಮೊಹರು ಮಾಡುವುದು**

**ಮುದ್ರಿತ ಪೇಪರ್ ಸ್ಲಿಪ್‌ಗಳು ಮತ್ತು ವಿವಿಪ್ಯಾಟ್ ಅನ್ನು ಮೊಹರು ಮಾಡುವುದು ಮತ್ತು ಸಂಗ್ರಹಣೆ**




ಪ್ರಿಸೈಡಿಂಗ್ ಆಫೀಸರ್‌ರವರು, ಅಣಕು ಮತದಾನದ ನಂತರ ವಿವಿಪ್ಯಾಟ್ ಯೂನಿಟ್‌ನಲ್ಲಿನ ಡ್ರಾಪ್ ಬಾಕ್ಸ್ ನಿಂದ ಎಲ್ಲ ಮುದ್ರಿತ ಪೇಪರ್ (ಬ್ಯಾಲೆಟ್) ಸ್ಲಿಪ್‌ಗಳನ್ನು ತೆಗೆದು, ಈ ಉದ್ದೇಶಕ್ಕಾಗಿ ಒದಗಿಸಿದ ದಪ್ಪನೆಯ ಕಪ್ಪು ಲಕೋಟೆಯಲ್ಲಿ ಈ ಮುದ್ರಿತ ಪೇಪರ್ ಸ್ಲಿಪ್‌ಗಳನ್ನು ಇಡುವ ಮತ್ತು ಮೊಹರು ಮಾಡುವ ಮುಂಚೆ ಅವುಗಳ ಹಿಂದಿನ ಭಾಗದಲ್ಲಿ 'ಮಾಕ್ ಪೋಲ್ ಸ್ಲಿಪ್' ರಬ್ಬರ್ ಸ್ಟಾಂಪ್‌ನಿಂದ ಎಂಬ ಬರಹ ಹೊಂದಿರುವ ಮುದ್ರೆ ಒತ್ತುವುದು. ಲಕೋಟೆಯನ್ನು ಪಿಒ (ಪ್ರಿಸೈಡಿಂಗ್ ಆಫೀಸರ್)ನ ಸೀಲಿನಿಂದ ಮೊಹರು ಮಾಡುವುದು.





ನಂತರ, ಈ ಉದ್ದೇಶಕ್ಕಾಗಿ ಒದಗಿಸಲಾದ ವಿಶೇಷ ಪ್ಲಾಸ್ಟಿಕ್ ಬಾಕ್ಸ್‌ನಲ್ಲಿ ಲಕೋಟೆಯನ್ನು ಇಡುವುದು.ಪ್ಲಾಸ್ಟಿಕ್ ಬಾಕ್ಸ್ ಅನ್ನು, ಮೊಹರನ್ನು ಒಡೆಯದೆಯೇ ಬಾಕ್ಸ್ ಅನ್ನು ತೆರೆಯಲು ಸಾಧ್ಯವಿಲ್ಲವೆನ್ನುವಂಥ ರೀತಿಯಲ್ಲಿ ಅದರ ಸುತ್ತಲೂ ಗುಲಾಬಿ ಬಣ್ಣದ ಪೇಪರ್ ಸೀಲಿನಿಂದ ಮೊಹರು ಮಾಡಿರತಕ್ಕದ್ದು.

**(ii)** ಮತದಾನ ದಿನದಂದು ಅಣಕು ಮತದಾನದ ತರುವಾಯ ಮತ್ತು ನೈಜ ಮತದಾನ ಪ್ರಾರಂಭವಾಗುವುದಕ್ಕಿಂತ ಮುಂಚೆ ಇವಿಎಂಗಳನ್ನು ಮೊಹರು ಮಾಡುವುದು ಅಣಕು ಮತದಾನ ಮತ್ತು ಅಣಕು ಮತದಾನ ದತ್ತಾಂಶವನ್ನು ಅಳಿಸಿಹಾಕಲಾದ ತರುವಾಯ, ಸಿಯುನ ರಿಸಲ್ಟ್ (ಫಲಿತಾಂಶ) ವಿಭಾಗವನ್ನು ಮೊಹರು ಮಾಡುವುದಕ್ಕಾಗಿ ಕಂಟ್ರೋಲ್ ಯೂನಿಟ್‌ನ ಸ್ವಿಚ್ ಆಫ್ ಮಾಡುವುದು.



**ಹಸಿರು ಪೇಪರ್ ಸೀಲ್ ಮಾಡುವುದು ಮತ್ತು ಒಳ (ಇನ್ನರ್) ಕಂಪಾರ್ಟ್‌ಮೆಂಟ್ ಅನ್ನು ಮುಚ್ಚುವುದು**

ಫಲಿತಾಂಶ ವಿಭಾಗದ ಒಳ ಅಂಕಣದ ಕವಾಟದ ಒಳಗಿನ ಭಾಗದ ಮೇಲೆ ಹಸಿರು ಬಣ್ಣದ ಪೇಪರ್ ಸೀಲನ್ನು ಅಂಟಿಸಬೇಕು ಮತ್ತು ಪೇಪರ್ ಸೀಲ್‌ನ ಎರಡೂ ತುದಿಗಳು, ಒಳ ಕಂಪಾರ್ಟ್‌ಮೆಂಟನ ಪಾರ್ಶ್ವಗಳಿಂದ ಹೊರಚಾಚಿರುವಂತೆ ಒಳ ಅಂಕಣ ಕವಾಟವನ್ನು ಮುಚ್ಚಬೇಕು.


**(iii) ಇನ್ನರ್ ಡೋರ್ ಕಂಪಾರ್ಟ್‌ಮೆಂಟ್ (ಒಳ ಫಲಿತಾಂಶ ವಿಭಾಗ) ಅನ್ನು ಸ್ಪೆಷಲ್ ಟ್ಯಾಗ್‌ನಿಂದ ಮೊಹರು ಮಾಡುವುದು**



ಚುನಾವಣೆಯ ವಿವರಗಳನ್ನು ತೋರಿಸುವ ಸ್ಪೆಷಲ್ ಟ್ಯಾಗ್ ಉಪಯೋಗಿಸಿ ಎಡಭಾಗದಲ್ಲಿ ಒದಗಿಸಲಾದ ರಂಧ್ರದ ಮುಖಾಂತರ ದಾರವನ್ನು ಹಾಯಿಸುವ ಮೂಲಕ ಫಲಿತಾಂಶ ವಿಭಾಗದ ಒಳ ಭಾಗವನ್ನು ಪ್ರಿಸೈಡಿಂಗ್ ಆಫೀಸರ್‌ನ ಮೊಹರಿನಿಂದ ಮೊಹರು ಮಾಡುವುದು.



**(iv) ಕಂಟ್ರೋಲ್ ಯೂನಿಟ್‌ನ ಹೊರಭಾಗದ ಫಲಿತಾಂಶ ವಿಭಾಗವನ್ನು ಅಡ್ರೆಸ್ ಟ್ಯಾಗ್ ಉಪಯೋಗಿಸಿ ದಾರದ ಸೀಲಿನಿಂದ ಮತ್ತು ಔಟರ್ ಪೇಪರ್ ಸ್ಟ್ರಿಪ್ ಸೀಲಿನಿಂದ (ಅಥವಾ ಎಬಿಸಿಡಿ ಸೀಲು) ಮೊಹರು ಮಾಡುವುದು**







ಕಂಟ್ರೋಲ್ ಯೂನಿಟ್‌ನ ಹೊರ ಮುಚ್ಚಳ (ಕವರ್) ಅನ್ನು ಒತ್ತುವುದು ಮತ್ತು ಚುನಾವಣೆಯ ವಿವರಗಳನ್ನು ತೋರಿಸುವ ಅಡ್ರೆಸ್ ಟ್ಯಾಗ್ ಅನ್ನು ಉಪಯೋಗಿಸಿ ಎಡಭಾಗದಲ್ಲಿ ಒದಗಿಸಲಾದ ರಂಧ್ರದ ಮುಖಾಂತರ ದಾರವನ್ನು ಹಾಯಿಸುವ ಮೂಲಕ ಪ್ರಿಸೈಡಿಂಗ್ ಆಫೀಸರ್‌ನ ಮೊಹರಿನಿಂದ ಮೊಹರು ಮಾಡುವುದು.

ತದನಂತರ, ಔಟರ್ ಪೇಪರ್ ಸ್ಟ್ರಿಪ್ ಸೀಲ್ ಅನ್ನು (ಎಬಿಸಿಡಿ ಸೀಲ್), ಹಸಿರು ಬಣ್ಣದ ಪೇಪರ್ ಸೀಲ್‌ಗೆ ಗೋಂದನ್ನು ಅಂಟಿಸಲು ಉಪಯೋಗಿಸುವುದು.

### (v) ಅಡ್ರೆಸ್ ಟ್ಯಾಗ್ ಉಪಯೋಗಿಸಿ ದಾರದಿಂದ ವಿವಿಪ್ಯಾಟ್‌ನ ಡ್ರಾಪ್ ಬಾಕ್ಸ್ ಅನ್ನು ಮೊಹರು ಮಾಡುವುದು





ತದನಂತರ, ನೈಜ ಮತದಾನ ಪ್ರಾರಂಭದ ಮುಂಚೆ ದಾರ ಮತ್ತು ಅಡ್ರೆಸ್ ಟ್ಯಾಗ್‌ನಿಂದ ಡ್ರಾಪ್ ಬಾಕ್ಸ್ ಅನ್ನು ಮೊಹರು ಮಾಡುವುದು.

### ಬಿ. ಮತದಾನದ ತರುವಾಯ ಇವಿಎಂ ಮತ್ತು ವಿವಿಪ್ಯಾಟ್‌ನ ಸಾಗಣೆ ಪಟ್ಟಿಗೆಯನ್ನು ಮೊಹರು ಮಾಡುವುದು





- ಮತದಾನ ಪೂರ್ಣಗೊಂಡ ತರುವಾಯ, ಸಂಬಂಧಪಟ್ಟ ಸಾಗಣೆ ಪಟ್ಟಿಗೆಯಲ್ಲಿ ಬಿಯು, ಸಿಯು ಮತ್ತು ವಿವಿಪ್ಯಾಟ್ ಅನ್ನು ಇಡಬೇಕು ಮತ್ತು ಚುನಾವಣೆಯ ವಿವರಗಳನ್ನು ತೋರಿಸುವ ಅಡ್ರೆಸ್ ಟ್ಯಾಗ್ ಅನ್ನು ಉಪಯೋಗಿಸಿ ಒದಗಿಸಲಾದ ರಂಧ್ರಗಳ ಮುಖಾಂತರ ದಾರವನ್ನು ಹಾಯಿಸುವ ಮೂಲಕ ಈ ಸಾಗಣೆ ಪಟ್ಟಿಗೆಯನ್ನು ಪ್ರಿಸೈಡಿಂಗ್ ಆಫೀಸರ್‌ನ ಮೊಹರಿನಿಂದ ಮೊಹರು ಮಾಡುವುದು.

ಟಿಪ್ಪಣಿ: ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಮೊಹರು ಮಾಡುವುದಕ್ಕಾಗಿ ಮತದಾನ ದಿನದಂದು ಬಳಸಿದ ಎಲ್ಲ ಸೀಲುಗಳ ಮೇಲೆ, ಪ್ರಿಸೈಡಿಂಗ್ ಆಫೀಸರ್ ಮತ್ತು ಮತದಾನ ಏಜೆಂಟರುಗಳು ಸಹಿ ಮಾಡಿರತಕ್ಕದ್ದು.

## 11.10. ಮತದಾನದ ಅವಧಿಯಲ್ಲಿ ಅನಿರೀಕ್ಷಿತ ಸಂದರ್ಭಗಳ ನಿರ್ವಹಣೆ

### 11.10.1 ನೈಜ ಮತದಾನಗಳ ಅವಧಿಯಲ್ಲಿ ಯೂನಿಟ್‌ಗಳ ಬದಲಾವಣೆ

(ಯಾವುದೇ ಯಂತ್ರ ಸಾಮಗ್ರಿಯನ್ನು ಬದಲಾಯಿಸುವ ಮುಂಚೆ ಕಂಟ್ರೋಲ್ ಯೂನಿಟ್‌ನ ಸ್ವಿಚ್ ಆಫ್ ಮಾಡುವುದು)

1. ಸಿಯು ಅಥವಾ ಬಿಯು ಸಮರ್ಪಕವಾಗಿ ಕಾರ್ಯನಿರ್ವಹಿಸದಿದ್ದರೆ, ಪೂರ್ತಿ ಸೆಟ್ (ಬಿಯು+ಸಿಯು+ವಿವಿಪ್ಯಾಟ್) ಅನ್ನು ಬದಲಿಸುವುದು. ಪೂರ್ತಿ ಸೆಟ್ ಅನ್ನು ಬದಲಾಯಿಸಿದಾಗ ನೋಟಾ ಸೇರಿದಂತೆ ಸ್ಪರ್ಧಿಸಿರುವ ಪ್ರತಿಯೊಬ್ಬ ಅಭ್ಯರ್ಥಿಗೆ ಒಂದು ಮತವನ್ನು ಚಲಾಯಿಸುವ ಮೂಲಕ ಅಣಕು ಮತದಾನವನ್ನು ನಡೆಸುವುದು.

2. ವಿವಿಪ್ಯಾಟ್‌ಗೆ ಸಂಬಂಧಿಸಿದಂತೆ ಕಂಟ್ರೋಲ್ ಯೂನಿಟ್ "ಲೋ ಬ್ಯಾಟರಿ" ಎಂದು ತೋರಿಸಿದರೆ, ನಂತರ ವಿವಿಪ್ಯಾಟ್‌ನ ಪವರ್ ಪ್ಯಾಕ್ ಅನ್ನು ಬದಲಿಸುವುದು.

3. ವಿವಿಪ್ಯಾಟ್ ಸಮರ್ಪಕವಾಗಿ ಕಾರ್ಯನಿರ್ವಹಿಸದಿದ್ದರೆ, ವಿವಿಪ್ಯಾಟ್‌ನ್ನು ಮಾತ್ರ ಬದಲಾಯಿಸುವುದು. ಈ ಸಂದರ್ಭದಲ್ಲಿ ಯಾವುದೇ ಅಣಕು ಮತದಾನವನ್ನು ನಡೆಸುವುದು ಅಗತ್ಯವಿರುವುದಿಲ್ಲ.

4. ಕಂಟ್ರೋಲ್ ಯೂನಿಟ್‌ನ ಪವರ್ ಪ್ಯಾಕ್ ಬದಲಾವಣೆ: ಸಿಯುನ ಪವರ್ ಪ್ಯಾಕ್ ಸಮರ್ಪಕವಾಗಿ ಕಾರ್ಯನಿರ್ವಹಿಸದಿದ್ದ ಅಥವಾ ಲೋ ಬ್ಯಾಟರಿ ಎಂದು ತೋರಿಸಿದ ಸಂದರ್ಭದಲ್ಲಿ ಸಿಯುನ ಪವರ್ ಪ್ಯಾಕ್ ಅನ್ನು ಬದಲಾಯಿಸುವುದು. ಈ ಉದ್ದೇಶಕ್ಕಾಗಿ

ಪ್ರಿಸೈಡಿಂಗ್ ಆಫೀಸರ್, ಮತದಾನ ಏಜೆಂಟರುಗಳು ಮತ್ತು ಸೆಕ್ಟರ್ ಆಫೀಸರ್‌ನ ಸಮ್ಮುಖದಲ್ಲಿ ಸಿಯುನ ಪವರ್ ಪ್ಯಾಕ್ ಅನ್ನು ಬದಲಾಯಿಸತಕ್ಕದ್ದು ಮತ್ತು ಪುನಃ ಅಡ್ರೆಸ್ ಟ್ಯಾಗ್‌ನಿಂದ ಸಿಯುನ ಬ್ಯಾಟರಿ ವಿಭಾಗವನ್ನು ಮೊಹರು ಮಾಡುವುದು ಹಾಗೂ ಅದರ ಮೇಲೆ ಅವರ ಸಹಿಗಳನ್ನು ಪಡೆಯತಕ್ಕದ್ದು: ಪ್ರಿಸೈಡಿಂಗ್ ಆಫೀಸರ್, ಆಯೋಗವು ನಿಯಮಿಸಿದ ನಮೂನೆಯಲ್ಲಿ ವರದಿಯನ್ನು ಒಪ್ಪಿಸತಕ್ಕದ್ದು (ಪ್ರಿಸೈಡಿಂಗ್ ಆಫೀಸರ್ ವರದಿ ಭಾಗ-IIIರ **ಅನುಬಂಧ–21**)

5. ವಿವಿಪ್ಯಾಟ್‌ನಲ್ಲಿ ಪೇಪರ್ ಸ್ಲಿಪ್ ಮುದ್ರಿತವಾಗದಿದ್ದರೆ, ಅಥವಾ ಮುದ್ರಿತ ಪೇಪರ್ ಸ್ಲಿಪ್ ಕತ್ತರಿಸಲ್ಪಡದೆ ಉಳಿದಿದ್ದರೆ, ಆಗ

i. **ಪೇಪರ್ ರೋಲ್‌ನಲ್ಲಿ ತೂಗಾಡುತ್ತಿರುವ ಸ್ಲಿಪ್ ಅನ್ನು, ತೆಗೆದುಹಾಕಲು/ಕತ್ತರಿಸಲು ಪ್ರಯತ್ನಿಸಬಾರದು, ಅದು ಡ್ರಾಪ್ ಬಾಕ್ಸ್‌ಗೆ ಬೀಳುವಂತೆ ಮಾಡುವ ಯಾವುದೇ ಪ್ರಯತ್ನವನ್ನು ಮಾಡತಕ್ಕದ್ದಲ್ಲ.** ಇದನ್ನು ಕಂಟ್ರೋಲ್ ಯೂನಿಟ್‌ನಲ್ಲಿ ಮತ ದಾಖಲಾಗಿಲ್ಲ ಎಂಬರ್ಥದಿಂದಾಗಿ ಮತ್ತು ಇದು, ಮುದ್ರಿತ ಪೇಪರ್ ಸ್ಲಿಪ್‌ಗಳ ಎಣಿಕೆ ಸಮಯದಲ್ಲಿ ಗಣನೆಯಾಗಿಲ್ಲ ಎಂಬರ್ಥದಿಂದಾಗಿ ತೂಗಾಡುವಂತೆ ಇರಲು ಬಿಡತಕ್ಕದ್ದು. ಅಂಥ ಘಟನೆಯ ವಿವರಗಳನ್ನು, ಮುಂದಿನ ರೀತಿಯಲ್ಲಿ ಪ್ರಿಸೈಡಿಂಗ್ ಅಧಿಕಾರಿಯವರ ಡೈರಿಯಲ್ಲಿ ಸ್ಪಷ್ಟವಾಗಿ ದಾಖಲಿಸತಕ್ಕದ್ದು:–

ಎ. ಘಟನೆಯ ದಿನಾಂಕ ಮತ್ತು ಸಮಯ.

ಬಿ. ವಿವಿಪ್ಯಾಟ್ ಅನ್ನು ಬದಲಾಯಿಸಿದ ತರುವಾಯ, ಅವನು ಮತ ಚಲಾಯಿಸಲು ಅನುಮತಿಸಲಾಗಿರುವ, ಮತದಾರನ ಹೆಸರು ಮತ್ತು ಮತದಾರರ ಪಟ್ಟಿಯ ಭಾಗದಲ್ಲಿರುವ ಅವನ ಕ್ರಮಸಂಖ್ಯೆ.

ಸಿ. ವಿವಿಪ್ಯಾಟ್ ಅನ್ನು ಬದಲಾಯಿಸಿದ ತರುವಾಯ, ಮತದಾರನು ತನ್ನ ಮತವನ್ನು ಚಲಾಯಿಸಿದನೇ ಅಥವಾ ತನ್ನ ಮತವನ್ನು ಚಲಾಯಿಸದೆ ಹೋದನೇ ಎಂಬ ವಿವರ.

ಡಿ. ಘಟನೆಯ ಮುಂಚೆ ಚಲಾಯಿಸಲಾದ ಮತಗಳ ಒಟ್ಟು ಸಂಖ್ಯೆ.

ii. ವಿವಿಪ್ಯಾಟ್ ಅನ್ನು ಬದಲಾಯಿಸಿದ ತರುವಾಯ ಕೊನೆ ಮತದಾರನಿಗೆ ತನ್ನ ಮತ ಚಲಾಯಿಸಲು ಅವಕಾಶ ಮಾಡಿಕೊಡಲಾಗಿದೆಯೇ ಎಂಬ ವಿವರ.

ಅನಿರಿಕ್ಷಿತ ಘಟನೆಗಳ ಸಂದರ್ಭದಲ್ಲಿ, ಪ್ರಿಸೈಡಿಂಗ್ ಆಫೀಸರ್ ರವರು, ಪರಿಹಾರಕ್ಕಾಗಿ ಅನುಬಂಧ–22 ನ್ನು ಸಹ ಉಲ್ಲೇಖಿಸಬಹುದು.

### 11.10.2. ತಪ್ಪಾಗಿ ಮುದ್ರಿತವಾಗಿರುವ ಬಗ್ಗೆ ದೂರು

1. ಯಾರೇ ಮತದಾರನು, ಪ್ರಿಂಟರ್‌ಗೆ ಸಂಪರ್ಕ ಕಲ್ಪಿಸಿರುವ ಬ್ಯಾಲೆಟಿಂಗ್ ಯೂನಿಟ್‌ನ ಮೇಲೆ ಸಂಬಂಧಿಸಿದ ನೀಲಿ (ಅಭ್ಯರ್ಥಿ) ಬಟನ್ ಅನ್ನು ಒತ್ತಿದ ಮೇಲೆ ಪ್ರಿಂಟರ್ ಮೂಲಕ ಮುದ್ರಿತವಾದ ವಿವಿಪ್ಯಾಟ್ ಪೇಪರ್ ಸ್ಲಿಪ್‌ನಲ್ಲಿ ಅಭ್ಯರ್ಥಿಯ ವಿವರಗಳು ಮತ್ತು /ಅಥವಾ ಆ ಅಭ್ಯರ್ಥಿಯ ಚಿಹ್ನೆ ತಪ್ಪಾಗಿ ಮುದ್ರಿತವಾಗಿರುವ ಬಗ್ಗೆ ಆಪಾದಿಸಿದರೆ, ಮತದಾನ ಕೇಂದ್ರದ ಪ್ರಿಸೈಡಿಂಗ್ ಆಫೀಸರ್ ರವರು, ಆತನಿಗೆ ದೂರು ಸಲ್ಲಿಸಲು **'ಘೋಷಣಾ ಪ್ರಪತ್ರ'**(ಅನುಬಂಧ–23) ವನ್ನು ನೀಡತಕ್ಕದ್ದು ಮತ್ತು ಕೆಳಕಂಡಂತೆ ಓದಲಾಗಿರುವ, ನಿಯಮ 49ಎಂಎ ಮೇರೆಗೆ ನಿಯಮಿಸಿದ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.

- **"49ಎಂಎ. ಪೇಪರ್ ಸ್ಲಿಪ್ ಮೇಲೆ ಮುದ್ರಿತವಾದ ವಿವರಗಳ ಬಗೆಗಿನ ದೂರುಗಳ ಸಂದರ್ಭದಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ,** ಕಾಗದದ ತಾಳೆ ದರ್ಶಕ ಪ್ರಿಂಟರ್ ಬಳಸಿರುವಲ್ಲಿ, ಒಬ್ಬ ಮತದಾರನು ನಿಯಮ 49ಎಂಎ ಅಡಿಯಲ್ಲಿ ತನ್ನ ಮತವನ್ನು ದಾಖಲಿಸಿದ ನಂತರ, ಪ್ರಿಂಟರ್‌ನಲ್ಲಿ ಸೃಜನೆಯಾದ ಪೇಪರ್ ಸ್ಲಿಪ್‌ನಲ್ಲಿ ತಾನು ಮತ ಚಲಾಯಿಸಿದ ಅಭ್ಯರ್ಥಿಯ ಹೆಸರು ಅಥವಾ ಚಿಹ್ನೆಯ ಬದಲಾಗಿ ಬೇರೆ ಅಭ್ಯರ್ಥಿಯ ಹೆಸರು ಅಥವಾ ಚಿಹ್ನೆಯನ್ನು ತೋರಿಸುತ್ತಿದೆ ಎಂದು ಆಪಾದಿಸಿದರೆ, ಸುಳ್ಳು ಘೋಷಣೆ ಮಾಡುವುದರ ಪರಿಣಾಮದ ಬಗ್ಗೆ ಮತದಾರನಿಗೆ ಎಚ್ಚರಿಕೆ ನೀಡಿದ ನಂತರ, ಅಂಥ ಆಪಾದನೆಯ ಬಗ್ಗೆ ಮತದಾರನಿಂದ ಲಿಖಿತ ಘೋಷಣೆಯನ್ನು ಪಡೆಯಬೇಕು.
- **ಮತದಾರನು (1)ನೇ ಉಪ–ನಿಯಮದಲ್ಲಿ ಉಲ್ಲೇಖಿಸಲಾದ ಲಿಖಿತ ಘೋಷಣೆಯನ್ನು ನೀಡಿದರೆ–** ನಮೂನೆ 17ಎ ರಲ್ಲಿ ಆ ಮತದಾರನಿಗೆ ಸಂಬಂಧಿಸಿದಂತೆ ಎರಡನೇ ನಮೂದನ್ನು ಮಾಡಬೇಕು, ಹಾಗೂ ತನ್ನ ಸಮಕ್ಷಮದಲ್ಲಿ ಮತ್ತು ಅಭ್ಯರ್ಥಿಗಳ ಅಥವಾ ಮತಗಟ್ಟೆಯಲ್ಲಿ ಹಾಜರಿರಬಹುದಾದ ಮತದಾನ ಏಜೆಂಟರುಗಳ ಸಮ್ಮುಖದಲ್ಲಿ ಮತಯಂತ್ರದಲ್ಲಿ ಪರೀಕ್ಷಾ ಮತ ದಾಖಲಿಸಲು ಮತದಾರನಿಗೆ ಅನುಮತಿ ನೀಡಬೇಕು. ಹಾಗೂ ಪ್ರಿಂಟರ್‌ನಿಂದ ಸೃಜನೆಯಾದ ಪೇಪರ್ ಸ್ಲಿಪ್ ಅನ್ನು ಗಮನಿಸಬೇಕು.

- **ಆರೋಪವು ನಿಜವೆಂದು ಕಂಡುಬಂದರೆ** – ಆ ಮತಯಂತ್ರದಲ್ಲಿ ಮತಗಳನ್ನು ಮುಂದೆ ದಾಖಲಿಸುವುದನ್ನು ನಿಲ್ಲಿಸಿ ರಿಟರ್ನಿಂಗ್ ಆಫೀಸರ್‌ಗೆ ಆ ಕೂಡಲೇ ಸಂಗತಿಯನ್ನು ವರದಿ ಮಾಡಬೇಕು ಮತ್ತು ರಿಟರ್ನಿಂಗ್ ಆಫೀಸರ್‌ರವರು ನೀಡಬಹುದಾದ ನಿರ್ದೇಶನದಂತೆ ಕಾರ್ಯನಿರ್ವಹಿಸಬೇಕು.
- **ಆದಾಗ್ಯೂ, ಆರೋಪವು ಸುಳ್ಳು ಎಂದು ಕಂಡುಬಂದರೆ** ಹಾಗೂ (1) ನೇ ಉಪ–ನಿಯಮದ ಮೇರೆಗೆ ಹಾಗೆ ಸೃಜನೆಯಾದ ಪೇಪರ್ ಸ್ಲಿಪ್, (2)ನೇ ಉಪ–ನಿಯಮದ ಮೇರೆಗೆ ಮತದಾರನಿಂದ ದಾಖಲಿಸಲಾದ ಪರೀಕ್ಷಾ ಮತದೊಂದಿಗೆ ತಾಳೆಯಾದಲ್ಲಿ, ಆಗ–

ಎ) ಅಂಥ ಪರೀಕ್ಷಾ ಮತವು ಯಾವ ಅಭ್ಯರ್ಥಿಯ ಕ್ರಮಸಂಖ್ಯೆ ಮತ್ತು ಹೆಸರಿಗೆ ದಾಖಲಾಯಿತು ಎಂಬುದನ್ನು ನಮೂದಿಸಿ ನಮೂನೆ 17ಎ ನಲ್ಲಿ ಆ ಮತದಾರನಿಗೆ ಸಂಬಂಧಪಟ್ಟ ಎರಡನೇ ನಮೂದಿನ ಎದುರು ಆ ಬಗ್ಗೆ ಷರಾ ದಾಖಲಿಸತಕ್ಕದ್ದು;

ಬಿ) ಅಂಥ ಷರಾಗಳ ಎದುರು ಆ ಮತದಾರನ ಸಹಿ ಅಥವಾ ಹೆಬ್ಬೆರಳು ಗುರುತನ್ನು ಪಡೆದುಕೊಳ್ಳತಕ್ಕದ್ದು; ಮತ್ತು ನಮೂನೆ 17ಸಿ ಯಲ್ಲಿನ ಭಾಗ– I ರಲ್ಲಿನ 5ನೇ ಬಾಬಿನಲ್ಲಿ ಅಂಥ ಪರೀಕ್ಷಾ ಮತಕ್ಕೆ ಸಂಬಂಧ ಪಟ್ಟಂತೆ ಅವಶ್ಯಕ ನಮೂದನೆಗಳನ್ನು ಮಾಡತಕ್ಕದ್ದು.

**11.11. ಮತದಾನದ ಮುಕ್ತಾಯ**

1. ಕೆಲವು ಅನಿವಾರ್ಯ ಕಾರಣದಿಂದಾಗಿ ಮತದಾನದ ಪ್ರಾರಂಭಕ್ಕಾಗಿ ನಿಗದಿಪಡಿಸಿದ ಗಂಟೆಗಿಂತ ಸ್ವಲ್ಪಮಟ್ಟಿಗೆ ತಡವಾಗಿ ಪ್ರಾರಂಭವಾಗಿದ್ದರೂ ಕೂಡ, ಆ ಉದ್ದೇಶಕ್ಕಾಗಿ ನಿಗದಿಪಡಿಸಿದ ಸಮಯದಲ್ಲಿ ಮತದಾನವನ್ನು ಮುಕ್ತಾಯಗೊಳಿಸುವುದು.
2. ಪ್ರಿಸೈಡಿಂಗ್ ಆಫೀಸರ್‌ರವರು **ಕೊನೆ ಮತದಾರನು** ಮತವನ್ನು ಚಲಾಯಿಸಿದ ನಂತರ, ಕಂಟ್ರೋಲ್ ಯೂನಿಟ್‌ನಲ್ಲಿ **'ಕ್ಲೋಸ್'** ಬಟನ್ ಅನ್ನು ಒತ್ತಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು. **ನಮೂನೆ 17ಸಿ ಯಲ್ಲಿನ ಭಾಗ– I ರ 6ನೇ ಬಾಬಿನಲ್ಲಿ ಇವಿಎಂನಲ್ಲಿ** ದಾಖಲಾದ ಮತಗಳ ಒಟ್ಟು ಸಂಖ್ಯೆಯನ್ನು ಬರೆದುಕೊಳ್ಳಬೇಕು.
4. ಪ್ರಿಸೈಡಿಂಗ್ ಅಧಿಕಾರಿ ಡೈರಿಯಲ್ಲಿ ಸಿಯು ಮೇಲೆ ಪ್ರದರ್ಶಿಸಲಾದ ಮತದಾನ ಮುಕ್ತಾಯ ದಿನಾಂಕ ಹಾಗೂ ಸಮಯವನ್ನು ಬರೆದುಕೊಳ್ಳಬೇಕು.
5. ಚುನಾವಣೆಗೆ ನಿಗದಿತ ನಮೂನೆಗಳನ್ನು ಜಾಗರೂಕವಾಗಿ ಮತ್ತು ಯುಕ್ತವಾಗಿ ಭರ್ತಿಮಾಡಲಾದ ನಂತರ, ಕಂಟ್ರೋಲ್ ಯೂನಿಟ್‌ಗಳಿಂದ ಬ್ಯಾಲೆಟಿಂಗ್ ಯೂನಿಟ್‌ಗಳು ಮತ್ತು ವಿವಿಪ್ಯಾಟ್‌ಗಳ ಸಂಪರ್ಕ ಕಡಿತಗೊಳಿಸುವುದು ಮತ್ತು ಅವುಗಳನ್ನು ಆಯಾ ಸಾಗಣೆ ಪೆಟ್ಟಿಗೆಗಳಲ್ಲಿ ಇಟ್ಟು ಅವುಗಳನ್ನು ಮೊಹರು ಮಾಡುವುದು. ಏಕಕಾಲೀಕ ಚುನಾವಣೆಯ ಸಂದರ್ಭದಲ್ಲಿ, ಪೇಪರ್‌ಗಳನ್ನು ಪ್ರತ್ಯೇಕವಾಗಿ ಸಿದ್ಧಪಡಿಸತಕ್ಕದ್ದು ಮತ್ತು ಮೊಹರು ಮಾಡತಕ್ಕದ್ದು.

**11.12. ಮತದಾನ ಮುಕ್ತಾಯದ ತರುವಾಯ ಇವಿಎಂ ಹಾಗೂ ವಿವಿಪ್ಯಾಟ್ ಅನ್ನು ಮೊಹರು**

ಮಾಡುವುದು

2. ಮೊದಲು ಕಂಟ್ರೋಲ್ ಯೂನಿಟ್ (ಸಿಯು) ನ ಸ್ವಿಚ್ ಆಫ್ ಮಾಡುವುದು ಮತ್ತು ನಂತರ ಬಿಯು, ಸಿಯು ಹಾಗೂ ವಿವಿಪ್ಯಾಟ್‌ನ ಸಂಪರ್ಕ ಕಡಿತಗೊಳಿಸುವುದು ಹಾಗೂ ಅವುಗಳ ಆಯಾಯ ಸಾಗಣೆ ಪೆಟ್ಟಿಗೆಗಳಲ್ಲಿ ಬಿಯು ಮತ್ತು ಸಿಯು ಅನ್ನು ಪುನಃ ಸೇರಿಸಬೇಕು.
3. ಪ್ರಿಸೈಡಿಂಗ್ ಆಫೀಸರ್ ಅವರು, ಮತದಾನ ಏಜೆಂಟರುಗಳ ಸಮ್ಮುಖದಲ್ಲಿ ವಿವಿಪ್ಯಾಟ್‌ನಿಂದ ಪವರ್ ಪ್ಯಾಕ್ (ಬ್ಯಾಟರಿ) ಅನ್ನು ಬೇರ್ಪಡಿಸುವುದು. ವಿವಿಪ್ಯಾಟ್‌ನಿಂದ ಪವರ್ ಪ್ಯಾಕ್ (ಬ್ಯಾಟರಿ) ಅನ್ನು ಬೇರ್ಪಡಿಸಿದ ನಂತರವೇ, ಮತದಾನ ಏಜೆಂಟರುಗಳ ಸಮ್ಮುಖದಲ್ಲಿ ವಿವಿಪ್ಯಾಟ್ ಸಾಗಣೆ ಪೆಟ್ಟಿಗೆಯ ಮೊಹರು ಮಾಡುವುದು.
4. ಸಾಗಣೆ ಪೆಟ್ಟಿಗೆಯ ಎರಡೂ ಬದಿಗಳಲ್ಲಿ ಆ ಉದ್ದೇಶಕ್ಕಾಗಿ ಒದಗಿಸಲಾದ ಎರಡು ರಂಧ್ರಗಳ ಮುಖಾಂತರ ದಾರ ಹಾಯಿಸುವ ಮೂಲಕ ಎರಡೂ ತುದಿಗಳಲ್ಲಿ ಪ್ರತಿಯೊಂದು ಸಾಗಣೆ ಪೆಟ್ಟಿಗೆಯನ್ನು ಅಡ್ರೆಸ್ ಟ್ಯಾಗ್‌ನಿಂದ ಮೊಹರು ಮಡುವುದು.
5. ಪ್ರಿಸೈಡಿಂಗ್ ಆಫೀಸರ್ ರವರು, ಅಡ್ರೆಸ್ ಟ್ಯಾಗ್‌ಗಳ ಮೇಲೆ ಅವನ / ಅವಳ ಸಹಿಯನ್ನು ಹಾಕಿಸಿರಬೇಕು ಮತ್ತು ಮತದಾನ ಏಜೆಂಟರುಗಳ ಸಹಿಗಳನ್ನು ಸಹ ಪಡೆದಿರತಕ್ಕದ್ದು.
6. ನಿಯಮಿಸಿದ ಕಾರ್ಯವಿಧಾನದ ಅನುಸಾರವಾಗಿ, ರಿಟರ್ನಿಂಗ್ ಆಫೀಸರ್ ಎಲ್ಲ ಮೊಹರು ಮಾಡಿದ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳು ಮತ್ತು ಚುನಾವಣಾ ದಾಖಲೆಗಳನ್ನು ಸ್ವೀಕಾರ / ಸಂಗ್ರಹಣ ಕೇಂದ್ರದಲ್ಲಿ ಇಡುವುದು.

# ಅಧ್ಯಾಯ – 12

## ಮತದಾನದ ನಂತರ ಮತಗಳು ದಾಖಲಾಗಿರುವ ಮತ್ತು ಮತಗಳು ದಾಖಲಾಗದಿರುವ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಸಂಗ್ರಹಣೆ

**ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ನಾಲ್ಕು ಪ್ರವರ್ಗಗಳು**

1. ಪ್ರವರ್ಗ 'ಎ' – ಮತಗಳು ದಾಖಲಾಗಿರುವ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳು
2. ಪ್ರವರ್ಗ 'ಬಿ' – ಮತಗಳು ದಾಖಲಾಗಿರುವ ದೋಷಪೂರಿತ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳು
3. ಪ್ರವರ್ಗ 'ಸಿ' – ಮತಗಳು ದಾಖಲಾಗದಿರುವ ದೋಷಪೂರಿತ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳು
4. ಪ್ರವರ್ಗ 'ಡಿ' – ಬಳಸದಿರುವ ಮೀಸಲು ಇವಿಎಂಗಳು ಮತ್ತು ವಿವಿಪ್ಯಾಟ್‌ಗಳು

**ಭದ್ರತಾ ಕೊಠಡಿಗಳ ಮೂರು ಪ್ರವರ್ಗಗಳು:**

1. ಮತಗಳು ದಾಖಲಾಗಿರುವ ಮತಯಂತ್ರಗಳನ್ನು ಸಂಗ್ರಹಿಸಿಡುವ ಭದ್ರತಾ ಕೊಠಡಿ (ಪ್ರವರ್ಗ 'ಎ' ಮತ್ತು 'ಬಿ' ಸಂಗ್ರಹಣೆ)
2. ಎಸಿ (ವಿಧಾನಸಭಾ ಮತಕ್ಷೇತ್ರ)/ ಎಎಸ್ (ವಿಧಾನಸಭಾ ವಿಭಾಗ) ಭದ್ರತಾ ಕೊಠಡಿಯ ಸಮೀಪದಲ್ಲಿರದ, ಮತಗಳು ದಾಖಲಾಗದ ದೋಷಪೂರಿತ ಮತಯಂತ್ರಗಳನ್ನು ಸಂಗ್ರಹಿಸಿಡುವ ಭದ್ರತಾ ಕೊಠಡಿ (ಪ್ರವರ್ಗ 'ಸಿ' ಸಂಗ್ರಹಣೆ)
3. ಎಸಿ (ವಿಧಾನಸಭಾ ಮತಕ್ಷೇತ್ರ) / ಎಎಸ್ (ವಿಧಾನಸಭಾ ವಿಭಾಗ) ಭದ್ರತಾ ಕೊಠಡಿಯ ಸಮೀಪದಲ್ಲಿರದ ಮೀಸಲು ಮತಯಂತ್ರಗಳನ್ನು ಸಂಗ್ರಹಿಸಿಡುವ ಭದ್ರತಾ ಕೊಠಡಿ (ಪ್ರವರ್ಗ 'ಡಿ' ಸಂಗ್ರಹಣೆ)

**ಎಲ್ಲಾ 04 ಪ್ರವರ್ಗಗಳ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಸುರಕ್ಷಿತ ಸಂಗ್ರಹಣೆ ಹಾಗೂ ಭದ್ರತೆಗಾಗಿ ಸಾಮಾನ್ಯ ಸೂಚನೆಗಳು**

1. ಸಂಗ್ರಹಣಾ ಸ್ಥಳವನ್ನು ಮುಂಚಿತವಾಗಿ ಗುರುತಿಸಿ ಎ, ಬಿ, ಸಿ ಮತ್ತು ಡಿ ಪ್ರವರ್ಗ ಅನುಸಾರ ಕಾಯ್ದಿರಿಸಿ, ಗುರುತಿಸಿ ಸ್ವೀಕೃತಿ ಪತ್ರದೊಂದಿಗೆ ಎಲ್ಲಾ ಸ್ಪರ್ಧಿಸಿರುವ ಅಭ್ಯರ್ಥಿಗಳಿಗೆ ತಿಳಿಸುವುದು.
2. ಯಾವುದೇ ಸಂದರ್ಭಗಳಲ್ಲೂ, ಬಳಕೆಯಾಗದ ಮತಯಂತ್ರಗಳನ್ನು, ಚುನಾವಣಾ ತಕರಾರು ಅರ್ಜಿ(ಇಪಿ) ಅವಧಿ ಮುಕ್ತಾಯ ಆಗುವವರೆಗೆ ಮತ ದಾಖಲಾದ ಯಂತ್ರಗಳೊಟ್ಟಿಗೆ ಇಡುದಂತೆ ನೋಡಿಕೊಳ್ಳುವ ಸಲುವಾಗಿ ಪ್ರವರ್ಗ ಎ ಮತ್ತು ಬಿ ಯಂತ್ರಗಳನ್ನು ಹೊಂದಿರುವ ಭದ್ರತಾ ಕೊಠಡಿಯಲ್ಲಿ ಸಿ ಮತ್ತು ಡಿ ಯಂತ್ರಗಳನ್ನು ಸಂಗ್ರಹಿಸಿಡಬಾರದು.
3. ಎಲ್ಲಾ ಮತದಾನ ಸಿಬ್ಬಂದಿಗಳು ಅಥವಾ ಅಧಿಕೃತ ಅಧಿಕಾರಿಗಳಿಗೆ ಎಲ್ಲಾ ಸಮಯದಲ್ಲೂ ಸಶಸ್ತ್ರ ಪೊಲೀಸ್ ಪಡೆಯ ರಕ್ಷಣೆಯನ್ನು ಒದಗಿಸಬೇಕು.
4. ಮತದಾನ ಪೂರ್ಣಗೊಂಡ ತರುವಾಯ ಕೂಡ ಎಲ್ಲಾ ಪ್ರವರ್ಗದ ಇವಿಎಂಗಳು/ವಿವಿಪ್ಯಾಟ್‌ಗಳು ಅದೇ ರೀತಿಯ ಶಿಷ್ಟಾಚಾರವನ್ನು ಪಾಲಿಸುವುದು.
5. ಮತದಾನದ ನಂತರ ಅದೇ ದಿನದಂದು ಪೂರ್ವನಿಯೋಜಿತ ಸ್ವೀಕೃತಿ ಕೇಂದ್ರದಲ್ಲಿ ಎಲ್ಲಾ ಪ್ರವರ್ಗದ ಇವಿಎಂಗಳು/ವಿವಿಪ್ಯಾಟ್‌ಗಳನ್ನು ಸುರಕ್ಷಿತವಾಗಿ ಇಡಬೇಕು.
6. ಇವಿಎಂ/ವಿವಿಪ್ಯಾಟ್ ಉಗ್ರಾಣ/ಭದ್ರತಾ ಕೊಠಡಿಗಳಲ್ಲಿ ಯಾವುದೇ ಚುನಾವಣಾ ಸಂಬಂಧಿತ ಸಾಮಗ್ರಿಯನ್ನು ಇಡಬಾರದು.
7. ಭಾರತ ಚುನಾವಣಾ ಆಯೋಗದ ಸೂಚನೆಗಳಿಗನುಸಾರವಾಗಿ ಎಲ್ಲಾ ಪ್ರವರ್ಗದ ಯಂತ್ರಗಳಿಗೆ ಭದ್ರತಾ ವ್ಯವಸ್ಥೆಯನ್ನು ಮಾಡುವುದು.

**ಮತಗಳು ದಾಖಲಾದ ಮತಯಂತ್ರಗಳನ್ನು ಸಂಗ್ರಹಿಸಿಡುವ ಭದ್ರತಾ ಕೊಠಡಿಯಲ್ಲಿ 'ಎ' ತಿಮತ್ತು 'ಬಿ' ಪ್ರವರ್ಗ ಮತಯಂತ್ರಗಳ ಸಂಗ್ರಹಣೆ**

1. ಮತಗಳು ದಾಖಲಾದ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಮತ್ತು ಮತಗಳು ದಾಖಲಾದ ದೋಷಪೂರಿತ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಚುನಾವಣಾ ಕಾರ್ಯವಿಧಾನದ ಪ್ರಕಾರ ಒಂದೇ ಭದ್ರತಾ ಕೊಠಡಿಯಲ್ಲಿ ಸಂಗ್ರಹಿಸಿಡುವುದು.
2. ಅವಧಿ ಮುಕ್ತಾಯವಾಗುವವರೆಗೆ ಮತದಾನ ಮತ್ತು ಮತಗಳ ಎಣಿಕೆ ಪೂರ್ಣಗೊಂಡ ತರುವಾಯ ಚುನಾವಣಾ ತಕರಾರು ಅರ್ಜಿ ಸಲ್ಲಿಕೆ ಮುಕ್ತಾಯ ಆಗುವವರೆಗೆ 2 ಅಥವಾ 2ಕ್ಕಿಂತ ಹೆಚ್ಚಿನ ವಿಧಾನಸಭಾ ಮತಕ್ಷೇತ್ರಗಳ ಮತಯಂತ್ರಗಳನ್ನು ಒಂದೇ ಭದ್ರತಾ ಕೊಠಡಿಯಲ್ಲಿ ಸಂಗ್ರಹಿಸಿಡದಂತೆ ನೋಡಿಕೊಳ್ಳುವುದು.
3. ಅಭ್ಯರ್ಥಿಗೆ ಮುಂಚಿತವಾಗಿ ತಿಳಿಸಿ ಮತ್ತು ಸೂಕ್ತ ವಿಡಿಯೋ ಚಿತ್ರೀಕರಣ ಮಾಡುವ ಮೂಲಕ ಭಾರತ ಚುನಾವಣಾ ಆಯೋಗದ ಮಾರ್ಗಸೂಚಿಗಳ ಅನುಸಾರವಾಗಿ ಮತಯಂತ್ರಗಳನ್ನು ಸುರಕ್ಷಿತ ಸಂಗ್ರಹಣೆಗಾಗಿ ಗೊತ್ತುಮಾಡಿದ ಸ್ಥಳ ಅಥವಾ ರ್‍ಯಾಕುಗಳಲ್ಲಿ ಸುರಕ್ಷಿತವಾಗಿ ಇಡುವುದು.

**ಮತಗಳು ದಾಖಲಾಗದ ಮತಯಂತ್ರಗಳನ್ನು ಸಂಗ್ರಹಿಸಿಡುವ ಭದ್ರತಾ ಕೊಠಡಿಯಲ್ಲಿ ಪ್ರವರ್ಗ 'ಸಿ' ಯಂತ್ರಗಳ ಸಂಗ್ರಹಣೆ**

1. ಚುನಾವಣೆ ಪೂರ್ಣಗೊಂಡ ನಂತರ, ಮತಯಂತ್ರಗಳ ತಯಾರಕರಿಂದ ಮತಯಂತ್ರಗಳ ತಾಂತ್ರಿಕ ಮೌಲ್ಯಮಾಪನ ಹಾಗೂ ದುರಸ್ತಿಗಾಗಿ ದೋಷಪೂರಿತ ಯಂತ್ರಗಳ ಕ್ಯಾರಿಯಿಂಗ್ ಕೇಸ್‌ಗಳ ಮೇಲೆ ಮತ ದಾಖಲಾಗದ ಮತಯಂತ್ರಗಳು ಎಂಬ ಸ್ಟಿಕ್ಕರ್ ಅನ್ನು ಅಂಟಿಸುವುದು.
2. ಮತ ದಾಖಲಾದ ಮತಯಂತ್ರಗಳನ್ನು ಸಂಗ್ರಹಿಸಿಡುವ ಭದ್ರತಾ ಕೊಠಡಿಯಲ್ಲಲ್ಲದೆ ಪ್ರತ್ಯೇಕ ಕೊಠಡಿಯಲ್ಲಿ ಪ್ರವರ್ಗ 'ಸಿ' ಮತಯಂತ್ರಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸಿಡುವುದು.

**ಬಳಸದಿರುವ ಮೀಸಲು ಮತಯಂತ್ರಗಳನ್ನು ಸಂಗ್ರಹಿಸಿಡುವ ಭದ್ರತಾ ಕೊಠಡಿಯಲ್ಲಿ ಪ್ರವರ್ಗ 'ಡಿ' ಮತಯಂತ್ರಗಳ ಸಂಗ್ರಹಣೆ**

1. ಮತಗಳು ದಾಖಲಾದ ಮತಯಂತ್ರಗಳನ್ನು ಸಂಗ್ರಹಿಸಿಡುವ ಭದ್ರತಾ ಕೊಠಡಿಯಲ್ಲಲ್ಲದೆ ಪ್ರತ್ಯೇಕ ಕೊಠಡಿಯಲ್ಲಿ ಬಳಸದಿರುವ ಮೀಸಲು ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಸಂಗ್ರಹಿಸಿಡುವುದು. ಹೀಗೆ ಮಾಡುವುದರಿಂದ ಬಳಸದಿರುವ ಮೀಸಲು ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಯಾವುದೇ ಮರುಮತದಾನದ ಉದ್ದೇಶಕ್ಕಾಗಿ ಲಭ್ಯವಾಗುವಂತೆ ಮಾಡಿದಂತಾಗುತ್ತದೆ.
2. ಅಂಥ ಪ್ರವರ್ಗದ ಬಿಯುಗಳು, ಸಿಯುಗಳು ಮತ್ತು ವಿವಿಪ್ಯಾಟ್‌ಗಳ ಕ್ಯಾರಿಂಗ್ ಕೇಸ್‌ಗಳ ಮೇಲೆ 'ಬಳಕೆಯಾಗದ ಇವಿಎಂಗಳು' ಎಂಬ ಚೀಟಿಯನ್ನು ಅಂಟಿಸಬೇಕು.
3. ಸೆಕ್ಟರ್ ಅಧಿಕಾರಿಗಳು, ಮತದಾನದ ಮುಕ್ತಾಯದ ನಂತರ ಅದೇ ದಿನದಂದು ಮೀಸಲು ಇವಿಎಂಗಳು/ವಿವಿಪ್ಯಾಟ್‌ಗಳನ್ನು ಹಿಂತಿರುಗಿಸುವ ಸಮಯದಲ್ಲಿ ಅನುಬಂಧ–36 ರಲ್ಲಿ ಮೀಸಲು ಇವಿಎಂಗಳು/ವಿವಿಪ್ಯಾಟ್‌ಗಳ ವಿವರವಾದ ಲೆಕ್ಕವನ್ನು ಒಪ್ಪಿಸತಕ್ಕದ್ದು.
4. ರಿಟರ್ನಿಂಗ್ ಅಧಿಕಾರಿಯು (ಆರ್‌ಓ) ನಿಗದಿತ ನಮೂನೆಯಲ್ಲಿ (ಅನುಬಂಧ–37) ಪ್ರಮಾಣಪತ್ರವನ್ನು ಸಲ್ಲಿಸತಕ್ಕದ್ದು.

**ಮತ ದಾಖಲಾಗದ ದೋಷಪೂರಿತ ಇವಿಎಂ–ವಿವಿಪ್ಯಾಟ್ (ಪ್ರವರ್ಗ–ಸಿ) ಮತ್ತು ಬಳಸದಿರುವ ಮೀಸಲು ಇವಿಎಂ–ವಿವಿಪ್ಯಾಟ್ (ಪ್ರವರ್ಗ–ಡಿ)ಗಳ ಸಂಗ್ರಹಣೆ**

- ರಾಜ್ಯ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ

(ಎ) ಎಲ್ಲಾ ವಿಧಾನಸಭಾ ಮತಕ್ಷೇತ್ರಗಳ ಪ್ರವರ್ಗ–ಸಿ ಇವಿಎಂಗಳು–ವಿವಿಪ್ಯಾಟ್‌ಗಳನ್ನು ಆಯಾಯ ಜಿಲ್ಲಾ ಕೇಂದ್ರ ಕಾರ್ಯಸ್ಥಾನಗಳಲ್ಲಿ ಸಂಗ್ರಹಿಸುವುದು.

(ಬಿ) ಎಲ್ಲಾ ವಿಧಾನಸಭಾ ಮತಕ್ಷೇತ್ರಗಳ ಪ್ರವರ್ಗ–ಡಿ ಇವಿಎಂಗಳು–ವಿವಿಪ್ಯಾಟ್‌ಗಳನ್ನು ತಾತ್ಕಾಲಿಕ ವಿಭಾಗ ನಿರ್ಮಿಸಿ ವಿಧಾನಸಭಾ ಮತಕ್ಷೇತದ ಸರಿಯಾದ ವರ್ಗೀಕರಣದೊಂದಿಗೆ ಒಂದೇ ಉಗ್ರಾಣದಲ್ಲಿ ಸಂಗ್ರಹಿಸಿಡುವುದು.

- ಲೋಕಸಭಾ ಚುನಾವಣಾ ಮತಕ್ಷೇತ್ರಕ್ಕೆ(ಗಳಿಗೆ) ಚುನಾವಣೆ(ಗಳ) ಸಂದರ್ಭದಲ್ಲಿ

(ಎ) ಎಲ್ಲಾ ವಿಧಾನಸಭಾ ಮತಕ್ಷೇತ್ರಗಳ ಪ್ರವರ್ಗ–ಸಿ ಇವಿಎಂಗಳು–ವಿವಿಪ್ಯಾಟ್‌ಗಳನ್ನು ಜಿಲ್ಲಾ ಉಗ್ರಾಣದಲ್ಲಿ ಸಂಗ್ರಹಿಸಿಡುವುದು.

(ಬಿ) ಎಲ್ಲಾ ವಿಧಾನಸಭಾ ವಿಭಾಗಗಳ ಪ್ರವರ್ಗ–ಡಿ ಇವಿಎಂಗಳು–ವಿವಿಪ್ಯಾಟ್‌ಗಳನ್ನು ಲೋಕಸಭಾ ಮತಕ್ಷೇತ್ರದ ವ್ಯಾಪ್ತಿಯೊಳಗಿನ ವಿಧಾನಸಭಾ ವಿಭಾಗದ ಸರಿಯಾದ ವರ್ಗೀಕರಣದೊಂದಿಗೆ ಒಂದೇ ಉಗ್ರಾಣದಲ್ಲಿ ಸಂಗ್ರಹಿಸಿಡುವುದು.

- ಎಲ್ಲಾ ಮತ ದಾಖಲಾದ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳು (ಪ್ರವರ್ಗ–ಎ) ಮತ್ತು ಮತ ದಾಖಲಾದ ದೋಷಪೂರಿತ ಇವಿಎಂಗಳು–ವಿವಿಪ್ಯಾಟ್‌ಗಳನ್ನು (ಪ್ರವರ್ಗ–ಬಿ) ಅಭ್ಯರ್ಥಿಗಳಿಗೆ ಲಿಖಿತ ಮಾಹಿತಿ ನೀಡಿ ಹಾಗೂ ಸೂಕ್ತ ವಿಡಿಯೋ ಚಿತ್ರಿಕರಣದಡಿ ಭದ್ರತಾ ಕೊಠಡಿಯಲ್ಲಿ ಸಂಗ್ರಹಿಸಿಡುವ ಸಮಯದಲ್ಲೇ ಸಿ ಮತ್ತು ಡಿ ಪ್ರವರ್ಗದ ಇವಿಎಂಗಳು–ವಿವಿಪ್ಯಾಟ್‌ಗಳನ್ನು ಸಂಗ್ರಹಿಸಿಡುವುದು. ಈ ಸಮಯದಲ್ಲಿ ಉಪಸ್ಥಿತರಿರುವಂತೆ ಅಭ್ಯರ್ಥಿಗಳು ತಮ್ಮ ಪ್ರತಿನಿಧಿಗಳನ್ನು ನಿಯೋಜಿಸಬಹುದು.
- ಸಿ ಮತ್ತು ಡಿ ಪ್ರವರ್ಗದ ಇವಿಎಂಗಳು–ವಿವಿಪ್ಯಾಟ್‌ಗಳನ್ನು ಸಂಗ್ರಹಿಸಿರುವ ಉಗ್ರಾಣ/ಭದ್ರತಾ ಕೊಠಡಿಗೆ ಕನಿಷ್ಠ 1/2 ಸೆಕ್ಷನ್ ಭದ್ರತೆಯನ್ನು ಒದಗಿಸತಕ್ಕದ್ದು.

# ಅಧ್ಯಾಯ – 13

# ಮರು ಮತದಾನದ ಸಂದರ್ಭದಲ್ಲಿ ಇವಿಎಂ/ವಿವಿಪ್ಯಾಟ್‌ನ ಬಳಕೆ

**ಮರು ಮತದಾನದ ಸಂದರ್ಭದಲ್ಲಿ:**

1. ಮೀಸಲು ಪಟ್ಟಿಯಿಂದ ಇವಿಎಂಗಳು/ವಿವಿಪ್ಯಾಟ್‌ಗಳನ್ನು ಪಡೆದು, ಅಭ್ಯರ್ಥಿಗಳು/ಅವರ ಏಜೆಂಟರುಗಳಿಗೆ ಲಿಖಿತದಲ್ಲಿ ಅವುಗಳ ಸಂಖ್ಯೆಯನ್ನು ತಿಳಿಸತಕ್ಕದ್ದು.
2. ಇವಿಎಂಗಳು/ವಿವಿಪ್ಯಾಟ್‌ಗಳ ಮೇಲಿನ ಅಡ್ರೆಸ್ ಟ್ಯಾಗ್‌ನಲ್ಲಿ, ದಿನಾಂಕ ಮತ್ತು ಪಿಎಸ್ (ಮತದಾನ ಕೇಂದ್ರ) ಸಂಖ್ಯೆಯನ್ನು ಸೂಚಿಸಿ ಇವಿಎಂಗಳು/ವಿವಿಪ್ಯಾಟ್‌ಗಳನ್ನು ಮರುಮತದಾನದಲ್ಲಿ ಬಳಸಲಾಗಿರುವ ಇವಿಎಂಗಳು/ವಿವಿಪ್ಯಾಟ್‌ಗಳೆಂದು ಸ್ಪಷ್ಟವಾಗಿ ನಮೂದಿಸಲಾಗಿರುವುದನ್ನು ಖಚಿತಪಡಿಸಿಕೊಳ್ಳುವುದು.
3. ಇವಿಎಂಗಳು/ವಿವಿಪ್ಯಾಟ್‌ಗಳ ಮೇಲೆ ಹಾಗೂ ಅವುಗಳ ಕ್ಯಾರಿಂಗ್ ಕೇಸ್‌ಗಳ ಮೇಲೆ **"ಮರು ಮತದಾನದ ಇವಿಎಂ/ವಿವಿಪ್ಯಾಟ್"** ಎಂಬ ಪೂರ್ವ ಮುದ್ರಿತ ಸ್ಟಿಕ್ಕರ್ ಅನ್ನು ಅಂಟಿಸುವುದು.
4. ಮರು–ಮತದಾನದ ನಂತರ, ಮರು–ಮತದಾನವಾದ ಇವಿಎಂಗಳ ಸಂಗ್ರಹಣೆಗಾಗಿ ಅಭ್ಯರ್ಥಿಗಳು/ಅವರ ಏಜೆಂಟರುಗಳು ಮತ್ತು ವೀಕ್ಷಕರ ಸಮ್ಮುಖದಲ್ಲಿ ಭದ್ರತಾ ಕೊಠಡಿಯನ್ನು ಮತ್ತೆ ತೆರೆಯತಕ್ಕದ್ದು.
5. ಮರು–ಮತದಾನದ ಇವಿಎಂಗಳು/ವಿವಿಪ್ಯಾಟ್‌ಗಳನ್ನು ಮೂಲ ಮತದಾನದಲ್ಲಿ ಈ ಹಿಂದೆ ಉಪಯೋಗಿಸಲಾಗಿರುವ ಹಳೆಯ ಇವಿಎಂಗಳು/ವಿವಿಪ್ಯಾಟ್‌ಗಳೊಟ್ಟಿಗೆ ಇಡುವುದು. ಭದ್ರತಾ ಕೊಠಡಿಯಲ್ಲಿ, **'ಮರು–ಮತದಾನ ಇವಿಎಂ'** ಇಡುವ ಸಮಯದಲ್ಲಿ ದಪ್ಪ ಅಕ್ಷರದಲ್ಲಿ **'ಮತ ಎಣಿಕೆ ಮಾಡಬೇಕಾದುದು'** ಎಂಬ ಸ್ಟಿಕ್ಕರ್ ಅನ್ನು ಅಂಟಿಸಬೇಕು.
6. ಮತ ಎಣಿಕೆ ಸಂದರ್ಭದಲ್ಲಿ ಉಂಟಾಗಬಹುದಾದ ಯಾವುದೇ ಗೊಂದಲವನ್ನು ನಿವಾರಿಸಲು, ಹಳೆಯ ಇವಿಎಂಗಳು/ವಿವಿಪ್ಯಾಟ್‌ಗಳ ಮೇಲೆ ದಪ್ಪ ಅಕ್ಷರದಲ್ಲಿ 'ಮತ ಎಣಿಕೆ ಮಾಡದಿರುವುದು' ಎಂಬ ಸ್ಟಿಕ್ಕರ್ ಅನ್ನು ಅಂಟಿಸಬೇಕು.
7. ಇಎಂಎಸ್‌ನಲ್ಲಿ ಮರು–ಮತದಾನದಲ್ಲಿ ಬಳಸಿರುವ ಇವಿಎಂಗಳು/ವಿವಿಪ್ಯಾಟ್‌ಗಳ ವಿಶಿಷ್ಟ ಗುರುತಿನ ಸಂಖ್ಯೆಯನ್ನು ನಮೂದಿಸುವುದು.

# ಅಧ್ಯಾಯ – 14

# ಮತಗಳ ಎಣಿಕೆ

14.1 ಸಾಮಾನ್ಯ ಸೂಚನೆಗಳು

14.1.1ಮತ ಎಣಿಕೆ ಸಮಯದಲ್ಲಿ, ಮತ ಎಣಿಕೆ ಸಭಾಂಗಣಕ್ಕೆ ಸಿಯುಗಳನ್ನು (ಕಂಟ್ರೋಲ್ ಯೂನಿಟ್ ಗಳು) ಮಾತ್ರ ತರುವುದು.

14.1.2 ಸಿಯು (ಕಂಟ್ರೋಲ್ ಯೂನಿಟ್)ನ ವಿಶಿಷ್ಟ ಗುರುತಿನ ಸಂಖ್ಯೆ, ಗುಲಾಬಿ ಬಣ್ಣದ ಪೇಪರ್ ಸೀಲ್ ಮತ್ತು ಹಸಿರು ಪೇಪರ್ ಸೀಲ್ ಅನ್ನು ಪರಿಶೀಲಿಸುವುದು ಮತ್ತು ಮತ ಎಣಿಕೆ ಪ್ರಾರಂಭವಾಗುವ ಮೊದಲು ಮತ ಎಣಿಕೆ ಏಜೆಂಟರುಗಳಿಗೆ ತೋರಿಸುವುದು.

14.1.3 ಸಿಯು(ಕಂಟ್ರೋಲ್ ಯೂನಿಟ್)ನಲ್ಲಿ ಪ್ರದರ್ಶಿತವಾದ ಮತದಾನ ಪ್ರಾರಂಭದ ದಿನಾಂಕ ಮತ್ತು ಸಮಯ, ಮತದಾನದ ಮುಕ್ತಾಯವಾದ ದಿನಾಂಕ ಮತ್ತು ಸಮಯವನ್ನು ಪರಿಶೀಲಿಸುವುದು ಮತ್ತು ಅದನ್ನು ಮತ ಎಣಿಕೆ ಏಜೆಂಟರುಗಳಿಗೆ ತೋರಿಸುವುದು.

14.1.4 ನಮೂನೆ 17ಸಿ ನ ಭಾಗ–ಖಖ ರಲ್ಲಿ ಅಭ್ಯರ್ಥಿಗಳು / ಅವರ ಏಜೆಂಟರ / ಮತಎಣಿಕೆ ಏಜೆಂಟರ ಸಹಿಯನ್ನು ತೆಗೆದುಕೊಳ್ಳುವ ಮುಂಚೆ, ಎಣಿಕೆ ಮೇಲ್ವಿಚಾರಕರ ಸಹಿ ಮತ್ತು ಅಭ್ಯರ್ಥಿಗಳ / ಅವರ ಏಜೆಂಟರ / ಮತಎಣಿಕೆ ಏಜೆಂಟರ ನಡುವಿನ ಜಾಗದಲ್ಲಿ, "ನಾವು, ಸಿಯು ಸಂಖ್ಯೆ (ಗಳು) ---------, ಮತದಾನ ಕೇಂದ್ರ ಸಂಖ್ಯೆ --------- ಅಲ್ಲಿ ಬಳಸಿರುವ ಸಿಯು ಸಂಖ್ಯೆಯು(ಗಳು) ಒಂದೇ ಆಗಿದೆ / ಆಗಿವೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇವೆ ಎಂದು ಪೆನ್ನಿನಲ್ಲಿ ಬರೆಯಬೇಕು.

14.2 ಮತದಾನದ ಪ್ರಾರಂಭ ಮತ್ತು ಮುಕ್ತಾಯದ ದಿನಾಂಕ ಮತ್ತು ಸಮಯದಲ್ಲಿ ಯಾವುದೇ ವ್ಯತ್ಯಾಸವಿದ್ದ ಸಂದರ್ಭದಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ

14.2.1ಖಅಣಕು ಮತದಾನ ಪ್ರಮಾಣಪತ್ರದಲ್ಲಿ ಬರೆದಿರುವ ದಿನಾಂಕ ಮತ್ತು ಸಮಯದೊಂದಿಗೆ ವ್ಯತ್ಯಾಸವನ್ನು ತಾಳೆ ಮಾಡುವುದು.

14.2.2 ಸದರಿ ವ್ಯತ್ಯಾಸವು, ಎಣಿಕೆ ಸಮಯದಲ್ಲಿ ಮತದಾನ ಪ್ರಾರಂಭ ಮತ್ತು ಮುಕ್ತಾಯದ ದಿನಾಂಕ ಮತ್ತು ಸಮಯದ ವ್ಯತ್ಯಾಸದೊಂದಿಗೆ ಹೊಂದಿಕೆಯಾಗದಿದ್ದ ಪಕ್ಷದಲ್ಲಿ, ಇವಿಎಂಗಳು/ವಿವಿಪ್ಯಾಟ್‌ಗಳನ್ನು ಪಕ್ಕಕ್ಕಿಟ್ಟು ಆಯೋಗಕ್ಕೆ ಈ ವಿಷಯವನ್ನು ಪರಾಮರ್ಶೆಗಾಗಿ ಕಳುಹಿಸುವುದು.

14.2.3 ಮತದಾನದ ಪ್ರಾರಂಭ ಮತ್ತು ಮುಕ್ತಾಯದ ದಿನಾಂಕ ಮತ್ತು ಸಮಯದೊಂದಿಗೆ ವ್ಯತ್ಯಾಸ ಹೊಂದಿಕೆಯಾಗುತ್ತಿದ್ದರೆ, ಮತ ಎಣಿಕೆ ಸಮಯದಲ್ಲಿ ಸೂಚಿಸಲಾಗಿರುವ ಅಭ್ಯರ್ಥಿಗಳು ಮತ್ತು ಅವರ ಪ್ರತಿನಿಧಿಗಳಿಗೆ ವ್ಯತ್ಯಾಸದ ಬಗ್ಗೆ ವಿವರಿಸುವುದು.

14.2.4 ಸಾಮಾನ್ಯ ರೀತಿಯಲ್ಲಿ ಇವಿಎಂನಲ್ಲಿ ಚಲಾಯಿಸಲಾದ ಮತಗಳ ಎಣಿಕೆ ಮಾಡುವುದು.

14.3 ಮತದಾನದ ಮಕ್ತಾಯದ ಸಮಯದಲ್ಲಿ ಕ್ಲೋಸ್ ಬಟನ್ ಅನ್ನು ಒತ್ತದಿರುವ ಸಂದರ್ಭದಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ– ಅಭ್ಯರ್ಥಿಗಳು/ಅವರ ಅಧಿಕೃತ ಏಜೆಂಟರ ಉಪಸ್ಥಿತಿಯಲ್ಲಿ ವಿಡಿಯೋ ಚಿತ್ರೀಕರಣದ ಕಣ್ಗಾವಲಿನಲ್ಲಿ ಮತಗಳ ಎಣಿಕೆಯ ಅವಧಿಯಲ್ಲಿ ಈ ಮುಂದಿನ ಕ್ರಮವನ್ನು ತೆಗೆದುಕೊಳ್ಳುವುದು:–

14.3.1 ಸಿಯು (ಕಂಟ್ರೋಲ್ ಯೂನಿಟ್) ಅನ್ನು, ಅದರ ಕ್ಯಾರಿಂಗ್ ಕೇಸ್ ಒಳಗಡೆ ಇಟ್ಟು ನಂತರ ಅದನ್ನು ಮತಎಣಿಕೆಯ ಸಭಾಂಗಣದಲ್ಲಿರುವ ರಿಟರ್ನಿಂಗ್ ಅಧಿಕಾರಿಯ ಅಭಿರಕ್ಷೆಯಲ್ಲಿಡತಕ್ಕದ್ದು. ಯಥಾಪ್ರಕಾರ ಇತರೆ ಯಂತ್ರಗಳಲ್ಲಿ ಮತಗಳ ಎಣಿಕೆ ಮಾಡುವುದು.

14.3.2 ಇತರೆ ಯಂತ್ರಗಳಲ್ಲಿನ ಮತಗಳ ಎಣಿಕೆ ಪೂರ್ಣಗೊಂಡಾಗ, ರಿಟರ್ನಿಂಗ್ ಅಧಿಕಾರಿ ಮತ್ತು ವೀಕ್ಷಕರು, ಅಂಥ ಮತಯಂತ್ರ(ಗಳು)ದಲ್ಲಿ ಚಲಾಯಿಸಲಾದ ಮತಗಳ ಪ್ರತಿಯಾಗಿ ಮೊದಲ ಸ್ಥಾನದಲ್ಲಿರುವ ಅಭ್ಯರ್ಥಿ ಮತ್ತು ಎರಡನೇಯ ಸ್ಥಾನದಲ್ಲಿರುವ ಅಭ್ಯರ್ಥಿ (ಖಣಟಿಟಿಜಡಿ ಣಠಿ) ಗಳ ನಡುವಿನ ಮತಗಳ ಅಂತರವನ್ನು ಪರಿಶೀಲಿಸಬೇಕು.

14.3.3 ಮತಗಳ ಅಂತರವು, ಆ ಯಂತ್ರ(ಗಳ)ದಲ್ಲಿ ಚಲಾವಣೆಗೊಂಡ ಒಟ್ಟು ಮತಗಳಿಗಿಂತ ಹೆಚ್ಚಿದ್ದ ಅಥವಾ ಕಡಿಮೆಯಿದ್ದ ಎರಡೂ ಸಂದರ್ಭಗಳಲ್ಲಿ, ರಿಟರ್ನಿಂಗ್ ಅಧಿಕಾರಿ / ಮತಎಣಿಕೆ ಮೇಲ್ವಿಚಾರಕರು, ಆ ಯಂತ್ರ(ಗಳ)ದಲ್ಲಿ ಚಲಾವಣೆಯಾದ ಒಟ್ಟು ಮತಗಳನ್ನು ನೋಡಲು ಕಂಟ್ರೋಲ್ ಯೂನಿಟ್‌ನ "ಟೋಟಲ್" ಬಟನ್ ಅನ್ನು ಒತ್ತಬೇಕು,

14.3.4 ಮತ ಯಂತ್ರ(ಗಳ)ದಲ್ಲಿ ಚಲಾವಣೆಯಾದ ಒಟ್ಟು ಮತಗಳು ನಮೂನೆ–17ಸಿ ನಲ್ಲಿ ನಮೂದಿಸಲಾದ

ಚಲಾವಣೆಯಾದ ಒಟ್ಟು ಮತಗಳೊಂದಿಗೆ ತಾಳೆಯಾದ ಸಂದರ್ಭದಲ್ಲಿ, ರಿಟರ್ನಿಂಗ್ ಅಧಿಕಾರಿ/ ಮತಎಣಿಕೆ ಮೇಲ್ವಿಚಾರಕರು, ಕಂಟ್ರೋಲ್ ಯೂನಿಟ್(ಗಳ)ನ "ಕ್ಲೋಸ್" ಬಟನ್ ಅನ್ನು ಒತ್ತಬೇಕು. ಹೀಗೆ ಮಾಡುವುದರಿಂದಾಗಿ "ರಿಸಲ್ಟ್" ಬಟನ್ ಅನ್ನು ಫಲಿತಾಂಶ ದತ್ತಾಂಶವನ್ನು ಪಡೆಯುವುದಕ್ಕಾಗಿ ಒತ್ತಬಹುದಾಗಿದೆ.

14.3.5 ಅಭ್ಯರ್ಥಿಗಳು ಮತ್ತು / ಅಥವಾ ಅವರ ಅಧಿಕೃತ ಏಜೆಂಟರುಗಳಿಗೆ ಸಂಪೂರ್ಣ ವಿಷಯವನ್ನು ವಿವರಿಸುವುದು ಮತ್ತು ಅಭ್ಯರ್ಥಿಗಳು/ಅವರ ಅಧಿಕೃತ ಏಜೆಂಟರುಗಳ ಸಹಿಗಳನ್ನು ಪಡೆದು ಈ ಬಗ್ಗೆ ನಡಾವಳಿಯನ್ನು ದಾಖಲಿಸುವುದು. ರಿಟರ್ನಿಂಗ್ ಅಧಿಕಾರಿ ಮತ್ತು ವೀಕ್ಷಕರು, ಅನುಬಂಧ–25ರಲ್ಲಿ ನಮೂದಿಸಲಾದ ಪ್ರಪತ್ರದಲ್ಲಿ ಆಯೋಗಕ್ಕೆ ಸವಿವರವಾದ ವರದಿಯನ್ನು ಕಳುಹಿಸತಕ್ಕದ್ದು.

14.3.6 ಮತಯಂತ್ರ(ಗಳ)ದಲ್ಲಿ ಚಲಾವಣೆಯಾದ ಒಟ್ಟು ಮತಗಳು, ನಮೂನೆ–17ಸಿ ನಲ್ಲಿ ನಮೂದಿಸಲಾದ ಚಲಾವಣೆಯಾದ ಒಟ್ಟು ಮತಗಳೊಂದಿಗೆ ತಾಳೆಯಾಗದಿದ್ದ ಸಂದರ್ಭದಲ್ಲಿ, ರಿಟರ್ನಿಂಗ್ ಅಧಿಕಾರಿಯು, ಆಯೋಗಕ್ಕೆ ವಿಷಯವನ್ನು ಪರಾಮರ್ಶೆಗಾಗಿ ಕಳುಹಿಸಿ ಆಯೋಗದ ನಿರ್ದೇಶನದ ಪ್ರಕಾರ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು. ಅಂಥ ಸಂದರ್ಭದಲ್ಲಿ, ರಿಟರ್ನಿಂಗ್ ಅಧಿಕಾರಿ ಮತ್ತು ವೀಕ್ಷಕರು, ಅತ್ಯಧಿಕ ಮತಗಳನ್ನು ಪಡೆದಿರುವ ಅಭ್ಯರ್ಥಿ ಮತ್ತು ಎರಡನೇ ಸ್ಥಾನದಲ್ಲಿರುವ ಅಭ್ಯರ್ಥಿ(ಖಣಟಟಜಡಿ ಣಥಿ)ಗಳ ನಡುವಿನ ಮತಗಳ ಅಂತರವು, ಪ್ರಶ್ನಿತ ಕಂಟ್ರೋಲ್ ಯೂನಿಟ್‌ನಲ್ಲಿ ಚಲಾವಣೆಯಾದ ಮತಗಳಿಗಿಂತ ಹೆಚ್ಚಿದ್ದ ಪಕ್ಷದಲ್ಲಿ ಅನುಬಂಧ–26ರಲ್ಲಿ ಹಾಗೂ ಅಂಥ ಮತಗಳ ಅಂತರವು ಕಡಿಮೆ ಇದ್ದ ಸಂದರ್ಭದಲ್ಲಿ ಅನುಬಂಧ–27ರಲ್ಲಿ ನಮೂದಿಸಿರುವ ಪ್ರಪತ್ರಗಳಲ್ಲಿ ಆಯೋಗಕ್ಕೆ ಸವಿವರವಾದ ವರದಿಯನ್ನು ಸಹ ಕಳುಹಿಸತಕ್ಕದ್ದು.

14.4 ಮತ ಎಣಿಕೆ ಸಮಯದಲ್ಲಿ ಕಂಟ್ರೋಲ್ ಯೂನಿಟ್ ಫಲಿತಾಂಶವನ್ನು ಪ್ರದರ್ಶಿಸದಿರುವ ಸಂದರ್ಭದಲ್ಲಿ ಸೂಚನೆಗಳು.

ಎ) ಫಲಿತಾಂಶವನ್ನು ಪಡೆಯಲು ಸಿಯು(ಕಂಟ್ರೋಲ್ ಯೂನಿಟ್)ನಲ್ಲಿ ಮೊದಲು ಹೊಸ ಪವರ್ ಪ್ಯಾಕ್ ಅನ್ನು ಅಳವಡಿಸುವುದು. ಆಗಲೂ ಸಹ ಸಿಯು (ಕಂಟ್ರೋಲ್ ಯೂನಿಟ್) ಫಲಿತಾಂಶವನ್ನು ಪ್ರದರ್ಶಿಸದಿದ್ದಲ್ಲಿ, ಸಿಯು(ಕಂಟ್ರೋಲ್ ಯೂನಿಟ್) ಅನ್ನು ಅದರ ಕ್ಯಾರಿಂಗ್ ಕೇಸ್‌ನೊಳಗಡೆ ಇಟ್ಟು ಅದನ್ನು ಮತಎಣಿಕೆ ಸಭಾಂಗಣದಲ್ಲಿರುವ ರಿಟರ್ನಿಂಗ್

ಅಧಿಕಾರಿಯ ಅಭಿರಕ್ಷೆಯಲ್ಲಿರಿಸತಕ್ಕದ್ದು. ಇತರೆ ಯಂತ್ರಗಳಲ್ಲಿ ಮತಗಳ ಎಣಿಕೆಯನ್ನು ಯಥಾಪ್ರಕಾರ ಮುಂದುವರಿಯತಕ್ಕದ್ದು.

ಬಿ) ಸಂವಾದಿ ವಿವಿಪ್ಯಾಟ್‌ಗಳನ್ನು, 14.10ರ ಪ್ರಕಾರ ಎಣಿಕೆ ಮಾಡತಕ್ಕದ್ದು.

ಸಿ) ವಿವಿಪ್ಯಾಟ್‌ನ ಮುದ್ರಿತ ಬ್ಯಾಲೆಟ್ ಸ್ಲಿಪ್‌ಗಳ ಎಣಿಕೆಗೆ ಸಂಬಂಧಿಸಿದ ವರದಿಯನ್ನು ಸಂಬಂಧಪಟ್ಟ ಮುಖ್ಯ ಚುನಾವಣಾಧಿಕಾರಿ ಮೂಲಕ ಈ ಕೆಳಕಂಡ ನಮೂನೆಯಲ್ಲಿ ಮಾಹಿತಿಗಾಗಿ ಆಯೋಗಕ್ಕೆ ಕಳುಹಿಸತಕ್ಕದ್ದು.

| ಕ್ರಮ ಸಂಖ್ಯೆ | ವಿಧಾನಸಭಾ ಮತಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಮತದಾನ ಕೇಂದ್ರದ ಸಂಖ್ಯೆ | ವಿವಿಪ್ಯಾಟ್‌ನ ಯೂನಿಟ್ ಐಡಿ | ವಿವಿಪ್ಯಾಟ್‌ನ ಪೇಪರ್ ಸ್ಲಿಪ್‌ಗಳನ್ನು ಎಣಿಕೆ ಮಾಡಿರುವ ಕಂಟ್ರೋಲ್ ಯೂನಿಟ್‌ನ ವಿಶಿಷ್ಟ ಗುರುತಿನ ಸಂಖ್ಯೆ | |
|---|---|---|---|---|---|
| | | | | ಸಿಯುದಿಂದ ಫಲಿತಾಂಶವನ್ನು ಮತ್ತೆ ಪಡೆಯದಿರುವುದು | ಚುನಾವಣೆಗಳನ್ನು ನಡೆಸುವ ನಿಯಮಗಳು, 1961ರ ನಿಯಮ 56ಡಿ ನ ಮೇರೆಗೆ |
| | | | | | |

14.5 ವಿವಿಪ್ಯಾಟ್ ಸ್ಲಿಪ್‌ಗಳ ಎಣಿಕೆಗೆ ಸಂಬಂಧಿಸಿದ ವಿವಾದಗಳು: ಕಂಟ್ರೋಲ್ ಯೂನಿಟ್‌ನಿಂದ ಅಣಕು ಮತದಾನ ದತ್ತಾಂಶವನ್ನು ಅಳಿಸದಿರುವುದು ಅಥವಾ ವಿವಿಪ್ಯಾಟ್ ನಿಂದ ಅಣಕು ಮತದಾನ ಸ್ಲಿಪ್‌ಗಳನ್ನು ತೆಗೆದುಹಾಕದಿರುವುದು–

14.5.1 ಪ್ರಿಸೈಡಿಂಗ್ ಅಧಿಕಾರಿಯು, ಕಂಟ್ರೋಲ್ ಯೂನಿಟ್‌ನಿಂದ ಅಣಕು ಮತದಾನದ ದತ್ತಾಂಶವನ್ನು ಅಳಿಸಿಹಾಕಲು ಅಥವಾ ವಿವಿಪ್ಯಾಟ್‌ನ ಡ್ರಾಪ್‌ಬಾಕ್ಸ್‌ನಿಂದ ಅಣಕು ಮತದಾನಕ್ಕೆ ಸಂಬಂಧಿಸಿದ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ತೆಗೆದುಹಾಕಲು ವಿಫಲನಾದ ಪಕ್ಷದಲ್ಲಿ, ಅಂಥ ಎಲ್ಲಾ ಪ್ರಕರಣಗಳಲ್ಲಿ ಎಣಿಕೆಯ ಅವಧಿಯಲ್ಲಿ ಈ ಕೆಳಕಂಡ ಕಾರ್ಯವಿಧಾನವನ್ನು ಅಳವಡಿಸಿಕೊಳ್ಳಬೇಕು.

ಎ) <u>ಮತಗಳ ಎಣಿಕೆಯ ಅವಧಿಯಲ್ಲಿ ಸಂಬಂಧಿಸಿದ ಸಿಯು (ಕಂಟ್ರೋಲ್ ಯೂನಿಟ್‌ಗಳ)ವನ್ನು ಪಕ್ಕಕ್ಕಿಟ್ಟುಕೊಳ್ಳಬೇಕು.</u> ಎಂದರೆ, ಈ ಮತದಾನ ಕೇಂದ್ರಗಳು, ಸಿಯು(ಕಂಟ್ರೋಲ್ ಯೂನಿಟ್‌ಗಳು)ನ ನಿಯತ ಸುತ್ತುವಾರು ಎಣಿಕೆಯ ಭಾಗವಾಗಿರುವುದಿಲ್ಲ. ಅಂಥ ಮತದಾನ ಕೇಂದ್ರಗಳಿಗೆ ಹಂಚಿಕೆಯಾದ ಮೇಜನ್ನು ಸಂಬಂಧಪಟ್ಟ ಮತ ಎಣಿಕೆ ಸುತ್ತಿನಲ್ಲಿ ಖಾಲಿ ಇಟ್ಟಿರಬೇಕು.

ಬಿ) ಎಲ್ಲಾ ಪೂರ್ವ–ಗುರುತಿಸಲಾದ ಸಂದರ್ಭಗಳಲ್ಲಿ (ಮತದಾನ ದಿನದಂದು, ಪಿ+1 ದಿನದಂದು ದಸ್ತಾವೇಜುಗಳ ಪರಿಶೀಲನೆ ಇತ್ಯಾದಿ ಅವಧಿಯಲ್ಲಿ), ಮತ ಎಣಿಕೆ ಪ್ರಕ್ರಿಯೆ ಪ್ರಾರಂಭಿಸುವುದಕ್ಕೆ ಮುಂಚೆ ಸ್ಪರ್ಧಿಸಿರುವ ಅಭ್ಯರ್ಥಿಗಳೊಂದಿಗೆ ಅಂಥ ಎಲ್ಲಾ ಮತದಾನ ಕೇಂದ್ರಗಳ ಪಟ್ಟಿಯನ್ನು ಹಂಚಿಕೊಳ್ಳುವುದು.

ಸಿ) ಇವಿಎಂಗಳ ಸುತ್ತುವಾರು ಎಣಿಕೆ ಅವಧಿಯಲ್ಲಿ, ಸಿಯುನಲ್ಲಿ ದಾಖಲಾದ ಒಟ್ಟು ಮತಗಳು ನಮೂನೆ 17–ಸಿ ನಲ್ಲಿ ನಮೂದಿಸಿದ ಒಟ್ಟು ಮತಗಳು ದಾಖಲೆ ಹೊಂದಿಕೆಯಾಗದಿದ್ದರೆ, ಅಣಕು ಮತದಾನದ ತರುವಾಯ ಕ್ಲೋಸ್–ರಿಸಲ್ಟ್–ಕ್ಲಿಯರ್(ಸಿಆರ್‌ಸಿ) ಶಿಷ್ಟಾಚಾರವನ್ನು; ನೈಜ ಮತದಾನದ ಅವಧಿಯಲ್ಲಿ ಈ ಮತದಾನ ಕೇಂದ್ರದಲ್ಲಿ ಪಾಲಿಸಿಲ್ಲ ಎಂದು ಇದು ಸೂಚಿಸುತ್ತದೆ.

ಡಿ) ಆರ್‌ಓ/ಎಆರ್‌ಓ ರವರು, ಮತ ಎಣಿಕೆ ಸಭಾಂಗಣದಲ್ಲಿ ಉಪಸ್ಥಿತವಿರುವ ಸ್ಪರ್ಧಿಸಿರುವ ಅಭ್ಯರ್ಥಿಗಳು/ಚುನಾವಣಾ ಏಜೆಂಟರುಗಳು/ ಮತ ಎಣಿಕೆ ಏಜೆಂಟರುಗಳಿಗೆ ಅಂಥ ಸನ್ನಿವೇಶಗಳ ನಿಖರವಾದ ವಿವರಗಳು ಮತ್ತು ಕಾರಣಗಳನ್ನು ವಿವರಿಸಬೇಕು.

ಇ) ಮೇಲಿನ (ಬಿ) ಮತ್ತು (ಸಿ)ಯಲ್ಲಿ ಬರುವ ಎಲ್ಲಾ ಸಂದರ್ಭಗಳಲ್ಲಿ, ಸಿಯುಗಳ ಎಲ್ಲಾ ಮತ ಎಣಿಕೆ ಸುತ್ತುಗಳು ಪೂರ್ಣಗೊಂಡ ತರುವಾಯ ಈ ಮತದಾನ ಕೇಂದ್ರಗಳ ಸಂವಾದಿ ವಿವಿಪ್ಯಾಟ್‌ಗಳನ್ನು ಎಣಿಕೆ ಮಾಡುವುದು.

14.5.2 ಕಂಟ್ರೋಲ್ ಯೂನಿಟ್‌ನ ಮತ ಎಣಿಕೆಯ ಎಲ್ಲಾ ನಿಯತ ಸುತ್ತುಗಳು ಪೂರ್ಣಗೊಂಡ ನಂತರ, ಮುಂದಿನ ಕಾರ್ಯವಿಧಾನವನ್ನು ಅನುಸರಿಸುವುದು:

**ಎ. ರಾಜ್ಯ ವಿಧಾನಸಭಾ ಚುನಾವಣೆಗಳಿಗಾಗಿ**

ಗೆಲುವಿನ ಅಂತರವು, ಅಂಥ ಎಲ್ಲಾ ಮತದಾನ ಕೇಂದ್ರಗಳಲ್ಲಿ ಚಲಾಯಿಸಲಾದ ಒಟ್ಟು ಮತಗಳಿಗಿಂತ ಹೆಚ್ಚಾಗಿದ್ದರೆ, ಮತಎಣಿಕೆಗಾಗಿ ಈ ಮತದಾನ ಕೇಂದ್ರಗಳನ್ನು ಪರಿಗಣಿಸದೇ ಈ ಮತದಾನ ಕೇಂದ್ರಗಳನ್ನು ಹೊರತುಪಡಿಸಿ ಫಲಿತಾಂಶವನ್ನು ಘೋಷಿಸುವುದು.

ಗೆಲುವಿನ ಅಂತರವು, ಈ ಮತದಾನ ಕೇಂದ್ರಗಳಲ್ಲಿ ಚಲಾಯಿಸಲಾದ ಒಟ್ಟು ಮತಗಳಿಗೆ ಸಮಾನವಾಗಿ ಅಥವಾ ಅವುಗಳಿಗಿಂತ ಕಡಿಮೆಯಿದ್ದರೆ, ಸಂಬಂಧಪಟ್ಟ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ಮಾತ್ರ ಲೆಕ್ಕ ಹಾಕುವುದು ಮತ್ತು ಕಂಟ್ರೋಲ್ ಯೂನಿಟ್‌ಗಳನ್ನು ವಿಲೇ ಮಾಡುವುದು.

ಅಣಕು ಮತದಾನಕ್ಕೆ ಸಂಬಂಧಿಸಿದ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು, ವಿವಿಪ್ಯಾಟ್‌ನ ಡ್ರಾಪ್‌ಬಾಕ್ಸ್‌ನಿಂದ ಹೊರ ತೆಗೆಯದಿರುವ ಸಂದರ್ಭಗಳಲ್ಲಿಯೂ ಸಹ, ಚಲಾಯಿಸಲಾದ ಅಭ್ಯರ್ಥಿವಾರು ಮತಗಳ ಸರಿಯಾದ ಲೆಕ್ಕ ಬರಲು ಅಣಕು ಮತದಾನ ಪ್ರಮಾಣಪತ್ರದಿಂದ ಅಭ್ಯರ್ಥಿವಾರು ಮತಗಳನ್ನು ಕಳೆದು ವಿವಿಪ್ಯಾಟ್ ಸ್ಲಿಪ್‌ಗಳನ್ನು ಎಣಿಕೆ ಮಾಡುವುದು.

**ಬಿ. ಲೋಕಸಭಾ ಚುನಾವಣೆಗಳಿಗಾಗಿ**

ಎಲ್ಲಾ ಮತದಾನ ಕೇಂದ್ರಗಳ ಇವಿಎಂ ಮತ್ತು ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ಮಾತ್ರ ಎಣಿಕೆ ಮಾಡುವುದು ಮತ್ತು ಕಂಟ್ರೋಲ್ ಯೂನಿಟ್‌ಗಳನ್ನು ವಿಲೇವಾರಿ ಮಾಡುವುದು.

ಸಂಬಂಧಿಸಿದ ಅಣಕು ಮತದಾನದ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು, ವಿವಿಪ್ಯಾಟ್‌ನ ಡ್ರಾಪ್‌ಬಾಕ್ಸ್‌ನಿಂದ ಹೊರ ತೆಗೆಯದಿರುವ ಸಂದರ್ಭಗಳಲ್ಲಿಯೂ ಸಹ, ಚಲಾಯಿಸಲಾದ ಅಭ್ಯರ್ಥಿವಾರು ಮತಗಳ ಸರಿಯಾದ ಎಣಿಕೆ ಬರಲು ಅಣಕು ಮತದಾನ ಪ್ರಮಾಣಪತ್ರದಿಂದ ಅಭ್ಯರ್ಥಿವಾರು ಮತಗಳನ್ನು ಕಳೆದು ವಿವಿಪ್ಯಾಟ್ ಸ್ಲಿಪ್‌ಗಳನ್ನು ಎಣಿಕೆ ಮಾಡುವುದು.

(ಎ) ಮತ್ತು (ಬಿ) ಎರಡಕ್ಕಾಗಿ, ಅಭ್ಯರ್ಥಿವಾರು ತಾಳೆಯಾಗಲು ಎಲ್ಲಾ ಈ ಮತದಾನ ಕೇಂದ್ರಗಳ ಫಲಿತಾಂಶವನ್ನು ವಿವಿಪ್ಯಾಟ್ ಪೇಪರ್ ಸ್ಲಿಪ್ ಎಣಿಕೆಗೆ ಸೇರಿಸುವುದು ಮತ್ತು ಅಂತಿಮ ಫಲಿತಾಂಶವನ್ನು ಒಟ್ಟುಗೂಡಿಸುವುದು.

14.5.3 ಮೇಲೆ ಹೇಳಲಾದ ಸಂದರ್ಭಗಳಲ್ಲಿ, ಕಂಟ್ರೋಲ್ ಯೂನಿಟ್(ಗಳು) ಮತಗಳ ಎಣಿಕೆಗಾಗಿ ತೆಗೆದುಕೊಳ್ಳದಿರುವುದರಿಂದ/ಬಳಸದಿರುವುದರಿಂದ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಎಣಿಕೆಗಾಗಿ ಕಡ್ಡಾಯ ಪರಿಶೀಲನೆಗೆ 5(ಐದು) ಮತದಾನ ಕೇಂದ್ರಗಳ ಯಾದೃಚ್ಛಿಕ ಆಯ್ಕೆಯಿಂದ ಈ ಮತದಾನ ಕೇಂದ್ರಗಳನ್ನು ಹೊರತುಪಡಿಸಲಾಗುವುದು.

**14.5.4 ವಿವಿಪ್ಯಾಟ್ ಸ್ಲಿಪ್‌ಗಳ ಕಡ್ಡಾಯ ಪರಿಶೀಲನೆ:**

ಎ) ಯಾದೃಚ್ಛಿಕವಾಗಿ ಆಯ್ಕೆ ಮಾಡಲಾದ 5 ಮತದಾನ ಕೇಂದ್ರಗಳಿಂದ ವಿವಿಪ್ಯಾಟ್‌ಗಳು ಮತ್ತು ಸಿಯುಗಳ ಕಡ್ಡಾಯ ಮತಎಣಿಕೆ ಮತ್ತು ಫಲಿತಾಂಶದ ಹೊಂದಾಣಿಕೆಯ ಉದ್ದೇಶ ಪರಿಶೀಲಿಸುವುದು ಹಾಗೂ ಪರೀಕ್ಷಿಸುವುದಾಗಿದೆ. ಒಂದು ವೇಳೆ ಇವಿಎಂನಲ್ಲಿ ದಾಖಲಾದ ಮತಗಳು ಅದಕ್ಕೆ ಜೋಡಿಸಲಾದ ವಿವಿಪ್ಯಾಟ್ ಮುದ್ರಿತ ಸ್ಲಿಪ್‌ಗಳು ಭಿನ್ನವಾಗಿದ್ದರೆ, ಇಲ್ಲಿ ವಿವಿಪ್ಯಾಟ್ ಸ್ಲಿಪ್‌ಗಳನ್ನು ಅಣಕು ಮತದಾನದ ತರುವಾಯ ವಿವಿಪ್ಯಾಟ್‌ನಿಂದ ಪೂರ್ತಿಯಾಗಿ

ತೆಗೆದಿರುವುದು ಅಥವಾ ಅಣಕು ಮತದಾನದ ನಂತರ ಸಿಯುನಲ್ಲಿ ಸಿಆರ್‌ಸಿಯನ್ನು ಪಾಲಿಸದಿರುವುದು ಅಥವಾ ಮಾನವ ತಪ್ಪಿನ ಅಂಥ ಇತರೆ ಸಂದರ್ಭಗಳಿಂದಾಗಿ ಈ ರೀತಿಯ ಸನ್ನಿವೇಶಗಳಿಗೆ ಕಾರಣವಾಗಿರಬಹುದು.

ಬಿ) ಕಂಟ್ರೋಲ್ ಯೂನಿಟ್‌ನ ವಿದ್ಯುನ್ಮಾನ ಅಭ್ಯರ್ಥಿವಾರು ಫಲಿತಾಂಶ ಮತ್ತು ಅಭ್ಯರ್ಥಿವಾರು ವಿವಿಪ್ಯಾಟ್ ಸ್ಲಿಪ್‌ಗಳ ಮ್ಯಾನ್ಯುಯಲ್ ಎಣಿಕೆಯ ನಡುವೆ ಯಾವುದೇ ಹೊಂದಿಕೆಯಾಗದಿರುವ ಸಂದರ್ಭದಲ್ಲಿ, ಇವಿಎಂ ಎಣಿಕೆ ಅಥವಾ ಹಿಂದಿನ ವಿವಿಪ್ಯಾಟ್ ಸ್ಲಿಪ್‌ಗಳ ಎಣಿಕೆಯೊಂದಿಗೆ ವಿವಿಪ್ಯಾಟ್ ಸ್ಲಿಪ್‌ಗಳು ಹೊಂದಾಣಿಕೆಯಾಗುವವರೆಗೆ ಮರುಎಣಿಕೆ ಮಾಡತಕ್ಕದ್ದು. ಆದಾಗ್ಯೂ, ಅಂಥ ಎಲ್ಲಾ ಸಂದರ್ಭಗಳಲ್ಲಿ ಮುಂಚೆಯೆ ವಿವಿಪ್ಯಾಟ್ ಸ್ಲಿಪ್‌ಗಳನ್ನು ಮರು ಎಣಿಕೆಗೆ ತೆಗೆದುಕೊಳ್ಳತಕ್ಕದ್ದು.

ಸಿ) ಯಾರೇ ಅಭ್ಯರ್ಥಿಗಳಿಗೆ ಸಂಬಂಧಿಸಿದ ಸಿಯು ಎಣಿಕೆ ಮತ್ತು ವಿವಿಪ್ಯಾಟ್ ಎಣಿಕೆಯ ಫಲಿತಾಂಶ ತಾಳೆಯಾಗದಿದ್ದಲ್ಲಿ, ಮತಎಣಿಕೆ ಮೇಲ್ವಿಚಾರಕರು, ಪ್ರತಿಯೊಂದು ಬಂಡಲ್ ಅನ್ನು ಒಂದಾದ ನಂತರ ಮತ್ತೊಂದನ್ನು ಎಚ್ಚರಿಕೆಯಿಂದ ಪ್ರತಿಯೊಂದು ವಿವಿಪ್ಯಾಟ್ ಸ್ಲಿಪ್‌ನ ಚುನಾವಣಾ ಚಿಹ್ನೆಗಳನ್ನು ಮರು ತಾಳೆ ನೋಡಬೇಕು. ಮತ್ತು ಎಲ್ಲಾ ಬಂಡಲ್‌ಗಳು, ಸಂಬಂಧಿಸಿದ ಅಭ್ಯರ್ಥಿಯ ವಿವಿಪ್ಯಾಟ್ ಸ್ಲಿಪ್‌ನ್ನು ಮಾತ್ರ ಒಳಗೊಂಡಿದೆ ಎಂದು ಖಚಿತಪಡಿಸಿಕೊಳ್ಳಬೇಕು. ಮೇಲಿನ ಪ್ರಕ್ರಿಯೆಯನ್ನು ಅನುಸರಿಸಿದ ನಂತರ ಮಾತ್ರ ಮರು ಮತಎಣಿಕೆ ಮಾಡುವುದು.

ಡಿ) ಮೇಲಿನ ಪ್ರಕ್ರಿಯೆಯನ್ನು ಅನುಸರಿಸಿದ ನಂತರವೂ ಸಹ, ಕಂಟ್ರೋಲ್ ಯೂನಿಟ್‌ನ ವಿದ್ಯುನ್ಮಾನ ಎಣಿಕೆ ಮತ್ತು ವಿವಿಪ್ಯಾಟ್ ಸ್ಲಿಪ್‌ಗಳ ಮ್ಯಾನ್ಯುಯಲ್ (ಕೈಯಿಂದ ಮಾಡಿದ) ಎಣಿಕೆ ತಾಳೆಯಾಗದಿದ್ದರೆ, ವಿವಿಪ್ಯಾಟ್ ಸ್ಲಿಪ್ ಎಣಿಕೆಯನ್ನು, ಚುನಾವಣೆಗಳನ್ನು ನಡೆಸುವ ನಿಯಮಗಳು, 1961ರ ನಿಯಮ 56ಡಿ (4)(ಬಿ) ಅನುಸಾರವಾಗಿ ಗಣನೆಗೆ ತೆಗೆದುಕೊಳ್ಳುವುದು. ಫಲಿತಾಂಶ ಶೀಟ್ ಅನ್ನು ತಿದ್ದುಪಡಿ ಮಾಡುವುದು ಮತ್ತು ತದನುಸಾರವಾಗಿ ಅಂತಿಮ ಫಲಿತಾಂಶವನ್ನು ಘೋಷಿಸುವುದು.

ಇ) ವಿವಿಪ್ಯಾಟ್ ಸ್ಲಿಪ್ ಎಣಿಕೆ, ಸಿಯುನ ವಿದ್ಯುನ್ಮಾನ ಫಲಿತಾಂಶದೊಂದಿಗೆ ತಾಳೆಯಾಗದಿದ್ದಲ್ಲಿ, ಎಲ್ಲಾ ಸಂದರ್ಭಗಳಲ್ಲಿಯೂ, ಯುಕ್ತ ಕ್ರಮದಲ್ಲಿ ಸಂಪೂರ್ಣ ವಿಶ್ಲೇಷಣೆ/ವಿಚಾರಣೆಯನ್ನು ನಡೆಸಲಾಗುವುದು. ಮತ್ತು ನಿಖರವಾದ ಕಾರಣಗಳು  ತಾಂತ್ರಿಕ, ಪ್ರಕ್ರಿಯಾ ಸಂಬಂಧಿ, ಕ್ರಮಬದ್ಧತೆ, ಮಾನವ (ಹ್ಯೂಮನ್) ತಪ್ಪು ಅಥವಾ ಅನುಸರಣೆಯ ಲೋಪವನ್ನು ನಿರ್ಧರಿಸಲಾಗುವುದು.

ಎಫ್) ಮತದಾನಕ್ಕಾಗಿ ಬಳಸಿದ ಎಲ್ಲಾ ಇವಿಎಂಗಳ ಕ್ರಮಸಂಖ್ಯೆಯನ್ನು, ಮತ ಎಣಿಕೆ ಏಜೆಂಟರುಗಳು ಪ್ರತಿ ಪರಿಶೀಲನೆ ಮಾಡಬೇಕು ಮತ್ತು ಮತ ಎಣಿಕೆ ಸಮಯದಲ್ಲಿ ಅವರಿಂದ ಹಾಗೆಂದು ಪ್ರಮಾಣಪತ್ರವನ್ನು ಪಡೆಯುವುದು.

**14.6 ನಿಯಮ 56ರಡಿ ವಿವಿಪ್ಯಾಟ್ ಸ್ಲಿಪ್‌ಗಳ ಎಣಿಕೆಗೆ ಅಭ್ಯರ್ಥಿ ಒತ್ತಾಯಿಸುವುದು**

ಫಲಿತಾಂಶ ಹಾಳೆ ನಮೂದುಗಳ ಘೋಷಣೆಯ ನಂತರ, ಯಾರೇ ಅಭ್ಯರ್ಥಿ, ಅವರ ಚುನಾವಣಾ ಏಜೆಂಟ್ ಅಥವಾ ಅವರ ಮತಎಣಿಕೆ ಏಜೆಂಟರುಗಳು, ಯಾವುದೇ ಅಥವಾ ಎಲ್ಲಾ ಮತದಾನ ಕೇಂದ್ರಗಳ ಮುದ್ರಿತ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ಎಣಿಕೆ ಮಾಡುವಂತೆ ಆರ್‌ಓ(ರಿಟರ್ನಿಂಗ್ ಅಧಿಕಾರಿ)ರವರಿಗೆ ಲಿಖಿತದಲ್ಲಿ ಅರ್ಜಿಯನ್ನು ಸಲ್ಲಿಸಬಹುದು. ಅಂಥ ಅರ್ಜಿಯು ಬಂದಲ್ಲಿ ಆರ್‌ಓರವರು, ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ಎಣಿಕೆ ಮಾಡಬೇಕೇ ಎಂಬ ಬಗ್ಗೆ ಸಕಾರಣ ಆದೇಶವನ್ನು ಹೊರಡಿಸತಕ್ಕದ್ದು. ಆರ್‌ಓರವರು, ಯಾವುದೇ ಅಥವಾ ಎಲ್ಲಾ ಮತದಾನ ಕೇಂದ್ರಗಳ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಎಣಿಕೆಗೆ ಅವಕಾಶ ಮಾಡಿಕೊಡಲು ತೀರ್ಮಾನಿಸಿದರೆ, ಆರ್‌ಓರವರು ಅಂಥ ತೀರ್ಮಾನವನ್ನು ಅದರ ಕಾರಣಗಳೊಂದಿಗೆ ಲಿಖಿತವಾಗಿ ದಾಖಲಿಸಬೇಕು. ಆರ್‌ಓರವರು, ಈ ಮುಂದಿನವುಗಳಿಗೆ ಯಥೋಚಿತ ಗಮನವನ್ನು ಕೊಡತಕ್ಕದ್ದು.

14.6.1 ಆ ಮತದಾನ ಕೇಂದ್ರದಲ್ಲಿ ಚಲಾಯಿಸಲಾದ ಮತಗಳ ಒಟ್ಟು ಸಂಖ್ಯೆಯು, ವಿನ್ನಿಂಗ್ (ಗೆಲ್ಲುವ) ಅಭ್ಯರ್ಥಿ ಮತ್ತು ಮತ ಎಣಿಕೆಗೆ ಒತ್ತಾಯಿಸಿರುವ ಅಭ್ಯರ್ಥಿಯ ನಡುವಿನ ಮತಗಳ ಅಂತರಕ್ಕಿಂತ ಹೆಚ್ಚಾಗಿದೆಯೇ ಅಥವಾ ಕಡಿಮೆಯಾಗಿದೆಯೇ.

14.6.2 ಮತದಾನದ ಅವಧಿಯಲ್ಲಿ ಆ ಮತದಾನ ಕೇಂದ್ರದಲ್ಲಿ ಇವಿಎಂ ಸಮಸ್ಯೆಯಿಂದ ಕೂಡಿತ್ತೇ ಮತ್ತು ಬದಲಾಯಿಸಲಾಗಿತ್ತೇ.

14.6.3 ಮತದಾನದ ಅವಧಿಯಲ್ಲಿ ಆ ಮತದಾನ ಕೇಂದ್ರದಲ್ಲಿ ನಿಯಮ 49ಎಂಎ ಅಡಿ ಯಾರೇ ಮತದಾರನು ವಿವಿಪ್ಯಾಟ್ ಮುದ್ರಿಸದಿರುವ ಬಗ್ಗೆ ಯಾವುದೇ ದೂರು ಅಥವಾ ದೂರುಗಳನ್ನು ನೀಡಿದ್ದಾರೆಯೇ.

**14.7 ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಕಡ್ಡಾಯ ಪರಿಶೀಲನೆ**

ಇವಿಎಂಗಳಲ್ಲಿ ದಾಖಲಾದ ಮತಗಳ ಎಣಿಕೆಯ ಅಂತಿಮ ಸುತ್ತು ಮುಗಿದ ನಂತರ, ಚುನಾವಣೆಗಳನ್ನು ನಡೆಸುವ ನಿಯಮಗಳು, 1961ರ ನಿಯಮ, 56ಡಿ ಯ ಉಪಬಂಧಗಳ ಜೊತೆಗೆ, ಲೋಕಸಭಾ ಮತ್ತು ರಾಜ್ಯ ವಿಧಾನಸಭೆಗಳಿಗೆ ನಡೆಯುವ ಎಲ್ಲಾ ಸಾರ್ವತ್ರಿಕ ಮತ್ತು ಉಪ-ಚುನಾವಣೆಗಳಲ್ಲಿ ಯಾದೃಚ್ಛಿಕವಾಗಿ ಆಯ್ಕೆಮಾಡಿದ 05(ಐದು)

ಮತದಾನ ಕೇಂದ್ರಗಳ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಕಡ್ಡಾಯ ಪರಿಶೀಲನೆಯನ್ನು ಈ ಕೆಳಗಿನಂತೆ ನಡೆಸತಕ್ಕದ್ದು.

**ರಾಜ್ಯ ವಿಧಾನಸಭೆಗಳಿಗೆ ಸಾರ್ವತ್ರಿಕ ಮತ್ತು ಉಪ-ಚುನಾವಣೆಗಳ ಸಂದರ್ಭದಲ್ಲಿ, ಪ್ರತಿ ವಿಧಾನಸಭಾ ಮತಕ್ಷೇತ್ರಕ್ಕೆ ಯಾದೃಚ್ಛಿಕವಾಗಿ ಆಯ್ಕೆ ಮಾಡಲಾದ 05(ಐದು) ಮತದಾನ ಕೇಂದ್ರಗಳ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಪರಿಶೀಲನೆ ಮಾಡಬೇಕು.**

ಲೋಕಸಭೆಗೆ ನಡೆಯುವ ಸಾರ್ವತ್ರಿಕ ಮತ್ತು ಉಪ-ಚುನವಣೆಗಳ ಸಂದರ್ಭದಲ್ಲಿ, ಸಂಬಂಧಪಟ್ಟ ಲೋಕಸಭಾ ಮತಕ್ಷೇತ್ರದ ಪ್ರತಿ ವಿಧಾನಸಭಾ ವಿಭಾಗದ ಯಾದೃಚ್ಛಿಕವಾಗಿ ಆಯ್ಕೆ ಮಾಡಲಾದ **05(ಐದು) ಮತದಾನ ಕೇಂದ್ರಗಳ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಪರಿಶೀಲನೆ ಮಾಡಬೇಕು**. ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಈ ಕಡ್ಡಾಯ ಪರಿಶೀಲನೆಗಾಗಿ, ಮುಂದಿನ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು:

14.7.1 ಕಂಟ್ರೋಲ್ ಯೂನಿಟ್(ಗಳು)ದಿಂದ ಫಲಿತಾಂಶ ಪ್ರದರ್ಶನಗೊಳ್ಳದ ಕಾರಣದಿಂದಾಗಿ ಅಥವಾ ಚುನಾವಣೆಗಳನ್ನು ನಡೆಸುವ ನಿಯಮಗಳು, 1961ರ ನಿಯಮ 56(ಡಿ)ಯ ಮೇರೆಗೆ ಅಥವಾ ಇನ್ನಾವುದೋ ಕಾರಣಕ್ಕಾಗಿ, ಇವಿಎಂಗಳು ಮತ್ತು ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಎಣಿಕೆಯಲ್ಲಿ ದಾಖಲಾದ ಮತಗಳ ಎಣಿಕೆಯ ಅಂತಿಮ ಸುತ್ತು ಮುಗಿದ ನಂತರ ಪ್ರತಿಯೊಂದು ವಿಧಾನಸಭಾ ಚುನಾವಣಾಕ್ಷೇತ್ರ / ಭಾಗಕ್ಕೆ ಯಾದೃಚ್ಛಿಕವಾಗಿ ಆಯ್ಕೆ ಮಾಡಲಾದ 05(ಐದು) ಮತದಾನ ಕೇಂದ್ರಗಳ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ಪರಿಶೀಲನೆ ಮಾಡಬೇಕು.

14.7.2 ಪ್ರತಿ ವಿಧಾನಸಭಾ ಮತಕ್ಷೇತ್ರ / ವಿಭಾಗದ 05(ಐದು) ಮತದಾನ ಕೇಂದ್ರಗಳ ಯಾದೃಚ್ಛಿಕ ಆಯ್ಕೆಯನ್ನು, ಸಂಬಂಧಪಟ್ಟ ರಿಟರ್ನಿಂಗ್ ಅಧಿಕಾರಿಯವರು, ಅಭ್ಯರ್ಥಿಗಳು/ಅವರ ಏಜೆಂಟರುಗಳು ಮತ್ತು ಆ ಚುನಾವಣಾಕ್ಷೇತ್ರಕ್ಕೆ ಆಯೋಗವು ನೇಮಕ ಮಾಡಿದ ಸಾಮಾನ್ಯ ವೀಕ್ಷಕರ ಸಮ್ಮುಖದಲ್ಲಿ, ಚೀಟಿ ಎತ್ತುವ ಮೂಲಕ ಮಾಡತಕ್ಕದ್ದು.

14.7.3 ನಿರ್ದಿಷ್ಟ ವಿಧಾನಸಭಾ ಮತಕ್ಷೇತ್ರ / ವಿಧಾನಸಭಾ ವಿಭಾಗಕ್ಕೆ ಸಂಬಂಧಿಸಿದ ಗೊತ್ತುಪಡಿಸಲಾದ ಮತ ಎಣಿಕೆ ಸಭಾಂಗಣದಲ್ಲಿ ಮೇಲ್ಕಂಡ ಪ್ಯಾರಾ 14.7.1 ರಲ್ಲಿ ನಮೂದಿಸಲಾದ ಮತಗಳ ಎಣಿಕೆಯ ಅಂತಿಮ ಸುತ್ತು ಮುಗಿದ ತರುವಾಯ ತಕ್ಷಣವೇ ಚೀಟಿ ಎತ್ತುವ ಕಾರ್ಯವನ್ನು ನಡೆಸಬೇಕು.

14.7.4 ವಿವಿಪ್ಯಾಟ್ ಸ್ಲಿಪ್‌ಗಳ ಪರಿಶೀಲನೆಗಾಗಿ 05(ಐದು) ಮತದಾನ ಕೇಂದ್ರಗಳ ಯಾದೃಚ್ಛಿಕ ಆಯ್ಕೆಗಾಗಿ ಚೀಟಿ ಎತ್ತುವ ಕಾರ್ಯವನ್ನು ನಡೆಸುವುದಕ್ಕೆ ಸಂಬಂಧಿಸಿದ ಲಿಖಿತ ತಿಳಿವಳಿಕೆಯನ್ನು ರಿಟರ್ನಿಂಗ್ ಅಧಿಕಾರಿಯು ಅಭ್ಯರ್ಥಿಗಳು/ ಅವರ ಚುನಾವಣಾ ಏಜೆಂಟರುಗಳಿಗೆ ಸಾಕಷ್ಟು ಮುಂಚಿತವಾಗಿ ನೀಡತಕ್ಕದ್ದು.

14.7.5 ಚೀಟಿ ಎತ್ತುವ ಕಾರ್ಯವನ್ನು ನಡೆಸುವುದಕ್ಕಾಗಿ ಈ ಮುಂದಿನ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು:

ಎ) ಚೀಟಿ ಎತ್ತುವ ಕಾರ್ಯವನ್ನು ನಡೆಸುವುದಕ್ಕಾಗಿ ಅಂಚೆ ಕಾರ್ಡ್ ಅಳತೆಯ ಬಿಳಿ ಬಣ್ಣದ ಪೇಪರ್ ಕಾರ್ಡ್‌ಗಳನ್ನು ಬಳಸುವುದು.

ಬಿ) ಅಂಥ ಪೇಪರ್ ಕಾರ್ಡ್‌ಗಳ ಒಟ್ಟು ಸಂಖ್ಯೆಯು, ವಿಧಾನಸಭಾ ಚುನಾವಣಾಕ್ಷೇತ್ರದಲ್ಲಿರುವ ಮತದಾನ ಕೇಂದ್ರಗಳ ಒಟ್ಟು ಸಂಖ್ಯೆಗೆ ಸಮಾನವಾಗಿರಬೇಕು.

ಸಿ) ಕಂಟ್ರೋಲ್ ಯೂನಿಟ್(ಗಳು)ನಿಂದ ಫಲಿತಾಂಶ ಪ್ರದರ್ಶನವಾಗದಿರುವ ಕಾರಣದಿಂದಾಗಿ ಅಥವಾ ಚುನಾವಣೆಗಳನ್ನು ನಡೆಸುವ ನಿಯಮಗಳು, 1961ರ ನಿಯಮ 56(ಡಿ)ಯ ಮೇರೆಗೆ ಅಥವಾ ಇನ್ನಾವುದೋ ಕಾರಣದಿಂದಾಗಿ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ಎಣಿಕೆ ಮಾಡಲಾಗಿರುವ ಮತದಾನ ಕೇಂದ್ರಗಳೂ ವಿವಿಪ್ಯಾಟ್ ಪೇಪರ ಸ್ಲಿಪ್‌ಗಳ ಎಣಿಕೆಯ ಕಡ್ಡಾಯ ಪರಿಶೀಲನೆ ಮೂಲಕ ಚೀಟಿ ಎತ್ತುವುದರಲ್ಲಿ ಸೇರಿಸತಕ್ಕದ್ದಲ್ಲ.

ಡಿ) ವಿಧಾನಸಭಾ ಚುನಾವಣಾ ಕ್ಷೇತ್ರ/ವಿಧಾನಸಭಾ ವಿಭಾಗದ ಸಂಖ್ಯೆ, ಎಸಿ/ಎಎಸ್‌ನ ಹೆಸರು ಮತ್ತು ಮೇಲ್ಭಾಗದಲ್ಲಿ ಮತದಾನದ ದಿನಾಂಕ ಮತ್ತು ಮಧ್ಯಭಾಗದಲ್ಲಿ ಮತದಾನ ಕೇಂದ್ರದ ಸಂಖ್ಯೆಯನ್ನು ಈ ಮುಂಚೆಯೇ ಮುದ್ರಿಸಿರತಕ್ಕ ಪೇಪರ್ ಕಾರ್ಡುಗಳು ಇರಬೇಕು.

ಇ) ಮತದಾನ ಕೇಂದ್ರ ಸಂಖ್ಯೆಯ ಪ್ರತಿಯೊಂದು ಅಂಕಿಯು, ಕನಿಷ್ಠಪಕ್ಷ 1"x 1" (1 ಇಂಚು x 1 ಇಂಚು) ಅಳತೆಯಲ್ಲಿರತಕ್ಕದ್ದು ಮತ್ತು ಕಪ್ಪು ಶಾಯಿಯಲ್ಲಿ ಮುದ್ರಣಗೊಂಡಿರತಕ್ಕದ್ದು.

ಎಫ್) ಚೀಟಿ ಎತ್ತುವುದಕ್ಕಾಗಿ ಬಳಸುವ ಪೇಪರ್ ಕಾರ್ಡ್‌ಗಳನ್ನು ಮತದಾನ ಕೇಂದ್ರದ ಸಂಖ್ಯೆಯು ಕಾಣಿಸದಂಥ ರೀತಿಯಲ್ಲಿ ನಾಲ್ಕು ಮಡಿಕೆಯಾಗಿ ಮಡಿಚಿರತಕ್ಕದ್ದು.

ಜಿ) ಪ್ರತಿಯೊಂದು ಪೇಪರ್ ಕಾರ್ಡ್ ಅನ್ನು, ಮಡಚುವ ಹಾಗೂ ಬಾಕ್ಸ್‌ನಲ್ಲಿ ಹಾಕುವ ಮೊದಲು ಅಭ್ಯರ್ಥಿಗಳಿಗೆ / ಅವರ ಏಜೆಂಟರುಗಳಿಗೆ ತೋರಿಸತಕ್ಕದ್ದು.

ಹೆಚ್) ಪೇಪರ್ ಕಾರ್ಡುಗಳನ್ನು ಒಂದು ದೊಡ್ಡ ಬಾಕ್ಸ್‌ನಲ್ಲಿ ಹಾಕಿ ರಿಟರ್ನಿಂಗ್ ಅಧಿಕಾರಿಯು 01 (ಒಂದು) ಚೀಟಿಯನ್ನು ಎತ್ತುವ ಮೊದಲು ಚೆನ್ನಾಗಿ ಕುಲುಕಬೇಕು.

14.7.6 ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಪರಿಶೀಲನೆಯನ್ನು, ವಿಶೇಷವಾಗಿ ಮತ ಎಣಿಕೆ ಸಭಾಂಗಣದ ಒಳಗೆ ಈ ಉದ್ದೇಶಕ್ಕಾಗಿ ಸಿದ್ಧಪಡಿಸಿದ, 'ವಿವಿಪ್ಯಾಟ್ ಎಣಿಕೆ ಬೂಥ್' (ವಿಸಿಬಿ) ನಲ್ಲಿ ಮಾಡತಕ್ಕದ್ದು. ಈ ಬೂಥ್ ಅನ್ನು, ಯಾವುದೇ ವಿವಿಪ್ಯಾಟ್ ಪೇಪರ್ ಸ್ಲಿಪ್ ಅನ್ನು ಯಾರೇ ಅನಧಿಕೃತ ವ್ಯಕ್ತಿಯ ಕೈಗೆ ಸಿಗದ ರೀತಿಯಲ್ಲಿ ಬ್ಯಾಂಕ್ ಕ್ಯಾಷಿಯರ್ ಕ್ಯಾಬಿನ್‌ನಂತೆ ತಂತಿಯ ಜಾಲರಿಯಿಂದ ಸುತ್ತಲೂ ಮುಚ್ಚಿರತಕ್ಕದ್ದು. ಮತ ಎಣಿಕೆ ಸಭಾಂಗಣದಲ್ಲಿರುವ ಎಣಿಕೆ ಮೇಜುಗಳಲ್ಲಿ ಒಂದನ್ನು ವಿಸಿಬಿ ಯನ್ನಾಗಿ (ವಿವಿಪ್ಯಾಟ್ ಎಣಿಕಾ ಬೂಥ್) ಪರಿವರ್ತಿಸಬಹುದು ಮತ್ತು ಇದನ್ನು ಸುತ್ತುವಾರು ಇವಿಎಂ ಮತ ಎಣಿಕೆ ಮುಗಿದ ತರುವಾಯ ಯಾದೃಚ್ಛಿಕ ಆಯ್ಕೆಯ ಅನುಸಾರ ವಿವಿಪ್ಯಾಟ್ ಸ್ಲಿಪ್‌ಗಳನ್ನು ಎಣಿಕೆ ಮಾಡುವ ಮೊದಲು ಸುತ್ತುವಾರು ಇವಿಎಂ ಮತಗಳನ್ನು ಸಾಮಾನ್ಯವಾಗಿ ಎಣಿಕೆ ಮಾಡುವುದಕ್ಕಾಗಿ ಬಳಸಬಹುದಾಗಿದೆ.

14.7.7 ಯಾದೃಚ್ಛಿಕವಾಗಿ ಆಯ್ಕೆಮಾಡಲಾದ 5(ಐದು) ಮತದಾನ ಕೇಂದ್ರಗಳ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಪರಿಶೀಲನಾ ಎಣಿಕೆಯನ್ನು ಅನುಕ್ರಮವಾಗಿ ಅಂದರೆ **ಒಂದಾದ ನಂತರ ಒಂದರಂತೆ** ನಡೆಸತಕ್ಕದ್ದು.

14.7.8 ಮುದ್ರಿತ ಪೇಪರ್ ಸ್ಲಿಪ್‌ಗಳ ಎಣಿಕೆ ಕುರಿತು ನೀಡಿರುವ ಆಯೋಗದ ಸೂಚನೆಗಳಿಗೆ ಅನುಸಾರವಾಗಿ, ಯಾದೃಚ್ಛಿಕವಾಗಿ ಆಯ್ಕೆ ಮಾಡಿದ 05(ಐದು) ಮತದಾನ ಕೇಂದ್ರಗಳ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಪರಿಶೀಲನಾ ಎಣಿಕೆಯನ್ನು ಕಟ್ಟುನಿಟ್ಟಾಗಿ ನಡೆಸತಕ್ಕದ್ದು.

14.7.9 ರಿಟರ್ನಿಂಗ್ ಅಧಿಕಾರಿಯು ಮತ್ತು ಸಂದರ್ಭಾನುಸಾರ ಸಹಾಯಕ ರಿಟರ್ನಿಂಗ್ ಅಧಿಕಾರಿಯು, ವಿಸಿಬಿಯಲ್ಲಿ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಎಣಿಕೆಯನ್ನು ಖುದ್ದಾಗಿ ಮೇಲ್ವಿಚಾರಣೆ ಮಾಡತಕ್ಕದ್ದು. ಸಂಬಂಧಪಟ್ಟ ವೀಕ್ಷಕರು, ಇಡೀ ಚಟುವಟಿಕೆಯ ನಿಕಟ ಮತ್ತು ನೇರ ವೀಕ್ಷಣೆಯನ್ನು ಮಾಡತಕ್ಕದ್ದು ಮತ್ತು ಆಯೋಗದ ಸೂಚನೆಗಳನ್ನು ಕಟ್ಟುನಿಟ್ಟಿನ ಪಾಲನೆಯ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.

14.7.10 ಕಂಟ್ರೋಲ್ ಯೂನಿಟ್‌ನ ವಿದ್ಯುನ್ಮಾನ ಎಣಿಕೆ ಮತ್ತು ವಿವಿಪ್ಯಾಟ್ ಸ್ಲಿಪ್‌ಗಳ ಕೈಯಿಂದ ಮಾಡಿದ (ಮ್ಯಾನ್ಯುಯಲ್) ಎಣಿಕೆಯ ನಡುವೆ ಯಾವುದೇ ಹೊಂದಿಕೆಯಾಗದಿದ್ದ ಪಕ್ಷದಲ್ಲಿ, ಇದು ಇವಿಎಂ ಎಣಿಕೆಯೊಂದಿಗೆಯಾಗಲೀ ಅಥವಾ ಹಿಂದಿನ ವಿವಿಪ್ಯಾಟ್ ಸ್ಲಿಪ್‌ಗಳ ಎಣಿಕೆಗಳಲ್ಲಿ ಯಾವುದೇ ಎಣಿಕೆಗಳೊಂದಿಗಾಗಲೀ ತಾಳೆಯಾಗುವವರೆಗೆ ಆ ನಿರ್ದಿಷ್ಟ ಇವಿಎಂನ ವಿವಿಪ್ಯಾಟ್ ಸ್ಲಿಪ್‌ಗಳನ್ನು ಮರು ಎಣಿಕೆ ಮಾಡುವುದು.

14.7.11 ಮೇಲಿನ ಪ್ಯಾರಾ 14.7.10 ರಲ್ಲಿ ನಿರ್ದಿಷ್ಟಪಡಿಸಿದಂತೆ ಪ್ರಕ್ರಿಯೆ ಮುಗಿದ ನಂತರ, ಇವಿಎಂ ಎಣಿಕೆ ಮತ್ತು ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಎಣಿಕೆಯ ನಡುವೆ ವ್ಯತ್ಯಾಸ ಕಂಡುಬಂದಲ್ಲಿ, ಚುನಾವಣೆಗಳನ್ನು ನಡೆಸುವ ನಿಯಮಗಳು 1961ರ ನಿಯಮ 56(ಡಿ) (4)(ಬಿ)ಯ ಅನುಸಾರವಾಗಿ, ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಎಣಿಕೆಯನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು. ಆದ್ದರಿಂದ, ಕಂಟ್ರೋಲ್ ಯೂನಿಟ್‌ನ ಮೇಲೆ ಪ್ರದರ್ಶನವಾದ ಮತಗಳ ಎಣಿಕೆ ಮತ್ತು ಆ ಮತದಾನ ಕೇಂದ್ರಕ್ಕೆ ಸಂಬಂಧಿಸಿದ ಮುದ್ರಿತ ಪೇಪರ್ ಸ್ಲಿಪ್‌ಗಳ ಎಣಿಕೆ ನಡುವೆ ಯಾವುದೇ ವ್ಯತ್ಯಾಸ ಕಂಡುಬಂದರೆ, ಮುದ್ರಿತ ಪೇಪರ್ ಸ್ಲಿಪ್‌ಗಳ ಎಣಿಕೆಯ ಅನುಸಾರ ಫಲಿತಾಂಶ ಶೀಟ್(ಹಾಳೆ)ಅನ್ನು ತಿದ್ದುಪಡಿ ಮಾಡುವುದು.

14.7.12 ಮೇಲಿನ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ವಿಡಿಯೋ ಚಿತ್ರೀಕರಣ ಮಾಡತಕ್ಕದ್ದು.

14.7.13 ಮೇಲಿನ ಪ್ರಕ್ರಿಯೆ ಮುಗಿದ ನಂತರ, ರಿಟರ್ನಿಂಗ್ ಅಧಿಕಾರಿಯು, ಸಂಬಂಧಪಟ್ಟ ಮುಖ್ಯ ಚುನಾವಣಾಧಿಕಾರಿಗೆ ಪ್ರತಿ ಮತದಾನ ಕೇಂದ್ರಕ್ಕೆ ಪ್ರತ್ಯೇಕವಾಗಿ ಲಗತ್ತಿಸಲಾದ ನಮೂನೆಯಲ್ಲಿ **(ಅನುಬಂಧ–28)** ಪ್ರಮಾಣಪತ್ರವನ್ನು ಕೊಡತಕ್ಕದ್ದು, ಸಿಇಓರವರು, ಇಡೀ ರಾಜ್ಯ / ಕೇಂದ್ರಾಡಳಿತ ಪ್ರದೇಶದ ವರದಿಗಳನ್ನು ಸಂಕಲಿಸಿ ಮತ್ತು ಮತ ಎಣಿಕೆ ಪ್ರಕ್ರಿಯೆ ಮುಕ್ತಾಯದಿಂದ 7 ದಿನಗಳೊಳಗೆ ಕ್ರೋಢೀಕೃತ ಸಂಕ್ಷಿಪ್ತ ವರದಿಯನ್ನು ಆಯೋಗಕ್ಕೆ ಸಲ್ಲಿಸತಕ್ಕದ್ದು.

14.7.14 ಆಯೋಗದಿಂದ ನೇಮಕಗೊಂಡಿರುವ ವೀಕ್ಷಕರು, ಅನುಬಂಧದಲ್ಲಿ ನೀಡಲಾದ ನಮೂನೆಯಲ್ಲಿ ತಮ್ಮ ವರದಿಯನ್ನು ಸಹ **(ಅನುಬಂಧ–29)** ಆಯೋಗಕ್ಕೆ ಸಲ್ಲಿಸತಕ್ಕದ್ದು.

### 14.8 ವಿವಿಪ್ಯಾಟ್ ಸ್ಲಿಪ್‌ಗಳ ಎಣಿಕೆ ಕ್ರಮಗತಿ

ಎ) ಕಂಟ್ರೋಲ್ ಯೂನಿಟ್‌ನ ಡಿಸ್‌ಪ್ಲೇ ಪ್ಯಾನಲ್ ಮೇಲೆ ಫಲಿತಾಂಶ ಪ್ರದರ್ಶಿತವಾಗದಿರುವಂತಹ ಮತದಾನ ಕೇಂದ್ರದ(ಗಳ) ವಿವಿಪ್ಯಾಟ್ ಸ್ಲಿಪ್‌ಗಳನ್ನು ಎಣಿಕೆ ಮಾಡುವುದು.

ಬಿ) ಅಣಕು ಮತದಾನದ ದತ್ತಾಂಶ/ಸ್ಲಿಪ್‌ಗಳನ್ನು ತೆಗೆದುಹಾಕದಿರುವ, ಆ ಮೂಲಕ ಅಣಕು ಮತದಾನ ಪ್ರಕ್ರಿಯೆಯನ್ನು ಸರಿಯಾಗಿ ನಡೆಸದಿರುವ ಕಾರಣದಿಂದಾಗಿ ಆಯೋಗವು ಆದೇಶಿಸಿದಂತಹ/ಸೂಚನೆಗಳನ್ನು ಹೊರಡಿಸಿದಂತಹ ಮತದಾನ ಕೇಂದ್ರದ(ಗಳು) ವಿವಿಪ್ಯಾಟ್ ಸ್ಲಿಪ್‌ಗಳನ್ನು ಎಣಿಕೆ ಮಾಡುವುದು.

ಸಿ) ಚುನಾವಣೆಗಳನ್ನು ನಡೆಸುವ ನಿಯಮಗಳು, 1961ರ 56ಡಿ ನಿಯಮದ ಮೇರೆಗಿನ ವಿವಿಪ್ಯಾಟ್ ಸ್ಲಿಪ್‌ಗಳು, ಇದ್ದಲ್ಲಿ, ಎಣಿಕೆ ಮಾಡುವುದು.

ಡಿ) ವಿಧಾನಸಭಾ ಚುನಾವಣಾ ಕ್ಷೇತ್ರದ ಸಂಸದೀಯ ಚುನಾವಣಾ ಕ್ಷೇತ್ರದ ಪ್ರತಿಯೊಂದು ವಿಧಾನಸಭಾ ಘಟಕದಲ್ಲಿ ಯಾದೃಚ್ಛಿಕವಾಗಿ ಆಯ್ಕೆ ಮಾಡಿದ 05 ಮತದಾನ ಕೇಂದ್ರಗಳ ವಿವಿಪ್ಯಾಟ್ ಸ್ಲಿಪ್‌ಗಳನ್ನು ಕಡ್ಡಾಯವಾಗಿ

ಪರಿಶೀಲಿಸುವುದು.

ಇ) ಅಲ್ಲದೆ, ವಿವಿಪ್ಯಾಟ್ ಕಾಗದ ಸ್ಲಿಪ್‌ಗಳನ್ನು ಒಟ್ಟಿಗೆ ಎಣಿಸದೆ ಒಂದಾದ ನಂತರ ಒಂದರಂತೆ ಎಣಿಕೆ ಮಾಡುವುದು.

ಎಫ್) ಹಂತ 1 & 2ರಲ್ಲಿ ನಮೂದಿಸಲಾದಂತೆ, ಒಂದು ಬಾರಿಯ ವಿವಿಪ್ಯಾಟ್ ಕಾಗದ ಸ್ಲಿಪ್‌ಗಳ ಎಣಿಕೆಯನ್ನು, ಪ್ರತ್ಯೇಕ ಸುತ್ತಾಗಿ ಪರಿಗಣಿಸುವುದು.

ಜಿ) ಹಂತ ಸಿ & ಡಿಗೆ ಸಂಬಂಧಿಸಿದಂತೆ, ಚುನಾವಣೆಗಳನ್ನು ನಡೆಸುವ ನಿಯಮಗಳು, 1961ರ 56ಡಿ ನಿಯಮದ ನಿಬಂಧನೆಗಳಿಗನುಸಾರವಾಗಿ, ವಿದ್ಯುನ್ಮಾನ ಎಣಿಕೆಗೆ (ಸಿಯುಗಳು), ವಿವಿಪ್ಯಾಟ್ ಕಾಗದ ಸ್ಲಿಪ್‌ಗಳ ಎಣಿಕೆಗೆ ಹೋಲಿಸಿದಾಗ ಕಾಗದ ಎಣಿಕೆಗಳಲ್ಲಿ, ಭಿನ್ನತೆ ಕಂಡರೆ, ಕಾಗದ ಮುದ್ರಿತ ಸ್ಲಿಪ್‌ಗಳ ಎಣಿಕೆ ಪ್ರಕಾರವಾಗಿ ಫಲಿತಾಂಶ ಹಾಳೆಯನ್ನು ತಿದ್ದುಪಡಿ ಮಾಡುವುದು.

**14.9 ವಿವಿಪ್ಯಾಟ್ ಕಾಗದ ಸ್ಲಿಪ್‌ಗಳ ಎಣಿಕೆಗಾಗಿ ಮಾಡಬೇಕಾದ ಏರ್ಪಾಟುಗಳು:**

ಎ) ರಿಟರ್ನಿಂಗ್ ಅಧಿಕಾರಿಯು, ಮತ ಎಣಿಕೆ ಸಭಾಂಗಣದೊಳಗಿರುವ ಎಣಿಕಾ ಮೇಜುಗಳ ಪೈಕಿ ಒಂದನ್ನು, ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಎಣಿಕೆಗಾಗಿ ವಿವಿಪ್ಯಾಟ್ ಎಣಿಕಾ ಬೂಥ್ (ವಿಸಿಬಿ) ಅನ್ನಾಗಿ ಮೀಸಲಿರಿಸಬೇಕು.

ಎ) ವಿಸಿಬಿಯು, ಕನಿಷ್ಠ 6 ಅಡಿ ಉದ್ದ, 6 ಅಡಿ ಅಗಲ, ಮತ್ತು 8 ಅಡಿ ಎತ್ತರವನ್ನು ಹೊಂದಿರಬೇಕು.

ಎ) ಎಲ್ಲಾ ನಾಲ್ಕು ಬದಿಗಳನ್ನು ಮತ್ತು ಮೇಲುಚಾವಣಿಯನ್ನು ಕಿರಿದಾದ ತಂತಿ ಜಾಲರಿಯಿಂದ ಮುಚ್ಚಿರಬೇಕು ಮತ್ತು ಅದು ಮತ ಎಣಿಕೆ ಏಜೆಂಟರು ವ್ಯವಹರಿಸಲು ಅನುಕೂಲವಾಗುವಂತೆ ಸೂಕ್ತವಾದ ಎತ್ತರದಲ್ಲಿ 5 ಸೆ.ಮೀ. ಅಳತೆಯ ದುಂಡಾದ ಕಿಂಡಿ ಹೊಂದಿರಬೇಕು.

ಎ) ಮತ ಎಣಿಕೆಯನ್ನು ಉಸ್ತುವಾರಿ ಮಾಡುವ ಮತ್ತು ದಾಖಲು ಮಾಡುವ ಉದ್ದೇಶದಿಂದ, ಮತ ಎಣಿಕೆ ಮೇಜಿಗೆ ಸರಿಯಾಗಿ ಮೇಲ್ಭಾಗದಲ್ಲಿನ ಮೇಲ್ಛಾವಣಿಗೆ ಸಿಸಿ ಟಿವಿಯನ್ನು ಅಳವಡಿಸಬೇಕು.

ಎ) ವಿಸಿಬಿ ಒಳಭಾಗದಲ್ಲಿ ಕನಿಷ್ಠ 4 ವ್ಯಕ್ತಿಗಳು ಕುಳಿತುಕೊಳ್ಳುವಷ್ಟು ಆಸನ ವ್ಯವಸ್ಥೆಯಿರಬೇಕು.

**14.10 ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ಎಣಿಕೆ ಮಾಡುವ ಕಾರ್ಯವಿಧಾನ:**

ಯಾವುದೇ ಮತದಾನ ಕೇಂದ್ರದ(ಗಳ) ಮತಗಳ ಮರು–ಎಣಿಕೆಗಾಗಿ ಮನವಿ ಸಲ್ಲಿಕೆಯಾಗಿರುವುದರ ಆಧಾರದ ಮೇಲೆ ಆರ್‌ಓ ಅವರು ಅಂಥ ಯಾವುದೇ ಮತದಾನ ಕೇಂದ್ರದ(ಗಳ) ಮುದ್ರಿತ ಪೇಪರ್ ಸ್ಲಿಪ್‌ಗಳನ್ನು ಎಣಿಕೆ ಮಾಡಲು ನಿರ್ಧರಿಸಿದ ಸಂದರ್ಭದಲ್ಲಿ ಮುಂದಿನ ಕಾರ್ಯವಿಧಾನಗಳನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕಿರುತ್ತದೆ:

ಹಂತ – 1

ಎ) ವಿವಿಪ್ಯಾಟ್‌ನ ಡ್ರಾಪ್‌ಬಾಕ್ಸ್‌ನಿಂದ ಹೊರತೆಗೆದ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ಇಡುವುದಕ್ಕಾಗಿ, ಸರಿಸುಮಾರು 1400 ಮುದ್ರಿತ ಪೇಪರ್ ಸ್ಲಿಪ್‌ಗಳು ಸುಲಭವಾಗಿ ಹಿಡಿಸುವ, 14 ಇಂಚು ೦ 10 ಇಂಚು ೦ 5 ಇಂಚು (ಉದ್ದ ೦ ಅಗಲ ೦ ಎತ್ತರ) ಅಳತೆಯುಳ್ಳ, ಸಾಕಾಗುವ ಗಾತ್ರದ ಮುಚ್ಚಳಸಹಿತ ಡಬ್ಬಿಯನ್ನು ವಿಸಿಬಿಯ ಮೇಜಿನ ಮೇಲೆ ಇಡಬೇಕು. ಈ ಡಬ್ಬಿಯು ಪ್ಲಾಸ್ಟಿಕ್ ಇತ್ಯಾದಿಯಂಥ ಗಟ್ಟಿ ಪಾರದರ್ಶಕ ವಸ್ತುವಿನಿಂದ ಮಾಡಿದುದಾಗಿರಬೇಕು. ಡಬ್ಬಿಯ ಮಾದರಿ ಚಿತ್ರಗಳು ಅನುಬಂಧ–30 ರಲ್ಲಿ ಇವೆ.

ಬಿ) ಆಯಾ ಅಭ್ಯರ್ಥಿಗಳ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ಇಡುವುದಕ್ಕಾಗಿ, ಪಿಜನ್‌ಹೋಲ್ (ಪ್ರತ್ಯೇಕ ಅಂಕಣಗಳು) ಚೌಕಟ್ಟನ್ನು, ನೋಟಾ ಸೇರಿದಂತೆ ಅಭ್ಯರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಮತ್ತು ವಿವಿಪ್ಯಾಟ್‌ನ ಸ್ವ–ಪರೀಕ್ಷಾ ಸ್ಲಿಪ್‌ಗಳನ್ನು ಇಡುವುದಕ್ಕಾಗಿ ಒಂದು ಹೆಚ್ಚುವರಿ ಪಿಜನ್‌ಹೋಲ್‌ನೊಂದಿಗೆ ಮುಂಚಿತವಾಗಿಯೇ ಸಿದ್ಧಪಡಿಸಿರಬೇಕು ಮತ್ತು ಅದನ್ನು ವಿಸಿಬಿ ಟೇಬಲ್ ಮೇಲೆ ಇಟ್ಟಿರಬೇಕು.

ಚೌಕಟ್ಟಿನಲ್ಲಿನ ಪಿಜನ್‌ಹೋಲ್‌ಗಳ ಕನಿಷ್ಠ ಸಂಖ್ಯೆಯು, ಅಭ್ಯರ್ಥಿಗಳ ಸಂಖ್ಯೆಗೆ ಹೆಚ್ಚುವರಿಯಾಗಿ 2(ಎರಡು) ಅನ್ನು ಕೂಡುವುದಕ್ಕೆ ಸಮವಾಗಿರಬೇಕು.

ಪ್ರತಿಯೊಂದು ಅಂಕಣದ (ಪಿಜನ್‌ಹೋಲ್) ಗಾತ್ರವು, ಕನಿಷ್ಠ 6 ಇಂಚು ೦ 4 ಇಂಚು ೦ 4 ಇಂಚು (ಉದ್ದ ೦ ಅಗಲ ೦ ಎತ್ತರ) ಇರಬೇಕು.

ಪಿಜನ್‌ಹೋಲ್ ಚೌಕಟ್ಟು ರಚನೆಯು, ಯಾವುದೇ ವಿವಿಪ್ಯಾಟ್ ಪೇಪರ್ ಸ್ಲಿಪ್ ಕೆಳಗೆ ಜಾರಿ ಬೀಳದಂತೆ ತಡೆಯಲು ಅನುವಾಗುವಂತೆ ದೃಢವಾದ ತಳ ಹೊಂದಿರುವ, ಪ್ಲಾಸ್ಟಿಕ್ ಇತ್ಯಾದಿಯಂಥ ಗಟ್ಟಿ, ಪಾರದರ್ಶಕ ಪರಿಕರದಿಂದ ಮಾಡಿದುದಾಗಿರಬೇಕು.

ಬ್ಯಾಲಟ್ ಪೇಪರ್ ಅನುಸಾರವಾಗಿ, ಪ್ರತಿಯೊಬ್ಬ ಸ್ಪರ್ಧಾ ಅಭ್ಯರ್ಥಿಯ ಚಿಹ್ನೆಯನ್ನು, ನಿರ್ದಿಷ್ಟ ಅಭ್ಯರ್ಥಿಗಳಿಗೆ

ಹಂಚಲಾದ ಪಿಜನ್‌ಹೋಲ್ ಅಂಕಣದ ಮೇಲ್ಭಾಗದ ಮೇಲೆ ಅಂಟಿಸಬೇಕು. ಈ ಚಿಹ್ನೆಯನ್ನು, ಕನಿಷ್ಠ 4 ಇಂಚು 3 ಇಂಚು ಅಳತೆಯ ಖಾಲಿ ಕಾಗದದ ಮೇಲೆ ಕಪ್ಪು ಮತ್ತು ಬಿಳಿ ಬಣ್ಣದಲ್ಲಿ ಮುದ್ರಿಸಿರಬೇಕು. ಪಿಜನ್‌ಹೋಲ್ ಚೌಕಟ್ಟಿನ ಮಾದರಿ ಚಿತ್ರಗಳನ್ನು **ಅನುಬಂಧ–30** ರಲ್ಲಿ ನೀಡಲಾಗಿದೆ.

ಸಿ) 25 ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಕಟ್ಟುಗಳನ್ನು ಮಾಡುವುದಕ್ಕಾಗಿ ಕನಿಷ್ಠ 100 ರಬ್ಬರ್ ಬ್ಯಾಂಡ್‌ಗಳಿರಬೇಕು.

ಹಂತ – 2

ಎ) ಆಯಾ ಮತದಾನ ಕೇಂದ್ರದ(ಗಳ) ವಿವಿಪ್ಯಾಟ್ ಯೂನಿಟ್ (ಗಳು) ಅನ್ನು, ಒಂದರ ನಂತರ ಒಂದರಂತೆ ವಿಸಿಬಿಗೆ ತರಬೇಕು.

ಬಿ) ಒಂದು ನಿರ್ದಿಷ್ಟ ಮತದಾನ ಕೇಂದ್ರದಲ್ಲಿ ಮತದಾನ ನಡೆದ ಅವಧಿಯಲ್ಲಿ ವಿವಿಪ್ಯಾಟ್ ಯೂನಿಟ್ ಅನ್ನು ಬದಲಾಯಿಸಿರುವ ಪಕ್ಷದಲ್ಲಿ, ಆ ಮತದಾನ ಕೇಂದ್ರದಲ್ಲಿ ಬಳಸಲಾದ ಎಲ್ಲಾ ವಿವಿಪ್ಯಾಟ್ ಯೂನಿಟ್‌ಗಳನ್ನು ವಿಸಿಬಿಗೆ ತರಬೇಕು.

ಹಂತ – 3

ಎ) ಒಂದು ನಿರ್ದಿಷ್ಟ ಮತದಾನ ಕೇಂದ್ರಕ್ಕೆ ಸಂಬಂಧಿಸಿದಂತೆ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಎಣಿಕೆಯನ್ನು ಪ್ರಾರಂಭಿಸುವ ಮೊದಲು, ಆ ಮತದಾನ ಕೇಂದ್ರದಲ್ಲಿ ಬಳಸಲಾದ ವಿವಿಪ್ಯಾಟ್‌ನಿಂದ ಮುದ್ರಿತವಾದ ಪೇಪರ್ ಸ್ಲಿಪ್‌ಗಳನ್ನು ಹೊರತೆಗೆಯಬೇಕು. ಒಂದಕ್ಕಿಂತ ಹೆಚ್ಚು ವಿವಿಪ್ಯಾಟ್‌ಗಳನ್ನು ಬಳಸಲಾಗಿರುವ ಸಂದರ್ಭದಲ್ಲಿ, ಒಂದರ ನಂತರ ಒಂದರಂತೆ ಪ್ರತಿಯೊಂದು ವಿವಿಪ್ಯಾಟ್‌ಗಳ ಸ್ಲಿಪ್‌ಗಳನ್ನು ಪ್ರತ್ಯೇಕವಾಗಿ ಎಣಿಕೆ ಮಾಡಬೇಕು ಮತ್ತು ಪ್ರತೀ ವಿವಿಪ್ಯಾಟ್‌ನ ಫಲಿತಾಂಶವನ್ನು (ಪ್ರತೀ ವಿವಿಪ್ಯಾಟ್‌ಗೆ ಪ್ರತ್ಯೇಕವಾಗಿ) **ಅನುಬಂಧ–31** ರಲ್ಲಿ ನಮೂದಿಸಬೇಕು. ತದನಂತರ, ಆ ನಿರ್ದಿಷ್ಟ ಮತದಾನ ಕೇಂದ್ರದ ಎಲ್ಲಾ ಫಲಿತಾಂಶಗಳನ್ನು ಒಟ್ಟುಗೂಡಿಸಿ ಫಲಿತಾಂಶ ಶೀಟ್ ಅನ್ನು ಸಿದ್ದಪಡಿಸುವುದು ಮತ್ತು ಅದನ್ನು ನಮೂನೆ–17ಸಿ ಗೆ ಲಗತ್ತಿಸುವುದು.

ಡ್ರಾಪ್‌ಬಾಕ್ಸ್‌ನಿಂದ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ಹೊರತೆಗೆಯುವ ಮೊದಲು, ಆ ವಿವಿಪ್ಯಾಟ್ ಆಯಾ ಮತದಾನ ಕೇಂದ್ರಕ್ಕೆ ಸಂಬಂಧಿಸಿದ್ದು ಎಂಬುದನ್ನು ಖಚಿತಪಡಿಸಿಕೊಳ್ಳಲು ಡ್ರಾಪ್‌ಬಾಕ್ಸ್‌ನ ಅಡ್ರೆಸ್ ಟ್ಯಾಗ್(ಗಳು) ಅನ್ನು ಪುನಃ ಹೋಲಿಸಿ ನೋಡಬೇಕು.

ಮೊದಲು ವಿವಿಪ್ಯಾಟ್‌ನ ಡ್ರಾಪ್‌ಬಾಕ್ಸ್‌ನಿಂದ ಹೊರ ತೆಗೆದ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು, ಹಂತ 1(ಎ) ರಲ್ಲಿ ನೀಡಲಾದ ವಿವರಣೆಯ ಅನುಸಾರವಾಗಿ ಡಬ್ಬಿಯಲ್ಲಿ ಇಡಬೇಕು.

ಡ್ರಾಪ್‌ಬಾಕ್ಸ್‌ನಿಂದ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ಹೊರತೆಗೆದ ತರುವಾಯ, ಮತ ಎಣಿಕೆ ಮೇಲ್ವಿಚಾರಕರು, ವಿವಿಪ್ಯಾಟ್ ಡ್ರಾಪ್‌ಬಾಕ್ಸಿನೊಳಗೆ ಒಂದೂ ವಿವಿಪ್ಯಾಟ್ ಪೇಪರ್ ಸ್ಲಿಪ್ ಉಳಿದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ಖಾಲಿ ಡ್ರಾಪ್‌ಬಾಕ್ಸ್ ಅನ್ನು ಮತ ಎಣಿಕೆ ಏಜೆಂಟರಿಗೆ ತೋರಿಸಬೇಕು.

ವಿವಿಪ್ಯಾಟ್ ಯೂನಿಟ್ ಅನ್ನು ಬದಲಾಯಿಸಿದ ಸಂದರ್ಭದಲ್ಲಿ, ವಿವಿಪ್ಯಾಟ್ ಪೇಪರ್ ಸ್ಲಿಪ್ ಸಂಪೂರ್ಣವಾಗಿ ಕತ್ತರಿಸದಿರುವ ಅಥವಾ ಭಾಗಶಃ ಕತ್ತರಿಸಿಕೊಂಡು ತೂಗಾಡುತ್ತಿರುವ ಮತ್ತು ಡ್ರಾಪ್‌ಬಾಕ್ಸ್‌ನೊಳಗೆ ಕತ್ತರಿಸಿ ಬೀಳದೆ ಇನ್ನು ಪೇಪರ್ ರೋಲ್‌ಗೆ ಅಂಟಿಕೊಂಡೇ ಇರುವ ಸಂದರ್ಭಗಳು ಉಂಟಾಗಬಹುದು. ಹಾಗೆ ಕತ್ತರಿಸದ ವಿವಿಪ್ಯಾಟ್ ಪೇಪರ್ ಸ್ಲಿಪ್‌ನ್ನು ಹರಿಯಬಾರದು ಮತ್ತು ಎಣಿಕೆಗೆ ತೆಗೆದುಕೊಳ್ಳಬಾರದು. ಏಕೆಂದರೆ, ವಿವಿಪ್ಯಾಟ್ ಪೇಪರ್ ಸ್ಲಿಪ್ ಪೂರ್ಣವಾದ ಕತ್ತರಿಸಿಕೊಳ್ಳದ ಹೊರತು, ಅಂಥ ಮತವು ಸಿಯುನಲ್ಲಿ ವಿದ್ಯುನ್ಮಾನಿತವಾಗಿ ದಾಖಲುಗೊಂಡಿರುವುದಿಲ್ಲ. ಅಂತಹ ಸಂದರ್ಭದಲ್ಲಿ, ವಿವಿಪ್ಯಾಟ್ ಅನ್ನು ಬದಲಾಯಿಸಿದ ತರುವಾಯ, ಯಾವ ಮತದಾರನಿಗೆ ಸಂಬಂಧಿಸಿದಂತೆ ವಿವಿಪ್ಯಾಟ್ ಪೇಪರ್ ಸ್ಲಿಪ್ ಕತ್ತರಿಸಿರುವುದಿಲ್ಲವೋ ಅಂತಹ ಕೊನೆಯ ಮತದಾರನಿಗೆ ತನ್ನ ಮತ ಚಲಾಯಿಸಲು ಅವಕಾಶವನ್ನು ನೀಡುವುದು ಹಾಗೂ ಆತನು ಮತ ಚಲಾಯಿಸಿದುದರ ವಿವಿಪ್ಯಾಟ್ ಪೇಪರ್ ಸ್ಲಿಪ್, ಆ ಮತದಾನ ಕೇಂದ್ರದಲ್ಲಿ ಬಳಸಲಾದ ಮುಂದಿನ ವಿವಿಪ್ಯಾಟ್‌ನಲ್ಲಿರುತ್ತದೆ.

ವಿವಿಪ್ಯಾಟ್‌ನ ಡ್ರಾಪ್‌ಬಾಕ್ಸ್, ಸ್ವ–ಪರೀಕ್ಷಾ ವರದಿಯ ವಿವಿಪ್ಯಾಟ್ ಸ್ಲಿಪ್‌ಗಳನ್ನು ಸಹ ಹೊಂದಿರಬೇಕು. ಇವು ಯಾರೇ ಅಭ್ಯರ್ಥಿಯ ಹೆಸರನ್ನಾಗಲೀ ಅಥವಾ ಚಿಹ್ನೆಯನ್ನಾಗಲೀ ಹೊಂದಿರುವುದಿಲ್ಲವಾದ್ದರಿಂದ, ಇವನ್ನು ಸುಲಭವಾಗಿ ಗುರುತಿಸಬಹುದಾಗಿದೆ. ಈ ಸ್ವ–ಪರೀಕ್ಷಾ ವರದಿ ಸ್ಲಿಪ್‌ಗಳನ್ನು ದಾಖಲಿಸುವುದರ ಭಾಗವಾಗಿ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳೊಂದಿಗೆ ಸಂರಕ್ಷಿಸಬೇಕು, ಆದರೆ ಎಣಿಕೆ ಮಾಡಬಾರದು.

ಹಂತ – 4

ಎ) ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ಒಂದರ ನಂತರ ಒಂದರಂತೆ ಪ್ರತ್ಯೇಕಿಸಬೇಕು ಮತ್ತು ಪ್ರತೀ ಸ್ಲಿಪ್ ಅನ್ನು ಮತ ಎಣಿಕೆ ಏಜೆಂಟರಿಗೆ ತೋರಿಸಿದ ತರುವಾಯ, ಆಯಾ ಪಿಜನ್‌ಹೋಲ್ ಅಂಕಣಗಳಲ್ಲಿ ಇಡಬೇಕು. ಸ್ವ–ಪರೀಕ್ಷಾ ವರದಿಯನ್ನು ಹೊಂದಿರುವ ಪೇಪರ್ ಸ್ಲಿಪ್‌ಗಳನ್ನು ಸಹ ಪ್ರತ್ಯೇಕಿಸಿ ಈ ಉದ್ದೇಶಕ್ಕಾಗಿ ಇಟ್ಟಿರುವಂತಹ ಪ್ರತ್ಯೇಕ ಪಿಜನ್‌ಹೋಲ್ ಅಂಕಣದಲ್ಲಿ ಇಡತಕ್ಕದ್ದು.

ಬಿ) ಮತ ಎಣಿಕೆ ಉದ್ದೇಶಕ್ಕಾಗಿ, ಆಯಾ ಅಭ್ಯರ್ಥಿಗಳ 25 ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಕಟ್ಟುಗಳನ್ನು ಸಿದ್ದಪಡಿಸತಕ್ಕದ್ದು.

ಸಿ) ನಂತರ, ಮತ ಎಣಿಕೆ ಸಿಬ್ಬಂದಿಯು, ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ಎಣಿಕೆ ಮಾಡತಕ್ಕದ್ದು.

ಡಿ) ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಎಣಿಕೆ ಫಲಿತಾಂಶವನ್ನು **ಅನುಬಂಧ–31**ರಲ್ಲಿನ ನಮೂನೆಯಲ್ಲಿ ಸಿದ್ಧಪಡಿಸುವುದು ಮತ್ತು ನಮೂನೆ–17ಸಿ ಯ **(ಅನುಬಂಧ–32)** ಭಾಗ–ಖಖ ಕ್ಕೆ ಲಗತ್ತಿಸತಕ್ಕದ್ದು.

ಇ) ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಎಣಿಕೆಯ ಫಲಿತಾಂಶವನ್ನು ಮತ ಎಣಿಕೆ ಸಭಾಂಗಣದಲ್ಲಿ ಘೋಷಿಸುವುದು ಮತ್ತು ಅದನ್ನು ಮತ ಎಣಿಕೆ ಏಜೆಂಟರುಗಳಿಗೆ ತೋರಿಸುವುದು.

ಎಫ್) ಚುನಾವಣೆಗಳನ್ನು ನಡೆಸುವ ನಿಯಮಗಳು, 1961ರ ನಿಯಮ 56ಡಿ (4)(ಬಿ) ಅನುಸಾರ, ಇವಿಎಂ ಎಣಿಕೆ ಮತ್ತು ಪೇಪರ್ ಸ್ಲಿಪ್ ಎಣಿಕೆಯ ನಡುವೆ ಯಾವುದೇ ವ್ಯತ್ಯಾಸವಿದ್ದರೆ, ಪೇಪರ್ ಸ್ಲಿಪ್ ಎಣಿಕೆಯನ್ನು ಗಣನೆಗೆ ತೆಗೆದುಕೊಳ್ಳುವುದು. ಹಾಗಾಗಿ, ಕಂಟ್ರೋಲ್ ಯೂನಿಟ್‌ನ ಮೇಲೆ ಕಾಣುವ ಮತಗಳ ಎಣಿಕೆಗಳು ಮತ್ತು ಆ ನಿರ್ದಿಷ್ಟ ಮತದಾನ ಕೇಂದ್ರಕ್ಕೆ ಸಂಬಂಧಿಸಿದ, ಮುದ್ರಿತ ಪೇಪರ್ ಸ್ಲಿಪ್‌ಗಳ ಎಣಿಕೆ ನಡುವೆ ವ್ಯತ್ಯಾಸವಿದ್ದರೆ, ಮುದ್ರಿತ ಪೇಪರ್ ಸ್ಲಿಪ್‌ಗಳ ಎಣಿಕೆಯ ಅನುಸಾರ ಫಲಿತಾಂಶ ಶೀಟ್‌ನ್ನು ತಿದ್ದುಪಡಿ ಮಾಡತಕ್ಕದ್ದು.

ಹಂತ – 5

ಎ) ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಎಣಿಕೆ ಮುಗಿದ ತರುವಾಯ, ಮರಳಿ ಆಯಾ ವಿವಿಪ್ಯಾಟ್‌ನ ಡ್ರಾಪ್‌ಬಾಕ್ಸ್‌ನಲ್ಲಿ ಎಲ್ಲಾ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳ ಕಟ್ಟುಗಳನ್ನು ಇಡುವುದು ಮತ್ತು ಅಡ್ರೆಸ್ ಟ್ಯಾಗ್‌ಗಳನ್ನು ಬಳಸಿ ಡ್ರಾಪ್‌ಬಾಕ್ಸ್‌ನ ಮುಚ್ಚಳವನ್ನು ಸೀಲು ಮಾಡುವುದು.


ಬಿ) ಅಭ್ಯರ್ಥಿ(ಗಳು)/ ಅವರ ಏಜೆಂಟರು ಅಡ್ರೆಸ್ ಟ್ಯಾಗುಗಳ ಮೇಲೆ ಪಕ್ಷದ ಸಂಕ್ಷಿಪ್ತ ಹೆಸರಿನೊಂದಿಗೆ ಅವರ ಸಹಿಯನ್ನು ಹಾಕಲು ಅನುಮತಿ ನೀಡುವುದು.

**14.11 ಮತಗಳ ಎಣಿಕೆಯ ನಂತರ ಇವಿಎಂಗಳನ್ನು ಸೀಲು ಮಾಡುವುದು**

ಮತ ಎಣಿಕೆ ಮುಗಿದ ತರುವಾಯ, ಎಲ್ಲಾ ಕಂಟ್ರೋಲ್ ಯೂನಿಟ್‌ಗಳನ್ನು ಅವುಗಳಿಂದ ಫಲಿತಾಂಶವನ್ನು ಪಡೆಯಲಾಗಿರಲಿ ಅಥವಾ ಇಲ್ಲದಿರಲಿ, ಅವುಗಳನ್ನು ವಾಪಸ್ಸು ಸಾಗಣೆ ಪೆಟ್ಟಿಗೆಯೊಳಗೆ ಇಡತಕ್ಕದ್ದು ಮತ್ತು ಆ ಸಾಗಣೆ ಪೆಟ್ಟಿಗೆಗಳನ್ನು ಪುನಃ ಮತ್ತೊಮ್ಮೆ ಸೀಲು ಮಾಡತಕ್ಕದ್ದು.ಸೀಲಿನ ಮೇಲೆ ರಿಟರ್ನಿಂಗ್ ಅಧಿಕಾರಿ ಮತ್ತು ಪರಿವೀಕ್ಷಕರು ಸಹಿ ಹಾಕಬೇಕು. ಎಲ್ಲಾ ಅಭ್ಯರ್ಥಿಗಳು ಮತ್ತು ಅವರ ಚುನಾವಣಾ ಏಜೆಂಟರುಗಳು ಸೀಲಿನ ಮೇಲೆ ತಮ್ಮ ಸಹಿಯನ್ನು ಹಾಕಲು ಅವಕಾಶ ನೀಡಬೇಕು. ನಂತರ ಕಂಟ್ರೋಲ್ ಯೂನಿಟ್ ಅನ್ನು ಭದ್ರತಾ ಕೊಠಡಿ (ಗಳು)ಯಲ್ಲಿ ಇರಿಸಬೇಕು.

ಮತ ಎಣಿಕೆಯ ನಂತರ ಇವಿಎಂಗಳನ್ನು ಸೀಲು ಮಾಡುವುದು

ಎಣಿಕೆ ಮುಗಿದ ನಂತರ, ಬಳಸಿದ ಎಲ್ಲಾ ಸಿಯುಗಳನ್ನು ಸಾಗಣೆ ಪೆಟ್ಟಿಗೆಗಳೊಳಗೆ ಇಡತಕ್ಕದ್ದು ಮತ್ತು ರಿಟರ್ನಿಂಗ್ ಅಧಿಕಾರಿಯ ಸೀಲಿನೊಂದಿಗೆ ಚುನಾವಣೆಯ ವಿವರಗಳನ್ನು ಹೊಂದಿರುವಂತಹ ಅಡ್ರೆಸ್ ಟ್ಯಾಗ್ ಬಳಸಿ, ಸಾಗಣೆ ಪೆಟ್ಟಿಗೆಗಳ ಮೇಲೆ ಇರುವ ರಂಧ್ರದ ಮೂಲಕ ದಾರವನ್ನು ಹಾಯಿಸಿ ಮತ್ತೊಮ್ಮೆ ಪೆಟ್ಟಿಗೆಗಳನ್ನು ಸೀಲು ಮಾಡುವುದು.



ಟಿಪ್ಪಣಿ: ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಮೊಹರು ಮಾಡುವುದಕ್ಕಾಗಿ ಮತ ಎಣಿಕೆ ದಿನದಂದು ಬಳಸಿದ ಎಲ್ಲಾ ಸೀಲುಗಳ ಮೇಲೆ ಆರ್‌ಒ, ಎಆರ್‌ಒ ಮತ್ತು ಅಭ್ಯರ್ಥಿ / ಮತ ಎಣಿಕೆ ಏಜೆಂಟರು ಸಹಿ ಮಾಡತಕ್ಕದ್ದು.

ಮತ ಎಣಿಕೆ ಮುಗಿದ ತರುವಾಯ:– ಇವಿಎಂಗಳು / ವಿವಿಪ್ಯಾಟ್‌ಗಳನ್ನು ಚುನಾವಣಾ ಅರ್ಜಿ ಸಲ್ಲಿಕೆ ಅವಧಿ ಮುಗಿಯುವವರೆಗೆ ಭದ್ರತಾ ಕೊಠಡಿಯಲ್ಲಿ ಎಸಿ(ವಿಧಾನಸಭಾ ಚುನಾವಣಾ ಕ್ಷೇತ್ರ)ವಾರು ಇಡಬೇಕಾಗುತ್ತದೆ. ಭದ್ರತಾ ಕೊಠಡಿಯ:

- ಡಬಲ್ ಲಾಕ್ ವ್ಯವಸ್ಥೆಯನ್ನು ಹೊಂದಿರುವುದು
- ಒಂದು ಕೀಲಿಕೈ ಡಿಇಒ ರವರ ಬಳಿ ಇರುವುದು, ಮತ್ತೊಂದು ಡೆಪ್ಯೂಟಿ ಡಿಇಒ ರವರ ಬಳಿ ಇರುವುದು

14.12 ಮತ ಎಣಿಕೆ ಮಾಡಿದ ತರುವಾಯ ಇವಿಎಂ ಮತ್ತು ವಿವಿಪ್ಯಾಟ್‌ಗಳ ಸಂಗ್ರಹಣೆ:

ಮತ ಎಣಿಕೆ ಮುಗಿದ ತರುವಾಯ, ಇವಿಎಂಗಳು ಮತ್ತು ಡ್ರಾಪ್ ಬಾಕ್ಸ್‌ನಲ್ಲಿ ಮುದ್ರಿತ ಪೇಪರ್ ಸ್ಲಿಪ್‌ಗಳಿರುವ ವಿವಿಪ್ಯಾಟ್‌ಗಳನ್ನು ಒಂದೇ ಭದ್ರತಾ ಕೊಠಡಿಯಲ್ಲಿ ಇಡತಕ್ಕದ್ದು.ಚುನಾವಣಾ ಅರ್ಜಿ ಸಲ್ಲಿಕೆ (ಇಪಿ) ಅವಧಿ ಮುಗಿಯುವವರೆಗೆ ಎಂದರೆ, ಸಂಬಂಧಿಸಿದ ಉಚ್ಚ ನ್ಯಾಯಾಲಯದಿಂದ ಇಪಿ ಪಟ್ಟಿಯನ್ನು ಸ್ವೀಕರಿಸುವವರೆಗೆ ಭದ್ರತಾ ಕೊಠಡಿಯನ್ನು ತೆರೆಯತಕ್ಕದ್ದಲ್ಲ.

14.13 ಚುನಾವಣಾ ಅರ್ಜಿಗಳನ್ನು ಸಲ್ಲಿಸುವ ಅವಧಿ ಮುಕ್ತಾಯದ ನಂತರ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ಸಂಗ್ರಹಿಸುವುದು:

ಸಂಬಂಧಿಸಿದ ಉಚ್ಚನ್ಯಾಯಾಲಯದಿಂದ ಚುನಾವಣಾ ಅರ್ಜಿಗಳ ಸ್ಥಿತಿ ದೃಢೀಕೃತವಾಗುವವರೆಗೆ, ಚುನಾವಣೆಗಳಲ್ಲಿ ಬಳಸಿದ ಹಾಗೂ ಜಿಲ್ಲಾ ಚುನಾವಣಾಧಿಕಾರಿಯ ಅಭಿರಕ್ಷೆಯಲ್ಲಿ ಇಡಲಾದ ಪ್ರತಿಯೊಂದು ವಿವಿಪ್ಯಾಟ್ ಅನ್ನು ಪ್ರಮಾಣಕ ಭದ್ರತಾ ವಿಧಿಯ ಮೇರೆಗೆ ಯಾರೂ ಮುಟ್ಟದಂತೆ ಇಡತಕ್ಕದ್ದು.

ಚುನಾವಣಾ ಅರ್ಜಿಗಳನ್ನು (ಇಪಿಗಳು) ಸಲ್ಲಿಸುವುದರ ಗಡುವು ಮುಗಿದ ತರುವಾಯ, ಎಂದರೆ ಫಲಿತಾಂಶವನ್ನು ಘೋಷಿಸಿದ ದಿನಾಂಕದಿಂದ 45 ದಿನಗಳ ನಂತರ, ಸಂಬಂಧಿಸಿದ ಉಚ್ಚ ನ್ಯಾಯಾಲಯದಿಂದ ಇಪಿ ಸ್ಥಿತಿಯನ್ನು 7 ದಿನಗಳೊಳಗೆ ಸಿಇಒ/ಡಿಇಒ ರವರು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ಇಪಿ ಸ್ಥಿತಿಯನ್ನು ಗೊತ್ತುಮಾಡಿಕೊಂಡ ನಂತರ ಈ ಮುಂದಿನ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು.

ಎ. ಯಾವುದೇ ಚುನಾವಣಾ ಅರ್ಜಿ ಸಲ್ಲಿಕೆಯಾಗದಿರುವಂತಹ ಅಥವಾ ಯಾವುದೇ ಇತರ ಪ್ರಕರಣಗಳು ಇತ್ಯರ್ಥದಲ್ಲಿಲ್ಲದಿರುವಂತಹ ಚುನಾವಣೆಗಳ ಸಂದರ್ಭದಲ್ಲಿ, ಮೇಲೆ ಹೇಳಿದ ಅವಧಿಯ ನಂತರ, ವಿವಿಪ್ಯಾಟ್‌ಗಳನ್ನು, ಯಾವುದೇ ಭವಿಷ್ಯದ ಚುನಾವಣೆಯಲ್ಲಿ ಬಳಸುವುದಕ್ಕಾಗಿ ಅಥವಾ ತರಬೇತಿ, ಜಾಗೃತಿ, ಸ್ಥಳಾಂತರ, ಭೌತಿಕ ಪರಿಶೀಲನೆ ಮುಂತಾದಂಥ ಯಾವುದೇ ಇತರ ಉದ್ದೇಶಕ್ಕಾಗಿ ಲಭ್ಯವಿರಿಸತಕ್ಕದ್ದು. ವಿವಿಪ್ಯಾಟ್‌ನ ಡ್ರಾಪ್‌ಬಾಕ್ಸ್‌ನಿಂದ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ಹೊರತೆಗೆಯುವ ಮೊದಲು, ಈ ಮುಂದಿನ ಕ್ರಮವನ್ನು ತೆಗೆದುಕೊಳ್ಳವುದು:

ಎ) ಎಲ್ಲಾ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ವಿವಿಪ್ಯಾಟ್‌ಗಳು ಇರುವ ಭದ್ರತಾ ಕೊಠಡಿಯನ್ನು ತೆರೆಯುವ ವಿಷಯವನ್ನು ತಿಳಿಸಿ, ಭದ್ರತಾ ಕೊಠಡಿಯನ್ನು ತೆರೆಯುವ ಸಮಯದಲ್ಲಿ ಹಾಜರಿರುವಂತೆ ಅವರನ್ನು ಕೋರಿ, ಕನಿಷ್ಠ 48 ಗಂಟೆಗಳ ಮುಂಚಿತವಾಗಿ ಲಿಖಿತ ನೋಟೀಸನ್ನು ನೀಡತಕ್ಕದ್ದು.

ಬಿ) ಭದ್ರತಾ ಕೊಠಡಿಯನ್ನು ಜಿಲ್ಲಾ ಚುನಾವಣಾಧಿಕಾರಿ ಮತ್ತು ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯುವುದು.

ಸಿ) ಕಂಟ್ರೋಲ್ ಯೂನಿಟ್‌ನ ಪವರ್‌ಪ್ಯಾಕ್‌ಗಳನ್ನು, ವಿವಿಪ್ಯಾಟ್‌ಗಳ ಪೇಪರ್ ರೋಲ್‌ಗಳನ್ನು ಹೊರತೆಗೆಯುವುದು.

ಡಿ) ಅಣಕು ಮತದಾನ ಮತ್ತು ವಾಸ್ತವಿಕ ಮತದಾನಕ್ಕೆ ಸಂಬಂಧಿಸಿದ ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು, ಈ ಮುಂದಿನ ಕಾರ್ಯವಿಧಾನದ ಅನುಸಾರ ವಿಲೇವಾರಿ ಮಾಡತಕ್ಕದ್ದು:

(i) ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು, ಜಿಲ್ಲಾ ಚುನಾವಣಾಧಿಕಾರಿಯ ಆದೇಶದ ಏಳು ದಿನಗಳೊಳಗಾಗಿ, ಕಾಗದ ಚೂರು ಮಾಡುವ ಯಂತ್ರವನ್ನು ಬಳಸಿ ವಿಲೇವಾರಿ ಮಾಡಬಹುದು.

(ii) ಹೀಗೆ ಪೇಪರ್ ಸ್ಲಿಪ್‌ಗಳನ್ನು ಚೂರು ಮಾಡುವಿಕೆಯನ್ನು, **ಅನುಬಂಧ–33**ಕ್ಕೆ ಲಗತ್ತಿಸಲಾದ ನಮೂನೆಯಲ್ಲಿ ಸಂಬಂಧಿತ ಜಿಲ್ಲಾ ಚುನಾವಣಾಧಿಕಾರಿಯು ಕ್ರಮಬದ್ಧವಾಗಿ ನಾಮನಿರ್ದೇಶಿಸಿದ ಪತ್ರಾಂಕಿತ ಅಧಿಕಾರಿಯ ಸಮ್ಮುಖದಲ್ಲಿ ಮಾಡತಕ್ಕದ್ದು.

(iii) ಈ ಬಗ್ಗೆ ಜಿಲ್ಲಾ ಚುನಾವಣಾಧಿಕಾರಿಗಳು, ಚುನಾವಣಾ ಅರ್ಜಿ ಸಲ್ಲಿಕೆ ಸ್ಥಿತಿಯ ದೃಢೀಕರಣದ 15 ದಿನಗಳೊಳಗಾಗಿ ಸಂಬಂಧಿತ ಮುಖ್ಯ ಚುನಾವಣಾಧಿಕಾರಿಗೆ, **ಅನುಬಂಧ–34** ಕ್ಕೆ ಲಗತ್ತಿಸಲಾದ ನಮೂನೆಯಲ್ಲಿ ಪ್ರಮಾಣಪತ್ರವನ್ನು ಸಲ್ಲಿಸತಕ್ಕದ್ದು.

(iv) ಮುಖ್ಯ ಚುನಾವಣಾಧಿಕಾರಿಗಳು, ಚುನಾವಣಾ ಅರ್ಜಿ ಸಲ್ಲಿಕೆ ಸ್ಥಿತಿಯ ದೃಢೀಕರಣದ 30 ದಿನಗಳೊಳಗಾಗಿ, **ಅನುಬಂಧ–35** ರಲ್ಲಿ ನೀಡಲಾದ ನಮೂನೆಯಲ್ಲಿ ಕ್ರೋಢೀಕರಣ ಪ್ರಮಾಣಪತ್ರವನ್ನು ಆಯೋಗಕ್ಕೆ ಸಲ್ಲಿಸತಕ್ಕದ್ದು.

ಇ) ವಿವಿಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ಹೊರ ತೆಗೆಯಲು ನಿಯೋಜಿತರಾದ ಅಧಿಕಾರಿಗಳನ್ನು ಸಂಪೂರ್ಣವಾಗಿ ತಪಾಸಣೆ ಮಾಡುವುದನ್ನು ಖಚಿತಪಡಿಸಿಕೊಳ್ಳಬೇಕು. ಸೀಲು ಮಾಡಿರುವ ಕೊಠಡಿ / ಭದ್ರತಾ ಕೊಠಡಿಯನ್ನು ಪ್ರವೇಶಿಸುವ

ಮೊದಲು ಅವರ ಎಲ್ಲಾ ಜೇಬುಗಳು ಖಾಲಿ ಇರಬೇಕು ಮತ್ತು ಸೀಲು ಮಾಡಿರುವ ಕೊಠಡಿಯನ್ನು ಬಿಟ್ಟು ಹೊರಬರುವಾಗ ಡಿಎಫ್‌ಎಂಡಿ/ಲೋಹ ಶೋಧಕ ಪರಿಶೀಲನೆಯ ಜೊತೆಗೆ ಸಂಪೂರ್ಣ ತಪಾಸಣೆ ಮಾಡಬೇಕು.

ಎಫ್) ಇವಿಎಂಗಳನ್ನು ಎಲ್ಲಿ ಸಂಗ್ರಹಿಸಿಡಲಾಗಿದೆಯೇ ಅದೇ ಸಂಗ್ರಹಾಗಾರದಲ್ಲಿ ವಿವಿಪ್ಯಾಟ್‌ಗಳನ್ನು ಇಡತಕ್ಕದ್ದಲ್ಲ.

ಜಿ) ಇಡೀ ಪ್ರಕ್ರಿಯೆಯನ್ನು ವಿಡಿಯೋ ಚಿತ್ರೀಕರಣ ಮಾಡತಕ್ಕದ್ದು.

ಬಿ. **ಚುನಾವಣಾ ಅರ್ಜಿ ಸಲ್ಲಿಕೆಯಾಗಿರುವ** ಯಾವುದೇ ಚುನಾವಣೆಯ ಸಂದರ್ಭದಲ್ಲಿ, ಈ ಮುಂದಿನ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು:–

- ಚುನಾವಣಾ ಅರ್ಜಿಯು ಇವಿಎಂಗಳು ಅಥವಾ ಮತಗಳ ಎಣಿಕೆಗೆ ಸಂಬಂಧಪಟ್ಟಿದ್ದರೆ, ಚುನಾವಣಾ ಕ್ಷೇತ್ರದಲ್ಲಿನ ಎಲ್ಲಾ ಮತದಾನ ಕೇಂದ್ರಗಳಲ್ಲಿ ಬಳಸಲಾದ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು, ಚುನಾವಣಾ ಅರ್ಜಿಯನ್ನು ನ್ಯಾಯಾಲಯಗಳು ಅಂತಿಮವಾಗಿ ವಿಲೆ ಮಾಡುವ ಸಮಯದವರೆಗೆ, ಜಿಲ್ಲಾ ಚುನಾವಣಾಧಿಕಾರಿಯ ಸುರಕ್ಷಿತ ಅಭಿರಕ್ಷೆಯಲ್ಲಿರಿಸುವುದನ್ನು ಮುಂದುವರೆಸತಕ್ಕದ್ದು.
- ಚುನಾವಣಾ ಅರ್ಜಿಯು ಇವಿಎಂಗಳು ಅಥವಾ ಮತಗಳ ಎಣಿಕೆಗೆ ಸಂಬಂಧಪಟ್ಟಿಲ್ಲದಿದ್ದರೆ, ಭವಿಷ್ಯದ ಯಾವುದೇ ಚುನಾವಣೆ ಅಥವಾ ಸ್ಥಳಾಂತರ, ಭೌತಿಕ ಪರಿಶೀಲನೆ ಮುಂತಾದಂತಹ ಯಾವುದೇ ಇತರ ಉದ್ದೇಶಕ್ಕಾಗಿ ಭದ್ರತಾ ಕೊಠಡಿಯಿಂದ ಸಂಬಂಧಿಸಿದ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಹೊರ ತೆಗೆಯಲು ಅನುಮತಿಸುವಂತೆ ಕೋರಿ ಸಂಬಂಧಪಟ್ಟ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಬಹುದು.

ಸಿ. **ಯಾವುದೇ ಚುನಾವಣಾ ಅರ್ಜಿ / ನ್ಯಾಯಾಲಯ ಪ್ರಕರಣ ಒಳಗೊಂಡಿರದ ವಿವಿಪ್ಯಾಟ್‌ಗಳನ್ನು, ಚುನಾವಣಾ ಅರ್ಜಿ / ನ್ಯಾಯಾಲಯ ಪ್ರಕರಣ ಒಳಗೊಂಡಿರುವ ವಿವಿಪ್ಯಾಟ್‌ಗಳೊಂದಿಗೆ ಸಂಗ್ರಹಿಸಿಟ್ಟಿರುವ ಸಂದರ್ಭದಲ್ಲಿ,** ಯಾವುದೇ ಚುನಾವಣಾ ಅರ್ಜಿ / ನ್ಯಾಯಾಲಯ ಪ್ರಕರಣ ಒಳಗೊಂಡಿರದ ವಿವಿಪ್ಯಾಟ್‌ಗಳನ್ನು, ಚುನಾವಣಾ ಅರ್ಜಿ/ನ್ಯಾಯಾಲಯ ಪ್ರಕರಣ ಒಳಗೊಂಡಿರುವ ವಿವಿಪ್ಯಾಟ್‌ಗಳಿಂದ ಬೇರ್ಪಡಿಸುವುದಕ್ಕಾಗಿ ಈ ಮುಂದಿನ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು:–

- ಇಪಿ/ ನ್ಯಾಯಾಲಯ ಪ್ರಕರಣದ ಅರ್ಜಿದಾರರು/ಪ್ರತಿವಾದಿಗಳು ಮತ್ತು ಎಲ್ಲಾ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ, ಇಪಿ / ನ್ಯಾಯಾಲಯ ಪ್ರಕರಣ ಒಳಗೊಂಡ ವಿವಿಪ್ಯಾಟ್‌ಗಳು ಹಾಗೂ ಇಪಿಗೆ ಸಂಬಂಧಿಸಿಲ್ಲದ ವಿವಿಪ್ಯಾಟ್‌ಗಳು ಇರುವ ಭದ್ರತಾ ಕೊಠಡಿಯನ್ನು ತೆರೆಯುವ ವಿಷಯವನ್ನು ತಿಳಿಸಿ, ಭದ್ರತಾ ಕೊಠಡಿಯನ್ನು ತೆರೆಯುವ ಸಮಯದಲ್ಲಿ ಹಾಜರಿರುವಂತೆ ಅವರನ್ನು ಕೋರಿ, ಕನಿಷ್ಠ 72 ಗಂಟೆಗಳ ಮುಂಚಿತವಾಗಿ ಲಿಖಿತ ನೋಟೀಸನ್ನು ನೀಡತಕ್ಕದ್ದು.
- ಭದ್ರತಾ ಕೊಠಡಿಯನ್ನು, ಜಿಲ್ಲಾ ಚುನಾವಣಾಧಿಕಾರಿ, ಇಪಿ/ನ್ಯಾಯಾಲಯ ಪ್ರಕರಣದ ಅರ್ಜಿದಾರರು/ಪ್ರತಿವಾದಿಗಳು ಮತ್ತು ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯತಕ್ಕದ್ದು.
- ಯಾವುದೇ ಇಪಿ/ನ್ಯಾಯಾಲಯ ಪ್ರಕರಣ ಒಳಗೊಂಡಿರದ ವಿವಿಪ್ಯಾಟ್‌ಗಳನ್ನು ಭದ್ರತಾ ಕೊಠಡಿಯಿಂದ ಹೊರ ತೆರೆಯುವುದಕ್ಕಾಗಿ ಇಪಿ/ನ್ಯಾಯಾಲಯ ಪ್ರಕರಣ ಒಳಗೊಂಡಿರುವ ವಿವಿಪ್ಯಾಟ್‌ಗಳಿಂದ ಅವನ್ನು ಬೇರ್ಪಡಿಸತಕ್ಕದ್ದು. ಹಾಗೆ ಭದ್ರತಾ ಕೊಠಡಿಯಿಂದ ಹೊರತೆಗೆಯುತ್ತಿರುವ ವಿವಿಪ್ಯಾಟ್‌ಗಳ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.
- ಯಾವುದೇ ಇಪಿ/ನ್ಯಾಯಾಲಯ ಪ್ರಕರಣ ಒಳಗೊಂಡಿರದ ವಿವಿಪ್ಯಾಟ್‌ಗಳನ್ನು ಮಾತ್ರ ಭದ್ರತಾ ಕೊಠಡಿಯಿಂದ ಹೊರತರತಕ್ಕದ್ದು.
- ಎಲ್ಲಾ ಅಂಥ ವಿವಿಪ್ಯಾಟ್‌ಗಳಿಂದ ಪೇಪರ್ ರೋಲ್‌ಗಳು ಮತ್ತು ಮುದ್ರಿತ ಪೇಪರ್ ಸ್ಲಿಪ್‌ಗಳನ್ನು ಹೊರತೆಗೆಯಲು ಮೇಲೆ ನಮೂದಿಸಿದ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು, ಅನಂತರದಲ್ಲಿ, ಯಾವುದೇ ಮುಂದಿನ ನಿಯೋಜನೆ/ಬಳಕೆಗಾಗಿ ಆ ವಿವಿಪ್ಯಾಟ್‌ಗಳು ಲಭ್ಯವಿರುತ್ತವೆ.
- ಇಡೀ ಪ್ರಕ್ರಿಯೆಯನ್ನು ವಿಡಿಯೋ ಚಿತ್ರೀಕರಣ ಮಾಡಬೇಕು ಮತ್ತು ದಾಖಲೆ ಮಾಡುವ ದೃಷ್ಟಿಯಿಂದ ಸಂರಕ್ಷಿಸಬೇಕು.

## 14.14 ಶೈಕ್ಷಣಿಕ ಸಂಸ್ಥೆಯಲ್ಲಿ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಸಂಗ್ರಹಿಸುವುದು

- ಚುನಾವಣಾ ಅರ್ಜಿ ಸಲ್ಲಿಕೆ ಕಾರಣದಿಂದಾಗಿ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು, ಯಾವುದೇ ಶಾಲೆ / ಶೈಕ್ಷಣಿಕ ಸಂಸ್ಥೆಯಲ್ಲಿ ಸಂಗ್ರಹಿಸಿರುವ ಸಂದರ್ಭದಲ್ಲಿ ಮತ್ತು ಅವನ್ನು ತೆರವುಗೊಳಿಸುವಂತೆ ಶೈಕ್ಷಣಿಕ ಸಂಸ್ಥೆ ಕೋರಿರುವ ಸಂದರ್ಭದಲ್ಲಿ, ಮುಖ್ಯ ಚುನಾವಣಾಧಿಕಾರಿಗಳು ಅಂಥ ಶಾಲೆ / ಶೈಕ್ಷಣಿಕ ಸಂಸ್ಥೆಯಿಂದ ಪರ್ಯಾಯ ಸಂಗ್ರಹಣಾ ಸ್ಥಳಕ್ಕೆ (ಸಂಗ್ರಹಣಾಗಾರ) ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಸ್ಥಳಾಂತರಿಸುವುದಕ್ಕಾಗಿ, ಸಂಬಂಧಿಸಿದ ನ್ಯಾಯಾಲಯಕ್ಕೆ, ಕೂಡಲೇ ಅರ್ಜಿಯನ್ನು ಸಲ್ಲಿಸತಕ್ಕದ್ದು. ಆ ಅರ್ಜಿಯು, ಶಾಲೆ / ಶೈಕ್ಷಣಿಕ ಸಂಸ್ಥೆಯಿಂದ ಅವನ್ನು

ತೆರವು ಮಾಡುವುದರ ಉದ್ದೇಶವನ್ನು ಒಳಗೊಂಡಿರತಕ್ಕದ್ದು ಮತ್ತು ಇಪಿ (ಚುನಾವಣಾ ಅರ್ಜಿ) ಸಂಬಂಧಿತ ಇವಿಎಂಗಳು / ವಿವಿಪ್ಯಾಟ್‌ಗಳನ್ನು ಸ್ಥಳಾಂತರಿಸಲು ಈ ಮುಂದಿನ ಶಿಷ್ಟಾಚಾರ/ನಿಯಮವನ್ನು ಸಹ ಅನುಸರಿಸತಕ್ಕದ್ದು.

(ಎ) ಇಪಿಯ ಅರ್ಜಿದಾರ(ಗಳು) ಮತ್ತು ಪ್ರತಿವಾದಿ(ಗಳು)ಗೆ ಇಪಿಯಲ್ಲಿ ಒಳಗೊಂಡಿರುವ ಇವಿಎಂಗಳು/ವಿವಿಪ್ಯಾಟ್‌ಗಳು ಇರುವ ಭದ್ರತಾ ಕೊಠಡಿಯನ್ನು ತೆರೆಯುವುದನ್ನು ತಿಳಿಸಿ, ಭದ್ರತಾ ಕೊಠಡಿಯನ್ನು ತೆರೆಯುವ ಸಮಯದಲ್ಲಿ ಹಾಜರಿರುವಂತೆ ಅವರನ್ನು ಕೋರಿ, ಕನಿಷ್ಠ 48 ಗಂಟೆಗಳ ಮುಂಚಿತವಾಗಿ ಲಿಖಿತ ನೋಟೀಸನ್ನು ನೀಡತಕ್ಕದ್ದು.

(ಬಿ) ಭದ್ರತಾ ಕೊಠಡಿಯನ್ನು, ಜಿಲ್ಲಾ ಚುನಾವಣಾಧಿಕಾರಿ ಮತ್ತು ಅರ್ಜಿದಾರ(ಗಳು)/ಪ್ರತಿವಾದಿ(ಗಳು)ಯ ಸಮ್ಮುಖದಲ್ಲಿ ತೆರೆಯತಕ್ಕದ್ದು.

(ಸಿ) ಇಪಿಯ ಅರ್ಜಿದಾರ(ಗಳು) ಮತ್ತು ಪ್ರತಿವಾದಿ(ಗಳು)ಯು, ಇವಿಎಂಗಳು/ವಿವಿಪ್ಯಾಟ್‌ಗಳ ಸಾಗಣೆ ವಾಹನಗಳನ್ನು ಹಿಂಬಾಲಿಸಲು ಅನುಮತಿಸತಕ್ಕದ್ದು.

(ಡಿ) ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು, ಜಿಲ್ಲಾ ಚುನಾವಣಾಧಿಕಾರಿ ಮತ್ತು ಇಪಿಯ ಅರ್ಜಿದಾರ(ಗಳು) / ಪ್ರತಿವಾದಿ(ಗಳು)ಯ ಸಮ್ಮುಖದಲ್ಲಿ ಡಬಲ್ ಲಾಕ್ ವ್ಯವಸ್ಥೆಯ ಮೇರೆಗೆ, ಪ್ರತ್ಯೇಕ ಭದ್ರತಾ ಕೊಠಡಿಯಲ್ಲಿ ಸಂಗ್ರಹಿಸತಕ್ಕದ್ದು.

(ಎಫ್) ಭದ್ರತಾ ಕೊಠಡಿಯನ್ನು, ಜಿಲ್ಲಾ ಚುನಾವಣಾಧಿಕಾರಿ ಮತ್ತು ಇಪಿಯ ಅರ್ಜಿದಾರ(ಗಳು) / ಪ್ರತಿವಾದಿ(ಗಳು) ಯ ಸಮ್ಮುಖದಲ್ಲಿ ಮೊಹರು ಮಾಡತಕ್ಕದ್ದು ಮತ್ತು ಅರ್ಜಿದಾರ(ಗಳು) / ಪ್ರತಿವಾದಿ(ಗಳು)ಯು, ತಮ್ಮ ಸ್ವಂತ ಸೀಲುಗಳನ್ನು ಹಾಕಲು ಸಹ ಅನುಮತಿಸತಕ್ಕದ್ದು.

(ಜಿ) ಇಡೀ ಪ್ರಕ್ರಿಯೆಯನ್ನು ವಿಡಿಯೋ ಚಿತ್ರೀಕರಣ ಮಾಡತಕ್ಕದ್ದು.

- ಶೈಕ್ಷಣಿಕ ಸಂಸ್ಥೆಯಿಂದ ತೆರವು ಮಾಡದಿರಲು ಸ್ಥಳದ ಅಭಾವವು ಕಾರಣ ಎಂದು ನಮೂದಿಸಿರುವ ಸಂದರ್ಭದಲ್ಲಿ, ಮುಖ್ಯ ಚುನಾವಣಾಧಿಕಾರಿಯವರು, ಈ ಇವಿಎಂಗಳು/ವಿವಿಪ್ಯಾಟ್‌ಗಳನ್ನು ಸಂಗ್ರಹಿಸಲು ಬಾಡಿಗೆ ಸಂಗ್ರಹಾಗಾರಗಳ ಆಯ್ಕೆಯೂ ಸೇರಿದಂತೆ, ಎಲ್ಲಾ ಇತರೆ ಸಂಗ್ರಹಾಗಾರಗಳನ್ನು ಹುಡುಕಲಾಗಿದೆ ಎಂದು ಆದರೂ, ಇಡೀ ಜಿಲ್ಲೆಯಲ್ಲಿ ಎಲ್ಲಿಯೂ ಅಂಥ ಯಾವುದೇ ಸ್ಥಳ ಲಭ್ಯವಿಲ್ಲ ಎಂದೂ ಪರಿಶೀಲಿಸಿ ಪ್ರಮಾಣೀಕರಿಸತಕ್ಕದ್ದು.

# ಅಧ್ಯಾಯ–15

# ವಿವಿಪ್ಯಾಟ್‌ನ ಬಳಕೆಯ ಸಂದರ್ಭದಲ್ಲಿ ಮಾಡಬೇಕಾದ್ದು ಮತ್ತು ಮಾಡಬಾರದ್ದು

| ಮಾಡಬೇಕಾದ್ದು | ಮಾಡಬಾರದ್ದು |
|---|---|
| ಸಾಗಣೆಗೆ ಮುಂಚೆ ಪೇಪರ್‌ರೋಲ್ ನಾಬ್ (ಸಮತಲ ಭಂಗಿ) ಲಾಕ್ ಆಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. | |
| ಮತದಾನ ಕೇಂದ್ರದಲ್ಲಿ ಕಂಟ್ರೋಲ್ ಯೂನಿಟ್‌ನ ಸ್ವಿಚ್ ಆನ್ ಮಾಡುವ ಮೊದಲು, ಪೇಪರ್‌ರೋಲ್ ನಾಬ್‌ನ ಲಾಕ್ ಅನ್ನು (ಲಂಬವಾದ ಸ್ಥಿತಿ) ತೆಗೆಯಬೇಕು. | ವಿವಿಪ್ಯಾಟ್‌ನ ಪೇಪರ್‌ರೋಲ್ ನಾಬ್‌ಅನ್ನು ಅನ್‌ಲಾಕ್ ಸ್ಥಿತಿಗೆ (ಲಂಬವಾದ ಸ್ಥಿತಿ) ತರುವ ಮುಂಚೆ ಕಂಟ್ರೋಲ್ ಯೂನಿಟ್‌ಅನ್ನು ಸ್ವಿಚ್ 'ಆನ್'ಮಾಡಬಾರದು |
| ಮತ ಚಲಾಯಿಸುವ ಅಂಕಣದಲ್ಲಿ ಬಿಯು ಮತ್ತು ವಿವಿಪ್ಯಾಟ್‌ಅನ್ನು ಇರಿಸಬೇಕು. ಪ್ರಿಸೈಡಿಂಗ್ ಅಧಿಕಾರಿಯ ಮೇಜಿನ ಮೇಲೆ ಸಿಯು ಅನ್ನು ಇರಿಸಬೇಕು. | |
| ವರ್ಣ ಸಂಯೋಜನೆಯ ಅನುಸಾರವಾಗಿ ಸರಿಯಾದ ಸಂಪರ್ಕ ಸ್ಥಾಪಿಸಬೇಕು. | ವಿವಿಪ್ಯಾಟ್‌ನ ಮೇಲೆ ನೇರ ಬೆಳಕು ಅಥವಾ ಅತ್ಯಧಿಕ ಬೆಳಕು ಬೀಳಲು ಅವಕಾಶ ನೀಡಬಾರದು |
| ಕನೆಕ್ಟರ್‌ಗಳನ್ನು ಸರಿಯಾಗಿ ಅಳವಡಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. | ಕನೆಕ್ಟರ್‌ಗಳ ಮೇಲಿರುವ ಕ್ಲಿಪ್ಪುಗಳನ್ನು ಒತ್ತದೆ ಕೇಬಲ್‌ಗಳನ್ನು ತೆಗೆಯಬಾರದು |
| ಕಂಟ್ರೋಲ್ ಯೂನಿಟ್ ಅನ್ನು ಸ್ವಿಚ್ 'ಆನ್'ಮಾಡಿ, ವಿವಿಪ್ಯಾಟ್‌ಮೇಲಿರುವಹಸಿರು ಎಲ್‌ಇಡಿಯ ದೀಪ ಬೆಳಗುತ್ತದೆ ಮತ್ತು ವಿವಿಪ್ಯಾಟ್ ಎಲ್ಲಾ 7 ಸ್ಲಿಪ್‌ಗಳನ್ನು ಪ್ರಿಂಟ್ ಮಾಡುತ್ತದೆ | ಎಲ್ಲಾ 7 ಸ್ಲಿಪ್‌ಗಳು ಪ್ರಿಂಟ್ ಆಗಿ ಅವು ಕತ್ತರಿಸಿ ಬೀಳುವವರೆಗೆ ಸಿಯು ಅನ್ನು ಸ್ವಿಚ್ 'ಆಫ್'ಮಾಡಬಾರದು |
| ವಿಎಸ್‌ಡಿಯು ಮೇಲೆ ಯಾವುದೇ "ಪ್ರಿಂಟರ್ ಎರರ್"ಸಂದೇಶ ಇದೆಯೇ ಎಂಬುದನ್ನುಪರಿಶೀಲಿಸಿಕೊಳ್ಳಬೇಕು. ಇದೆ ಎಂದಾದರೆ, ಸೆಕ್ಟರಲ್ ಅಧಿಕಾರಿಗೆ (ಎಸ್‌ಓ) ಅದನ್ನು ತಿಳಿಸಬೇಕು. | ವಿಎಸ್‌ಡಿಯು ಮೇಲೆ "ಪ್ರಿಂಟರ್ ಎರರ್" ಎಂಬಸಂದೇಶ ಇದ್ದಸಂದರ್ಭದಲ್ಲಿಮತದಾನವನ್ನುಪ್ರಾರಂಭಿಸಬಾರದು |
| ಬ್ಯಾಟರಿ ಅನ್ನು ಬದಲಾಯಿಸುವುದೂ ಸೇರಿದಂತೆ ಯಾವುದೇ ಸಂಪರ್ಕ ಜೋಡಣೆ ಅಥವಾ ಸಂಪರ್ಕ ಕಡಿತಗೊಳಿಸುವ ಮುಂಚೆ ಸಿಯುಅನ್ನು ಯಾವಾಗಲೂ ಸ್ವಿಚ್ ಆಫ್ ಮಾಡಿರಬೇಕು. | ಮತದಾನ ಮುಕ್ತಾಯವಾಗುವವರೆಗೆ ಪೇಪರ್ ರೋಲ್ ನಾಬ್‌ಅನ್ನು ಚಾಲನೆ ಮಾಡಬಾರದು |
| ಸೂಚನೆ: ಎಂ3 ವಿವಿಪ್ಯಾಟ್‌ಗಳಲ್ಲಿ ವಿವಿಪ್ಯಾಟ್ ಸಂಬಂಧಿತ ಸಂದೇಶಗಳು ಕಂಟ್ರೋಲ್ ಯೂನಿಟ್‌ನ ಪ್ರದರ್ಶಕದ ಮೇಲೆ ಪ್ರದರ್ಶಿತವಾಗುತ್ತದೆ. | |

# ಅಧ್ಯಾಯ–16
# ಗಂಭೀರ ತಪ್ಪುಗಳ ಉದಾಹರಣೆಗಳು

## 1. ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಮೊದಲ ಹಂತದ ಪರಿಶೀಲನೆ

- ಮೊಬೈಲ್ ಆ್ಯಪ್ ಮೂಲಕ ಇಎಂಎಸ್‌ನಲ್ಲಿ ಎಫ್‌ಎಲ್‌ಸಿ–ಓಕೆ ಅಥವಾ ಎಫ್‌ಎಲ್‌ಸಿ–ರಿಜೆಕ್ಟ್ ಸ್ಥಿತಿಯನ್ನು ದಿನನಿತ್ಯ ಅಪ್‌ಡೇಟ್ ಮಾಡದಿರುವುದು.
- ಬ್ಯಾಲೆಟಿಂಗ್ ಯೂನಿಟ್‌ನಲ್ಲಿ ನಕಲು ಬ್ಯಾಲಟ್ ಪೇಪರ್ ಅನ್ನು ಬಳಸದೆ ವಿವಿಪ್ಯಾಟ್‌ಗಳ ಮೊದಲ ಹಂತದ ಪರಿಶೀಲನೆ ಮಾಡುವುದು.
- 64 ನಕಲಿ ಚಿಹ್ನೆ (ನೋಟಾ ಸೇರಿದಂತೆ) ಗಳನ್ನು ಹೊಂದಿರುವ 4–ಬಿಯುಗಳ ಸಹಿತ ಪರೀಕ್ಷೆ ಮಾಡುವುದಕ್ಕಾಗಿ ಬಳಸಲಾದ ಶೇ. 1 ರಷ್ಟು ವಿವಿಪ್ಯಾಟ್‌ಗಳಲ್ಲಿ 16 ಅಭ್ಯರ್ಥಿಗಳ (ನೋಟಾ ಸೇರಿದಂತೆ) ನಕಲು ಚಿಹ್ನೆಗಳನ್ನು ಅಪ್‌ಲೋಡ್ ಮಾಡದಿರುವುದು.
- ನಕಲು ಚಿಹ್ನೆಗಳ ಬಳಕೆಯಲ್ಲಿ ಅನಿಯಮಿತತೆ.

## 2. ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಸಿದ್ಧಗೊಳಿಸುವಿಕೆ

- ಸಿದ್ಧಪಡಿಸುವ ಸಂದರ್ಭದಲ್ಲಿ ವಿವಿಪ್ಯಾಟ್‌ನಲ್ಲಿ ಅಪ್‌ಲೋಡ್ ಮಾಡಿರುವ ಅಭ್ಯರ್ಥಿಗಳ ಚಿಹ್ನೆಗಳನ್ನು ಪರಿಶೀಲಿಸದಿರುವುದು.
- ಎಂ3 ಇವಿಎಂಗಳ ಸಂದರ್ಭದಲ್ಲಿ ಇವಿಎಂಗಳನ್ನು ಸಜ್ಜುಗೊಳಿಸುವ ಸಮಯದಲ್ಲಿಯೇ ಎಂ3 ಇವಿಎಂಗಳು, ಎಂ3 ವಿವಿಪ್ಯಾಟ್‌ಗಳು ಮತ್ತು ಎಲ್ಲಾ ಬಿಯುಗಳಿಗೆ ಸಂಪರ್ಕಕಲ್ಪಿಸಬೇಕು. ಇಲ್ಲದಿದ್ದರೆ, ಆನಂತರದ ಹಂತದಲ್ಲಿ ವಿವಿಪ್ಯಾಟ್ ಅಥವಾ ಬಿಯು ಅನ್ನು ಇವಿಎಂ ಅಂಗೀಕರಿಸುವುದಿಲ್ಲ.

## 3. ವಿವಿಪ್ಯಾಟ್‌ಗಳ ಸಾಗಣೆ

- ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಿವಿಪ್ಯಾಟ್‌ಅನ್ನು ಸಾಗಿಸುವಾಗ ಪೇಪರ್ ರೋಲ್ ಅನ್ನು ಲಾಕ್ ಮಾಡುವುದು.

## 4. ವಿತರಣೆ

- ವಿತರಣೆಯ ಸಮಯದಲ್ಲಿ ಪ್ರಖರವಾದ ಬೆಳಕಿನಲ್ಲಿ ವಿವಿಪ್ಯಾಟ್‌ಅನ್ನು ಸ್ವಿಚ್ ಅನ್ ಮಾಡಬಾರದು, ಏಕೆಂದರೆ, ವಿವಿಪ್ಯಾಟ್ ಎರರ್ ಮೋಡ್‌ಗೆ ಹೋಗುವ ಸಂಭವವಿರುತ್ತದೆ.

## 5. ಮತದಾನದ ದಿನದಂದು ಅಣಕು ಮತದಾನ

- ಅಣಕು ಮತದಾನದ ನಂತರ ಸಿಯುನ ಕ್ಲೋಸ್ ಬಟನ್‌ಅನ್ನು ಒತ್ತದಿರುವುದು.
- ಸಿಯುನ ಅಣಕು ಮತದಾನದ ಫಲಿತಾಂಶವನ್ನು ವಿವಿಪ್ಯಾಟ್ ಪೇಪರ್ ಸ್ಲಿಪ್ ಗಳೊಂದಿಗೆ ತಾಳೆ ಮಾಡದಿರುವುದು.
- ವಿವಿಪ್ಯಾಟ್‌ನಿಂದ ಅಣಕು ಮತದಾನದ ಪೇಪರ್ ಸ್ಲಿಪ್‌ಗಳನ್ನು ತೆಗೆಯದಿರುವುದು.
- ಕಂಟ್ರೋಲ್ ಯೂನಿಟ್‌ನಿಂದ ಅಣಕು ಮತದಾನದ ದತ್ತಾಂಶವನ್ನು ಅಳಿಸದಿರುವುದು.
- ಮತದಾನ ಕೇಂದ್ರಗಳಲ್ಲಿ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಸಜ್ಜುಗೊಳಿಸುವಾಗ, ವಿವಿಪ್ಯಾಟ್ ಮೇಲೆ ನೇರ ಬೆಳಕು ಬೀಳದ ಹಾಗೆ ಅದನ್ನು ಸೂಕ್ತ ಸ್ಥಾನದಲ್ಲಿಡಬೇಕು.
- ವಿವಿಪ್ಯಾಟ್ ಅನ್ನು ತೆರೆದ ಕಿಟಕಿಯ ಹತ್ತಿರ ಅಥವಾ ನೇರವಾಗಿ ಬಲ್ಬ್‌ನ ಅಥವಾ ಹಾಲೋಜೆನ್ ಲ್ಯಾಂಪ್‌ನ ಅಡಿಯಲ್ಲಿ ಇಡಬಾರದು.

## 6. ಮತದಾನದ ಸಂದರ್ಭದಲ್ಲಿ

- ವಿವಿಪ್ಯಾಟ್ ಅನ್ನು ಮಾತ್ರ ಬದಲಾಯಿಸುವ ಸಂದರ್ಭದಲ್ಲಿ ಅಣಕು ಮತದಾನ ನಡೆಸುವುದು: ವಿವಿಪ್ಯಾಟ್ ಅನ್ನು ಮಾತ್ರ ಬದಲಾಯಿಸುವ ಸಂದರ್ಭದಲ್ಲಿ ಅಣಕು ಮತದಾನವನ್ನು ನಡೆಸಬೇಕಾದ ಅಗತ್ಯವಿರುವುದಿಲ್ಲ.
- ಸಿಯು ಅಥವಾ ಬಿಯು ಕಾರ್ಯನಿರ್ವಹಿಸದ ಸಂದರ್ಭದಲ್ಲಿ, ಸಿಯು ಅಥವಾ ಬಿಯು ಅನ್ನು ಮಾತ್ರ ಬದಲಾಯಿಸುವುದು: ಅಂಥ ಸಂದರ್ಭದಲ್ಲಿ ಸಿಯು ಮತ್ತು ಬಿಯು ಗಳೆರಡರ ಜೊತೆಗೆ ವಿವಿಪ್ಯಾಟ್ ಅನ್ನೂ ಬದಲಾಯಿಸತಕ್ಕದ್ದು.
- ಮತದಾನ ಮುಕ್ತಾಯಗೊಂಡ ನಂತರ 'ಕ್ಲೋಸ್'ಬಟನ್ ಅನ್ನು ಒತ್ತದಿರುವುದು.
- ಬಿಯು/ ಸಿಯು/ ವಿವಿಪ್ಯಾಟ್ ನ ಯಾವುದೇ ಮೊಹರನ್ನು ಹಾನಿ ಮಾಡಬಾರದು.

## 7. ಸಾಮಾನ್ಯ

- ವಿವಿಪ್ಯಾಟ್ ಅನ್ನು ಪದೇಪದೇ ಸ್ವಿಚ್ ಆನ್ ಮತ್ತು ಆಫ್ ಮಾಡಬಾರದು. ಏಕೆಂದರೆ ಅದರಿಂದ ಬ್ಯಾಟರಿ ಹಾಗೂ ಪೇಪರ್ ರೋಲ್‌ಗಳು ಖಾಲಿಯಾಗುತ್ತವೆ.
- ಇವಿಎಂಗಳು/ ವಿವಿಪ್ಯಾಟ್‌ಗಳನ್ನು ಸಂಪರ್ಕಿಸುವಾಗ ಅಥವಾ ಸಂಪರ್ಕ ಕಡಿತಗೊಳಿಸುವಾಗ ಸಿಯು ಅನ್ನು ಸ್ವಿಚ್ ಆಫ್ ಮಾಡಬೇಕು ಹಾಗೂ ಸಂಪರ್ಕ ಕಡಿತಗೊಳಿಸುವುದಕ್ಕಾಗಿ ಕೇಬಲ್ ಅನ್ನು ಎಳೆಯಬಾರದು.
- ಎಂ3 ವಿವಿಪ್ಯಾಟ್‌ನ ಸಂದರ್ಭದಲ್ಲಿ, ಯಾವುದೇ ವಿಎಸ್‌ಡಿಯು ಇರುವುದಿಲ್ಲ ಮತ್ತು ವಿವಿಪ್ಯಾಟ್ ಸ್ಥಿತಿಯು ಕಂಟ್ರೋಲ್ ಯೂನಿಟ್‌ನ ಪ್ರದರ್ಶಕ ಪ್ಯಾನಲ್‌ನಲ್ಲಿಯೇ ಪ್ರದರ್ಶಿತವಾಗುತ್ತದೆ.

# ಭಾಗ –III

## (ಇವಿಎಂ ಮತ್ತು ವಿವಿಪ್ಯಾಟ್‌ನ ಪರಿಚಯ)



| ಕ್ರಮ ಸಂಖ್ಯೆ | ಅಧ್ಯಾಯ ಸಂಖ್ಯೆ | ಪರಿವಿಡಿ | ಪುಟ ಸಂಖ್ಯೆ |
|---|---|---|---|
| 1 | ಅಧ್ಯಾಯ 17 | ಪ್ರಸ್ತಾವನೆ | |
| 2 | ಅಧ್ಯಾಯ 18 | ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಬಳಕೆಗಾಗಿ ಕಾನೂನು ಉಪಬಂಧಗಳು | |
| 3 | ಅಧ್ಯಾಯ 19 | ಇವಿಎಂ ನಿರ್ವಹಣಾ ವ್ಯವಸ್ಥೆ | |
| 4 | ಅಧ್ಯಾಯ 20 | ಇವಿಎಂ ಗಳ ವಿಲೇವಾರಿ | |

# ಅಧ್ಯಾಯ –17

## ಪ್ರಸ್ತಾವನೆ

ವಿದ್ಯುನ್ಮಾನ ಮತಯಂತ್ರ (ಇವಿಎಂ) ಮತ್ತು ಮತದಾರರು ಪರಿಶೀಲಿಸಿಕೊಳ್ಳಬಹುದಾದ ಕಾಗದದ ತಾಳೆ ದರ್ಶಕ (ವಿವಿಪ್ಯಾಟ್)



ಕಂಟ್ರೋಲ್ ಯೂನಿಟ್ ವಿವಿಪ್ಯಾಟ್ ಬ್ಯಾಲೆಟಿಂಗ್ ಯೂನಿಟ್

ಒಂದು ಇವಿಎಂ ಎರಡು ಘಟಕಗಳನ್ನು ಹೊಂದಿರುತ್ತದೆ, ಅವುಗಳೆಂದರೆ ಕಂಟ್ರೋಲ್ ಯೂನಿಟ್ (ಸಿಯು) ಮತ್ತು ಬ್ಯಾಲೆಟ್ ಯೂನಿಟ್ (ಬಿಯು).ಇವೆರಡರ ನಡುವೆ ಸಂಪರ್ಕ ಕಲ್ಪಿಸಲು ಒಂದು ಕೇಬಲ್ (5 ಮೀ.ಉದ್ದ) ಇರುತ್ತದೆ. ಒಂದು ಬ್ಯಾಲೆಟ್ ಯೂನಿಟ್‌ನಲ್ಲಿ 16 ಅಭ್ಯರ್ಥಿಗಳ ಹೆಸರನ್ನು ಅಳವಡಿಸಲು ಅವಕಾಶವಿದೆ.ಎಂ3–ಇವಿಎಂಗಳಲ್ಲಿ, 24 (ಇಪ್ಪತ್ತನಾಲ್ಕು) ಬ್ಯಾಲೆಟ್ ಯೂನಿಟ್‌ಗಳು ಒಟ್ಟಿಗೆ 384 ಅಭ್ಯರ್ಥಿಗಳ (ನೋಟಾ ಒಳಗೊಂಡಂತೆ) ಹೆಸರುಗಳನ್ನು ಅಳವಡಿಸಲು ಅವಕಾಶ ಕಲ್ಪಿಸಿದ್ದು, ಇದನ್ನು ಒಂದು ಕಂಟ್ರೋಲ್ ಯೂನಿಟ್‌ನೊಂದಿಗೆ ಬಳಸಬಹುದಾಗಿದೆ.ಇದು 7.5 ವೋಲ್ಟ್‌ಗಳನ್ನು ಹೊಂದಿರುವ ಒಂದು ಪವರ್ ಪ್ಯಾಕ್ (ಬ್ಯಾಟರಿ) ಮೂಲಕ ಚಾಲನೆಯಾಗುತ್ತದೆ.ಒಂದು ಕಂಟ್ರೋಲ್ ಯೂನಿಟ್‌ಗೆ 4ಕ್ಕಿಂತ ಹೆಚ್ಚು ಬ್ಯಾಲೆಟ್ ಯೂನಿಟ್‌ಗಳ ಸಂಪರ್ಕ ಕಲ್ಪಿಸಿದ್ದರೆ, ಎಂ3 ಇವಿಎಂಗಳಿದ್ದ ಸಂದರ್ಭದಲ್ಲಿ, ಪವರ್ ಪ್ಯಾಕ್‌ಗಳನ್ನು 5ನೇ, 9ನೇ, 13ನೇ, 17ನೇ ಮತ್ತು 21ನೇ ಬ್ಯಾಲೆಟ್ ಯೂನಿಟ್‌ಗಳಲ್ಲಿ ಸೇರಿಸಲಾಗಿರುತ್ತದೆ.ಅಭ್ಯರ್ಥಿಗಳ ಮತ ಗುಂಡಿಯೊಂದಿಗೆ ಬ್ಯಾಲೆಟ್ ಯೂನಿಟ್‌ನ ಬಲ ಭಾಗದ ಮೇಲೆ 1 ರಿಂದ 16 ಅಂಕಿಗಳನ್ನು ದೃಷ್ಟಿದೋಷ ಇರುವ ಮತದಾರರ ಮಾರ್ಗದರ್ಶನಕ್ಕಾಗಿ ಬ್ರೈಲ್ ಲಿಪಿಯಲ್ಲಿ ಉಬ್ಬಚ್ಚು ಮಾಡಲಾಗಿರುತ್ತದೆ.

ಮತದಾರನು ಪರಿಶೀಲಿಸಿಕೊಳ್ಳಬಹುದಾದ ಕಾಗದ ತಾಳೆ ದರ್ಶಕವು, ವಿದ್ಯುನ್ಮಾನ ಮಂತಯಂತ್ರಗಳೊಂದಿಗೆ ಜೋಡಿಸಲಾದ ಒಂದು ಸ್ವತಂತ್ರ ವ್ಯವಸ್ಥೆಯಾಗಿದೆ.ಇದು, ಮತದಾರನು ತಾನು ಚಲಾಯಿಸಿದ, ತಾನು ಚಲಾಯಿಸಲು ಉದ್ದೇಶಿಸಿದ ಮತವು ಅಭ್ಯರ್ಥಿಗೆ ಹೋಗಿದೆಯೇ ಎಂಬುದನ್ನು ಪರಿಶೀಲಿಸಲು ಅವಕಾಶ ನೀಡುತ್ತದೆ.ಒಮ್ಮೆ ಮತ ಚಲಾಯಿಸಿದ ನಂತರ, ಅಭ್ಯರ್ಥಿಯ ಕ್ರಮಸಂಖ್ಯೆ, ಹೆಸರು ಮತ್ತು ಚಿಹ್ನೆಯನ್ನೊಳಗೊಂಡ ಒಂದು ಸ್ಲಿಪ್ ವಿವಿಪ್ಯಾಟ್ ಪ್ರಿಂಟರಿನಲ್ಲಿ ಪ್ರಿಂಟ್ ಆಗುತ್ತದೆ ಮತ್ತು 7 ಸೆಕೆಂಡುಗಳವರೆಗೆ ಪಾರದರ್ಶಕ ಕಿಟಕಿಯ ಮೂಲಕ ಕಾಣಿಸುತ್ತದೆ.ಆನಂತರ, ಈ ಪ್ರಿಂಟ್ ಆದ ಚೀಟಿಯು ಸ್ವಯಂಚಾಲಿತವಾಗಿ ತುಂಡಾಗಿ ವಿವಿಪ್ಯಾಟ್‌ನ ಸೀಲ್ ಆದ ಡ್ರಾಪ್ ಬಾಕ್ಸಿನೊಳಗೆ ಬೀಳುತ್ತದೆ.

ವಿವಿಪ್ಯಾಟ್ 22.5 ವೋಲ್ಟ್‌ಗಳ ಪವರ್ ಪ್ಯಾಕ್ (ಬ್ಯಾಟರಿ) ಯಿಂದ ಕಾರ್ಯನಿರ್ವಹಿಸುತ್ತದೆ.ಕಂಟ್ರೋಲ್ ಯುನಿಟ್ ಅನ್ನು ಪ್ರಿಸೈಡಿಂಗ್ ಆಫೀಸರ್/ ಮತಗಟ್ಟೆ ಅಧಿಕಾರಿಯವರು ಇಟ್ಟುಕೊಂಡಿರುತ್ತಾರೆ ಮತ್ತು ಬ್ಯಾಲೆಟ್ ಯುನಿಟ್ ಮತ್ತು ವಿವಿಪ್ಯಾಟ್ ಅನ್ನು ವೋಟಿಂಗ್ ಕಂಪಾರ್ಟ್‌ಮೆಂಟಿನಲ್ಲಿ ಇರಿಸಲಾಗಿರುತ್ತದೆ.

ವಿವರಗಳಿಗಾಗಿ, ದಯವಿಟ್ಟು ಭಾರತದ ಚುನಾವಣಾ ಆಯೋಗದ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಇವಿಎಂ ನ ಕುರಿತ ಸ್ಟೇಟಸ್ ಪೇಪರ್ ಅನ್ನು ಓದಿ ಹಾಗೂ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಕುರಿತ ಪ್ರಾತ್ಯಕ್ಷಿಕರಣವನ್ನು ನೋಡಿ.

# ಕಾರ್ಯಾಚರಣೆ ನಕ್ಷೆ
# ಚುನಾವಣೆಗಳಲ್ಲಿ ಇವಿಎಂ/ ವಿವಿಪ್ಯಾಟ್‌ಗಳ ಬಳಕೆ

## ಜಿಲ್ಲಾ ಚುನಾವಣಾಧಿಕಾರಿ

(ವಿಧಾನಸಭಾ ಕ್ಷೇತ್ರವಾರು ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಪ್ರಯೋಗಾರ್ಥ ಪರೀಕ್ಷೆ ಮತ್ತು ಹಂಚಿಕೆ)

- ಇವಿಎಂ ಮತ್ತು ವಿವಿಪ್ಯಾಟ್‌ಗಳ ಅಭಿರಕ್ಷಕರು
- ತಯಾರಕರು ತಮ್ಮ ಮಟ್ಟದಲ್ಲಿ ಇವಿಎಂ ಮತ್ತು ವಿವಿಪ್ಯಾಟ್‌ಗಳ ಮೊದಲ ಹಂತದ ಪರಿಶೀಲನೆ (ಎಫ್‌ಎಲ್‌ಸಿ) ಮಾಡುವುದು
- ಎಫ್‌ಎಲ್‌ಸಿ ಪ್ರಕ್ರಿಯೆಯಲ್ಲಿ ಮಾನ್ಯತೆ ಪಡೆದ ರಾಷ್ಟ್ರ ಮತ್ತು ರಾಜ್ಯಮಟ್ಟದ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಪಾಲ್ಗೊಳ್ಳುವುದು
- ಇವಿಎಂಗಳನ್ನು ವಿಧಾನಸಭಾ ಮತಕ್ಷೇತ್ರ/ ವಿಧಾನಸಭಾ ವಿಭಾಗವಾರು ಹಂಚಿಕೆ ಮಾಡಲು ಎಫ್‌ಎಲ್‌ಸಿ ನಂತರ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಮೊದಲ ಯಾದೃಚ್ಛೀಕರಣ ಮಾಡುವುದು

## ರಿಟರ್ನಿಂಗ್ ಆಫೀಸರ್

(ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಸಿದ್ಧತೆ ಹಾಗೂ ಮತಗಟ್ಟೆವಾರು ಇವಿಎಂಗಳ ಹಂಚಿಕೆ)

- ಭದ್ರತಾ ಕೊಠಡಿಗಳಲ್ಲಿ ಮೊದಲ ಯಾದೃಚ್ಛೀಕೃತ ಇವಿಎಂಗಳು/ ವಿವಿಪ್ಯಾಟ್‌ಗಳ ಸಂಗ್ರಹಣೆ.
- ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿ ಅಂತಿಮಗೊಂಡ ನಂತರ ಇವಿಎಂಗಳು/ ವಿವಿಪ್ಯಾಟ್‌ಗಳ ಸಿದ್ಧತೆಗೂ ಮುನ್ನ ಮತ ಗಟ್ಟೆವಾರು ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಹಂಚಿಕೆ ಮಾಡಲು ಇವಿಎಂಗಳು/ ವಿವಿಪ್ಯಾಟ್‌ಗಳ ಎರಡನೇ ಯಾದೃಚ್ಛೀಕರಣ ಮಾಡಲಾಗುತ್ತದೆ.
- ಅಭ್ಯರ್ಥಿಗಳು/ಅವರ ಏಜೆಂಟರ ಸಮ್ಮುಖದಲ್ಲಿ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಕಾರ್ಯಾರಂಭ.
- ಸಿದ್ಧಪಡಿಸಿದ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಅಭ್ಯರ್ಥಿಗಳ/ ಅವರ ಏಜೆಂಟರ ಸಮಕ್ಷಮದಲ್ಲಿ ಭದ್ರತಾ ಕೊಠಡಿಯಲ್ಲಿ ಸಂಗ್ರಹಿಸಿ ಇಡಲಾಗುವುದು.
- ಮತಗಟ್ಟೆ ಸಿಬ್ಬಂದಿಗೆ ಹಂಚಿಕೆ ಮಾಡುವ ದಿನದಂದು, ಅಭ್ಯರ್ಥಿಗಳು/ ಅವರಏಜೆಂಟರ ಸಮ್ಮುಖದಲ್ಲಿ ಭದ್ರತಾ ಕೊಠಡಿಯನ್ನು ತೆರೆಯಲಾಗುತ್ತದೆ. ಹಾಗೂ ಚುನಾವಣಾ ಸಾಮಗ್ರಿಗಳೊಂದಿಗೆ ಇವಿಎಂ ಮತ್ತು ವಿವಿಪ್ಯಾಟ್‌ಗಳನ್ನು ಮತಗಟ್ಟೆ ಸಿಬ್ಬಂದಿಗೆ ಹಸ್ತಾಂತರಿಸಲಾಗುತ್ತದೆ.

## ಮತಗಟ್ಟೆ ಸಿಬ್ಬಂದಿಗಳು

(ಮತದಾನ ನಡೆಸುವಿಕೆ)

- ಇವಿಎಂ ಮತ್ತು ವಿವಿಪ್ಯಾಟ್‌ಗಳು ಮತ್ತು ಚುನಾವಣಾ ಸಾಮಗ್ರಿಗಳನ್ನು ಸ್ವೀಕರಿಸಿದ ನಂತರ, ಭದ್ರತೆಯೊಂದಿಗೆ ಮತಗಟ್ಟೆ ಸಿಬ್ಬಂದಿ ತಮ್ಮ ನಿಯೋಜಿತ ಮತಗಟ್ಟೆಗಳಿಗೆ ತೆರಳುತ್ತಾರೆ.
- ನೈಜ ಮತದಾನಕ್ಕೂ ಮುನ್ನ, ಸ್ಪರ್ಧಿಸಿರುವ ಅಭ್ಯರ್ಥಿಗಳ ಪೋಲಿಂಗ್ ಏಜೆಂಟರ ಸಮ್ಮುಖದಲ್ಲಿ ಮತಗಟ್ಟೆಯಲ್ಲಿ ಪ್ರಿಸೈಡಿಂಗ್ ಆಫೀಸರ್‌ರಿಂದ ಅಣಕು ಮತದಾನ ನಡೆಸಲಾಗುತ್ತದೆ.
- ಅಣಕು ಮತದಾನದ ನಂತರ, ಅಣಕು ಮತದಾನದ ದತ್ತಾಂಶವನ್ನು ಅಳಿಸಿ ಹಾಕಲಾಗುತ್ತದೆ ಹಾಗೂ ಕಾಗದ ಮತ್ತು ದಾರದ ಮೊಹರುವಿನೊಂದಿಗೆ ಫಲಿತಾಂಶ ವಿಭಾಗವನ್ನು ಮತ್ತು ವಿವಿಪ್ಯಾಟ್‌ನ ಡ್ರಾಪ್‌ಬಾಕ್ಸ್ ಅನ್ನು ಮೊಹರು ಮಾಡಲಾಗುತ್ತದೆ.
- ಮತದಾನ ಪೂರ್ಣಗೊಂಡ ನಂತರ, ಇವಿಎಂಗಳುಮತ್ತು ವಿವಿಪ್ಯಾಟ್‌ಗಳನ್ನು ಬೆಂಗಾವಲಿನೊಂದಿಗೆ ಮತ್ತೆ ಭದ್ರತಾ ಕೊಠಡಿಗೆ ತರಲಾಗುತ್ತದೆ.
- ಮತಗಳು ದಾಖಲಾದ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ದಿನದ 24 ಗಂಟೆಗಳ ಕಾಲ ರಿಟರ್ನಿಂಗ್ ಅಧಿಕಾರಿಯ ಭದ್ರತೆಯಲ್ಲಿ ಸಂಗ್ರಹಣೆ ಮಾಡಲಾಗುತ್ತದೆ

# ರಿಟರ್ನಿಂಗ್ ಆಫೀಸರ್
# (ಮತಗಳ ಎಣಿಕೆ)

- ಮತ ಎಣಿಕೆ ದಿನದಂದು, ಅಭ್ಯರ್ಥಿಗಳು/ಅವರ ಏಜೆಂಟರು ಹಾಗೂ ಇಸಿಐನ ವೀಕ್ಷಕರ ಉಪಸ್ಥಿತಿಯಲ್ಲಿ ಭದ್ರತಾ ಕೊಠಡಿಗಳನ್ನು ತೆರೆಯಲಾಗುತ್ತದೆ.
- ಅಭ್ಯರ್ಥಿಗಳು/ಅವರ ಏಜೆಂಟರು ಹಾಗೂ ಇಸಿಐನ ವೀಕ್ಷಕರ ಉಪಸ್ಥಿತಿಯಲ್ಲಿ ಮತಗಳ ಎಣಿಕೆ ನಡೆಯುತ್ತದೆ.
- ಮತ ಎಣಿಕೆ ನಂತರ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಮೊಹರು ಮಾಡಲಾಗುತ್ತದೆ ಹಾಗೂ ಭದ್ರತಾ ಕೊಠಡಿಗಳಲ್ಲಿ ಇಡಲಾಗುತ್ತದೆ.

## ಇವಿಎಂಗಳಲ್ಲಿ ದಾಖಲಾದ ಮತಗಳ ದತ್ತಾಂಶ ಉಳಿಸಿಕೊಳ್ಳುವಿಕೆ

- ಚುನಾವಣಾ ತಕರಾರು ಅರ್ಜಿ(ಇಪಿ) ಸಲ್ಲಿಕೆ ಅವಧಿಯು ಫಲಿತಾಂಶ ಘೋಷಣೆಯಾದ ದಿನಾಂಕದಿಂದ 45-ದಿನಗಳು ಆಗಿರುತ್ತದೆ.
- ಇಪಿಯಲ್ಲಿ ಒಳಗೊಂಡಿರುವ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ದತ್ತಾಂಶ ಉಳಿಸಿಕೊಳ್ಳುವ ಅವಧಿಯು, ಮೇಲ್ಮನವಿ ಯಾವುದಾದರೂ ಇದ್ದಲ್ಲಿ, ಅದೂ ಸೇರಿದಂತೆ ಇಪಿಯ ಅಂತಿಮ ವಿಲೇವಾರಿ ತನಕ ಇರುತ್ತದೆ.
- ಯಾವುದೇ ಇಪಿಯು ಒಳಗೊಂಡಿರುವ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳಿಂದ ದತ್ತಾಂಶವನ್ನು/ ಸ್ಲಿಪ್‌ಗಳನ್ನು ಡಿಇಒ ರವರು ತೆಗೆದು ಹಾಕಬಹುದು, ಆದರೆ, ಇವಿಎಂಗಳ ಬಳಕೆಯನ್ನು ಪ್ರಶ್ನಿಸದಿರುವಲ್ಲಿ, ನಂತರದ ಯಾವುದೇ ಚುನಾವಣೆಗಳಲ್ಲಿ ಬಳಸುವುದಕ್ಕಾಗಿ, ಸಂಬಂಧಪಟ್ಟ ಉಚ್ಚ ನ್ಯಾಯಾಲಯದಿಂದ ಅನುಮತಿ ಪಡೆದ ನಂತರ ದತ್ತಾಂಶ ತೆಗೆದುಹಾಕಲು ಅವಕಾಶ ಇರುತ್ತದೆ.
- ಇಪಿ ಸಲ್ಲಿಕೆಗಾಗಿ ಇರುವ ಅವಧಿ ಮುಕ್ತಾಯಗೊಂಡ ನಂತರ, ಯಾವುದೇ ಚುನಾವಣಾ ತಕರಾರು ಅರ್ಜಿ ಸಲ್ಲಿಕೆಯಾಗದಿರುವಲ್ಲಿ ಉಚ್ಚ ನ್ಯಾಯಾಲಯವು ಸ್ಥಿತಿಗತಿಯ ಪರಿಶೀಲನೆ ನಡೆಸಿದ ಬಳಿಕ, ಡಿಇಒಗಳು ಇವಿಎಂಗಳಿಂದ ದತ್ತಾಂಶ ಮಾಹಿತಿಯನ್ನು ಅಳಿಸಿ ಹಾಕಬಹುದಾಗಿರುತ್ತದೆ.

## ಮುಂಬರುವ/ಚುನಾವಣೆ ನಡೆಯುವ ರಾಜ್ಯಗಳಿಗೆ ವೇಳಾಪಟ್ಟಿ

| ಪ್ರಕ್ರಿಯೆ | ವೇಳಾಪಟ್ಟಿ |
|---|---|
| 1 | 2 |
| ಇಸಿಐನಿಂದ ಇವಿಎಂಗಳು/ವಿವಿಪ್ಯಾಟ್‌ಗಳ ಹಂಚಿಕೆ | ಪಿ-200 |
| ಬಳಸಬಹುದಾದ ಎಲ್‌ಒಐಗೆ ಆದೇಶ | ಪಿ-200 |
| ನೀಡುವ ರಾಜ್ಯಗಳಿಂದ ರವಾನೆ | ಪಿ-180 |
| ಪಡೆಯುವ ರಾಜ್ಯಗಳಿಂದ ಸ್ವೀಕೃತಿ | ಪಿ-150 |
| ಎಫ್‌ಎಲ್‌ಸಿ ಆರಂಭ | ಪಿ-120 |
| ಎಫ್‌ಎಲ್‌ಸಿ ಮುಕ್ತಾಯ | ಪಿ-50 |
| ಎಫ್‌ಎಲ್‌ಸಿ ಯಲ್ಲಿ ಓಕೆ ಆಗಿರದ ಯಂತ್ರಗಳನ್ನು ಬಿಇಎಲ್/ ಇಸಿಐಎಲ್‌ಗೆ ವಿಲೆ ಮಾಡುವುದು | ಪಿ-45 |
| ಇವಿಎಂ/ ವಿವಿಪ್ಯಾಟ್‌ಗಳ ಮೊದಲ ಯಾದೃಚ್ಛೀಕರಣ | ಪಿ-21 |
| ಇವಿಎಂ/ ವಿವಿಪ್ಯಾಟ್‌ಗಳ ಎರಡನೇ ಯಾದೃಚ್ಛೀಕರಣ | ಪಿ-14 |
| ದೋಷಪೂರಿತ ಇವಿಎಂಗಳ ದುರಸ್ತಿಗಾಗಿ ರಾಜ್ಯ ಕೇಂದ್ರ ಕಚೇರಿಯಲ್ಲಿ ತಯಾರಕರುಗಳಿಗೆ ಹಸ್ತಾಂತರ ಮಾಡುವಿಕೆ | ಸಿ+7 |
| ದುರಸ್ತಿಗಳು ಪೂರ್ಣಗೊಳ್ಳುವಿಕೆ | ಸಿ+90 |

ಪಿ = ಮತದಾನ ದಿನಾಂಕ

ಸಿ = ಮತ ಎಣಿಕೆ ದಿನಾಂಕ

## ಉಪಚುನಾವಣೆಗಾಗಿ ಪ್ರಮಾಣಕ ವೇಳಾಪಟ್ಟಿ

| ಪ್ರಕ್ರಿಯೆ | ವೇಳಾಪಟ್ಟಿ |
|---|---|
| 1 | 2 |
| ಸಿಇಒರಿಂದ ಇವಿಎಂಗಳು/ವಿವಿಪ್ಯಾಟ್‌ಗಳ ನಿರ್ಧರಿಸುವಿಕೆ | ವಿ + 1 |
| ಬಳಸಬಹುದಾದ ಎಲ್‌ಒಐಗೆ ಆದೇಶ | ವಿ + 1 |
| ಎಫ್‌ಎಲ್‌ಸಿ ಆರಂಭ | ವಿ + 15 |
| ಎಫ್‌ಎಲ್‌ಸಿ ಮುಕ್ತಾಯ | ವಿ + 30 |

ವಿ = ಬಿಡುವಿರುವ ದಿನಾಂಕ

# ಅಧ್ಯಾಯ – 18

## ಇವಿಎಂಗಳು ಮತ್ತು ವಿವಿಪ್ಯಾಟ್‌ಗಳ ಬಳಕೆಗಾಗಿ ಕಾನೂನು ಉಪಬಂಧಗಳು

18.1 ವಿದ್ಯುನ್ಮಾನ ಮತಯಂತ್ರಗಳನ್ನು ಪ್ರಥಮ ಬಾರಿಗೆ ಕೇರಳ ವಿಧಾನಸಭೆ ಚುನಾವಣೆಗಾಗಿ 1982ರ ಮೇನಲ್ಲಿ ನಡೆದ ಸಾರ್ವತ್ರಿಕ ಚುನಾವಣೆ ವೇಳೆ ಪರೂರು ವಿಧಾನಸಭಾ ಕ್ಷೇತ್ರದಲ್ಲಿನ 50 ಮತಗಟ್ಟೆಗಳಲ್ಲಿ ಬಳಸಲಾಗಿತ್ತು.ಆನಂತರ, 1982–83ರಲ್ಲಿ ಈ ಯಂತ್ರಗಳನ್ನು ಇತರ ಹತ್ತು ಕ್ಷೇತ್ರಗಳಲ್ಲಿ ಬಳಲಾಗಿತ್ತು.

ಕೇರಳದ ಪರೂರು ವಿಧಾನಸಭಾ ಕ್ಷೇತ್ರದ ಚುನಾವಣೆಯಲ್ಲಿ ಮತಯಂತ್ರದ ಬಳಕೆ ಪ್ರಶ್ನಿಸಿ ನ್ಯಾಯಾಲಯಕ್ಕೆ ಚುನಾವಣಾ ತಕರಾರು ಅರ್ಜಿಯನ್ನು ಸಲ್ಲಿಸಲಾಗಿತ್ತು.ಚುನಾವಣಾ ಮೇಲ್ಮನವಿ ಅರ್ಜಿಗೆ ಸಂಬಂಧಿಸಿದಂತೆ ತೀರ್ಪು ನೀಡಿದ ಸುಪ್ರೀಂಕೋರ್ಟ್, ಚುನಾವಣೆಗಳಲ್ಲಿ ಇವಿಎಂಗಳ ಬಳಕೆಗಾಗಿ ನಿರ್ದಿಷ್ಟ ಕಾನೂನು ಕಟ್ಟಳೆ ಇರಬೇಕೆಂದು ತಿಳಿಸಿತ್ತು. ಇದರಿಂದಾಗಿ 1983ರ ನಂತರ ,ಇವಿಎಂಗಳನ್ನು ಬಳಸಲಿಲ್ಲ
ಆ ತರುವಾಯ, ಭಾರತ ಚುನಾವಣಾ ಆಯೋಗವು, ಇವಿಎಂಗಳ ಬಳಕೆಗಾಗಿ ಕಾನೂನು ಸಮ್ಮತಿ ದೊರಕಿಸಿಕೊಡಲು ಕಾನೂನಿಗೆ .ಸೂಕ್ತ ತಿದ್ದುಪಡಿ ಮಾಡಬೇಕೆಂದು ಭಾರತ ಸರ್ಕಾರಕ್ಕೆ ಶಿಫಾರಸು ಮಾಡಿತು

ಚುನಾವಣೆಗಳಲ್ಲಿ ವಿದ್ಯುನ್ಮಾನ ಮತಯಂತ್ರಗಳನ್ನು ಬಳಸಲು ಭಾರತ ಚುನಾವಣಾ ಆಯೋಗಕ್ಕೆ ಅಧಿಕಾರ ನೀಡಲು 1988ರ ಡಿಸೆಂಬರ್‌ನಲ್ಲಿ, ಜನತಾ ಪ್ರಾತಿನಿಧ್ಯ ಅಧಿನಿಯಮ, 1951ಕ್ಕೆ ಪ್ರಕರಣ 61ಎ ಎಂಬ ಒಂದು ಹೊಸ ಪ್ರಕರಣವನ್ನು ಸೇರಿಸಲಾಗಿದ್ದು, : ಅದು ಈ ಕೆಳಗಿನಂತಿದೆ

61ಎ. ಚುನಾವಣೆಗಳಲ್ಲಿಮತಯಂತ್ರಗಳು :– ಈ ಅಧಿನಿಯಮದಲ್ಲಿ  ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳಲ್ಲಿ ಏನೇ" ಅಡಕವಾಗಿದ್ದರೂ, ಚುನಾವಣಾ ಆಯೋಗವು ಪ್ರತಿಯೊಂದು ಸಂದರ್ಭದ ಸನ್ನಿವೇಶಗಳನ್ನು ಗಮನಿಸಿ ನಿರ್ದಿಷ್ಟಪಡಿಸಬಹುದಾದಂಥ ಚುನಾವಣಾ ಕ್ಷೇತ್ರ ಅಥವಾ ಕ್ಷೇತ್ರಗಳಲ್ಲಿ ನಿಯಮಿಸಬಹುದಾದಂಥ ರೀತಿಯಲ್ಲಿ ಮತಯಂತ್ರಗಳ ಮೂಲಕ ಮತ ನೀಡುವುದನ್ನು ."ಮತ್ತು ದಾಖಲಿಸುವುದನ್ನು ಅಂಗೀಕರಿಸಬಹುದು

**ವಿವರಣೆ:**– *ಈ ಪ್ರಕರಣದ ಉದ್ದೇಶಕ್ಕಾಗಿ "ಮತಯಂತ್ರ" ಎಂದರೆ, ಮತಗಳನ್ನುನೀಡಲು ಅಥವಾ ದಾಖಲಿಸಲು ಎಲೆಕ್ಟ್ರಾನಿಕ್ ಚಾಲಿತ ಅಥವಾ ಇತರೆ ರೀತಿಯಲ್ಲಿ ಉಪಯೋಗಿಸುವ ಯಾವುದೇ ಯಂತ್ರ ಅಥವಾ ಸಲಕರಣೆ ಮತ್ತು ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳಲ್ಲಿ ಮತಪೆಟ್ಟಿಗೆ ಅಥವಾ ಮತಪತ್ರ ಕುರಿತ ಯಾವುದೇ ಉಲ್ಲೇಖವನ್ನು, ಅನ್ಯಥಾ ಉಪಬಂಧಿಸಿದುದನ್ನುಳಿದು, ಯಾವುದೇ ಚುನಾವಣೆಯಲ್ಲಿ ಅಂಥ ಮತಯಂತ್ರವನ್ನು ಉಪಯೋಗಿಸಿದಲ್ಲೆಲ್ಲಾ ಅಂಥ ಮತಯಂತ್ರವನ್ನು ಕುರಿತ ಉಲ್ಲೇಖವನ್ನು ಒಳಗೊಂಡಿರುವುದಾಗಿ ಅರ್ಥೈಸತಕ್ಕದ್ದು.*

ಸರ್ವೋಚ್ಚ ನ್ಯಾಯಾಲಯವು, ಆಲ್ ಇಂಡಿಯಾ ಅಣ್ಣಾ ದ್ರಾವಿಡ ಮುನ್ನೇತ್ರ ಕಳಗಂ–ವಿರುದ್ಧ–ಮುಖ್ಯ ಚುನಾವಣಾ ಆಯುಕ್ತರು ಮತ್ತು ಇತರರ ಪ್ರಕರಣದಲ್ಲಿ ಈ ಮೇಲಿನ ಉಪಬಂಧದ ಸಿಂಧುತ್ವವನ್ನು ಎತ್ತಿ ಹಿಡಿದಿದೆ [2002ಯುಜೆ)(1)387].

**[ಟಿಪ್ಪಣಿ : ಯಾವುದೇ ದೋಷಗಳು ಕಂಡು ಬಂದಲ್ಲಿ, ದಯವಿಟ್ಟು ಚುನಾವಣಾ ಕಾನೂನುಗಳ ಕೈಪಿಡಿಯನ್ನು ಪರಾಮರ್ಶಿಸಿ], ಜನತಾ ಪ್ರಾತಿನಿಧ್ಯ ಅಧಿನಿಯಮ, 1951 – 58. ಮತಪೆಟ್ಟಿಗೆಗಳ ನಾಶ, ಇತ್ಯಾದಿ ಸಂದರ್ಭದಲ್ಲಿ ಹೊಸ ಮತದಾನ.–**

(1) ಯಾವುದೇ ಚುನಾವಣೆಯಲ್ಲಿ,–

(ಎ) ಮತಗಟ್ಟೆಯಲ್ಲಿ ಅಥವಾ ಮತದಾನಕ್ಕೆ ನಿಗದಿಯಾದ ಸ್ಥಳದಲ್ಲಿ ಉಪಯೋಗಿಸಲಾದ ಯಾವುದೇ ಮತಪೆಟ್ಟಿಗೆಯನ್ನು ಪ್ರಿಸೈಡಿಂಗ್ ಆಫೀಸರ್‌ರ ಅಥವಾ ಚುನಾವಣಾಧಿಕಾರಿಯ ಅಭಿರಕ್ಷೆಯಿಂದ ಹೊರಗೆ ಕಾನೂನು ಬಾಹಿರವಾಗಿ ತೆಗೆದುಕೊಂಡು ಹೋದರೆ ಅಥವಾ ಆಕಸ್ಮಿಕವಾಗಿ ಅಥವಾ ಉದ್ದೇಶಪೂರ್ವಕವಾಗಿ ನಾಶಪಡಿಸಿದರೆ ಅಥವಾ ಹಾನಿಗೊಳಿಸಿದರೆ ಅಥವಾ ಆ ಮತಗಟ್ಟೆ ಅಥವಾ ಸ್ಥಳದಲ್ಲಿನ ಮತದಾನದ ಫಲಿತಾಂಶವನ್ನು ನಿಶ್ಚಿತಗೊಳಿಸಲಾಗದಷ್ಟು ಅದನ್ನು ಹಾನಿಗೊಳಿಸಿದರೆ ಅಥವಾ ಅದರೊಂದಿಗೆ ಹಸ್ತಕ್ಷೇಪ ಮಾಡಿದರೆ; ಅಥವಾ

(ಬಿ) ಮತಗಳನ್ನು ದಾಖಲು ಮಾಡುವ ಕ್ರಮದಲ್ಲಿ ಯಾವುದೇ ಮತಯಂತ್ರದಲ್ಲಿ ಯಾಂತ್ರಿಕ ದೋಷ ಉಂಟಾದರೆ; ಅಥವಾ]

(ಸಿ) ಮತದಾನವನ್ನು ನಿರರ್ಥಕಗೊಳಿಸುವ ಸಂಭವವಿರುವ ಪ್ರಕ್ರಿಯೆಯಲ್ಲಿನ ಅಂಥ ದೋಷ ಅಥವಾ ಅಕ್ರಮವನ್ನು

ಮತಗಟ್ಟೆಯಲ್ಲಿ ಅಥವಾ ಮತದಾನಕ್ಕಾಗಿ ನಿಗದಿಪಡಿಸಿದ ಸ್ಥಳದಲ್ಲಿ ಮಾಡಿದರೆ, ರಿಟರ್ನಿಂಗ್ ಅಧಿಕಾರಿಯು, ಭಾರತ ಚುನಾವಣಾ ಆಯೋಗಕ್ಕೆ ಆ ವಿಷಯವನ್ನು ತತ್‌ಕ್ಷಣವೇ ವರದಿ ಮಾಡತಕ್ಕದ್ದು.

(2) ಆ ತರುವಾಯ, ಚುನಾವಣಾ ಆಯೋಗವು, ಎಲ್ಲಾ ಮುಖ್ಯ ಸನ್ನಿವೇಶಗಳನ್ನು ಗಣನೆಗೆ ತೆಗೆದುಕೊಂಡು–

(ಎ) ಆ ಮತಗಟ್ಟೆ ಅಥವಾ ಸ್ಥಳದಲ್ಲಿನ ಮತದಾನವನ್ನು ಶೂನ್ಯವೆಂದು ಘೋಷಿಸತಕ್ಕದ್ದು, ಆ ಮತಗಟ್ಟೆ ಅಥವಾ ಸ್ಥಳದಲ್ಲಿ

ಹೊಸ ಮತದಾನವನ್ನು ನಡೆಸುವುದಕ್ಕಾಗಿ ಒಂದು ದಿನವನ್ನು ಗೊತ್ತುಪಡಿಸತಕ್ಕದ್ದು ಮತ್ತು ವೇಳೆಯನ್ನು ನಿಗದಿಪಡಿಸತಕ್ಕದ್ದು ಮತ್ತು ಹಾಗೆ ಗೊತ್ತುಪಡಿಸಿದ ದಿನವನ್ನು ಮತ್ತು ಹಾಗೆ ನಿಗದಿಪಡಿಸಿದ ವೇಳೆಯನ್ನು ತಾನು ಸೂಕ್ತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಅಧಿಸೂಚಿಸತಕ್ಕದ್ದು; ಅಥವಾ

(ಬಿ) ಆ ಮತಗಟ್ಟೆ ಅಥವಾ ಸ್ಥಳದಲ್ಲಿನ ಹೊಸ ಮತದಾನದ ಫಲಿತಾಂಶವು ಚುನಾವಣೆಯ ಫಲಿತಾಂಶದ ಮೇಲೆ ಯಾವುದೇ ರೀತಿಯಲ್ಲಿ ಪರಿಣಾಮ ಬೀರುವುದಿಲ್ಲವೆಂದು ಅಥವಾ ಮತಯಂತ್ರದ ಯಾಂತ್ರಿಕ ದೋಷವು ಅಥವಾ ಪ್ರಕ್ರಿಯೆಯಲ್ಲಿನ ಆ ದೋಷ ಅಥವಾ ಅಕ್ರಮವು ಮುಖ್ಯವಾಗಿಲ್ಲವೆಂದು ಅದಕ್ಕೆ ಮನದಟ್ಟಾದರೆ, ಅದು ಆ ಚುನಾವಣೆಯನ್ನು ಮುಂದುವರೆಸಲು ಮತ್ತು ಪೂರ್ಣಗೊಳಿಸಲು ತಾನು ಸೂಕ್ತವೆಂದು ಭಾವಿಸಬಹುದಾದಂಥ ನಿರ್ದೇಶನಗಳನ್ನು ಚುನಾವಣಾಧಿಕಾರಿಗೆ ನೀಡತಕ್ಕದ್ದು.

ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮಗಳ ಅಥವಾ ಆದೇಶಗಳ ಉಪಬಂಧಗಳು ಮೂಲ ಮತದಾನಕ್ಕೆ ಅನ್ವಯವಾಗುವಂತೆಯೇ ಅಂಥ ಪ್ರತಿಯೊಂದು ಹೊಸ ಮತದಾನಕ್ಕೂ ಅನ್ವಯವಾಗತಕ್ಕದ್ದು.

**135ಎ. ಮತಗಟ್ಟೆ ವಶಪಡಿಸಿಕೊಳ್ಳುವ ಅಪರಾಧ.–**

[(1)]ಯಾವನೇ ವ್ಯಕ್ತಿಯು ಮತಗಟ್ಟೆ ವಶಪಡಿಸಿಕೊಳ್ಳುವ ಅಪರಾಧವನ್ನು ಮಾಡಿದ್ದರೆ, ಅವನು ಒಂದು ವರ್ಷಕ್ಕಿಂತ ಕಡಿಮೆ ಇಲ್ಲದ ಆದರೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ಮತ್ತು ಅಂಥ ಅಪರಾಧವನ್ನು ಸರ್ಕಾರಿ ಸೇವೆಯಲ್ಲಿರುವ ಒಬ್ಬ ವ್ಯಕ್ತಿಯು ಮಾಡಿದರೆ, ಅವನು ಮೂರು ವರ್ಷಗಳಿಗೆ ಕಡಿಮೆ ಇಲ್ಲದ, ಆದರೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು].

**ವಿವರಣೆ–** ಈ ಉಪ–ಪ್ರಕರಣದ ಮತ್ತು 20ಬಿ ಪ್ರಕರಣದ ಉದ್ದೇಶಗಳಿಗಾಗಿ "ಮತಗಟ್ಟೆವಶಪಡಿಸಿಕೊಳ್ಳುವುದು" ಎಂಬುದು, ಇತರವಿಷಯಗಳ ಜೊತೆಗೆ, ಈ ಕೆಳಕಂಡ ಎಲ್ಲ ಅಥವಾ ಯಾವುದೇ ಚಟುವಟಿಕೆಗಳನ್ನು ಒಳಗೊಳ್ಳುತ್ತದೆ, ಎಂದರೆ:–

(ಎ) ಮತದಾನ ಪ್ರಾಧಿಕಾರಿಗಳು ಮತಪತ್ರಗಳನ್ನು ಅಥವಾ ಮತಯಂತ್ರಗಳನ್ನು ಬಿಟ್ಟುಕೊಡುವಂತೆ ಮಾಡಿ, ಯಾವನೇ ವ್ಯಕ್ತಿ ಅಥವಾ ವ್ಯಕ್ತಿಗಳು ಮತಗಟ್ಟೆ ಅಥವಾ ಮತದಾನಕ್ಕಾಗಿ ನಿಗದಿಪಡಿಸಿರುವ ಸ್ಥಳವನ್ನು ಅಭಿಗ್ರಹಿಸುವುದು ಮತ್ತು ಚುನಾವಣೆಗಳನ್ನು ಕ್ರಮಬದ್ಧವಾಗಿ ನಡೆಸುವುದರ ಮೇಲೆ ಪರಿಣಾಮ ಬೀರುವ ಯಾವುದೇ ಇತರೆ ಕಾರ್ಯ ಮಾಡುವುದು;

(ಬಿ) ಯಾವನೇ ವ್ಯಕ್ತಿ ಅಥವಾ ವ್ಯಕ್ತಿಗಳು ಮತಗಟ್ಟೆ ಅಥವಾ ಮತದಾನಕ್ಕಾಗಿ ನಿಗದಿಪಡಿಸಿರುವ ಸ್ಥಳವನ್ನು ಸ್ವಾಧೀನಪಡಿಸಿಕೊಳ್ಳುವುದು ಮತ್ತು ಆ ವ್ಯಕ್ತಿಯ ಅಥವಾ ವ್ಯಕ್ತಿಗಳ ಸ್ವಂತ ಬೆಂಬಲಿಗರು ಮಾತ್ರ ತಮ್ಮ ಮತದಾನದ ಹಕ್ಕನ್ನು ಚಲಾಯಿಸಲು ಅನುಮತಿಸುವುದು ಮತ್ತು ಇತರರು ತಮ್ಮ ಮತದಾನದ ಹಕ್ಕನ್ನು ಮುಕ್ತವಾಗಿ ಚಲಾಯಿಸದಂತೆ ತಡೆಯುವುದು;

(ಸಿ) ಯಾವನೇ ಮತದಾರನನ್ನು ಬಲಪ್ರಯೋಗಿಸುವುದು ಅಥವಾ ಭಯ ಹುಟ್ಟಿಸುವುದು ಅಥವಾ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಬೆದರಿಸುವುದು ಮತ್ತು ಅವನು ತನ್ನ ಮತ ಚಲಾಯಿಸಲು ಮತಗಟ್ಟೆಗೆ ಅಥವಾ ಮತದಾನಕ್ಕಾಗಿ ನಿಗದಿಪಡಿಸಿರುವ ಸ್ಥಳಕ್ಕೆ ಹೋಗದಂತೆ ತಡೆಯುವುದು;

(ಡಿ) ಎಣಿಕೆ ಪ್ರಾಧಿಕಾರಿಗಳು ಮತಪತ್ರಗಳನ್ನು ಅಥವಾ ಮತಯಂತ್ರಗಳನ್ನು ಬಿಟ್ಟುಕೊಡುವಂತೆ ಮಾಡಿ ಯಾವನೇ ವ್ಯಕ್ತಿ ಅಥವಾ ವ್ಯಕ್ತಿಗಳು ಮತಗಳ ಎಣಿಕೆಯ ಸ್ಥಳವನ್ನು ಅಭಿಗ್ರಹಿಸುವುದು ಮತ್ತು ಮತಗಳನ್ನು ಕ್ರಮಬದ್ಧವಾಗಿ ಎಣಿಸುವುದರ ಮೇಲೆ ಪರಿಣಾಮ ಬೀರುವ ಯಾವುದೇ ಕಾರ್ಯವನ್ನು ಮಾಡುವುದು;

(ಇ) ಸರ್ಕಾರಿ ಸೇವೆಯಲ್ಲಿರುವ ಯಾವುದೇ ವ್ಯಕ್ತಿಯು, ಒಬ್ಬ ಅಭ್ಯರ್ಥಿಯ ಚುನಾವಣೆಯ ಭವಿತವ್ಯದ ಅಭಿವೃದ್ಧಿಗಾಗಿ ಮೇಲೆ ಹೇಳಿದ ಎಲ್ಲ ಅಥವಾ ಯಾವುದೇ ಚಟುವಟಿಕೆಗಳನ್ನು ಮಾಡುವುದು ಅಥವಾ ಯಾವುದೇ ಅಂಥ

ಚಟುವಟಿಕೆಗೆ ನೆರವು ನೀಡುವುದು ಅಥವಾ ಪರೋಕ್ಷ ಸಮ್ಮತಿ ನೀಡುವುದು.

(2) 1ನೇ ಉಪ ಪ್ರಕರಣದ ಮೇರೆಗೆ ದಂಡನೀಯವಾದ ಒಂದು ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

**169. ನಿಯಮ ರಚನಾಧಿಕಾರ:–**

(1) ಕೇಂದ್ರ ಸರ್ಕಾರವು, ಚುನಾವಣಾ ಆಯೋಗದೊಂದಿಗೆ ಸಮಾಲೋಚಿಸಿದ ತರುವಾಯ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯಗಳ ಬಗ್ಗೆ ಉಪಬಂಧವನ್ನು ಕಲ್ಪಿಸಬಹುದು, ಎಂದರೆ:–

[(ಎ) 33ಎ ಪ್ರಕರಣದ (2)ನೇ ಉಪಪ್ರಕರಣದ ಮೇರೆಗಿನ ಶಪಥಪತ್ರದ ನಮೂನೆ;

[(ಎಎ)]ಮತಗಟ್ಟೆಗಳಲ್ಲಿ ಪ್ರಿಸೈಡಿಂಗ್ ಆಫೀಸರ್‌ಗಳ ಮತ್ತು ಮತಗಟ್ಟೆ ಅಧಿಕಾರಿಗಳ ಕರ್ತವ್ಯಗಳು;

[(ಎಎಎ) ವಂತಿಗೆ ವರದಿಯ ನಮೂನೆ;

(ಬಿ) ಮತದಾರರ ಪಟ್ಟಿಗನುಸಾರವಾಗಿ ಮತದಾರರನ್ನು ತನಿಖೆ ಮಾಡುವುದು;

[(ಬಿಬಿ) ಕೇಬಲ್ ದೂರದರ್ಶನ ಜಾಲ ಮತ್ತು ಇತರ ವಿದ್ಯುನ್ಮಾನ ಮಾಧ್ಯಮದಲ್ಲಿ ಕಾಲವನ್ನು ಸಮಾನವಾಗಿ ಹಂಚಿಕೆ ಮಾಡುವ ವಿಧಾನ;];

(ಸಿ) ಸಾಮಾನ್ಯವಾಗಿ ಹಾಗೂ ಅನಕ್ಷರಸ್ಥ ಮತದಾರರ ಸಂದರ್ಭದಲ್ಲಿ ಅಥವಾ ದೈಹಿಕ ಅಥವಾ ಇತರ ವಿಕಲತೆಯುಳ್ಳ ಮತದಾರರ ಸಂದರ್ಭದಲ್ಲಿ ಮತಗಳನ್ನು ನೀಡಬೇಕಾದ ವಿಧಾನ;

(ಡಿ) ಮತ ಚಲಾಯಿಸಲು ಹಕ್ಕು ಹೊಂದಿರುವ ಮತಗಟ್ಟೆಯಲ್ಲಿ ಕರ್ತವ್ಯಕ್ಕಾಗಿ ಅಧಿಕೃತವಾಗಿ ನಿಯೋಜನೆಗೊಂಡ ಅಥವಾ ನೇಮಕಗೊಂಡ ಒಂದು ಕ್ಷೇತ್ರದ ಒಬ್ಬ ಮತದಾರನಾಗಿರುವ ಒಬ್ಬ ಪ್ರಿಸೈಡಿಂಗ್ ಆಫೀಸರ್, ಮತಗಟ್ಟೆ ಅಧಿಕಾರಿ, ಮತಗಟ್ಟೆ ಏಜೆಂಟ್ ಅಥವಾ ಇತರ ಯಾರೇ ವ್ಯಕ್ತಿಯು ಮತಗಳನ್ನು ನೀಡಬೇಕಾದ ವಿಧಾನ;

(ಇ) ತನ್ನ ಹೆಸರಿನಲ್ಲಿ ಬೇರೊಬ್ಬ ವ್ಯಕ್ತಿಯು ಮತ ಚಲಾವಣೆ ಮಾಡಿದ ನಂತರ, ಓರ್ವ ಮತದಾರನಾಗಿ ತನ್ನನ್ನು ಪ್ರತಿನಿಧಿಸುವ ಓರ್ವ ವ್ಯಕ್ತಿಯು ಮತ ಚಲಾವಣೆ ಮಾಡಲು ಅನುಸರಿಸಬೇಕಾದ ಕಾರ್ಯವಿಧಾನ;

[(ಇಇ) ಮತಯಂತ್ರಗಳ ಮೂಲಕ ಮತಗಳನ್ನು ಚಲಾವಣೆ ಮಾಡುವ ಮತ್ತು ದಾಖಲಿಸುವ ರೀತಿ ಹಾಗೂ ಇಂಥ ಯಂತ್ರಗಳನ್ನು ಬಳಸುವ ಮತಕೇಂದ್ರಗಳಲ್ಲಿ ಅನುಸರಿಸಬೇಕಾದ ಮತದಾನದ ವಿಧಾನ;]

(ಎಫ್) ಏಕ ವರ್ಗಾವಣೀಯ ಮತದ ಮೂಲಕ ಪ್ರಮಾಣಾನುಸಾರ ಪ್ರಾತಿನಿಧ್ಯ ವ್ಯವಸ್ಥೆಗೆ ಅನುಗುಣವಾಗಿ ನಡೆಯುವ ಚುನಾವಣೆಗಳಲ್ಲಿ ಅನುಸರಿಸಬೇಕಾದ ಮತದಾನದ ವಿಧಾನ;

(ಜಿ) ಚುನಾವಣಾ ಫಲಿತಾಂಶ ಘೋಷಣೆಗೆ ಮುನ್ನ ಮತಗಳ ಮರು ಎಣಿಕೆ ಮಾಡಬಹುದಾದ ಸಂದರ್ಭವನ್ನೂ ಒಳಗೊಂಡು ಮತಗಳ ಪರಿಶೀಲನೆ ಮತ್ತು ಎಣಿಕೆ;

[(ಜಿಜಿ) ಮತಯಂತ್ರಗಳ ಮೂಲಕ ದಾಖಲಿಸಿದ ಮತಗಳ ಎಣಿಕೆಗೆ ಸಂಬಂಧಿಸಿದಂತೆ ಕಾರ್ಯ ವಿಧಾನ];

(ಎಚ್) [ಮತಪೆಟ್ಟಿಗೆಗಳು, ಮತಯಂತ್ರಗಳು], ಮತಪತ್ರಗಳು ಮತ್ತು ಇತರ ಚುನಾವಣಾ ಕಾಗದ ಪತ್ರಗಳ ಸುರಕ್ಷಿತ ಅಭಿರಕ್ಷೆ, ಅಂಥ ಪತ್ರಗಳನ್ನು ಸಂರಕ್ಷಿಸಿಡಬೇಕಾದ ಅವಧಿ ಹಾಗೂ ಅಂಥ ಕಾಗದ ಪತ್ರಗಳ ತಪಾಸಣೆ ಮತ್ತು ಹಾಜರುಪಡಿಸುವಿಕೆ;

[(ಎಚ್‌ಎಚ್) ಲೋಕಸಭೆ ಅಥವಾ ರಾಜ್ಯ ವಿಧಾನಸಭೆಯನ್ನು ರಚಿಸುವ ಉದ್ದೇಶಗಳಿಗಾಗಿ ನಡೆಸಬೇಕಾದ ಯಾವುದೇ ಚುನಾವಣೆಯಲ್ಲಿ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಅಭ್ಯರ್ಥಿಗಳಿಗೆ ಸರ್ಕಾರವು ಪೂರೈಸಬೇಕಾದ ಸಾಮಗ್ರಿ;]

(ಐ) ಈ ಅಧಿನಿಯಮದ ಮೂಲಕ ಗೊತ್ತುಪಡಿಸಬೇಕಾದ ಇತರ ಯಾವುದೇ ವಿಷಯ.

[(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಸಾಧ್ಯವಾದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನ ಅಥವಾ ಅನುಕ್ರಮವಾದ ಎರಡು ಅಥವಾ ಅದಕ್ಕಿಂತ ಹೆಚ್ಚು ಅಧಿವೇಶನಗಳಲ್ಲಿ ಒಳಗೊಳ್ಳಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಅನುಕ್ರಮವಾದ ಅಧಿವೇಶನಗಳ

ನಿಕಟೋತ್ತರದ ಅಧಿವೇಶನವು ಮುಗಿಯುವುದಕ್ಕೆ ಮುಂಚೆ, ಎರಡೂ ಸದನಗಳು ಆ ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಒಪ್ಪಿದರೆ ಅಥವಾ ಎರಡೂ ಸದನಗಳು ಆ ನಿಯಮವನ್ನು ಮಾಡಕೂಡದೆಂದು ಒಪ್ಪಿದರೆ, ಆ ತರುವಾಯ, ಆ ನಿಯಮವು ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ, ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗತಕ್ಕದಲ್ಲ].

**18.2. ಚುನಾವಣೆಗಳನ್ನು ನಡೆಸುವ ನಿಯಮಗಳು, 1961 (ಶಾಸನಬದ್ಧ ನಿಯಮಗಳು ಮತ್ತು ಆದೇಶ) ಮತ್ತು ಚುನಾವಣೆಗಳನ್ನು ನಡೆಸುವ (ತಿದ್ದುಪಡಿ) ನಿಯಮಗಳು, 2013**

**ವಿದ್ಯುನ್ಮಾನ ಮತಯಂತ್ರಗಳಿಂದ ಮತ್ತು ವಿವಿಪ್ಯಾಟ್‌ಗಳೊಂದಿಗೆ ಇವಿಎಂಗಳಿಂದ ಮತದಾನ. 49ಎ. ವಿದ್ಯುನ್ಮಾನ ಮತಯಂತ್ರಗಳ ವಿನ್ಯಾಸ.–**

ಪ್ರತಿಯೊಂದು ವಿದ್ಯುನ್ಮಾನ ಮತಯಂತ್ರ (ಇನ್ನು ಮುಂದೆ ಮತಯಂತ್ರ ಎಂದು ಉಲ್ಲೇಖಿಸಲಾಗುವುದು) ಒಂದು ಕಂಟ್ರೋಲ್ ಯೂನಿಟ್ಟನ್ನು ಮತ್ತು ಒಂದು ಬ್ಯಾಲೆಟಿಂಗ್ ಯೂನಿಟ್ಟನ್ನು ಹೊಂದಿರತಕ್ಕದ್ದು ಹಾಗೂ ಅದು ಚುನಾವಣಾ ಆಯೋಗವು ಅನುಮೋದಿಸಬಹುದಾದಂಥ ವಿನ್ಯಾಸದ್ದಾಗಿರತಕ್ಕದ್ದು.

**ಪರಂತು, ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ಚುನಾವಣಾ ಕ್ಷೇತ್ರ ಅಥವಾ ಕ್ಷೇತ್ರಗಳಲ್ಲಿ ಅಥವಾ ಅದರ ಭಾಗಗಳಲ್ಲಿ, ಚುನಾವಣಾ ಆಯೋಗವು ಅನುಮೋದಿಸಬಹುದಾದಂಥ ವಿನ್ಯಾಸದ ಡ್ರಾಪ್ ಬಾಕ್ಸ್‌ನೊಂದಿಗೆ ಒದಗಿಸಲಾದ ಒಂದು ಪ್ರಿಂಟರನ್ನು ಸಹ ಮತದಾನದ ಕಾಗದ ತಾಳೆದರ್ಶಕ ಮುದ್ರಣಕ್ಕಾಗಿ ಮತಯಂತ್ರಕ್ಕೆ ಜೋಡಣೆ ಮಾಡಬಹುದು;**

**49ಬಿ.ರಿಟರ್ನಿಂಗ್ ಆಫೀಸರ್ ಅವರು ಮತಯಂತ್ರಗಳನ್ನು ಸಿದ್ಧಪಡಿಸುವುದು.–**

(1) ಮತಯಂತ್ರದ ಬ್ಯಾಲೆಟಿಂಗ್ ಯೂನಿಟ್ಟು ಚುನಾವಣಾ ಆಯೋಗವು ನಿರ್ದಿಷ್ಟಪಡಿಸಬಹುದಾದಂತಹ ವಿವರಗಳನ್ನು ಮತ್ತು ಭಾಷೆ ಅಥವಾ ಭಾಷೆಗಳನ್ನು ಒಳಗೊಂಡಿರತಕ್ಕದ್ದು.

(2) ಉಮೇದುವಾರರ ಹೆಸರುಗಳನ್ನು ಬ್ಯಾಲೆಟಿಂಗ್ ಯೂನಿಟ್‌ನ ಮೇಲೆ, ಸ್ಪರ್ಧಿಸಿರುವ ಉಮೇದುವಾರರ ಪಟ್ಟಿಯಲ್ಲಿ ಇರುವಂತಹ ಕ್ರಮದಲ್ಲಿಯೇ ಅವುಗಳನ್ನು ವ್ಯವಸ್ಥೆ ಮಾಡತಕ್ಕದ್ದು.

(3) ಇಬ್ಬರು ಅಥವಾ ಹೆಚ್ಚು ಉಮೇದುವಾರರು ಒಂದೇ ಹೆಸರಿನವರಾಗಿದ್ದರೆ, ಅವರನ್ನು ಅವರ ವೃತ್ತಿ ಅಥವಾ ನಿವಾಸಗಳನ್ನು ಸೇರಿಸುವ ಮೂಲಕ ಅಥವಾ ಇತರ ವಿಧಾನದ ಮೂಲಕ ವಿಭಿನ್ನವಾಗಿ ತೋರಿಸತಕ್ಕದ್ದು.

(4) ಈ ನಿಯಮದ ಹಿಂದಿನ ಉಪಬಂಧಗಳಿಗೆ ಒಳಪಟ್ಟು, ರಿಟರ್ನಿಂಗ್ ಆಫೀಸರ್ ಅವರು,–

**(ಎ)** ಸ್ಪರ್ಧಿಸಿರುವ ಉಮೇದುವಾರರ ಹೆಸರುಗಳನ್ನು ಮತ್ತು ಚಿಹ್ನೆಗಳನ್ನು ಒಳಗೊಂಡಿರುವ ಲೇಬಲ್‌ಗಳನ್ನು ಬ್ಯಾಲೆಟಿಂಗ್ ಯೂನಿಟ್‌ನಲ್ಲಿ ಅಳವಡಿಸತಕ್ಕದ್ದು ಮತ್ತು ಅವರ ಮೊಹರಿನಿಂದ ಮತ್ತು ತಮ್ಮ ಮೊಹರನ್ನು ಹಾಕಲು ಇಚ್ಛಿಸುವಂತಹ ಉಮೇದುವಾರರ ಅಥವಾ ಅಲ್ಲಿ ಹಾಜರಿರುವ ಅವರ ಚುನಾವಣಾ ಏಜೆಂಟರ ಮೊಹರುಗಳಿಂದ ಭದ್ರಗೊಳಿಸತಕ್ಕದ್ದು;

**(ಬಿ)** ಕಂಟ್ರೋಲ್ ಯೂನಿಟ್‌ನಲ್ಲಿ ಸ್ಪರ್ಧಿಸಿರುವ ಉಮೇದುವಾರರ ಸಂಖ್ಯೆಯನ್ನು ನಿಗದಿಪಡಿಸತಕ್ಕದ್ದು ಮತ್ತು ಉಮೇದುವಾರರನ್ನು ನಿಗದಿಪಡಿಸಿದ ವಿಭಾಗವನ್ನು ಮುಚ್ಚತಕ್ಕದ್ದು ಮತ್ತು ಅದನ್ನು ಅವರ ಮೊಹರಿನಿಂದ ಮತ್ತು ಸ್ಪರ್ಧಿಸಿರುವ ಉಮೇದುದಾರರ ಅಥವಾ ಮೊಹರು ಹಾಕಲು ಇಚ್ಛಿಸುವ ಅಲ್ಲಿ ಹಾಜರಿರುವ ಅವರ ಚುನಾವಣಾ ಏಜೆಂಟರ ಮೊಹರುಗಳಿಂದ ಭದ್ರಗೊಳಿಸತಕ್ಕದ್ದು;

**(ಸಿ) 49ಎ ನಿಯಮದ ಪರಂತುಕದ ಅಡಿಯಲ್ಲಿ ಕಾಗದದ ತಾಳೆದರ್ಶಕದ ಪ್ರಿಂಟರ್‌ನ್ನು ಎಲ್ಲಿಲ್ಲಿ ಬಳಸಲಾಗುತ್ತದೆಯೋ ಅಲ್ಲಿ, ಕಂಟ್ರೋಲ್ ಯೂನಿಟ್‌ಲ್ಲಿ ಸೆಟ್ ಮಾಡಿರುವ ಸ್ಪರ್ಧಿಸುವ ಅಭ್ಯರ್ಥಿಗಳ ಸಂಖ್ಯೆಯ ಪ್ರಕಾರ–**

*i. ಖಂಡ(ಎ) ಅಡಿ ಬ್ಯಾಲೆಟಿಂಗ್ ಯೂನಿಟ್‌ಗಳ ಮೇಲೆ ಅಭ್ಯರ್ಥಿಗಳಿಗೆ ನೀಡಿರುವಂಥ ಕ್ರಮ ಸಂಖ್ಯೆಗಳು ಮತ್ತು ಹೆಸರುಗಳು ಹಾಗೂ ಮಂಜೂರು ಮಾಡಿರುವ ಚಿಹ್ನೆಗಳನ್ನು ಪ್ರಿಂಟರ್‌ನಲ್ಲಿ ಲೋಡ್ ಮಾಡುವ ಮೂಲಕ;*

*ii. ಪ್ರಿಂಟರ್‌ನಲ್ಲಿ ಕಾಗದವನ್ನು ಲೋಡ್ ಮಾಡುವ ಮೂಲಕ; ಹಾಗೂ*

*iii. ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಪ್ರಿಂಟರ್‌ಗಳಿಗೆ ಮೊಹರು ಮಾಡುವ ಮೂಲಕ*

*ಪ್ರಿಂಟರನ್ನು ಸೀಲ್ ಮಾಡಬೇಕು."*

**49ಸಿ. ಮತಗಟ್ಟೆಗಳಲ್ಲಿ ಏರ್ಪಾಟು –**

(1) ಪ್ರತಿಯೊಂದು ಮತಗಟ್ಟೆಯ ಹೊರಗಡೆ –

(ಎ) ಯಾವ ಮತದಾನ ಪ್ರದೇಶವನ್ನು ಸೂಚಿಸುವ ಮತದಾರರು ಯಾವ ಮತಗಟ್ಟೆಯಲ್ಲಿ ಮತ ಚಲಾಯಿಸಲು ಹಕ್ಕುಳ್ಳವರಾಗಿದ್ದಾರೆ ಎಂಬುದನ್ನು ಮತ್ತು ಮತದಾನದ ಪ್ರದೇಶವು ಒಂದಕ್ಕಿಂತ ಹೆಚ್ಚು ಮತಗಟ್ಟೆಯನ್ನು ಹೊಂದಿದ್ದರೆ, ಹಾಗೆ ಹಕ್ಕುಳ್ಳ ಮತದಾರರ ವಿವರಗಳನ್ನು ನಿರ್ದಿಷ್ಟಪಡಿಸಿರುವ ಒಂದು ನೋಟೀಸನ್ನು; ಮತ್ತು

(ಬಿ) ಸ್ಪರ್ಧಿಸಿರುವ ಉಮೇದುವಾರರ ಪಟ್ಟಿಯ ಒಂದು ಪ್ರತಿಯನ್ನು –ಎದ್ದು ಕಾಣುವಂತೆ ಪ್ರದರ್ಶಿಸತಕ್ಕದ್ದು.

(2) ಪ್ರತಿಯೊಂದು ಮತಗಟ್ಟೆಯಲ್ಲಿ ಮತದಾರರು ಮತ್ತೊಬ್ಬರಿಗೆ ಕಾಣದಂತೆ ತಮ್ಮ ಮತ ಚಲಾಯಿಸಬಹುದಾದ ಒಂದು ಅಥವಾ ಹೆಚ್ಚು ವೋಟಿಂಗ್ ಕಂಪಾರ್ಟ್‌ಮೆಂಟ್‌ಗಳನ್ನು ಸ್ಥಾಪಿಸತಕ್ಕದ್ದು.

(3) ರಿಟರ್ನಿಂಗ್ ಆಫೀಸರ್‌ರವರು ಪ್ರತಿಯೊಂದು ಮತಗಟ್ಟೆಯಲ್ಲಿ ಒಂದು ಮತಯಂತ್ರವನ್ನು ಮತ್ತು ಮತದಾರರ ಪಟ್ಟಿಯ ಸುಸಂಗತ ಭಾಗದ ಪ್ರತಿಗಳನ್ನು ಮತ್ತು ಮತದಾನಕ್ಕೆ ಅಗತ್ಯವಿರುವಂತಹ ಇತರ ಚುನಾವಣಾ ಸಾಮಗ್ರಿಗಳನ್ನು ಒದಗಿಸತಕ್ಕದ್ದು.

(4) ಉಪನಿಯಮ (3)ರ ಉಪಬಂಧಗಳಿಗೆ ಬಾಧಕವಾಗದಂತೆ, ರಿಟರ್ನಿಂಗ್ ಆಫೀಸರ್‌ರವರು ಚುನಾವಣಾ ಆಯೋಗದ ಪೂರ್ವಾನುಮೋದನೆ ಪಡೆದು, ಒಂದೇ ಆವರಣದಲ್ಲಿ ಸ್ಥಾಪಿಸಲಾಗಿರುವ ಎರಡು ಅಥವಾ ಹೆಚ್ಚು ಮತಗಟ್ಟೆಗಳಿಗೆ ಒಂದು ಸಾಮಾನ್ಯ ಮತಯಂತ್ರವನ್ನು ಒದಗಿಸತಕ್ಕದ್ದು.

**49ಇ. ಮತದಾನಕ್ಕಾಗಿ ಮತಯಂತ್ರಗಳ ಸಿದ್ಧತೆ,–**

(1) ಮತಗಟ್ಟೆಯಲ್ಲಿ ಬಳಸಲಾಗುವ ಪ್ರತಿಯೊಂದು ಮತಯಂತ್ರದ ಕಂಟ್ರೋಲ್ ಯೂನಿಟ್ ಮತ್ತು ಬ್ಯಾಲೆಟಿಂಗ್ ಯೂನಿಟ್ ಹಾಗೂ **ಕಾಗದದ ತಾಳೆದರ್ಶಕದ ಪ್ರಿಂಟರ್‌ನ್ನು** ಬಳಸಿರುವೆಡೆಗಳಲ್ಲಿ, ಅದು–

(ಎ) ಚುನಾವಣಾ ಕ್ಷೇತ್ರದ ಕ್ರಮಸಂಖ್ಯೆ ಯಾವುದಾದರೂ ಇದ್ದರೆ, ಆ ಸಂಖ್ಯೆ ಮತ್ತು ಚುನಾವಣಾ ಕ್ಷೇತ್ರದ ಹೆಸರು;

(ಬಿ) ಸಂದರ್ಭಾನುಸಾರ, ಮತಗಟ್ಟೆಯ ಅಥವಾ ಮತಗಟ್ಟೆಗಳ ಕ್ರಮಸಂಖ್ಯೆ ಮತ್ತು ಹೆಸರು;

(ಸಿ) ಯೂನಿಟ್‌ನ ಕ್ರಮ ಸಂಖ್ಯೆಯನ್ನು; ಮತ್ತು

(ಡಿ) ಮತದಾನದ ದಿನಾಂಕವನ್ನು–

**ಗುರುತು ಮಾಡಿರುವ ಒಂದೊಂದು ಲೇಬಲ್ ಅನ್ನು ಹೊಂದಿರತಕ್ಕದ್ದು.**

(2) ಮತದಾನ ಪ್ರಾರಂಭವಾಗುವ ನಿಕಟ ಮೊದಲು, ಪ್ರಿಸೈಡಿಂಗ್ ಆಫೀಸರ್ ಅವರು ಪೋಲಿಂಗ್ ಏಜೆಂಟರಿಗೆ ಮತ್ತು ಹಾಜರಿರುವ ಇತರ ವ್ಯಕ್ತಿಗಳಿಗೆ, ಮತಯಂತ್ರದಲ್ಲಿ ಈಗಗಲೇ ಯಾವುದೇ ಮತ ದಾಖಲು ಮಾಡಿಲ್ಲವೆಂಬುದನ್ನು ಮತ್ತು ಅದು ಉಪನಿಯಮ (1)ರಲ್ಲಿ ಉಲ್ಲೇಖಿಸಿರುವ ಲೇಬಲ್‌ಅನ್ನು ಹೊಂದಿದೆ ಎಂಬುದನ್ನು ಪ್ರದರ್ಶಿಸತಕ್ಕದ್ದು ಮತ್ತು **ಕಾಗದದದ ತಾಳೆದರ್ಶಕ ಪ್ರಿಂಟರನ್ನು ಬಳಸಲಾಗಿರುವಲ್ಲಿ, ಪ್ರಿಂಟರ್‌ನ ಡ್ರಾಪ್ ಬಾಕ್ಸ್ ಖಾಲಿ ಇದೆ ಎಂದು ಅದನ್ನು ಪ್ರದರ್ಶಿಸತಕ್ಕದ್ದು.**

(3) ಮತಯಂತ್ರದ ಕಂಟ್ರೋಲ್ ಯೂನಿಟನ್ನು ಭದ್ರಗೊಳಿಸಲು ಒಂದು ಪೇಪರ್ ಸೀಲ್ ಅನ್ನು ಬಳಸತಕ್ಕದ್ದು ಮತ್ತು ಪ್ರಿಸೈಡಿಂಗ್ ಆಫೀಸರ್ ಅವರು ಪೇಪರ್ ಸೀಲ್‌ನ ಮೇಲೆ ತಮ್ಮ ಸಹಿಯನ್ನು ಹಾಕತಕ್ಕದ್ದು ಮತ್ತು ಅದರ ಮೇಲೆ ಮತಗಟ್ಟೆಯಲ್ಲಿ ಹಾಜರಿದ್ದು ತಮ್ಮ ಸಹಿ ಹಾಕಲಿಚ್ಛಿಸುವ ಪೋಲಿಂಗ್ ಏಜೆಂಟರ ಸಹಿಯನ್ನು ಪಡೆದುಕೊಳ್ಳತಕ್ಕದ್ದು.

(4) ಆ ತರುವಾಯ, ಪ್ರಿಸೈಡಿಂಗ್ ಆಫೀಸರ್ ಅವರು ಹಾಗೆ ಸಹಿ ಮಾಡಲಾದ ಪೇಪರ್ ಸೀಲ್ ಅನ್ನು ಮತಯಂತ್ರದ ಕಂಟ್ರೋಲ್ ಯೂನಿಟ್‌ನಲ್ಲಿ ಅದಕ್ಕಾಗಿ ಒದಗಿಸಿರುವ ಸ್ಥಳದಲ್ಲಿ ಅಳವಡಿಸತಕ್ಕದ್ದು ಮತ್ತು ಭದ್ರಗೊಳಿಸಿ ಅದನ್ನು ಮೊಹರು ಮಾಡತಕ್ಕದ್ದು.

(5) ಕಂಟ್ರೋಲ್ ಯೂನಿಟನ್ನು ಭದ್ರಗೊಳಿಸಲು ಉಪಯೋಗಿಸಿದ ಸೀಲ್ ಅನ್ನು, ಯೂನಿಟನ್ನು ಮೊಹರು ಮಾಡಿದ ಮೇಲೆ ಮೊಹರನ್ನು ಒಡೆಯದೆ 'ರಿಸಲ್ಟ್‌ಬಟನ್' ಒತ್ತಲುಸಾಧ್ಯವಾಗದಹಾಗೆ ಅಳವಡಿಸಬೇಕು.

(6) ಕಂಟ್ರೋಲ್ ಯೂನಿಟ್‌ನ್ನು ಮುಚ್ಚಿ ಭದ್ರಗೊಳಿಸತಕ್ಕದ್ದು ಮತ್ತು ಪ್ರಿಸೈಡಿಂಗ್ ಆಫೀಸರ್ ಅವರಿಗೆ ಮತ್ತು ಪೋಲಿಂಗ್ ಏಜೆಂಟರುಗಳಿಗೆ ಪೂರ್ಣವಾಗಿ ಕಾಣುವಂತಿರಿಸಬೇಕು ಮತ್ತು ಮತದಾನ ವಿಭಾಗದಲ್ಲಿ ಬ್ಯಾಲೆಟ್ ಯೂನಿಟ್‌ನ್ನು ಇಟ್ಟಿರಬೇಕು.

**(7) ಕಾಗದ ತಾಳೆದರ್ಶಕ ಪ್ರಿಂಟರ್ ಬಳಸುವ ಕಡೆಗಳಲ್ಲಿ, ವೋಟಿಂಗ್ ಕಂಪಾರ್ಟ್‌ಮೆಂಟ್‌ನಲ್ಲಿ ಬ್ಯಾಲೆಟ್ ಯೂನಿಟ್‌ನೊಂದಿಗೆ ಪ್ರಿಂಟರನ್ನು ಸಹ ಇಡಬೇಕು ಹಾಗೂ ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಇವಿಎಂಗೆ ಅದನ್ನು ಜೋಡಿಸಿರಬೇಕು.**

**49ಎಲ್. ಮತಯಂತ್ರಗಳ ಮೂಲಕ ಮತ ಚಲಾಯಿಸುವ ಪ್ರಕ್ರಿಯೆ.–**

(1) ಒಬ್ಬ ಮತದಾರನಿಗೆ ಮತ ಚಲಾಯಿಸಲು ಅನುಮತಿಸುವುದಕ್ಕೆ ಮೊದಲು ಮತಗಟ್ಟೆ ಅಧಿಕಾರಿಯವರು–

(ಎ) ಮತದಾರರ ಅಧಿಕೃತ ಪಟ್ಟಿಯ ಪ್ರತಿಯಲ್ಲಿ ನಮೂದಿಸಿರುವಂತೆ ಮತದಾರನ, ಮತದಾರ ಪಟ್ಟಿಯ ಸಂಖ್ಯೆಯನ್ನು, ನಮೂನೆ 17ಎ ಯಲ್ಲಿರುವ ಮತದಾರರ ರಿಜಿಸ್ಟರಿನಲ್ಲಿ ನಮೂದಿಸತಕ್ಕದ್ದು;

(ಬಿ) ಸದರಿ ಮತದಾರರ ರಿಜಿಸ್ಟರಿನಲ್ಲಿ ಮತದಾರನ ಸಹಿ ಅಥವಾ ಹೆಬ್ಬೆರಳು ಗುರುತನ್ನು

ಪಡೆದುಕೊಳ್ಳತಕ್ಕದ್ದು; ಮತ್ತು

(ಸಿ) ಮತದಾರನಿಗೆ ಮತ ಚಲಾಯಿಸಲು ಅವಕಾಶ ನೀಡಿರುವುದನ್ನು ಸೂಚಿಸಲು ಮತದಾರನ ಹೆಸರನ್ನು ಮತದಾರರ ಅಧಿಕೃತ ಪಟ್ಟಿಯ ಪ್ರತಿಯಲ್ಲಿ ಗುರುತು ಮಾಡತಕ್ಕದ್ದು.

(ಡಿ) ತನ್ನ ಗುರುತಿನ ಪುರಾವೆಗಾಗಿ ಮತದಾರನು ಹಾಜರುಪಡಿಸಿದ ದಾಖಲೆ ಪತ್ರಗಳ ವಿವರಗಳನ್ನು ನೀಡತಕ್ಕದ್ದು:]

ಪರಂತು, ಯಾವುದೇ ಮತದಾರನು ಮತದಾರರ ರಿಜಿಸ್ಟರಿನಲ್ಲಿ ತನ್ನ ಸಹಿ ಅಥವಾ ಹೆಬ್ಬೆರಳು ಗುರುತು ಹಾಕಿದ ಹೊರತು, ಮತ ಚಲಾಯಿಸಲು ಆತನಿಗೆ ಅವಕಾಶ ನೀಡತಕ್ಕದ್ದಲ್ಲ.

(2) ನಿಯಮ 2ರ ಉಪನಿಯಮ (2)ರಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಯಾರೇ ಪ್ರಿಸೈಡಿಂಗ್ ಆಫೀಸರ್ ಅಥವಾ ಮತಗಟ್ಟೆ ಅಧಿಕಾರಿ ಅಥವಾ ಇತರ ಯಾರೇ ಅಧಿಕಾರಿಯು ಮತದಾರರ ರಿಜಿಸ್ಟರಿನಲ್ಲಿ ಮತದಾರರ ಹೆಬ್ಬೆರಳು ಗುರುತನ್ನು ದೃಢೀಕರಿಸುವುದು ಅಗತ್ಯ.

**49ಎಂ. ಮತಗಟ್ಟೆಯೊಳಗೆ ಮತದಾರರು ಮತದಾನದ ರಹಸ್ಯ ಕಾಪಾಡುವುದು ಮತ್ತು ಮತದಾನದ ಪ್ರಕ್ರಿಯೆಗಳು–**

(1) ನಿಯಮ 49ಎಲ್ ಅಡಿಯಲ್ಲಿ ಮತ ಚಲಾಯಿಸಲು ಅನುಮತಿಸಲಾಗಿರುವ ಪ್ರತಿಯೊಬ್ಬ ಮತದಾರನು ಮತಗಟ್ಟೆಯೊಳಗೆ ಮತದಾನದ ರಹಸ್ಯವನ್ನು ಕಾಪಾಡತಕ್ಕದ್ದು ಮತ್ತು ಆ ಉದ್ದೇಶಕ್ಕಾಗಿ ಈ ಮುಂದೆ ನಿರ್ದಿಷ್ಟಪಡಿಸಿರುವ ಮತದಾನದ ಪ್ರಕ್ರಿಯೆಯನ್ನು ಪಾಲಿಸತಕ್ಕದ್ದು.

(2) ಮತ ಹಾಕಲು ಅನುಮತಿ ನೀಡಿದ ತಕ್ಷಣವೇ ಮತದಾರನು ಪ್ರಿಸೈಡಿಂಗ್ ಆಫೀಸರ್ ಅವರ ಅಥವಾ ಮತಯಂತ್ರದ ಕಂಟ್ರೋಲ್ ಯೂನಿಟ್‌ನ ಪ್ರಭಾರದಲ್ಲಿರುವ ಮತಗಟ್ಟೆ ಅಧಿಕಾರಿಯವರ ಬಳಿ ಹೋಗತಕ್ಕದ್ದು. ಅವರು ಕಂಟ್ರೋಲ್ ಯೂನಿಟಿನ ಮೇಲಿನ ಸರಿಯಾದ ಬಟನ್ ಒತ್ತುವ ಮೂಲಕ, ಮತದಾರನ ಮತವನ್ನು ದಾಖಲು ಮಾಡುವ ಸಲುವಾಗಿ 'ಬ್ಯಾಲೆಟ್ ಯೂನಿಟ್' ಅನ್ನುಸಕ್ರಿಯಗೊಳಿಸುವರು;

(3) ಮತದಾರನು ಆ ತರುವಾಯ ತಕ್ಷಣವೇ–

(ಎ) ವೋಟಿಂಗ್ ಕಂಪಾರ್ಟ್‌ಮೆಂಟ್‌ಗೆ ಹೋಗಬೇಕು;

(ಬಿ) ಆತನು ತನ್ನ ಮತವನ್ನು ಯಾರಿಗೆ ನೀಡಲು ಉದ್ದೇಶಿಸಿರುವನೋ ಆ ಉಮೇದುವಾರನ ಹೆಸರು ಮತ್ತು ಚಿಹ್ನೆಯ ಎದುರಿನಲ್ಲಿ ಬ್ಯಾಲೆಟ್ ಯೂನಿಟಿನ ಮೇಲೆ ಇರುವ ಬಟನ್ ಒತ್ತುವ ಮೂಲಕ ತನ್ನ ಮತವನ್ನು ದಾಖಲಿಸಬೇಕು; ಮತ್ತು

(ಸಿ) ವೋಟಿಂಗ್ ಕಂಪಾರ್ಟ್‌ಮೆಂಟ್‌ನಿಂದ ಹೊರ ಬರಬೇಕು ಮತ್ತು ಮತಗಟ್ಟೆಯಿಂದ ಹೊರ ಹೋಗಬೇಕು:

**ಪರಂತು, ಕಾಗದದ ತಾಳೆದರ್ಶಕ ಪ್ರಿಂಟರನ್ನು ಬಳಸಿರುವಲ್ಲಿ, ಖಂಡ(ಬಿ) ಅಡಿಯಲ್ಲಿ ಉಲ್ಲೇಖಿಸಲಾದಂತೆ ಗುಂಡಿ ಒತ್ತುವ ಮೂಲಕ ಮತ ಚಲಾಯಿಸಿದ ನಂತರ, ಮತದಾರನು ವೋಟಿಂಗ್ ಕಂಪಾರ್ಟ್‌ಮೆಂಟ್ ಒಳಗೆ ಬ್ಯಾಲೆಟ್ ಯೂನಿಟ್‌ನೊಂದಿಗೆ ಇರಿಸಲಾದ ಪ್ರಿಂಟರ್‌ನ ಪಾರದರ್ಶಕ ಕಿಟಕಿ ಮೂಲಕ, ಅಂಥ ಕಾಗದದ ಚೀಟಿ ಕತ್ತರಿಸಲ್ಪಟ್ಟು, ಪ್ರಿಂಟರ್‌ನ ಡ್ರಾಪ್ ಬಾಕ್ಸ್ ಒಳಗೆ ಬೀಳುವುದಕ್ಕೆ ಮುನ್ನ, ತಾನು ಮತ ಚಲಾಯಿಸಿದ ಅಭ್ಯರ್ಥಿಯ ಕ್ರಮ ಸಂಖ್ಯೆ, ಹೆಸರು ಮತ್ತು ಚಿಹ್ನೆಯನ್ನು ತೋರಿಸುವ ಮುದ್ರಿತ ಕಾಗದವನ್ನು ಮತದಾರನು ವೀಕ್ಷಿಸಲು ಸಾಧ್ಯವಾಗಬೇಕು.**

(4) ಪ್ರತಿಯೊಬ್ಬ ಮತದಾರನೂ ಅನುಚಿತ ವಿಳಂಬ ಮಾಡದೇ ಮತ ಚಲಾಯಿಸಬೇಕು.

(5) ಯಾರೇ ಒಬ್ಬ ಮತದಾರನು ವೋಟಿಂಗ್ ಕಂಪಾರ್ಟ್‌ಮೆಂಟ್‌ನಲ್ಲಿರುವಾಗ ಮತ್ತೊಬ್ಬ ಮತದಾರನಅದರೊಳಗೆ ಹೋಗಲು ಅನುಮತಿಸಲಾಗುವುದಿಲ್ಲ.

(6) ನಿಯಮ 49ಎಲ್ ಅಥವಾ 49ಪಿ ಯ ಅಡಿಯಲ್ಲಿ ಮತ ಚಲಾಯಿಸಲು ಅನುಮತಿಸಲಾಗಿರುವ ಒಬ್ಬ ಮತದಾರನು, ಪ್ರಿಸೈಡಿಂಗ್ ಆಫೀಸರ್ ಅವರು ಎಚ್ಚರಿಕೆ ನೀಡಿದ ಮೇಲೂ, ಸದರಿ ನಿಯಮಗಳ ಉಪ ನಿಯಮ (3)ರಲ್ಲಿ ನಿರ್ದಿಷ್ಟಪಡಿಸಲಾಗಿರುವ ಪ್ರಕ್ರಿಯೆಯನ್ನು ಪಾಲಿಸಲು ನಿರಾಕರಿಸಿದರೆ, ಪ್ರಿಸೈಡಿಂಗ್ ಆಫೀಸರ್‌ರವರು ಅಥವಾ ಪ್ರಿಸೈಡಿಂಗ್ ಆಫೀಸರ್‌ರವರ ನಿರ್ದೇಶನದ ಮೇರೆಗೆ ಒಬ್ಬ ಮತಗಟ್ಟೆ ಅಧಿಕಾರಿಯವರು ಅಂಥ ಮತದಾರನಿಗೆ ಮತ ಹಾಕಲು ಅವಕಾಶ ನೀಡತಕ್ಕದ್ದಲ್ಲ.

(7) ಉಪ–ನಿಯಮ(6)ರ ಅಡಿಯಲ್ಲಿ ಒಬ್ಬ ಮತದಾರನಿಗೆ ಮತ ಚಲಾಯಿಸಲು ಅವಕಾಶ ನೀಡದಿರುವಾಗ, ಪ್ರಿಸೈಡಿಂಗ್ ಆಫೀಸರ್‌ರವರು ನಮೂನೆ 17ಎ ಯಲ್ಲಿರುವ ಮತದಾರನ ರಿಜಿಸ್ಟರಿನಲ್ಲಿ ಮತದಾರನ ಹೆಸರಿನ ಎದುರಿನಲ್ಲಿ, ಮತದಾನದ ಪ್ರಕ್ರಿಯೆಯನ್ನು ಉಲ್ಲಂಘಿಸಲಾಗಿದೆಯೆಂಬ ಮಟ್ಟಿಗೆ ಒಂದು ಷರಾ ಬರೆದು ಸಹಿ ಹಾಕತಕ್ಕದ್ದು.

**49ಎಂಎ. ಕಾಗದ ಚೀಟಿ ಮೇಲೆ ಮುದ್ರಿತವಾದ ವಿವರಗಳ ಬಗ್ಗೆ ದೂರು ಇದ್ದಲ್ಲಿ ಅನುಸರಿಸಬೇಕಾದ ವಿಧಾನ,–**

**(1) ಕಾಗದದ ತಾಳೆದರ್ಶಕ ಪ್ರಿಂಟರ್ ಬಳಸಿರುವಲ್ಲಿ, ನಿಯಮ 49ಎಂ ಅಡಿಯಲ್ಲಿ ತನ್ನ ಮತವನ್ನು ಒಬ್ಬ ಮತದಾರನು ದಾಖಲಿಸಿದ ನಂತರ, ಪ್ರಿಂಟರ್‌ನಲ್ಲಿ ಬಂದ ಕಾಗದದ ಚೀಟಿಯಲ್ಲಿ ತಾನು ಮತ ಚಲಾಯಿಸಿದ ಅಭ್ಯರ್ಥಿಯ ಹೆಸರು ಮತ್ತು ಚಿಹ್ನೆಗೆ ಬದಲಾಗಿ ಬೇರೆ ಅಭ್ಯರ್ಥಿಯ ಹೆಸರು ಮತ್ತು ಚಿಹ್ನೆ ತೋರಿಸುತ್ತಿದೆ ಎಂದು ಆರೋಪಿಸಿದರೆ, ಪ್ರಿಸೈಡಿಂಗ್ ಆಫೀಸರ್‌ರವರು ಮತದಾರನಿಗೆ ಸುಳ್ಳು ಘೋಷಣೆ ಮಾಡಿದರೆ ಎದುರಿಸಬೇಕಾದ ಪರಿಣಾಮಗಳ ಬಗ್ಗೆ ಆತನಿಗೆ ಎಚ್ಚರಿಕೆ ನೀಡಿದ ನಂತರ, ಅಂಥ ಆರೋಪ ಕುರಿತು ಮತದಾರನಿಂದ ಒಂದು ಲಿಖಿತ ಘೋಷಣೆ ಪಡೆಯತಕ್ಕದ್ದು.**

**(2) ಮತದಾರನು ಉಪ–ನಿಯಮ(1)ರಲ್ಲಿ ಉಲ್ಲೇಖಿಸಿರುವ ಲಿಖಿತ ಘೋಷಣೆ ನೀಡಿದಲ್ಲಿ, ನಮೂನೆ 17ಎರಲ್ಲಿ ಆ ಮತದಾರನಿಗೆ ಸಂಬಂಧಿಸಿದಂತೆ ಪ್ರಿಸೈಡಿಂಗ್ ಆಫೀಸರ್‌ರವರು ಎರಡನೇ ನಮೂದು ಮಾಡಬೇಕು, ಹಾಗೂ ತನ್ನ ಸಮಕ್ಷಮದಲ್ಲಿ ಮತ್ತು ಅಭ್ಯರ್ಥಿಗಳ ಅಥವಾ ಮತಗಟ್ಟೆಯಲ್ಲಿ ಹಾಜರಿರಬಹುದಾದ ಮತಗಟ್ಟೆ ಏಜೆಂಟ್‌ರ ಸಮ್ಮುಖದಲ್ಲಿ ಪರೀಕ್ಷಾರ್ಥ ಮತ ದಾಖಲಿಸಲು ಆ ಮತದಾರನಿಗೆ ಅನುಮತಿ ನೀಡಬೇಕು, ಹಾಗೂ ಪ್ರಿಂಟರ್‌ನಿಂದ ಬರುವ ಕಾಗದ ಚೀಟಿಯನ್ನು ಗಮನಿಸಬೇಕು.**

**(3) ಆ ಆರೋಪವು ನಿಜವೆಂದು ಕಂಡುಬಂದರೆ, ಪ್ರಿಸೈಡಿಂಗ್ ಆಫೀಸರ್ ಅವರು ಆ ಕೂಡಲೇ ರಿಟರ್ನಿಂಗ್ ಆಫೀಸರರಿಗೆ ಆ ಸಂಗತಿಯನ್ನು ವರದಿ ಮಾಡಬೇಕು, ಆ ಮತ**

**(4) ಯಂತ್ರದಲ್ಲಿ ಮತಗಳನ್ನು ಮುಂದೆ ದಾಖಲಿಸುವುದನ್ನು ನಿಲ್ಲಿಸಬೇಕು ಹಾಗೂ ರಿಟರ್ನಿಂಗ್ ಅಧಿಕಾರಿಯು ನೀಡಬಹುದಾದ ನಿರ್ದೇಶನದಂತೆ ಕಾರ್ಯನಿರ್ವಹಿಸಬೇಕು.**

**ಆದಾಗ್ಯೂ, ಆರೋಪವು ಸುಳ್ಳು ಎಂದು ಕಂಡುಬಂದಲ್ಲಿ ಹಾಗೂ ಉಪ–ನಿಯಮ(1)ರ ಅಡಿ ಬಂದ ಕಾಗದ ಚೀಟಿಯು ಉಪ–ನಿಯಮ(2)ರ ಅಡಿ ಮತದಾರನಿಂದ ದಾಖಲಿಸಲಾದ ಪರೀಕ್ಷಾ ಮತದೊಂದಿಗೆ ತಾಳೆಯಾದಲ್ಲಿ, ಆಗ, ಪ್ರಿಸೈಡಿಂಗ್ ಆಫೀಸರ್ ಅವರು–**

**(i) ಅಂಥ ಪರೀಕ್ಷಾ ಮತಗಳು ಯಾವ ಅಭ್ಯರ್ಥಿಯ ಕ್ರಮ ಸಂಖ್ಯೆ ಮತ್ತು ಹೆಸರಿಗೆ ದಾಖಲಾಯಿತು ಎಂಬುದನ್ನು ನಮೂದಿಸಿನಮೂನೆ 17ಎನಲ್ಲಿ ಆ ಮತದಾರನಿಗೆ ಸಂಬಂಧಪಟ್ಟ ಎರಡನೇ ನಮೂದಿನ ಎದುರು ಆ ಬಗ್ಗೆ ಷರಾ ದಾಖಲಿಸತಕ್ಕದ್ದು;**

**(ii) ಅಂಥ ಷರಾದ ಎದುರು ಆ ಮತದಾರನ ಸಹಿ ಅಥವಾ ಹೆಬ್ಬೆರಳು ಗುರುತನ್ನು ಪಡೆದುಕೊಳ್ಳತಕ್ಕದ್ದು; ಮತ್ತು**

**(iii) ನಮೂನೆ 17ಸಿಯಲ್ಲಿನ ಭಾಗ 1ರಲ್ಲಿನ ಬಾಬ್ತು 5ರಲ್ಲಿ ಅಂಥ ಪರೀಕ್ಷಾ ಮತಕ್ಕೆ ಸಂಬಂಧಪಟ್ಟಂತೆ ಅಗತ್ಯ ನಮೂದನೆಗಳನ್ನು ಮಾಡತಕ್ಕದ್ದು.**

**49ಎನ್. ಅಂಧ ಅಥವಾ ದುರ್ಬಲ ಮತದಾರರ ಮತಗಳ ದಾಖಲಾತಿ,–**

(1) ಅಂಧನಾಗಿರುವ ಅಥವಾ ಇತರ ದೈಹಿಕ ದುರ್ಬಲತೆಗಳ ಕಾರಣದಿಂದಾಗಿ ಒಬ್ಬ ಮತದಾರನು ಮತಯಂತ್ರದ ಬ್ಯಾಲೆಟ್ ಯೂನಿಟ್‌ನ ಮೇಲಿನ ಚಿಹ್ನೆಯನ್ನು ಗುರುತಿಸಲು ಅಸಮರ್ಥನಾಗಿದ್ದಾನೆ ಅಥವಾ ಇತರರ ನೆರವಿಲ್ಲದೆ ಅದರ ಮೇಲಿನ ಸರಿಯಾದ ಬಟನ್ ಒತ್ತುವ ಮೂಲಕ ತನ್ನ ಮತ ದಾಖಲು ಮಾಡಲು ಅಸಮರ್ಥನಾಗಿದ್ದನೆ ಎಂದು ಪ್ರಿಸೈಡಿಂಗ್ ಆಫೀಸರ್ ಅವರಿಗೆ ಮನವರಿಕೆಯಾದರೆ, ಪ್ರಿಸೈಡಿಂಗ್ ಆಫೀಸರ್‌ರವರು ಮತದಾರನು ತನ್ನ ಜೊತೆಗೆ, ತನ್ನ ಪರವಾಗಿ ಮತ್ತು ತನ್ನ ಇಚ್ಛೆಗನುಸಾರವಾಗಿ ತನ್ನ ಮತ ದಾಖಲು ಮಾಡಲು ವೋಟಿಂಗ್ ಕಂಪಾರ್ಟ್‌ಮೆಂಟ್‌ಗೆ ಹದಿನೆಂಟು ವರ್ಷಗಳಿಗೆ ಕಡಿಮೆಯಿಲ್ಲದ ಒಬ್ಬ ಸಂಗಡಿಗನನ್ನು ಕರೆದುಕೊಂಡು ಹೋಗಲು ಅನುಮತಿಸತಕ್ಕದ್ದು. ಪರಂತು, ಯಾರೇ ವ್ಯಕ್ತಿಯು ಒಂದೇ ದಿನ ಯಾವುದೇ ಮತಗಟ್ಟೆಯಲ್ಲಿ ಒಬ್ಬನಿಗಿಂತ ಹೆಚ್ಚು ಮತದಾರರ ಸಂಗಡಿಗನಾಗಿ ಕಾರ್ಯನಿರ್ವಹಿಸಲು ಅನುಮತಿ ನೀಡತಕ್ಕದ್ದಲ್ಲ. ಮತ್ತೂ ಪರಂತು, ಈ ನಿಯಮದ ಅಡಿಯಲ್ಲಿ ಯಾವುದೇ ದಿನ ಒಬ್ಬ ಮತದಾರನ ಪರವಾಗಿ ದಾಖಲು ಮಾಡಿದ ಮತದ ರಹಸ್ಯವನ್ನು ಕಾಪಾಡುವುದಾಗಿ ಮತ್ತು ಆತನು ಆ ದಿನ ಇತರ ಯಾವುದೇ ಮತಗಟ್ಟೆಯಲ್ಲಿ ಇತರ ಯಾವುದೇ ಮತದಾರನ ಸಂಗಡಿಗನಾಗಿ ಈಗಾಗಲೇ ಕಾರ್ಯನಿರ್ವಹಿಸಿಲ್ಲವೆಂಬುದಾಗಿ ಘೋಷಣೆ ನೀಡುವಂತೆ ಅಗತ್ಯಪಡಿಸತಕ್ಕದ್ದು.

(2) ಪ್ರಿಸೈಡಿಂಗ್ ಆಫೀಸರ್‌ರವರು ಈ ನಿಯಮದ ಅಡಿಯಲ್ಲಿ ನಮೂನೆ 14ಎ ಯಲ್ಲಿ ಪ್ರಕರಣಗಳ ಒಂದು ದಾಖಲೆಯನ್ನು ಇಡತಕ್ಕದ್ದು.

**49ಕ್ಯೂ. ಮತದಾನದ ಅವಧಿಯಲ್ಲಿ ವೋಟಿಂಗ್ ಕಂಪಾರ್ಟ್‌ಮೆಂಟ್‌ನೊಳಗೆ ಪ್ರಿಸೈಡಿಂಗ್ ಆಫೀಸರ್ ಅವರ ಪ್ರವೇಶ:**

(1) ಪ್ರಿಸೈಡಿಂಗ್ ಆಫೀಸರ್ ಅವರು ಮತದಾನದ ಅವಧಿಯಲ್ಲಿ ವೋಟಿಂಗ್ ಕಂಪಾರ್ಟ್‌ಮೆಂಟ್‌ನೊಳಗೆ ಪ್ರವೇಶಿಸುವುದು ಅಗತ್ಯವೆಂದು ಪರಿಗಣಿಸಿದಾಗ, ಹಾಗೆ ಪ್ರವೇಶಿಸಬಹುದು ಮತ್ತು ಬ್ಯಾಲೆಟ್ ಯೂನಿಟನ್ನು ಹಾಳುಗೆಡುವಲಾಗುತ್ತಿಲ್ಲ ಅಥವಾ ಅದರಲ್ಲಿ ಯಾವುದೇ ರೀತಿಯಲ್ಲಿ ಹಸ್ತಕ್ಷೇಪ ಮಾಡುತ್ತಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳಲು ಅವಶ್ಯವಿರುವಂಥ ಕ್ರಮಗಳನ್ನು ತೆಗೆದುಕೊಳ್ಳಬಹುದು.

(2) ಪ್ರಿಸೈಡಿಂಗ್ ಆಫೀಸರ್‌ರವರು ವೋಟಿಂಗ್ ಕಂಪಾರ್ಟ್‌ಮೆಂಟ್‌ನೊಳಗೆ ಹೋಗುವ ಒಬ್ಬ ಮತದಾರನು ಬ್ಯಾಲೆಟ್ ಯೂನಿಟ್‌ನ್ನು ಹಾಳುಗೆಡುವುತ್ತಿದ್ದಾನೆ ಅಥವಾ ಅದರ ವಿಷಯದಲ್ಲಿ ಅನ್ಯಥಾ ಹಸ್ತಕ್ಷೇಪ ಮಾಡುತ್ತಿದ್ದಾನೆಂದು ಅಥವಾ ಅನುಚಿತವಾಗಿ ದೀರ್ಘಕಾಲ ವೋಟಿಂಗ್ ಕಂಪಾರ್ಟ್‌ಮೆಂಟ್‌ನಲ್ಲಿದ್ದಾನೆಂದು ಸಂಶಯಿಸಲು ಕಾರಣ ಹೊಂದಿದ್ದರೆ, ಅವರು ವೋಟಿಂಗ್ ಕಂಪಾರ್ಟ್‌ಮೆಂಟ್‌ನೊಳಕ್ಕೆ ಪ್ರವೇಶಿಸತಕ್ಕದ್ದು ಮತ್ತು ಮತದಾನವು ಸುಗಮವಾಗಿ ಹಾಗೂ ಕ್ರಮಬದ್ಧವಾಗಿ ಜರುಗುವಂತೆ ನೋಡಿಕೊಳ್ಳಲು ಅಗತ್ಯವಿರುವಂಥ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

(3) ಈ ನಿಯಮದ ಅಡಿಯಲ್ಲಿ ಪ್ರಿಸೈಡಿಂಗ್ ಆಫೀಸರ್‌ರವರು ವೋಟಿಂಗ್ ಕಂಪಾರ್ಟ್‌ಮೆಂಟ್‌ನೊಳಗೆ ಪ್ರವೇಶಿಸಿದಾಗ, ಪೋಲಿಂಗ್ ಏಜೆಂಟರು ಅವರ ಜೊತೆ ಹೋಗಲು ಇಚ್ಛಿಸಿದ್ದಲ್ಲಿ ಹಾಗೆ ಹೋಗಲು ಅವರಿಗೆ ಅನುಮತಿಸತಕ್ಕದ್ದು.

**49ಆರ್. ಮತದಾನ ಮುಕ್ತಾಯ**

(1) ಪ್ರಿಸೈಡಿಂಗ್ ಆಫೀಸರ್‌ರವರು ಪ್ರಕರಣ 56ರ ಅಡಿಯಲ್ಲಿ ಮತಗಟ್ಟೆ ಮುಚ್ಚುವುದಕ್ಕೆ ನಿರ್ದಿಷ್ಟಪಡಿಸಿರುವ ಸಮಯಕ್ಕೆ ಸರಿಯಾಗಿ ಅದನ್ನು ಮುಚ್ಚತಕ್ಕದ್ದು ಮತ್ತು ಆ ತರುವಾಯ ಯಾವುದೇ ಮತದಾರನನ್ನು ಮತಗಟ್ಟೆಯೊಳಗೆ ಬಿಡತಕ್ಕದ್ದಲ್ಲ:

ಪರಂತು, ಮತಗಟ್ಟೆ ಮುಚ್ಚುವುದಕ್ಕೆ ಮೊದಲು ಅದರೊಳಗೆ ಹಾಜರಿರುವ ಎಲ್ಲ ಮತದಾರರಿಗೆ ಅವರ ಮತ ಚಲಾಯಿಸಲು ಅವಕಾಶ ಮಾಡಿಕೊಡತಕ್ಕದ್ದು.

(2) ಮತಗಟ್ಟೆ ಮುಚ್ಚುವುದಕ್ಕೆ ಮೊದಲು ಒಬ್ಬ ಮತದಾರನು ಅದರೊಳಗೆ ಹಾಜರಿದ್ದನೇ ಎಂಬ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದರೆ ಅದನ್ನು ಪ್ರಿಸೈಡಿಂಗ್ ಆಫೀಸರ್ ಅವರು ನಿರ್ಧರಿಸತಕ್ಕದ್ದು ಮತ್ತು ಅವರ ತೀರ್ಮಾನವು ಅಂತಿಮವಾಗಿರತಕ್ಕದ್ದು.

**49ಎಸ್. ದಾಖಲಾದ ಮತಗಳ ಲೆಕ್ಕ**

(1) ಪ್ರಿಸೈಡಿಂಗ್ ಆಫೀಸರ್‌ರವರು ಮತದಾನ ಮುಗಿದ ಮೇಲೆ ದಾಖಲಾದ ಮತಗಳ ಒಂದು ಲೆಕ್ಕವನ್ನು ನಮೂನೆ 17ಸಿಯಲ್ಲಿ ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು 'ದಾಖಲಾದಮತಗಳಲೆಕ್ಕ' ಎಂದುಬರೆಯಲಾದ ಒಂದುಪ್ರತ್ಯೇಕಲಕೋಟೆಯಲ್ಲಿ ಇಡತಕ್ಕದ್ದು.

(2) ಪ್ರಿಸೈಡಿಂಗ್ ಆಫೀಸರ್‌ರವರು ಮತದಾನ ಮುಗಿದಾಗ ಅಲ್ಲಿ ಹಾಜರಿರುವ ಪ್ರತಿಯೊಬ್ಬ ಪೋಲಿಂಗ್ ಏಜೆಂಟನಿಗೆ ನಮೂನೆ 17ಸಿಯಲ್ಲಿ ಮಾಡಲಾದ ನಮೂದುಗಳ ಒಂದೊಂದು ಯಥಾಪ್ರತಿಯನ್ನು, ಅದಕ್ಕಾಗಿ ಸದರಿ ಪೋಲಿಂಗ್ ಏಜೆಂಟನಿಂದ ಅದನ್ನು ಸ್ವೀಕರಿಸಿದ್ದ ಬಗ್ಗೆ ಒಂದು ಸ್ವೀಕೃತಿ ಪಡೆದುಕೊಂಡು ನೀಡತಕ್ಕದ್ದು

ಮತ್ತು ಅದನ್ನು ಯಥಾಪ್ರತಿ ಎಂದು ದೃಢೀಕರಿಸತಕ್ಕದ್ದು.

**49ಟಿ. ಮತದಾನದ ಮುಗಿದ ಮೇಲೆ ಮತಯಂತ್ರಗಳನ್ನು ಮೊಹರು ಮಾಡುವುದು.**

(1) ಮತದಾನ ಮುಗಿದ ಮೇಲೆ ಕಾರ್ಯಸಾಧ್ಯವಾದಷ್ಟು ಬೇಗನೆ, ಪ್ರಿಸೈಡಿಂಗ್ ಆಫೀಸರ್ ಅವರು ಮತ್ತಾವುದೇ ಮತಗಳನ್ನು ದಾಖಲು ಮಾಡಲಾಗುವುದಿಲ್ಲವೆಂಬುದನ್ನು ಖಾತರಿಪಡಿಸಿಕೊಳ್ಳಲು ಕಂಟ್ರೋಲ್ ಯೂನಿಟ್‌ನ್ನು ಮುಚ್ಚತಕ್ಕದ್ದು ಮತ್ತು ಬ್ಯಾಲೆಟ್ ಯೂನಿಟನ್ನು ಕಂಟ್ರೋಲ್ ಯೂನಿಟ್‌ನಿಂದ ಮತ್ತು ಪ್ರಿಂಟರ್‌ನ್ನು ಸಹ ಬಳಸಲಾಗಿರುವಲ್ಲಿ ಪ್ರಿಂಟರಿನಿಂದ ಬೇರ್ಪಡಿಸತಕ್ಕದ್ದು, ಆದಾಗ್ಯೂ, ಪ್ರಿಂಟರ್‌ನ ಡ್ರಾಪ್‌ಬಾಕ್ಸ್‌ನಲ್ಲಿ ಇರುವ ಪೇಪರ್ ಸ್ಲಿಪ್‌ಗಳನ್ನು ಹಾಗೆಯೇ ಸುರಕ್ಷಿತವಾಗಿ ಉಳಿಸಿ ಇಡಬೇಕು.

(2) ಆ ತರುವಾಯ, ಕಂಟ್ರೋಲ್ ಯೂನಿಟ್ ಮತ್ತು ಬ್ಯಾಲೆಟ್ ಯೂನಿಟ್‌ನ್ನು ಮತ್ತು ಪ್ರಿಂಟರನ್ನು ಬಳಸಿರುವ ಕಡೆಗಳಲ್ಲಿ ಆ ಪ್ರಿಂಟರನ್ನು ಮೊಹರು ಮಾಡತಕ್ಕದ್ದು ಮತ್ತು ಚುನಾವಣಾ ಆಯೋಗವು ನಿರ್ದೇಶಿಸುವಂಥ ರೀತಿಯಲ್ಲಿ ಭದ್ರಪಡಿಸತಕ್ಕದ್ದು ಮತ್ತು ಅವುಗಳನ್ನು ಭದ್ರಗೊಳಿಸಲು ಉಪಯೋಗಿಸಿದ ಮೊಹರುಗಳನ್ನು ಒಡೆಯದೆಯೇ ಯೂನಿಟ್‌ಗಳನ್ನು ತೆರೆಯಲು ಸಾಧ್ಯವಿಲ್ಲವೆನ್ನುವ ರೀತಿಯಲ್ಲಿ ಹಾಕಿರತಕ್ಕದ್ದು.

(3) ಮತಗಟ್ಟೆಯಲ್ಲಿ ಹಾಜರಿರುವ ಪೋಲಿಂಗ್ ಏಜೆಂಟರು ತಮ್ಮ ಮೊಹರುಗಳನ್ನು ಹಾಕಲು ಇಚ್ಛಿಸಿದ್ದಲ್ಲಿ ಹಾಗೆ ತಮ್ಮ ಮೊಹರು ಹಾಕಲು ಅವರಿಗೆ ಅನುಮತಿಸತಕ್ಕದ್ದು.

**49ಯು. ಇತರೆ ಪ್ಯಾಕೆಟ್‌ಗಳ ಮೊಹರು**

(1) ಆ ತರುವಾಯ ಪ್ರಿಸೈಡಿಂಗ್ ಆಫೀಸರ್‌ರವರು

(ಎ) ಮತದಾರ ಅಧಿಕೃತ ಪಟ್ಟಿಯ ಪ್ರತಿಯನ್ನು;

(ಬಿ) ನಮೂನೆ 17ಎ ಯಲ್ಲಿನ ಮತದಾರರ ರಿಜಿಸ್ಟರ್ ಅನ್ನು;

(ಸಿ) ಟೆಂಡರ್ಡ್ ಮತಪತ್ರಗಳನ್ನು ಒಳಗೊಂಡಿರುವ ಲಕೋಟೆ ಮತ್ತು ನಮೂನೆ 17ಬಿಯಲ್ಲಿನ ಪಟ್ಟಿಯನ್ನು;

(ಡಿ) ಆಕ್ಷೇಪಿತ ಮತಗಳ ಪಟ್ಟಿಯನ್ನು; ಮತ್ತು

(ಇ) ಒಂದು ಮೊಹರು ಮಾಡಿದ ಪ್ಯಾಕೆಟ್‌ನಲ್ಲಿ ಇಡುವಂತೆ ಚುನಾವಣಾ ಆಯೋಗವು ನಿರ್ದೇಶಿಸಿದಂಥ ಇತರ ಯಾವುದೇ ಪತ್ರಗಳನ್ನು ಪ್ರತ್ಯೇಕ ಪ್ಯಾಕೆಟ್‌ಗಳಲ್ಲಿ ಇಡತಕ್ಕದ್ದು.

(2) ಪ್ರತಿಯೊಂದು ಪ್ಯಾಕೆಟ್ ಅನ್ನು ಪ್ರಿಸೈಡಿಂಗ್ ಆಫೀಸರ್ ಅವರ ಮೊಹರಿನೊಂದಿಗೆ ಮತ್ತು ಉಮೇದುವಾರರ ಅಥವಾ ಆತನ ಚುನಾವಣಾ ಏಜೆಂಟನ ಅಥವಾ ಮತಗಟ್ಟೆಯಲ್ಲಿ ಹಾಜರಿರುವ ಮತ್ತು ಅದರ ಮೇಲೆ ಮೊಹರು ಹಾಕಲು ಇಚ್ಛಿಸುವ ಆತನ ಪೋಲಿಂಗ್ ಏಜೆಂಟನ ಮೊಹರಿನೊಂದಿಗೆ ಮೊಹರು ಮಾಡತಕ್ಕದ್ದು.

**49ವಿ. ಮತಯಂತ್ರಗಳು ಇತ್ಯಾದಿಗಳನ್ನು ರಿಟರ್ನಿಂಗ್ ಆಫೀಸರ್‌ರವರಿಗೆ ರವಾನಿಸುವುದು,–**

(1) ಆನಂತರ ಪ್ರಿಸೈಡಿಂಗ್ ಆಫೀಸರ್ ಅವರು,–

(ಎ) ಮತಯಂತ್ರ;

(ಬಿ) ನಮೂನೆ 17ಸಿನಲ್ಲಿ ದಾಖಲು ಮಾಡಿದ ಮತಗಳ ಲೆಕ್ಕ;

(ಸಿ) ನಿಯಮ 49ಯು ನಲ್ಲಿ ಉಲ್ಲೇಖಿಸಲಾದ ಮೊಹರು ಮಾಡಿದ ಪ್ಯಾಕೆಟ್‌ಗಳು; ಮತ್ತು

(ಡಿ) ಮತದಾನದಲ್ಲಿ ಬಳಸಿದ ಇತರ ಎಲ್ಲ ಕಾಗದಪತ್ರಗಳನ್ನು– ರಿಟರ್ನಿಂಗ್ ಆಫೀಸರ್‌ರವರು ನಿರ್ದೇಶಿಸುವಂಥ ಸ್ಥಳದಲ್ಲಿ ರಿಟರ್ನಿಂಗ್ ಆಫೀಸರ್‌ರವರಿಗೆ ಕೊಡತಕ್ಕದ್ದು ಅಥವಾ ಕೊಡುವಂತೆ ಮಾಡತಕ್ಕದ್ದು.

(2) ರಿಟರ್ನಿಂಗ್ ಆಫೀಸರ್‌ರವರು, ಮತ ಎಣಿಕೆ ಪ್ರಾರಂಭವಾಗುವವರೆಗೆ ಮತಯಂತ್ರ, ಪ್ಯಾಕೆಟ್‌ಗಳು ಮತ್ತು ಇತರ ಕಾಗದ ಪತ್ರಗಳ ಸುರಕ್ಷಿತ ಅಭಿರಕ್ಷೆಗೆ, ಅವುಗಳ ಸುರಕ್ಷಿತ ರವಾನೆಗೆ ಸಾಕಷ್ಟು ವ್ಯವಸ್ಥೆಗಳನ್ನು ಮಾಡತಕ್ಕದ್ದು.

**49 ಎಕ್ಸ್. ಮತಗಟ್ಟೆಯನ್ನು ವಶಪಡಿಸಿಕೊಳ್ಳುವ ಸಂದರ್ಭದಲ್ಲಿ ಮತಯಂತ್ರ ಮುಚ್ಚುವುದು.**–ಒಂದು ಮತಗಟ್ಟೆಯಲ್ಲಿ ಅಥವಾ ಮತದಾನಕ್ಕೆ ಗೊತ್ತುಪಡಿಸಿರುವ ಸ್ಥಳದಲ್ಲಿ ಮತಗಟ್ಟೆ ವಶಪಡಿಸಿಕೊಳ್ಳಲಾಗುತ್ತಿದೆಯೆಂದು ಪ್ರಿಸೈಡಿಂಗ್ ಆಫೀಸರ್ ಅವರು ಅಭಿಪ್ರಾಯಪಟ್ಟರೆ, ಅವರು ತಕ್ಷಣವೇ, ಮತ್ತಾವುದೇ ಮತವನ್ನು ಚಲಾಯಿಸಲು ಸಾಧ್ಯವಾಗದಂತೆ ಮತಯಂತ್ರದ ಕಂಟ್ರೋಲ್ ಯೂನಿಟನ್ನು ಮುಚ್ಚತಕ್ಕದ್ದು ಮತ್ತು ಬ್ಯಾಲೆಟ್ ಯೂನಿಟನ್ನು ಕಂಟ್ರೋಲ್ ಯೂನಿಟ್‌ನಿಂದ ಬೇರ್ಪಡಿಸತಕ್ಕದ್ದು.]

**49ಡಬ್ಲ್ಯೂ.ಮುಂದೂಡಿದ ಮತದಾನದ ಬಗ್ಗೆ ಪ್ರಕ್ರಿಯೆ.–**

(1) ಪ್ರಕರಣ 57ರ ಉಪಪ್ರಕರಣ (1)ರ ಅಡಿಯಲ್ಲಿ ಯಾವುದೇ ಮತಗಟ್ಟೆಯಲ್ಲಿ ಮತದಾನ ಮುಂದೂಡಲ್ಪಟ್ಟಿದ್ದರೆ, 49ಎಸ್ ನಿಂದ 49ವಿ ವರೆಗಿನ ನಿಯಮಗಳ ಉಪಬಂಧಗಳು, ಕಾರ್ಯಸಾಧ್ಯವಾದಷ್ಟು ಮಟ್ಟಿಗೆ, ಮತದಾನವನ್ನು ಪ್ರಕರಣ 56ರ ಅಡಿಯಲ್ಲಿ ಆ ಬಗ್ಗೆ ನಿಗದಿಪಡಿಸಿದ ಸಮಯದಲ್ಲಿ ಮುಕ್ತಾಯಗೊಳಿಸಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

(2) ಪ್ರಕರಣ 57 ರ ಉಪ ಪ್ರಕರಣ(2)ರ ಅಡಿಯಲ್ಲಿ ಮತದಾನ ಮುಂದೂಡಿಕೆಗೆ ಶಿಫಾರಸು ಮಾಡಿರುವಾಗ, ಹಾಗೆ ಮುಂದೂಡಲಾದ ಮತದಾನದಲ್ಲಿ ಈಗಾಗಲೇ ಮತ ಚಲಾಯಿಸಿರುವ ಮತದಾರರಿಗೆ ಪುನಃ ಮತ ಚಲಾಯಿಸಲು ಅವಕಾಶ ನೀಡತಕ್ಕದ್ದಲ್ಲ.

(3) ರಿಟರ್ನಿಂಗ್ ಆಫೀಸರ್‌ರವರು ಅಂಥ ಮುಂದೂಡಿಕೆಯ ಮತದಾನ ನಡೆಯುತ್ತಿರುವ ಮತಗಟ್ಟೆಯ ಪ್ರಿಸೈಡಿಂಗ್ ಆಫೀಸರ್ ಅವರಿಗೆ ಮತದಾರರ ಅಧಿಕೃತ ಪಟ್ಟಿಯ ಪ್ರತಿ, ನಮೂನೆ 17ಎ ಯಲ್ಲಿನ ಮತದಾರರ ರಿಜಿಸ್ಟರ್– ಇವುಗಳನ್ನು ಒಳಗೊಂಡಿರುವ ಮೊಹರು ಮಾಡಿರುವ ಪ್ಯಾಕೆಟ್‌ಗಳು ಮತ್ತು ಒಂದು ಹೊಸ ಮತಯಂತ್ರವನ್ನು ಒದಗಿಸತಕ್ಕದ್ದು.

(4) ಪ್ರಿಸೈಡಿಂಗ್ ಆಫೀಸರ್‌ರವರು ಮೊಹರು ಮಾಡಿರುವ ಪ್ಯಾಕೆಟ್ ಅನ್ನು ಹಾಜರಿರುವ ಪೋಲಿಂಗ್ ಏಜೆಂಟರ ಎದುರಿನಲ್ಲಿ ತೆರೆಯತಕ್ಕದ್ದು ಮತ್ತು ಮುಂದೂಡಿದ ಮತದಾನದಲ್ಲಿ ಮತಹಾಕಲು ಅನುಮತಿಸಲಾದ ಮತದಾರರ ಹೆಸರುಗಳನ್ನು ಗುರುತು ಮಾಡಿಕೊಳ್ಳಲು ಮತದಾರರ ಅಧಿಕೃತ ಪಟ್ಟಿಯ ಪ್ರತಿಯನ್ನು ಬಳಸತಕ್ಕದ್ದು.

(5) ನಿಯಮ 23ರ ಮತ್ತು 49ಎ ಯಿಂದ 49ವಿ ವರೆಗಿನ ನಿಯಮಗಳ ಉಪಬಂಧಗಳು, ಒಂದು ಮುಂದೂಡಿದ ಮತದಾನ ನಡೆಸುವುದಕ್ಕೆ ಸಂಬಂಧಿಸಿದಂತೆ ಅದನ್ನು ಹಾಗೆ ಮುಂದೂಡುವುದಕ್ಕೆ ಮೊದಲು ಅದಕ್ಕೆ ಅನ್ವಯಿಸುವಂತೆಯೇ ಅನ್ವಯವಾಗತಕ್ಕದ್ದು.

**66ಎ. ವಿದ್ಯುನ್ಮಾನ ಮತಯಂತ್ರಗಳನ್ನು ಬಳಸಿರುವ ಕಡೆಗಳಲ್ಲಿ ಮತಗಳ ಎಣಿಕೆ.–**

ಮತಯಂತ್ರಗಳನ್ನು ಬಳಸಿದ ಒಂದು ಮತಗಟ್ಟೆಯಲ್ಲಿನ ಮತಗಳ ಎಣಿಕೆಗೆ ಸಂಬಂಧಪಟ್ಟಂತೆ,–

**(i)** 50 ರಿಂದ 54ರವರೆಗಿನ ನಿಯಮಗಳ ಉಪಬಂಧಗಳು ಮತ್ತು ನಿಯಮ 55, 56 ಮತ್ತು 57ರ ಬದಲಾಗಿ ಈ ಮುಂದಿನ ನಿಯಮಗಳು ಅನುಕ್ರಮವಾಗಿ ಅನ್ವಯವಾಗತಕ್ಕದ್ದು, ಎಂದರೆ:–

***55ಸಿ. ಮತಯಂತ್ರಗಳ ಪರಿಶೀಲನೆ ಮತ್ತು ಪರಿವೀಕ್ಷಣೆ:–***

(1) ರಿಟರ್ನಿಂಗ್ ಆಫೀಸರ್‌ರವರು ಒಂದಕ್ಕಿಂತ ಹೆಚ್ಚು ಮತಗಟ್ಟೆಗಳಲ್ಲಿ ಬಳಸಲಾದ ಮತಯಂತ್ರಗಳ ಕಂಟ್ರೋಲ್ ಯೂನಿಟ್‌ಗಳನ್ನು ಪರಿಶೀಲನೆ ಮತ್ತು ಪರಿವೀಕ್ಷಣೆಗಾಗಿ ತೆಗೆದುಕೊಳ್ಳಬಹುದು ಮತ್ತು ಅಂಥ ಯೂನಿಟ್‌ಗಳಲ್ಲಿ ದಾಖಲಾದ ಮತಗಳನ್ನು ಏಕಕಾಲದಲ್ಲಿ ಎಣಿಕೆ ಮಾಡಬಹುದು.

(2) ಮತಯಂತ್ರದ ಯಾವುದೇ ಕಂಟ್ರೋಲ್ ಯೂನಿಟ್‌ನಲ್ಲಿ ದಾಖಲು ಮಾಡಲಾದ ಮತಗಳನ್ನು ಉಪ ನಿಯಮ (1) ರ ಅಡಿಯಲ್ಲಿ ಎಣಿಕೆ ಮಾಡುವುದಕ್ಕೆ ಮೊದಲು ಉಮೇದುವಾರರು ಅಥವಾ ಆತನ ಚುನಾವಣಾ ಏಜೆಂಟ್ ಅಥವಾ ಎಣಿಕೆ ಮೇಜಿನ ಬಳಿ ಹಾಜರಿರುವ ಆತನ ಎಣಿಕೆ ಏಜೆಂಟ್‌ನು ಪೇಪರ್ ಸೀಲನ್ನು ಮತ್ತು ಯೂನಿಟ್‌ನ ಮೇಲೆ ಹಾಕಿರಬಹುದಾದಂಥ ಇತರ ಮುಖ್ಯ ಮೊಹರುಗಳನ್ನು ಪರೀಕ್ಷಿಸಲು ಮತ್ತು ಮೊಹರುಗಳನ್ನು ಯಥಾ ಸ್ಥಿತಿಯಲ್ಲಿವೆ ಎಂಬುದನ್ನು ಮನದಟ್ಟು ಮಾಡಿಕೊಳ್ಳಲು ಅವರಿಗೆ ಅವಕಾಶ ನೀಡತಕ್ಕದ್ದು.

(3) ರಿಟರ್ನಿಂಗ್ ಆಫೀಸರ್ ಅವರು ಯಾವುದೇ ಮತಯಂತ್ರದ ವಿಷಯದಲ್ಲಿ ಹಸ್ತಕ್ಷೇಪ ನಡೆದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

(4) ವಾಸ್ತವವಾಗಿ ಯಾವುದೇ ಮತಯಂತ್ರದ ವಿಷಯದಲ್ಲಿ ಹಸ್ತಕ್ಷೇಪ ನಡೆದಿದೆ ಎಂದು ರಿಟರ್ನಿಂಗ್ ಆಫೀಸರ್ ಅವರಿಗೆ ಮನವರಿಕೆಯಾದರೆ, ಅವರು ಆ ಯಂತ್ರದಲ್ಲಿ ದಾಖಲಾಗಿರುವ ಮತಗಳನ್ನು ಎಣಿಕೆ ಮಾಡತಕ್ಕದ್ದಲ್ಲ ಮತ್ತು ಆ ಯಂತ್ರಗಳನ್ನು ಬಳಸಲಾದ ಮತಗಟ್ಟೆಗಳ ಸಂಬಂಧದಲ್ಲಿ ಅನ್ವಯವಾಗುವಂತೆ ಪ್ರಕರಣ 58 ಅಥವಾ 58ಎ ಅಥವಾ ಪ್ರಕರಣ 64ಎ ಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.

*56ಸಿ. ಮತಗಳ ಎಣಿಕೆ.–*

(1) ರಿಟರ್ನಿಂಗ್ ಆಫೀಸರ್ ಅವರು, ಒಂದು ಮತಯಂತ್ರವನ್ನು ವಾಸ್ತವವಾಗಿ ಹಾಳುಗೆಡವಿಲ್ಲ ಎಂದು ಮನದಟ್ಟು ಮಾಡಿಕೊಂಡ ಮೇಲೆ, ಅವರು ಅದರಲ್ಲಿ ದಾಖಲು ಮಾಡಲಾಗಿರುವ ಮತಗಳನ್ನು ಕಂಟ್ರೋಲ್ ಯೂನಿಟ್‌ನಲ್ಲಿ ಒದಗಿಸಲಾಗಿರುವ 'ರಿಸಲ್ಟ್' ಎಂದು ಗುರುತುಮಾಡಿರುವಸೂಕಬಟನನ್ನು ಒತ್ತುವ ಮೂಲಕ ಎಣಿಸುವಂತೆ ಮಾಡತಕ್ಕದ್ದು. ಆ ಮುಖೇನ ಹಾಕಿರುವ ಒಟ್ಟು ಮತಗಳು ಮತ್ತು ಪ್ರತಿಯೊಬ್ಬ ಉಮೇದುವಾರರು ಪಡೆದಿರುವ ಮತಗಳನ್ನು ಪ್ರದರ್ಶಿಸಲು ಯೂನಿಟ್‌ನಲ್ಲಿ ಒದಗಿಸಿರುವ ಡಿಸ್‌ಪ್ಲೇ ಪ್ಯಾನೆಲ್ ಮೇಲೆ ಅಂಥ ಪ್ರತಿಯೊಬ್ಬ ಉಮೇದುವಾರರ ಸಂಬಂಧದಲ್ಲಿ ಪ್ರದರ್ಶಿಸತಕ್ಕದ್ದು.

(2) ಕಂಟ್ರೋಲ್ ಯೂನಿಟಿನ ಮೇಲೆ ಪ್ರತಿಯೊಬ್ಬ ಉಮೇದುವಾರರು ಗಳಿಸಿರುವ ಮತಗಳನ್ನು ಪ್ರದರ್ಶಿಸುತ್ತಿದ್ದಂತೆಯೇ ರಿಟರ್ನಿಂಗ್ ಆಫೀಸರ್ ಅವರು,–

(ಎ) ಪ್ರತಿಯೊಬ್ಬ ಉಮೇದುವಾರರ ಸಂಬಂಧದಲ್ಲಿ, ದಾಖಲಾಗಿರುವಂಥ ಮತಗಳ ಸಂಖ್ಯೆಯನ್ನು ನಮೂನೆ 17ಸಿ ಯ ಭಾಗ ಖಖರಲ್ಲಿ ಪ್ರತ್ಯೇಕವಾಗಿ ದಾಖಲು ಮಾಡುವಂತೆ;

**ಪರಂತು, 17ಸಿ ನಮೂನೆಯ 5ನೇ ಬಾಬ್ತಿನ ಪ್ರಕಾರ, ಒಬ್ಬ ಉಮೇದುವಾರನಿಗೆ ದಾಖಲು ಮಾಡಿರುವ ಪರೀಕ್ಷಾರ್ಥ ಮತ ಯಾವುದಾದರೂ ಇದ್ದರೆ, ಅದನ್ನು, ಕಂಟ್ರೋಲ್ ಯೂನಿಟ್‌ನ ಮೇಲೆ ಪ್ರದರ್ಶಿತವಾಗುತ್ತಿರುವಂತೆ ಅಂಥ ಅಭ್ಯರ್ಥಿಗೆ ದಾಖಲಾಗಿರುವ ಮತಗಳ ಸಂಖ್ಯೆಯಿಂದ ಕಳೆಯತಕ್ಕದ್ದು;**

(ಬಿ) ಇತರ ರೀತಿಗಳಲ್ಲಿ ನಮೂನೆ–17ಸಿಯ ಭಾಗ ಖಖನ್ನು ಪೂರ್ಣಗೊಳಿಸುವಂತೆ ಮತ್ತು ಎಣಿಕೆ ಮೇಲ್ವಿಚಾರಕರು ಹಾಗೂ ಉಮೇದುವಾರರು ಅಥವಾ ಅವರ ಚುನಾವಣಾ ಏಜೆಂಟರು ಅಥವಾ ಹಾಜರಿರುವ ಅವರ ಎಣಿಕೆ ಏಜೆಂಟರು ಸಹಿ ಹಾಕುವಂತೆ; ಮತ್ತು

(ಸಿ) ನಮೂನೆ 20ರಲ್ಲಿನ ಫಲಿತಾಂಶ ಹಾಳೆಯಲ್ಲಿ ಸಂವಾದಿ ನಮೂದುಗಳನ್ನು ಮಾಡುವಂತೆ ಮತ್ತು ಹಾಗೆ ಫಲಿತಾಂಶದ ಹಾಳೆಯಲ್ಲಿ ನಮೂದಿಸಿದ ವಿವರಗಳನ್ನು ಪ್ರಕಟಿಸುವಂತೆ ಮಾಡತಕ್ಕದ್ದು.

***"56ಡಿ. ಕಾಗದದ ತಾಳೆದರ್ಶಕಪರಿಶೀಲನೆ:–***

**(1) ಕಾಗದದ ತಾಳೆದರ್ಶಕ ಪ್ರಿಂಟರನ್ನು ಬಳಸಿದ್ದರೆ, ಫಲಿತಾಂಶದ ಹಾಳೆಯಲ್ಲಿ ಮಾಡಲಾದ ನಮೂದು ವಿವರಗಳನ್ನು ಘೋಷಿಸಿದ ನಂತರ, ಯಾರೇ ಅಭ್ಯರ್ಥಿಯು, ಅಥವಾ ಆತನ ಅನುಪಸ್ಥಿತಿಯಲ್ಲಿ, ಆತನ ಚುನಾವಣಾ ಏಜೆಂಟನು ಅಥವಾ ಆತನ ಯಾರೇ ಎಣಿಕೆ ಏಜೆಂಟರು ಯಾವುದೇ ಮತಗಟ್ಟೆಗೆ ಅಥವಾ ಮತಗಟ್ಟೆಗಳಿಗೆ ಸಂಬಂಧಪಟ್ಟಂತೆ, ಪ್ರಿಂಟರ್‌ನ ಡ್ರಾಪ್ ಬಾಕ್ಸ್‌ನಲ್ಲಿರುವ ಮುದ್ರಿತ ಕಾಗದದ ಚೀಟಿಗಳನ್ನು ಎಣಿಸಲು ರಿಟರ್ನಿಂಗ್ ಆಫೀಸರಿಗೆ ಲಿಖಿತದಲ್ಲಿ ಕೋರಬಹುದು.**

**(2) ಅಂಥ ಮನವಿ ಸಲ್ಲಿಸಿದ ಮೇಲೆ, ರಿಟರ್ನಿಂಗ್ ಆಫೀಸರ್‌ರವರು, ಚುನಾವಣಾ ಆಯೋಗವು ಹೊರಡಿಸಬಹುದಾದಂಥ ಸಾಮಾನ್ಯ ಅಥವಾ ವಿಶೇಷ ಮಾರ್ಗಸೂಚಿಗಳಿಗೆ ಒಳಪಟ್ಟು, ಆ ವಿಷಯವನ್ನು ತೀರ್ಮಾನಿಸತಕ್ಕದ್ದು ಹಾಗೂ ಅರ್ಜಿಯನ್ನು ಪೂರ್ಣವಾಗಿ ಅಥವಾ ಭಾಗಶಃ ಪುರಸ್ಕರಿಸಬಹುದು ಅಥವಾ ಅದು ಅವರಿಗೆ ಕ್ಷುಲ್ಲಕ ಅಥವಾ ಅನುಚಿತ ಎಂದು ಕಂಡುಬಂದಲ್ಲಿ, ಪೂರ್ಣವಾಗಿ ಅದನ್ನು ತಿರಸ್ಕರಿಸಬಹುದು.**

**(3) ಉಪ–ನಿಯಮ(2)ರ ಅಡಿಯಲ್ಲಿ ರಿಟರ್ನಿಂಗ್ ಆಫೀಸರವರು ಕೈಗೊಂಡ ಪ್ರತಿಯೊಂದು ತೀರ್ಮಾನವು ಲಿಖಿತ ರೂಪದಲ್ಲಿ ಇರತಕ್ಕದ್ದು ಹಾಗೂ ಅದರ ಕಾರಣಗಳನ್ನು ಒಳಗೊಂಡಿರತಕ್ಕದ್ದು.**

**(4) ರಿಟರ್ನಿಂಗ್ ಆಫೀಸರವರು ಉಪನಿಯಮ (2)ರ ಮೇರೆಗೆ ಕಾಗದ ಚೀಟಿಗಳನ್ನು ಪೂರ್ಣವಾಗಿ ಅಥವಾ ಭಾಗದಲ್ಲಿ ಅಥವಾ ಭಾಗಗಳಲ್ಲಿ, ಎಣಿಕೆ ಮಾಡುವುದಕ್ಕೆ ಅನುಮತಿಸಲು ತೀರ್ಮಾನಿಸಿದರೆ, ಅವರು–**

**(ಎ) ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಎಣಿಕೆ ಮಾಡತಕ್ಕದ್ದು;**

**(ಬಿ) ಕಂಟ್ರೋಲ್ ಯೂನಿಟ್‌ನಲ್ಲಿ ಪ್ರದರ್ಶಿತವಾದ ಮತಗಳು ಹಾಗೂ ಕಾಗದ ಚೀಟಿಗಳ ಎಣಿಕೆ ಇವುಗಳ ನಡುವೆ ವ್ಯತ್ಯಾಸವಿದ್ದಲ್ಲಿ, ಕಾಗದ ಚೀಟಿಗಳ ಎಣಿಕೆ ಅನುಸಾರ ನಮೂನೆ 20ರಲ್ಲಿನ ಫಲಿತಾಂಶ ಹಾಳೆಯಲ್ಲಿ ತಿದ್ದುಪಡಿ ಮಾಡತಕ್ಕದ್ದು;**

**(ಸಿ) ಅವರು ಹಾಗೆ ಮಾಡಿದ ತಿದ್ದುಪಡಿಗಳನ್ನು ಘೋಷಿಸತಕ್ಕದ್ದು; ಮತ್ತು**

**(ಡಿ) ಫಲಿತಾಂಶ ಹಾಳೆಯನ್ನು ಪೂರ್ಣಗೊಳಿಸತಕ್ಕದ್ದು ಮತ್ತು ಅದಕ್ಕೆ ಸಹಿ ಮಾಡತಕ್ಕದ್ದು"**

*57ಸಿ. ಮತಯಂತ್ರಗಳನ್ನು ಮೊಹರು ಮಾಡುವುದು:–*

(1) ಕಂಟ್ರೋಲ್ ಯೂನಿಟ್‌ನಲ್ಲಿ ದಾಖಲಾದ ಮತದಾನದ ಫಲಿತಾಂಶವನ್ನು ಅಭ್ಯರ್ಥಿವಾರು ಖಾತರಿಪಡಿಸಿಕೊಂಡ ಮೇಲೆ ಮತ್ತು ನಿಯಮ ನಮೂನೆ 17ಸಿಯ ಭಾಗ ಖಖರಲ್ಲಿ ಮತ್ತು 56ಸಿ ಅಡಿ ನಮೂನೆ 20ರಲ್ಲಿ ನಮೂದಿಸಿದ

ಮೇಲೆ, ರಿಟರ್ನಿಂಗ್ ಆಫೀಸರ್‌ರವರು ಆ ಯೂನಿಟನ್ನು ತಮ್ಮ ಮೊಹರಿನಿಂದ ಮತ್ತು ಉಮೇದುವಾರರ ಅಥವಾ ಅಲ್ಲಿ ಹಾಜರಿರುವ, ತಮ್ಮ ಮೊಹರುಗಳನ್ನು ಹಾಕಲು ಇಚ್ಛಿಸುವ ಅವರ ಚುನಾವಣಾ ಏಜೆಂಟ್‌ಗಳ ಮೊಹರಿನಿಂದ, ಯೂನಿಟಿನಲ್ಲಿ ದಾಖಲಾಗಿರುವ ಮತದಾನ ಫಲಿತಾಂಶವನ್ನು ಅಳಿಸಲಾಗದಂತೆ ಮಾಡಲು ಮತ್ತು ಯೂನಿಟ್ಟು ಅಂಥ ಫಲಿತಾಂಶವನ್ನು ನೆನಪಿನಲ್ಲಿ ಇಟ್ಟುಕೊಳ್ಳುವಂತೆ ಮಾಡುವ ಸಲುವಾಗಿ ಯೂನಿಟನ್ನು ಮರು ಮೊಹರು ಮಾಡತಕ್ಕದ್ದು ಹಾಗೂ ಕಾಗದದ ತಾಳೆದರ್ಶಕ ಪ್ರಿಂಟರನ್ನು ಬಳಸಿರುವಲ್ಲಿ, ಚುನಾವಣಾ ಆಯೋಗವು ನಿರ್ದೇಶಿಸಬಹುದಾದ ರೀತಿಯಲ್ಲಿ ರಿಟರ್ನಿಂಗ್ ಆಫೀಸರ್ ಅವರು ಕಾಗದ ಚೀಟಿಗಳನ್ನು ಮೊಹರು ಮಾಡಬೇಕು.

(2) ಹಾಗೆ ಮೊಹರು ಮಾಡಿದ ಕಂಟ್ರೋಲ್ ಯೂನಿಟನ್ನು ವಿಶೇಷವಾಗಿ ಸಿದ್ಧಪಡಿಸಿದ ಪೆಟ್ಟಿಗೆಗಳಲ್ಲಿ ಇಡತಕ್ಕದ್ದು. ಅದರ ಮೇಲೆ ರಿಟರ್ನಿಂಗ್ ಆಫೀಸರ್ ಅವರು ಈ ಮುಂದಿನ ವಿವರಗಳನ್ನು ದಾಖಲು ಮಾಡತಕ್ಕದ್ದು, ಎಂದರೆ:–

(ಎ) ಚುನಾವಣಾ ಕ್ಷೇತ್ರದ ಹೆಸರು;

(ಬಿ) ಕಂಟ್ರೋಲ್ ಯೂನಿಟ್‌ಅನ್ನು ಬಳಸಿದ ಮತಗಟ್ಟೆ/ ಮತಗಟ್ಟೆಗಳ ವಿವರಗಳು;

(ಸಿ) ಕಂಟ್ರೋಲ್ ಯೂನಿಟ್‌ನ ಮತ್ತು ಪ್ರಿಂಟರುಗಳನ್ನು ಬಳಸಿರುವೆಡೆಗಳಲ್ಲಿ ಅವುಗಳ ಕ್ರಮ ಸಂಖ್ಯೆ;

(ಡಿ) ಮತದಾನದ ದಿನಾಂಕ; ಮತ್ತು

(ಇ) ಮತ ಎಣಿಕೆ ದಿನಾಂಕ.':

**(ii)** 60 ರಿಂದ 66ರವರೆಗಿನ ನಿಯಮಗಳ ಉಪಬಂಧಗಳು ಸಾಧ್ಯವಾದಷ್ಟು ಮಟ್ಟಿಗೆ ಮತಯಂತ್ರಗಳಿಂದ ಮಾಡಿದ ಮತದಾನದ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು ಮತ್ತು ಆ ನಿಯಮಗಳಲ್ಲಿ,–

(ಎ) ಮತಪತ್ರವನ್ನು ಅಂಥ ಮತಯಂತ್ರಕ್ಕೆ ಮಾಡಲಾದ ಉಲ್ಲೇಖವನ್ನು ಒಳಗೊಂಡಿರುವಂತೆ ಅರ್ಥೈಸತಕ್ಕದ್ದು.

(ಬಿ) ಯಾವುದೇ ನಿಯಮವನ್ನು ಭಾಗ ಖಗಿರ ಅಧ್ಯಾಯ ಖಖರಲ್ಲಿನ ಸಂವಾದಿ ನಿಯಮಕ್ಕೆ ಅಥವಾ ಸಂದರ್ಭಾನುಸಾರ, ನಿಯಮ 55ಸಿ ಅಥವಾ 56ಸಿ ಅಥವಾ 57ಸಿಗೆ ಮಾಡಲಾದ ಉಲ್ಲೇಖವೆಂಬಂತೆ ಅರ್ಥೈಸತಕ್ಕದ್ದು.]

**92. ಚುನಾವಣೆಗೆ ಸಂಬಂಧಪಟ್ಟ ಮತ ಪೆಟ್ಟಿಗೆಗಳು ಹಾಗೂ ಕಾಗದಪತ್ರಗಳ ಅಭಿರಕ್ಷೆ,–**

(1ಎ) ಚುನಾವಣೆಯಲ್ಲಿ ಬಳಸಿದ ಎಲ್ಲ ಮತಯಂತ್ರಗಳನ್ನು ಸಂಬಂಧಪಟ್ಟ ಜಿಲ್ಲಾ ಚುನಾವಣಾಧಿಕಾರಿಯ ಅಭಿರಕ್ಷೆಯಲ್ಲಿ ಇಡತಕ್ಕದ್ದು.

(2) ಜಿಲ್ಲಾ ಚುನಾವಣಾಧಿಕಾರಿಯು ಈ ಮುಂದಿನವುಗಳನ್ನು ಸುರಕ್ಷಿತ ಅಭಿರಕ್ಷೆಯಲ್ಲಿ ಇಟ್ಟುಕೊಳ್ಳತಕ್ಕದ್ದು.

(ಸಿಸಿ) 57ಸಿ ನಿಯಮದ ಉಪಬಂಧಗಳ ಅಡಿಯಲ್ಲಿ ಮೊಹರು ಮಾಡಲಾದ ಮುದ್ರಿತ ಕಾಗದ ಚೀಟಿಗಳು.

(ಡಿಡಿ) ನಮೂನೆ 17ಎನಲ್ಲಿ ಮತದಾರರ ರಿಜಿಸ್ಟರುಗಳನ್ನು ಒಳಗೊಂಡಿರುವ ಪ್ಯಾಕೆಟ್‌ಗಳು.

**[93. ಚುನಾವಣಾ ಕಾಗದಪತ್ರಗಳ ಹಾಜರುಪಡಿಸುವಿಕೆ ಹಾಗೂ ತಪಾಸಣೆ.–**

(1) ಜಿಲ್ಲಾ ಚುನಾವಣಾಧಿಕಾರಿಯ ಅಥವಾ ಸಂದರ್ಭಾನುಸಾರ, ರಿಟರ್ನಿಂಗ್ ಆಫೀಸರರ ಅಭಿರಕ್ಷೆಯಲ್ಲಿರುವಾಗ–

(ಎ) ಕೌಂಟರ್ ಫಾಯಿಲ್ ಸಹಿತವಾಗಿರುವ ಬಳಕೆಯಾಗದ ಮತಪತ್ರಗಳಿರುವ ಪ್ಯಾಕೆಟ್‌ಗಳು;

(ಬಿ) ಸಿಂಧುತವಾದ, ನೀಡಲಾದ (ಣಜಟಿಜಟಿಜಜ) ಅಥವಾ ತಿರಸ್ಕೃತವಾಗಿರುವಂಥ ಬಳಸಿದ ಮತಪತ್ರಗಳ ಪ್ಯಾಕೆಟ್‌ಗಳು;

(ಸಿ) ಬಳಸಿದ ಮತಪತ್ರಗಳ ಕೌಂಟರ್ ಫಾಯಿಲ್‌ಗಳ ಪ್ಯಾಕೆಟ್‌ಗಳು;

**(ಸಿಸಿ) 57ಸಿ ನಿಯಮದಉಪಬಂಧಗಳ ಅಡಿ ಮೊಹರು ಮಾಡಿದ ಮುದ್ರಿತ ಕಾಗದಗಳ ಚೀಟಿಗಳು;**

(ಡಿ) ಮತದಾರರ ಪಟ್ಟಿಯ ಗುರುತು ಮಾಡಲಾದ ಪ್ರತಿಯ ಅಥವಾ ಸಂದರ್ಭಾನುಸಾರ ಪ್ರಕರಣ 152ರ ಉಪ–ನಿಯಮ(1) ಅಥವಾ ಉಪ–ನಿಯಮ(2)ರ ಅಡಿಯಲ್ಲಿ ನಿರ್ವಹಣೆ ಮಾಡಲಾದ ಪಟ್ಟಿಯ ಪ್ಯಾಕೆಟ್‌ಗಳು; ಹಾಗೂ

[(ಡಿಡಿ) ನಮೂನೆ 17–ಎ ರಲ್ಲಿನ ಮತದಾರರ ರಿಜಿಸ್ಟರುಗಳನ್ನು ಒಳಗೊಂಡ ಪ್ಯಾಕೆಟ್‌ಗಳು;]

(ಇ) ಮತದಾರರ ಘೋಷಣಾ ಪತ್ರಗಳನ್ನು ಮತ್ತು ಅವರ ಸಹಿಗಳ ದೃಢೀಕರಣವನ್ನು ಒಳಗೊಂಡ ಪ್ಯಾಕೆಟ್‌ಗಳನ್ನು; ತೆರೆಯತಕ್ಕದ್ದಲ್ಲ ಹಾಗೂ ಅವುಗಳ ಒಳಾಂಶಗಳನ್ನು ಪರಿಶೀಲಿಸತಕ್ಕದ್ದಲ್ಲ, ಅಥವಾ ಸಕ್ಷಮ ನ್ಯಾಯಾಲಯವೊಂದರ ಆದೇಶದ ಮೇರೆಗೆ ಹೊರತು ಯಾವುದೇ ವ್ಯಕ್ತಿ ಅಥವಾ ಪ್ರಾಧಿಕಾರ ಅದನ್ನು ತಪಾಸಣೆ ಮಾಡತಕ್ಕದ್ದಲ್ಲ ಅಥವಾ ಅದರ/ಅವರ ಮುಂದೆ ಅದನ್ನು ಹಾಜರುಪಡಿಸತಕ್ಕದ್ದಲ್ಲ.

[1ಎ)ನಿಯಮ 57ಸಿ ಉಪಬಂಧಗಳ ಅಡಿ ಮೊಹರು ಮಾಡಲಾದ ಹಾಗೂ ಜಿಲ್ಲಾ ಚುನಾವಣಾ ಅಧಿಕಾರಿಯ ಕಸ್ಟಡಿಯಲ್ಲಿ ಇರಿಸಿದ ಕಂಟ್ರೋಲ್ ಯೂನಿಟ್‌ಗಳನ್ನು ತೆರೆಯಬಾರದು ಹಾಗೂ ಸಕ್ಷಮ ನ್ಯಾಯಾಲಯವೊಂದರ ಆದೇಶದ ಮೇರೆಗೆ ಹೊರತು, ಯಾವುದೇ ವ್ಯಕ್ತಿ ಅಥವಾ ಪ್ರಾಧಿಕಾರವು ಅದನ್ನು ತಪಾಸಣೆ ಮಾಡತಕ್ಕದ್ದಲ್ಲ ಅಥವಾ ಅದರ ಮುಂದೆ ಅದನ್ನು ಹಾಜರುಪಡಿಸತಕ್ಕದ್ದಲ್ಲ.]

(2) ಇಂಥ ಷರತ್ತುಗಳಿಗೆ ಹಾಗೂ ಚುನಾವಣಾ ಆಯೋಗವು ನಿರ್ದೇಶನ ನೀಡಬಹುದಾದಷ್ಟು ಶುಲ್ಕ ಪಾವತಿಗೆ ಒಳಪಟ್ಟು,–

(ಎ) ಚುನಾವಣೆಗೆ ಸಂಬಂಧಪಟ್ಟ ಇತರ ಎಲ್ಲ ಕಾಗದಪತ್ರಗಳನ್ನು ಸಾರ್ವಜನಿಕ ಪರಿಶೀಲನೆಗೆ ಮುಕ್ತವಾಗಿರಿಸಬೇಕು; ಹಾಗೂ

(ಬಿ) ಅರ್ಜಿ ಸಲ್ಲಿಸಿದ ಮೇರೆಗೆ ಅವುಗಳ ಪ್ರತಿಗಳನ್ನು ಒದಗಿಸಬೇಕು.

(3) ನಿಯಮ 64ರ ಅಡಿಯಲ್ಲಿ, ಅಥವಾ ಸಂದರ್ಭಾನುಸಾರ, ನಿಯಮ 84ರ ಉಪ–ನಿಯಮ(1)ರ ಖಂಡ(ಬಿ) ಅಡಿಯಲ್ಲಿ ರಿಟರ್ನಿಂಗ್ ಆಫೀಸರರು ಕಳುಹಿಸಿದ ವಿವರಪತ್ರದ ಪ್ರತಿಗಳನ್ನು, ತಲಾ ಒಂದು ಪ್ರತಿಗೆ ಎರಡು ರೂಪಾಯಿಗಳ ಶುಲ್ಕ ಪಾವತಿಯ ಮೇರೆಗೆ, ರಿಟರ್ನಿಂಗ್ ಆಫೀಸರ್, ಜಿಲ್ಲಾ ಚುನಾವಣಾಧಿಕಾರಿ, ಮುಖ್ಯ ಚುನಾವಣಾಧಿಕಾರಿ ಅಥವಾ ಚುನಾವಣಾ ಆಯೋಗವು ಒದಗಿಸಬೇಕು.]

**94. ಚುನಾವಣಾ ಕಾಗದಪತ್ರಗಳ ವಿಲೇವಾರಿ,–**

ಚುನಾವಣಾ ಆಯೋಗವು ಅಥವಾ ಸಕ್ಷಮ ನ್ಯಾಯಾಲಯವು ಅಥವಾ ನ್ಯಾಯಾಧಿಕರಣವು ನೀಡಿದ ಯಾವುದೇ ವ್ಯತಿರಿಕ್ತ ನಿರ್ದೇಶನಕ್ಕೆ ಒಳಪಟ್ಟು–

[(ಎ) ಬಳಕೆಯಾಗದ ಮತಪತ್ರಗಳ ಪ್ಯಾಕೆಟ್‌ಗಳನ್ನು ಆರು ತಿಂಗಳುಗಳ ಅವಧಿಯವರೆಗೆ

ಉಳಿಸಿಕೊಳ್ಳಬೇಕು ಹಾಗೂ ಆನಂತರ ಚುನಾವಣಾ ಆಯೋಗವು ನಿರ್ದೇಶಿಸಬಹುದಾದ ರೀತಿಯಲ್ಲಿ ನಾಶಪಡಿಸತಕ್ಕದ್ದು;]

[(ಎಎ) ನಿಯಮ 92ರ ಉಪ–ನಿಯಮ(1ಎ) ಅಡಿಯಲ್ಲಿ ಜಿಲ್ಲಾ ಚುನಾವಣಾಧಿಕಾರಿಯ

ಅಭಿರಕ್ಷೆಯಲ್ಲಿ ಇರಿಸಲಾದ ಮತಯಂತ್ರಗಳನ್ನು ಚುನಾವಣಾ ಆಯೋಗವು ನಿರ್ದೇಶಿಸಬಹುದಾದ ಅವಧಿಯವರೆಗೆ ಮುಟ್ಟದೇ ಹಾಗೆ ಇರಿಸಿಕೊಳ್ಳಬೇಕು ಹಾಗೂ ಚುನಾವಣಾ ಆಯೋಗದ ಪೂರ್ವ ಅನುಮತಿ ಇಲ್ಲದೇ ನಂತರದ ಯಾವುದೇ ಚುನಾವಣೆಯಲ್ಲಿ ಅವುಗಳನ್ನು ಬಳಸತಕ್ಕದ್ದಲ್ಲ;]

(ಬಿ) ನಿಯಮ 93ರ ಉಪ ನಿಯಮ (1)ರಲ್ಲಿ ಉಲ್ಲೇಖಿಸಲಾದ ಇತರ ಪ್ಯಾಕೆಟ್‌ಗಳನ್ನು

ಒಂದು ವರ್ಷದ ಅವಧಿಯವರೆಗೆ ಉಳಿಸಿಕೊಳ್ಳಬೇಕು ಹಾಗೂ ಆನಂತರ ಅವುಗಳನ್ನು ನಾಶಪಡಿಸತಕ್ಕದ್ದು;

[ಪರಂತು, ಬಳಸಲಾದ ಮತಪತ್ರಗಳ ಕೌಂಟರ್ ಫಾಯಿಲ್‌ಗಳು ಹಾಗೂ ಪ್ರಿಂಟರ್ ಕಾಗದ ಚೀಟಿಗಳು ಯಾವುದಾದರೂ ಇದ್ದಲ್ಲಿ, ಅವುಗಳನ್ನು ಒಳಗೊಂಡ ಪ್ಯಾಕೆಟ್‌ಗಳನ್ನು, ಚುನಾವಣಾ ಆಯೋಗದ ಪೂರ್ವ ಅನುಮತಿ ಇಲ್ಲದೇ ನಾಶಪಡಿಸತಕ್ಕದ್ದಲ್ಲ];

(ಸಿ) ಚುನಾವಣೆಗೆ ಸಂಬಂಧಪಟ್ಟ ಎಲ್ಲ ಇತರ ಕಾಗದಪತ್ರಗಳನ್ನು ಚುನಾವಣಾ ಆಯೋಗವು

ನಿರ್ದೇಶಿಸಬಹುದಾದಂಥ ಅವಧಿಯವರೆಗೆ ಉಳಿಸಿಕೊಳ್ಳಬೇಕು.

**95. ನಿರ್ದೇಶನಗಳನ್ನು ನೀಡಲು ಚುನಾವಣಾ ಆಯೋಗದ ಅಧಿಕಾರ–**

ಈ ನಿಯಮಗಳ ಇತರ ಉಪಬಂಧಗಳಿಗೆ ಒಳಪಟ್ಟು, ಚುನಾವಣಾ ಆಯೋಗವು, ಮತ ಯಂತ್ರಗಳ ಸಮರ್ಪಕ ಬಳಕೆ ಮತ್ತು ಕಾರ್ಯನಿರ್ವಹಣೆಗೆ ಅನುವು ಮಾಡಿಕೊಡಲು, ಅದು ಅಗತ್ಯವೆಂದು ಪರಿಗಣಿಸಬಹುದಾದಂಥ ನಿರ್ದೇಶನಗಳನ್ನು ನೀಡಬಹುದು.

**[ವಿವಿಪಿಪ್ಯಾಟ್ ವ್ಯವಸ್ಥೆಯ ಬಳಕೆಗೆ ಸಂಬಂಧಪಟ್ಟ ಉಪಬಂಧಗಳಿಗಾಗಿ ದಯವಿಟ್ಟು ಅಧ್ಯಾಯ 22ರಲ್ಲಿ ಮರುದಾಖಲಿಸಲಾದ ಚುನಾವಣೆಗಳನ್ನು ನಡೆಸುವ (ತಿದ್ದುಪಡಿ) ನಿಯಮಗಳು, 2013ನ್ನು ನೋಡಿ]**

# ಅಧ್ಯಾಯ–19

## ಇವಿಎಂ ನಿರ್ವಹಣಾ ವ್ಯವಸ್ಥೆ (ಇಎಂಎಸ್)

ಇವಿಎಂ ನಿರ್ವಹಣಾ ವ್ಯವಸ್ಥೆ (ಇಎಂಎಸ್) ಎಂಬುದು ಭಾರತದ ಎಲ್ಲಾ 36 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಇವಿಎಂ ಯಂತ್ರಗಳ ಕೇಂದ್ರೀಕೃತ ದತ್ತಕಣಜವನ್ನು (ಆಚಿಣಚಿಛಿಚಿಜ) ನಿರ್ವಹಿಸುವುದಕ್ಕಾಗಿ ಭಾರತ ಚುನಾವಣಾ ಆಯೋಗವು ಅಭಿವೃದ್ಧಿಪಡಿಸಿರುವ ಒಂದು ಅಪ್ಲಿಕೇಷನ್ ಆಗಿದೆ.ಇದು ಕಂಟ್ರೋಲ್ ಯೂನಿಟ್‌ಗಳು, ಬ್ಯಾಲೆಟಿಂಗ್ ಯೂನಿಟ್‌ಗಳು ಮತ್ತು ವಿವಿಪ್ಯಾಟ್‌ಗಳನ್ನು ಅವುಗಳ ಸ್ಥಳಗಳೊಂದಿಗೆ ಜಾಡುಪತ್ತೆ ಮಾಡುವುದಕ್ಕೆ ಅವಕಾಶ ಕಲ್ಪಿಸುತ್ತದೆ.ಇದು ವೆಬ್ ಆಧಾರಿತ ಮಾಡ್ಯೂಲ್ ಅನ್ನು ಮತ್ತು ಆ್ಯಂಡ್ರಾಯ್ಡ್ ಆಧಾರಿತ ಮೊಬೈಲ್ ಅಪ್ಲಿಕೇಷನ್ ಅನ್ನು ಒಳಗೊಳ್ಳುತ್ತದೆ. ಭಾರತ ಚುನಾವಣಾ ಆಯೋಗದ ಎಲ್ಲಾ ಅಧಿಕಾರಿಗಳು, ತಯಾರಕರು, ಮುಖ್ಯ ಚುನಾವಣಾಧಿಕಾರಿ, ಜಿಲ್ಲಾ ಚುನಾವಣಾಧಿಕಾರಿ, ಸಂಗ್ರಹಾಗಾರದ ಮೇಲ್ವಿಚಾರಕರು, ವಿಧಾನಸಭಾ ಕ್ಷೇತ್ರ (ಎಸಿ) ಮತ್ತು ಲೋಕಸಭಾ ಕ್ಷೇತ್ರ (ಪಿಸಿ)ದ ಬಳಕೆದಾರರು ಈ ಅಪ್ಲಿಕೇಷನ್‌ನ ಹಿತಾಸಕ್ತಿದಾರರಾಗಿರುತ್ತಾರೆ. ಯಂತ್ರಗಳ ಸಾಗಣೆ ಸಂದರ್ಭದಲ್ಲಿ ಅವನ್ನು ಸ್ಕ್ಯಾನ್ ಮಾಡುವುದಕ್ಕೆಂದೇ ತಾತ್ಕಾಲಿಕ ಬಳಕೆದಾರರಿಗಾಗಿ ಈ ಮೊಬೈಲ್ ಅಪ್ಲಿಕೇಷನ್ ಇದೆ. ಹೊಸ ದಾಸ್ತಾನು (ಓಜತಿ ಖಣಠಛಿಞ) ನಮೂದನ್ನು ತಯಾರಕರ ಮಟ್ಟದಲ್ಲಿ ಮಾಡಲಾಗುತ್ತದೆ. ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳು ಯಾವುದೇ ದಾಸ್ತಾನನ್ನು ನಮೂದಿಸುವುದಿಲ್ಲ. ಇವಿಎಂ/ ವಿವಿಪ್ಯಾಟ್‌ಗಳಿಗೆ ಸಂಬಂಧಪಟ್ಟ ಪ್ರಮುಖ ಕಾರ್ಯಾಚರಣೆಗಳನ್ನು ವೆಬ್ ಆಧಾರಿತ ಅಪ್ಲಿಕೇಷನ್ ಹೊಂದಿರುತ್ತದೆ. ಇಎಂಎಸ್ ಅಪ್ಲಿಕೇಷನ್ 6 ಬಳಕೆದಾರ ಮಾಡ್ಯೂಲ್‌ಗಳನ್ನು ಹೊಂದಿದೆ, ಎಂದರೆ, (ಭಾರತ ಚುನಾವಣಾ ಆಯೋಗದ ಅಡ್ಮಿನ್, ತಯಾರಕರು, ಮುಖ್ಯ ಚುನಾವಣಾಧಿಕಾರಿ/ ಮುಖ್ಯ ಚುನಾವಣಾಧಿಕಾರಿ ಕಚೇರಿ, ಜಿಲ್ಲಾ ಚುನಾವಣಾಧಿಕಾರಿ/ ಉಪ–ಜಿಲ್ಲಾ ಚುನಾವಣಾಧಿಕಾರಿ, ಸಂಗ್ರಹಾಗಾರದ ಮೇಲ್ವಿಚಾರಕರು (ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳು ಮತ್ತು ತಯಾರಕರು ಸೇರಿ) ಮತ್ತು ತಾತ್ಕಾಲಿಕ ಬಳಕೆದಾರರು (ಮೊಬೈಲ್ ಆ್ಯಪ್ ಬಳಕೆದಾರ – ಭಾರತ ಚುನಾವಣಾ ಆಯೋಗದ ಬಳಕೆದಾರ ಮತ್ತು ತಯಾರಕರ ಬಳಕೆದಾರ ಸೇರಿ).

ಇಎಂಎಸ್ ಅಪ್ಲಿಕೇಷನ್‌ನಲ್ಲಿ ಒಬ್ಬ ಬಳಕೆದಾರನಿಗೆ ಒಂದು ಇ–ಮೇಲ್ ವಿಳಾಸ ಮತ್ತು ಒಂದು ಮೊಬೈಲ್ ಸಂಖ್ಯೆಯನ್ನು ಮಾತ್ರ ಬಳಸಲಾಗುತ್ತದೆ.ರಾಜ್ಯಗಳ ಮುಖ್ಯ ಚುನಾವಣಾಧಿಕಾರಿಗೆ ಸಂಬಂಧಪಟ್ಟ ಬಳಕೆದಾರನನ್ನು ಭಾರತ ಚುನಾವಣಾ ಆಯೋಗದ ಅಡ್ಮಿನ್ ಅವರು ಸೃಜಿಸುತ್ತಾರೆ.ಮುಖ್ಯ ಚುನಾವಣಾಧಿಕಾರಿಯ ಬಳಕೆದಾರನನ್ನು ಸೃಜಿಸಿದ ನಂತರ, ಆ ಬಳಕೆದಾರನು ಮುಖ್ಯ ಚುನಾವಣಾಧಿಕಾರಿಯ ಕಚೇರಿ/ ಜಿಲ್ಲಾ ಚುನಾವಣಾಧಿಕಾರಿ ಬಳಕೆದಾರರನ್ನು ಸೃಜಿಸಬಹುದು ಮತ್ತು ಜಿಲ್ಲಾ ಚುನಾವಣಾಧಿಕಾರಿಯು ಸಂಗ್ರಹಾಗಾರದ ಬಳಕೆದಾರರನ್ನು ಸೃಜಿಸಬಹುದು.

ಬಳಕೆದಾರನನ್ನು ಸೃಜಿಸುವ ಪ್ರಕ್ರಿಯೆಯ ನಂತರ, ಅವರ ನೋಂದಾಯಿತ ಇ–ಮೇಲ್ ವಿಳಾಸಕ್ಕೆ ಒಂದು ಲಿಂಕ್ ಅನ್ನು ಮತ್ತು ಅವರನ್ನು ನೋಂದಾಯಿತ ಮೊಬೈಲ್ ಸಂಖ್ಯೆಗೆ ಒಟಿಪಿ (ಔಖಿಕ) ಅನ್ನು ಕಳುಹಿಸಲಾಗುತ್ತದೆ. ಬಳಕೆದಾರನು ಆ ಲಿಂಕ್ ನ ಮೇಲೆ ಕ್ಲಿಕ್ ಮಾಡಬೇಕಿರುತ್ತದೆ, ಆನಂತರ ಅವನು ತನ್ನ ನೋಂದಾಯಿತ ಮೊಬೈಲ್ ಸಂಖ್ಯೆಗೆ ಸ್ವೀಕರಿಸಿದ ಒಟಿಪಿ(ಔಖಿಕ)ಯನ್ನು ನಮೂದಿಸಬೇಕಾಗುತ್ತದೆ, ಅದನ್ನು ನಮೂದಿಸಿದ ನಂತರ ಆತನು ಸ್ವಂತ ಪಾಸ್‌ವರ್ಡ್ ಅನ್ನು ಸೃಜಿಸಿಕೊಳ್ಳಬಹುದು. ಇಎಂಎಸ್ ನಲ್ಲಿ ತಾತ್ಕಾಲಿಕ ಬಳಕೆದಾರರ ಸೃಜನೆಗೆ ಯಾವುದೇ ನಿರ್ಬಂಧವಿರುವುದಿಲ್ಲ; ಜಿಲ್ಲಾ ಚುನಾವಣಾಧಿಕಾರಿಯವರು ಅಗತ್ಯ ಸಂಗ್ರಹಾಗಾರ ಮಟ್ಟದಲ್ಲಿ ಕಾರ್ಯನಿರ್ವಹಿಸಲು ಅಗತ್ಯ ಸಂಖ್ಯೆಯ ತಾತ್ಕಾಲಿಕ ಬಳಕೆದಾರರನ್ನು ಸೃಜಿಸಬಹುದಾಗಿರುತ್ತದೆ.ಇಎಂಎಸ್ ಅಪ್ಲಿಕೇಷನ್ ಜಾಲತಾಣದಲ್ಲಿನ ಈ ಮುಂದಿನ ಕಾರ್ಯಕಾರಿ ಮಾಡ್ಯೂಲ್‌ಗಳನ್ನು ಒಳಗೊಳ್ಳುತ್ತದೆ.

i. ಬಳಕೆದಾರ ಮತ್ತು ಸಂಸ್ಥೆ ನಿರ್ವಹಣೆ
ii. ಹೊಸ ಯಂತ್ರಗಳ ತಯಾರಿಕೆ
iii. ಯಂತ್ರಗಳ ಸ್ಥಳಾಂತರ
iv. ಮೊದಲ ಹಂತದ ಪರಿಶೀಲನೆ (ಎಫ್‌ಎಲ್‌ಸಿ)
v. ಜಾಗೃತಿ ಮೂಡಿಸುವಿಕೆ
vi. ಯಾದೃಚ್ಛೀಕರಣ (ರ‍್ಯಾಂಡಮೈಸೇಷನ್)
vii. ಪೂರಕ ಯಾದೃಚ್ಛೀಕರಣ
viii. ಯಂತ್ರಗಳನ್ನು ಬದಲಿಸುವಿಕೆ
ix. ಚುನಾವಣಾ ಅರ್ಜಿ ಮತ್ತು ಮೀಸಲು ಯಂತ್ರಗಳ ನಿಭಾವಣೆ
x. ಗೊಂದಲಗಳ ನಿವಾರಣೆ

ಹಂಚಿಕೆಯಾದ ಕೆಲಸದ ಸ್ಥಿತಿಗತಿಯನ್ನು ಪರಿಶೀಲಿಸುವ ದೃಷ್ಟಿಯಿಂದ ಮತ್ತು ಬಾಕಿ ಇರುವ ವಿಷಯಗಳನ್ನು ಗುರುತಿಸುವ ದೃಷ್ಟಿಯಿಂದ ಭಾರತ ಚುನಾವಣಾ ಆಯೋಗದ ಅಡ್ಮಿನ್/ ಮುಖ್ಯ ಚುನಾವಣಾಧಿಕಾರಿ/ ಜಿಲ್ಲಾ ಚುನಾವಣಾಧಿಕಾರಿ/ ಸಂಗ್ರಹಾಗಾರದ ನಿರ್ವಾಹಕ/ ತಯಾರಕರ ಮಟ್ಟದಲ್ಲಿ ಇಎಂಎಸ್ ಬಳಕೆದಾರರಿಗಾಗಿ ಇಎಂಎಸ್ ನಲ್ಲಿ ವಿವಿಧ ವರದಿಗಳನ್ನು ಲಭ್ಯವಾಗುವಂತೆ ಮಾಡಲಾಗಿದೆ. ವಿವರವಾದ ಅಪ್ಲಿಕೇಷನ್ – ಬಳಕೆದಾರ ಕೈಪಿಡಿಗಾಗಿ ದಯವಿಟ್ಟು **http://supports.ecitech.in.**ಗೆ ಭೇಟಿ ನೀಡಿರಿ.ಬಳಕೆದಾರರು ತಮಗಾಗಿ ಸೃಜಿಸಲಾದ ಬಳಕೆದಾರನ ಮೂಲಕ http://

supports.ecitech.in.ನಲ್ಲಿ ಸಹ ಇಎಂಎಸ್‌ಗೆ ಸಂಬಂಧಪಟ್ಟ ಯಾವುದೇ ವಿಷಯವನ್ನು ಕುರಿತ ಸಂದೇಹಗಳು/ ಟಿಕೆಟ್‌ಗಳನ್ನು ಪರಿಹರಿಸಿಕೊಳ್ಳಬಹುದು.

**ಮೊಬೈಲ್ ಅಪ್ಲಿಕೇಷನ್‌ಗಳು**

ಇಎಂಎಸ್ ಅಪ್ಲಿಕೇಷನ್‌ನೊಂದಿಗೆ ಸಂಪರ್ಕ ಕಲ್ಪಿಸಲಾದ ಆ್ಯಂಡ್ರಾಯ್ಡ್ ಆಧಾರಿತ ಮೊಬೈಲ್ ಅಪ್ಲಿಕೇಷನ್‌ಗಳನ್ನು, ಅಪ್ಲಿಕೇಷನ್‌ಗೆ ನೆರವಾಗುವುದಕ್ಕಾಗಿ ಅಭಿವೃದ್ಧಿಪಡಿಸಲಾಗಿದ್ದು, ಅವುಗಳನ್ನು ತಾತ್ಕಾಲಿಕ ಬಳಕೆದಾರರು ಸಂಗ್ರಹಾಗಾರದ ಮಟ್ಟದಲ್ಲಿ ಯಂತ್ರಗಳನ್ನು ರವಾನೆ ಮಾಡುವಾಗ ಮತ್ತು ಸ್ವೀಕರಿಸುವಾಗ ಸ್ಕ್ಯಾನ್ ಮಾಡುವುದಕ್ಕಾಗಿ ಮುಖ್ಯವಾಗಿ ಬಳಸುತ್ತಾರೆ ಮತ್ತು ತಾತ್ಕಾಲಿಕ ಬಳಕೆದಾರರು ತತ್ಸಂಬಂಧೀ ಸಂಗ್ರಹಾಗಾರಗಳ ಈ ಮುಂದಿನ ಮಾಡ್ಯೂಲ್‌ಗಳಿಗೆ ಪ್ರವೇಶಾವಕಾಶ ಪಡೆಯುತ್ತಾರೆ:

i. ಡ್ಯಾಷ್‌ಬೋರ್ಡ್
ii. ರವಾನೆ/ ಸ್ವೀಕೃತಿ
iii. ಮೊದಲ ಹಂತದ ಪರಿಶೀಲನೆ (ಎಫ್‌ಎಲ್‌ಸಿ)
iv. ಜಾಗೃತಿ ಮೂಡಿಸುವಿಕೆ
v. ವಿಧಾನಸಭಾ ಕ್ಷೇತ್ರ (ಎಸಿ)ಮಟ್ಟದ ಯಾದೃಚ್ಛೀಕರಣ (ರ್‍ಯಾಂಡಮೈಸೇಷನ್)
vi. ಮತದಾನ ಕೇಂದ್ರ (ಪಿಎಸ್)ದ ಯಾದೃಚ್ಛೀಕರಣ (ರ್‍ಯಾಂಡಮೈಸೇಷನ್)
vii. ಮೀಸಲು ಯಂತ್ರಗಳ ಸ್ವೀಕೃತಿ
viii. ಗೊಂದಲಗಳ ನಿವಾರಣೆ
ix. ಬಾಕಿಯಿರುವ ಅಪ್‌ಲೋಡ್‌ಗಳು

ಬಳಕೆದಾರರಿಗೆ ವಹಿಸಲಾದ ಕಾರ್ಯವು ಮಾತ್ರ ಅವರ ಲಾಗ್‌ಇನ್ ಪುಟದಲ್ಲಿ ಪ್ರದರ್ಶಿತವಾಗುತ್ತದೆ, ಬಳಕೆದಾರನಿಗೆ ವಹಿಸಿಲ್ಲದಂತಹ ಕಾರ್ಯಕ್ಕೆ ಸಂಬಂಧಪಟ್ಟಂತೆ ಅಪ್ಲಿಕೇಷನ್‌ನ ಇತರ ಸೌಕರ್ಯಾಂಶಗಳನ್ನು ಚಾಲನೆ ಮಾಡುವುದಕ್ಕೆ ಅವನಿಗೆ ಅವಕಾಶವಿರುವುದಿಲ್ಲ. ಇವಿಎಂ ನಿರ್ವಹಣಾ ವ್ಯವಸ್ಥೆ ಅಪ್ಲಿಕೇಷನ್‌ನಲ್ಲಿನ ಪ್ರತಿ ಬಳಕೆದಾರ-ಲಾಗ್‌ಇನ್ ಪುಟದ ಮೇಲು ಭಾಗದಲ್ಲಿ ಮೊಬೈಲ್ ಅಪ್ಲಿಕೇಷನ್‌ನ ಡೌನ್‌ಲೋಡ್‌ಗೆ ಅವಕಾಶ ಕಲ್ಪಿಸಲಾಗಿರುತ್ತದೆ.

**ಇವಿಎಂ ನಿರ್ವಹಣಾ ವ್ಯವಸ್ಥೆ (ಇಎಂಎಸ್) ವಿಶಿಷ್ಟ ಗುಣಲಕ್ಷಣಗಳು**

**ಇಎಂಎಸ್ ಕಾಲಚಕ್ರ (Life Cycle)**

✓ ಇವಿಎಂ ಯಂತ್ರಗಳ (ಬಿಯು/ಸಿಯು/ವಿವಿಪ್ಯಾಟ್) ಕಾಲಚಕ್ರ (ಏಜಿಜ ಅಥಿಥಿಟಜ) ನಿರ್ವಹಣೆಯು ಅವುಗಳ ತಯಾರಿಕೆಯಿಂದ ಹಿಡಿದು ನಾಶಗೊಳಿಸುವವರೆಗೂ ಇರುತ್ತದೆ.

✓ ಇವಿಎಂ ಖರೀದಿ ಆದೇಶದ ನಿರ್ವಹಣೆಯು ಅಂತಃ-ರಾಜ್ಯ, ಅಂತಃ-ಜಿಲ್ಲೆ ಮತ್ತು ಅಂತರ-ರಾಜ್ಯದ ನಡುವೆ ಇರುತ್ತದೆ.

ನಿರ್ವಹಣೆ:

✓ ಆದೇಶದ ಮಾರ್ಪಾಡು ಮತ್ತು ಖರೀದಿ ಆದೇಶದ ರದ್ದಿಯಾತಿ ಸೌಕರ್ಯಗಳನ್ನು ಒದಗಿಸುವುದು.

✓ ಯಂತ್ರಗಳ ಐಡಿ ಅಥವಾ ಕೆಲವೊಂದು ಸಾಮಾನ್ಯ ವಿವರಗಳನ್ನು ಒದಗಿಸುವ ಮೂಲಕ ಯಂತ್ರಗಳ ವಿವರಗಳ ಹುಡುಕುವಿಕೆಯನ್ನು ಸುಲಭಗೊಳಿಸುವುದು

✓ ಯಂತ್ರಗಳನ್ನು ಪ್ರಾರಂಭಿಸುವಾಗ, ಹಂಚಿಕೆ ಮಾಡುವಾಗ, ಅಣಕು ಮತದಾನದ ಹಾಗೂ ವಾಸ್ತವಿಕ ಮತದಾನದ ವೇಳೆಯಲ್ಲಿ ಬದಲಿಸಲಾದ ಯಂತ್ರಗಳ ಮಾಹಿತಿಯನ್ನು ಸೆರೆ ಹಿಡಿಯುವುದು.

✓ ಯಂತ್ರವನ್ನು ದೋಷಪೂರಿತ ಎಂದು ಗುರುತು ಮಾಡುವಾಗ ಅವುಗಳ ದೋಷದ ವಿವರಗಳನ್ನು ಸೆರೆಹಿಡಿಯುವುದು.

✓ ಯಂತ್ರಗಳನ್ನು ಬ್ಲಾಕ್ ಮತ್ತು ಅನ್‌ಬ್ಲಾಕ್ ಮಾಡುವುದುಪತ್ತೆ ಹಚ್ಚುವುದು ಮತ್ತು ವರದಿ ಮಾಡುವುದು

✓ ಆದೇಶವನ್ನು ಸೃಜಿಸುವ ಹರಿವನ್ನು ಮತ್ತು ನೈಜ ಸಮಯದಲ್ಲಿ ಆದೇಶದ ಪತ್ತೆ ಹಚ್ಚುವಿಕೆಯನ್ನು ಸುಗಮಗೊಳಿಸುವುದು

✓ ಪ್ರತಿಯೊಂದು ಇವಿಎಂ ಯಂತ್ರಗಳ ನೈಜ ಸಮಯದ ಸ್ಥಿತಿಗತಿಯ ದಾಖಲೆಯನ್ನು ನಿರ್ವಹಿಸುವುದು

✓ ಇವಿಎಂ ಯಂತ್ರಗಳ ಉಗ್ರಾಣ, ಲಭ್ಯತೆ, ಇತ್ಯಾದಿಗೆ ಸಂಬಂಧಿಸಿದಂತೆ ಅವುಗಳ ನೈಜ ಸಮಯದ ವರದಿಗಳನ್ನು ಸೃಜಿಸುವುದು

✓ ಇವಿಎಂ ಯಂತ್ರಗಳ ಮೊದಲ ಹಂತದ ಪರಿಶೀಲನೆಯಿಂದ ಹಿಡಿದು ಮತದಾನದ ದಿನದಂದು ಅವುಗಳನ್ನು ನಿಯೋಜಿಸುವವರೆಗೆ ಚುನಾವಣಾ ಪ್ರಕ್ರಿಯೆಯ ಅವಧಿಯಲ್ಲಿ ಇವಿಎಂ ಯಂತ್ರಗಳ ಜಾಡನ್ನು ದಾಖಲಿಸುವುದು;

✓ ನೈಜ ಸಮಯದ ವರದಿಗಳ ವಿವಿಧ ಬಗೆಗಳನ್ನು ಸೃಜಿಸಬಹುದು; ಹುಡುಕುವಿಕೆಯನ್ನು ಫಿಲ್ಟರ್ ಮಾಡಬಹುದು.

**ದಾಖಲೆಗಳ ವೈಶಿಷ್ಟ್ಯತೆ**

✓ ಎಲ್ಲಾ ಸಂಗ್ರಹಾಗಾರಗಳ ಆದ್ಯಂತವಾಗಿ ಯಂತ್ರಗಳನ್ನು ನಮೂದಿಸುವುದರಲ್ಲಿನ ಲೋಪದೋಷ / ನಕಲು ನಮೂದನ್ನು ತಪ್ಪಿಸುವುದಕ್ಕಾಗಿ ಇವಿಎಂ ಯಂತ್ರಗಳನ್ನು ಕೈಯಿಂದ ನಮೂದಿಸುವುದನ್ನು ತಡೆಗಟ್ಟುವುದು, ಇತ್ಯಾದಿ

✓ ಹೊಸದಾಗಿ ತಯಾರಿಸಲಾದಂತಹ ಯಂತ್ರಗಳನ್ನು ಕೇವಲ ಸ್ಕ್ಯಾನ್ ಮಾಡುವ ಮೂಲಕ ಮಾತ್ರ ಗಣಕಯಂತ್ರದಲ್ಲಿ ನಮೂದಿಸಬಹುದು.

✓ ರವಾನೆದಾರನು ಯಂತ್ರಗಳ ಸ್ಕ್ಯಾನಿಂಗ್ ಪ್ರಕ್ರಿಯೆಯನ್ನು ಪ್ರಾರಂಭಿಸದಿರುವಾಗ ಈಗಾಗಲೇ ಸೃಜಿಸಿರುವ ಖರೀದಿ ಆದೇಶಗಳನ್ನು ರದ್ದುಗೊಳಿಸಬಹುದು.

**ಭದ್ರತೆ**

✓ ಎರಡು ಹಂತಗಳ ಅಧಿಕೃತತೆ, ಇ–ಮೇಲ್ ಮತ್ತು ಎಸ್‌ಎಂಎಸ್ ಸೂಚನೆಯನ್ನು ಪ್ರತಿಯೊಬ್ಬ ಬಾಧಿತ ಬಳಕೆದಾರನಿಗೆ ಪ್ರತಿಯೊಂದು ಚಟುವಟಿಕೆಗೆ ಸಂಬಂಧಿಸಿದಂತೆ ಕಳುಹಿಸಲಾಗುವುದು.

✓ ತಾತ್ಕಾಲಿಕ ಬಳಕೆದಾರರ (ಮೊಬೈಲ್ ಬಳಕೆದಾರರು) ಅರ್ಹ ಅವಧಿಯು ತಂತಾನೇ ಕೊನೆಗೊಳ್ಳುತ್ತದೆ.

✓ ಸಂಪೂರ್ಣ ಜಾಲತಾಣವನ್ನು ಗುಪ್ತಾಕ್ಷರಗಳಲ್ಲಿ (ಎನ್‌ಕ್ರಿಪ್ಟ್) ರೂಪಿಸಲಾಗಿದ್ದು ಎಸ್‌ಎಸ್‌ಎಲ್ ಅನ್ನು ಎಲ್ಲಾ ಮಾಡ್ಯೂಲ್‌ಗಳಾದ್ಯಂತವಾಗಿ ಬಳಸಲಾಗುವುದು.

# ಅಧ್ಯಾಯ –20

# ಇವಿಎಂಗಳ ವಿಲೇವಾರಿ

**ತಯಾರಕರು ಇವಿಎಂಗಳು/ ವಿವಿಪ್ಯಾಟ್‌ಗಳನ್ನು ನಾಶಗೊಳಿಸಲು ಈ ಕೆಳಗಿನ ಮಾರ್ಗಸೂಚಿಗಳನ್ನು ಅನುಸರಿಸತಕ್ಕದ್ದು:**

1. ಪ್ಲಾಸ್ಟಿಕ್ ಹೌಸಿಂಗ್‌ಗಳಿಂದ ಪಿಸಿಬಿ ಗಳನ್ನು ಬೇರ್ಪಡಿಸತಕ್ಕದ್ದು.
2. ಕಂಟ್ರೋಲ್ ಯೂನಿಟ್, ಬ್ಯಾಲೆಟ್ ಯೂನಿಟ್ ಮತ್ತು ಪ್ರದರ್ಶಕದ ಪಿಸಿಬಿಗಳ ಮೇಲೆ ಹೊದಿಸಲಾಗಿರುವ ಎಲ್ಲಾ ಘಟಕಗಳನ್ನು ತೆಗೆದು ಪುಡಿ ಮಾಡತಕ್ಕದ್ದು.
3. ಮುಚ್ಚಿರದ ಪಿಸಿಬಿ ಗಳನ್ನು ಕನಿಷ್ಠ 4 ಚೂರುಗಳನ್ನಾಗಿ ಕತ್ತರಿಸಿ ನಂತರ ಪುಡಿ ಮಾಡತಕ್ಕದ್ದು ಮತ್ತು ಉಳಿದ ಪ್ಲಾಸ್ಟಿಕ್ ಜೋಡಣೆಗಳನ್ನು/ ಹೌಸಿಂಗ್‌ಗಳನ್ನು ಕೂಡ ಕನಿಷ್ಠ 4 ರಿಂದ 6 ಚೂರುಗಳನ್ನಾಗಿ ಕತ್ತರಿಸಿ ನಂತರ ಪುಡಿ ಮಾಡತಕ್ಕದ್ದು.
4. ಪರಿಸರವನ್ನು ರಕ್ಷಿಸಲು ಪ್ಲಾಸ್ಟಿಕ್ ತ್ಯಾಜ್ಯವನ್ನು ಮರುಬಳಸತಕ್ಕದ್ದು.
5. ಇವಿಎಂಗಳ ವಿಲೇವಾರಿ/ ನಾಶಗೊಳಿಸುವಿಕೆ ಸಂಪೂರ್ಣ ಪ್ರಕ್ರಿಯೆಯನ್ನು ವಿಡಿಯೋ ಚಿತ್ರೀಕರಣವನ್ನು ಮಾಡತಕ್ಕದ್ದು.
6. ಇವಿಎಂಗಳ ವಿಲೇವಾರಿ/ ನಾಶಗೊಳಿಸುವಿಕೆಯ ವಿಡಿಯೋ ಚಿತ್ರೀಕರಣದ ಒಂದು ಪ್ರತಿಯನ್ನು ಸಂಬಂಧಿತ ಸಿಇಓ ಮತ್ತು ಇಸಿಐ ರವರಿಗೆ ಕಳುಹಿಸಬೇಕು ಮತ್ತು ಇವಿಎಂಗಳ ವಿಲೇವಾರಿ/ ನಾಳಗೊಳಿಸುವಿಕೆಯ ಪ್ರಕ್ರಿಯೆಯ ವಿಡಿಯೋ ಚಿತ್ರೀಕರಣವನ್ನು ಸಂಬಂಧಿತ ಸಿಇಓ/ ಇಸಿಐ ವೀಕ್ಷಿಸಿ ಪ್ರತಿಕೂಲವಾದ ಯಾವುದೇ ಕಾರ್ಯವು ಕಂಡುಬಂದಿಲ್ಲವೆಂದು ಪ್ರಮಾಣಿಸಬೇಕು.
7. ವಿದ್ಯುನ್ಮಾನ ವಸ್ತುಗಳನ್ನು ನಾಶ ಮಾಡುವುದಕ್ಕಾಗಿ ಮಾಲಿನ್ಯ ನಿಯಂತ್ರಣ ಮಂಡಳಿ/ ಪರಿಸರ ಮತ್ತು ಅರಣ್ಯ ಸಚಿವಾಲಯ, ಇತ್ಯಾದಿ ಅವರು ಹೊರಡಿಸಿರುವ ಮಾರ್ಗಸೂಚಿಗಳನ್ನು/ ಸಂರಕ್ಷಣಾ ಕ್ರಮಗಳನ್ನು ಅಥವಾ ಪ್ರಸ್ತುತ ಜಾರಿಯಲ್ಲಿರುವ ಇನ್ನಾವುದೇ ಕಾನೂನುಗಳನ್ನು ಅನುಸರಿಸತಕ್ಕದ್ದು ಹಾಗೂ ಇ-ತ್ಯಾಜ್ಯಗಳನ್ನು ನೋಂದಾಯಿತ ವಿಘಟಕ ಅಥವಾ ಮರುಬಳಕೆದಾರರಿಗೆ ಸಾಗಿಸಲಾಗಿದೆಯೇ ಎಂದು ಖಚಿತಪಡಿಸತಕ್ಕದ್ದು.
8. ನಾಶಗೊಳಿಸಲಾದ/ ನಾಶಪಡಿಸಿದ ಪ್ರತಿಯೊಂದು ಬ್ಯಾಲೆಟ್ ಯೂನಿಟ್ ಮತ್ತು ಕಂಟ್ರೋಲ್ ಯೂನಿಟ್‌ಗಳ ಸರಿಯಾದ ದಾಖಲೆಗಳನ್ನು ಒಂದು ದಾಖಲೆ ಪುಸ್ತಕದಲ್ಲಿ ನಿರ್ವಹಿಸಬೇಕು.

- ನಾಶಗೊಳಿಸಲಾದ ಪ್ರತಿಯೊಂದು ಬ್ಯಾಲೆಟ್ ಯೂನಿಟ್ ಮತ್ತು ಕಂಟ್ರೋಲ್ ಯೂನಿಟ್‌ಗಳ ಕ್ರಮ ಸಂಖ್ಯೆ/ ಐಡಿ ಗಳನ್ನು ದಿನಾಂಕವಾರು ಒಂದು ದಾಖಲೆ ಪುಸ್ತಕದಲ್ಲಿ ನಮೂದಿಸಬೇಕು. (ಬ್ಯಾಲೆಟ್ ಯೂನಿಟ್ ಮತ್ತು ಕಂಟ್ರೋಲ್ ಯೂನಿಟ್‌ಗಳಿಗಾಗಿ ಪ್ರತ್ಯೇಕ ದಾಖಲೆ ಪುಸ್ತಕಗಳನ್ನು ನಿರ್ವಹಿಸಬೇಕು);
- ದಿನದ ಅಂತ್ಯದಲ್ಲಿ, ಇವುಗಳ ಕೊನೆಯ ನಮೂದನೆಯ ನಂತರ, ಒಂದು ಪ್ರಮಾಣಪತ್ರವನ್ನು ದಾಖಲಿಸಬೇಕು ಹಾಗೂ ಅದರಲ್ಲಿ "ಇಂದು __________ (ದಿನಾಂಕ) ______ ಸಂಖ್ಯೆಬ್ಯಾಲೆಟ್ ಯೂನಿಟ್/ ಕಂಟ್ರೋಲ್ ಯೂನಿಟ್ (ಸಂದರ್ಭಾನುಸಾರ)ಗಳನ್ನುನನ್ನಸಮಕ್ಷಮದಲ್ಲಿನಾಶಪಡಿಸಲಾಗಿದೆ"ಎಂದು ನಮೂದಿಸಿರಬೇಕು ಹಾಗೂ ಅದರಲ್ಲಿ ಈ ಉದ್ದೇಶಕ್ಕಾಗಿ ನೇಮಿಸಲಾಗಿರುವ ಉತ್ಪಾದಕರ ಅಧಿಕಾರಿಗಳು ಸಹಿ ಮಾಡಬೇಕು. ಜೊತೆಗೆ, ಸಂಬಂಧಿತ ಸಿಇಓ ರವರ ಪ್ರತಿನಿಧಿಗಳು ಮತ್ತು ಇ-ತ್ಯಾಜ್ಯ ನಿರ್ವಹಣಾ ಸಂಸ್ಥೆಯ ಪ್ರತಿನಿಧಿಗಳು ಕೂಡ ಸಹಿ ಮಾಡಬೇಕು.

# ಭಾಗ –IV

## (ಅನುಬಂಧಗಳು)

| ಅನುಬಂಧಗಳು | | | |
|---|---|---|---|
| ಕ್ರಮ ಸಂಖ್ಯೆ | ಅಧ್ಯಾಯದ ಸಂಖ್ಯೆ | ಪರಿವಿಡಿ | ಪುಟ ಸಂಖ್ಯೆ |
| 1 | ಅನುಬಂಧಗಳು | ಅನುಬಂಧಗಳು | |

## ಅನುಬಂಧ – 1

### ಪ್ರಧಾನ ದಾಸ್ತಾನು ರಿಜಿಸ್ಟರ್
### ಭಾಗ – ಎ (ಕಂಟ್ರೋಲ್ ಯೂನಿಟ್)

**ರಾಜ್ಯ/ ಕೇಂದ್ರಾಡಳಿತ ಪ್ರದೇಶದ ಹೆಸರು:**

**ಜಿಲ್ಲೆಯ ಹೆಸರು:**

**ಉಪವಿಭಾಗ/ ತಾಲೂಕಿನ ಹೆಸರು:**

**ಉಗ್ರಾಣದ ವಿಳಾಸ:**

| ಬಾಕ್ಸ್ ಸಂಖ್ಯೆ | ಕಂಟ್ರೋಲ್ ಯುನಿಟ್ ಐಡಿ ಸಂಖ್ಯೆ | ತಯಾರಕರ ಹೆಸರು | ತಯಾರಿಸಿದ ವರ್ಷ | ಸ್ವೀಕರಿಸಿದ ದಿನಾಂಕ | ಸ್ವೀಕೃತಿ ಚಲನ್ ಸಂಖ್ಯೆ | ಸ್ವೀಕೃತಿ ಚಲನ್ ದಿನಾಂಕ | ಸ್ವೀಕರ್ತರ ಹೆಸರು ಮತ್ತು ಪದನಾಮ | ಸ್ವೀಕರ್ತನ ಸಹಿ | ಸಂಗ್ರಹಾಗಾರ ಪ್ರಭಾರಿಯ ಸಹಿ | ಷರಾ |
|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 |
| | | | | | | | | | | |

### ಭಾಗ – ಬಿ (ಬ್ಯಾಲೆಟ್ ಯೂನಿಟ್)

| ಬಾಕ್ಸ್ ಸಂಖ್ಯೆ | ಬ್ಯಾಲೆಟ್ ಯೂನಿಟ್ ಐಡಿ ಸಂಖ್ಯೆ | ತಯಾರಕರ ಹೆಸರು | ತಯಾರಿಸಿದ ವರ್ಷ | ಸ್ವೀಕರಿಸಿದ ದಿನಾಂಕ | ಸ್ವೀಕೃತಿ ಚಲನ್ ಸಂಖ್ಯೆ | ಸ್ವೀಕೃತಿ ಚಲನ್ ದಿನಾಂಕ | ಸ್ವೀಕರ್ತರ ಹೆಸರು ಮತ್ತು ಪದನಾಮ | ಸ್ವೀಕರ್ತನ ಸಹಿ | ಸಂಗ್ರಹಾಗಾರ ಪ್ರಭಾರಿಯ ಸಹಿ | ಷರಾ |
|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 |
| | | | | | | | | | | |
| | | | | | | | | | | |

(ವಿವಿಪ್ಯಾಟ್‌ಗೂ ಹೋಲುತ್ತದೆ)

## ಅನುಬಂಧ – 2

### ನಮೂನೆ ಸಂ: ಇಸಿಐ/ಇವಿಎಂ/ಡಬ್ಲ್ಯೂಎಚ್/ಐಎನ್‌ಎಸ್‌ಪಿ/01
### ಇವಿಎಂ–ವಿವಿಪ್ಯಾಟ್ ಸಂಗ್ರಹಾಗಾರದ(ಗಳ) ಮಾಸಿಕ/ ತ್ರೈಮಾಸಿಕ ಪರಿಶೀಲನಾ ಪ್ರಮಾಣಪತ್ರ

ನಾನು ಆಯೋಗದ ಸೂಚನೆಗನುಸಾರವಾಗಿ, ಇವಿಎಂ–ವಿವಿಪ್ಯಾಟ್ ಸಂಗ್ರಹಾಗಾರಕ್ಕೆ(ಗಳಿಗೆ) ಖುದ್ದಾಗಿ ಭೇಟಿ ನೀಡಿದ್ದು, ಅಲ್ಲಿ ಈ ಕೆಳಕಂಡಂತೆ ಮಾಡಿರುವ ಏರ್ಪಾಟುಗಳ ಬಗ್ಗೆ ನನಗೆ ತೃಪ್ತಿಯಿದೆಯೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ:

| ಕ್ರಮ ಸಂಖ್ಯೆ | ವಿವರಗಳು | ಪರಿಶೀಲನಾ ವರದಿ |
|---|---|---|
| 1 | ಇವಿಎಂ–ವಿವಿಪ್ಯಾಟ್ ಸಂಗ್ರಹಾಗಾರ ಇರುವ ಸ್ಥಳ | (ಎ) ಜಿಲ್ಲಾ ಕೇಂದ್ರ ಕಚೇರಿ<br>(ಬಿ) ತಹಸಿಲ್ ಕೇಂದ್ರ ಕಚೇರಿ<br>(ಸಿ) ಇತರೆ (ಅದನ್ನು ನಿರ್ದಿಷ್ಟಪಡಿಸಿ) |
| 2 | ಇವಿಎಂ–ವಿವಿಪ್ಯಾಟ್ ಸಂಗ್ರಹಾಗಾರದಲ್ಲಿ ಎಷ್ಟು ಪ್ರವೇಶದ್ವಾರ(ಗಳು) ಇದೆ/ಇವೆ? | |
| 3 | ಇವಿಎಂ–ವಿವಿಪ್ಯಾಟ್ ಸಂಗ್ರಹಾಗಾರಗಳಲ್ಲಿ ಯಾವ ರೀತಿಯ ಲಾಕ್ ಸಿಸ್ಟಮ್ ಅನ್ನು ಅನುಸರಿಸುತ್ತಿದೆ. | |
| 4 | ಸಂಗ್ರಹಾಗಾರದಲ್ಲಿ ಇತರ ಬಾಗಿಲುಗಳು ಮತ್ತು ಕಿಟಕಿಗಳು ಯಾವುದಾದರೂ ಇದ್ದಲ್ಲಿ, ಅವುಗಳನ್ನು ಯಾವ ಸಾಮಗ್ರಿಯಿಂದ ಮೊಹರು ಮಾಡಲಾಗಿದೆ. | |
| 5 | (ಎ) ಅಳವಡಿಸಿರುವ ಸಿಸಿಟಿವಿಯ ಸಂಖ್ಯೆ | |
| | (ಬಿ) ಸಂಗ್ರಹಾಗಾರದಲ್ಲಿನ ಚಟುವಟಿಕೆಗಳನ್ನು ಪರಿಶೀಲಿಸಲು ಡಿವಿಆರ್ ಅನ್ನು ಲ್ಯಾಪ್‌ಟಾಪ್‌ಗೆ ಜೋಡಿಸಲಾಗಿತ್ತೇ? ಅದರಲ್ಲಿ ಕಂಡುಬಂದ ಅಂಶಗಳೇನು? | |
| 6 | (ಎ) ಭದ್ರತಾ ಸಿಬ್ಬಂದಿಯ ಕರ್ತವ್ಯವನ್ನು ಸೂಚಿಸುವ ಲಾಗ್–ಬುಕ್ ಅನ್ನು ಪರಿಶೀಲಿಸಲಾಗಿದೆಯೇ? | ಹೌದು/ ಇಲ್ಲ |
| | (ಬಿ) ಪ್ರತಿಯೊಂದು ಪಾಳಿಗೆ ಎಷ್ಟು ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು? | |
| | (ಸಿ) ಕಳೆದ ಬಾರಿ ಸಂಗ್ರಹಾಗಾರವನ್ನು ಯಾವಾಗ ತೆರೆಯಲಾಗಿತ್ತು? | |
| | (ಡಿ) ಸಂಗ್ರಹಾಗಾರವನ್ನು ತೆರೆಯಲು ಇದ್ದ ಕಾರಣವನ್ನು ಹಾಗೂ ಸಂಗ್ರಹಾಗಾರವನ್ನು ತೆರೆಯಲು ಅಧಿಕೃತರಾದವರು ಯಾರು ಎಂಬುದನ್ನು ದಯವಿಟ್ಟು ನಮೂದಿಸಿ. | |
| 7 | ಸಂಗ್ರಹಾಗಾರದ ಮುಖ್ಯ ಸ್ವಿಚ್‌ನ್ನು ಎಲ್ಲಿ ಅಳವಡಿಸಲಾಗಿದೆ? | |
| 8 | (ಎ) ಎಷ್ಟು ಅಗ್ನಿಶಾಮಕ ಸಲಕರಣೆಗಳನ್ನು ಅಳವಡಿಸಲಾಗಿದೆ? | |
| | (ಬಿ) ಕೊನೆಗೊಳ್ಳುವ ದಿನಾಂಕವನ್ನು ದಯವಿಟ್ಟು ನಮೂದಿಸಿ: | |
| 9 | ಸಂಗ್ರಹಾಗಾರದ(ಗಳ) ಪರಿಶೀಲನೆಯ ಛಾಯಾ ಚಿತ್ರಗಳನ್ನು ದಯವಿಟ್ಟು ಲಗತ್ತಿಸಿ | |
| 10 | ತ್ರೈಮಾಸಿಕ ಪರಿಶೀಲನಾ ಅವಧಿಯಲ್ಲಿ, ಒದ್ದೆಯಿರುವುದು/ ಜಲಾವೃತಗೊಂಡಿರುವುದು/ ಇಲಿಗಳ ಓಡಾಟ/ ಇತರ ಯಾವುದೇ ಅಸಹಜ ಸ್ಥಿತಿಯನ್ನು ಪರಿಶೀಲಿಸಲಾಗಿದೆಯೇ | |

ಪರಿಶೀಲನೆಯ ದಿನಾಂಕ:

ಸಹಿ/–

(ಜಿಲ್ಲಾ ಚುನಾವಣಾಧಿಕಾರಿಯ ಸಹಿ)

ಜಿಲ್ಲೆಯ ಹೆಸರು

ಅನುಬಂಧ – 3

## (ರಾಜಕೀಯ ಪಕ್ಷಗಳ ಹಾಜರಾತಿ ರಿಜಿಸ್ಟರ್ – ಮೊದಲ ಹಂತದ ಪರಿಶೀಲನಾ ಸಭಾಂಗಣ)

ರಾಜ್ಯ/ ಕೇಂದ್ರಾಡಳಿತ ಪ್ರದೇಶದ ಹೆಸರು:

ಜಿಲ್ಲೆಯ ಹೆಸರು:

ಮೊದಲ ಹಂತದ ಪರಿಶೀಲನೆ ನಡೆಸುವ ಸಭಾಂಗಣದ ವಿಳಾಸ:

ದಿನಾಂಕ:......................

| ಕ್ರ.ಸಂ | ರಾಷ್ಟ್ರೀಯ/ ರಾಜ್ಯ ಪಕ್ಷದ ಹೆಸರು | ಪಕ್ಷದ ಸಂಲಗ್ನತೆಯೊಂದಿಗೆ ರಾಜಕೀಯ ಪಕ್ಷದ ಪ್ರತಿನಿಧಿಯ ಹೆಸರು | ಗುರುತಿನ ದಾಖಲೆ ಸಂಖ್ಯೆ ಮತ್ತು ದಿನಾಂಕ | ಪ್ರತಿನಿಧಿಯ ಸಹಿ | ಷರಾ, ಯಾವುದಾದರೂ ಇದ್ದಲ್ಲಿ |
|---|---|---|---|---|---|
| | | | | | |
| | | | | | |
| | | | | | |
| | | | | | |
| | | | | | |
| | | | | | |

ಸೂಚನೆ: ಪಕ್ಷವೊಂದರ ಪ್ರತಿನಿಧಿಯು ಗೈರುಹಾಜರಾಗಿದ್ದಲ್ಲಿ, ಪಕ್ಷಕ್ಕೆ ನೋಟೀಸಿನ ಸೂಕ್ತ ಜಾರಿಯ ರುಜುವಾತನ್ನು ರಿಜಿಸ್ಟರಿನಲ್ಲಿ ಅಂಟಿಸಬೇಕು.

**(ಬಿಇಎಲ್/ಇಸಿಐಎಲ್ ಇಂಜಿನಿಯರ್‌ಗಳ ಐಡಿ ಸಂಖ್ಯೆಸಹಿತ ಹೆಸರು ಮತ್ತು ಸಹಿ)**

**(ಜಿಲ್ಲಾ ಚುನಾವಣಾಧಿಕಾರಿಯು ನಾಮನಿರ್ದೇಶಿಸಿದ ಅಧಿಕಾರಿಗಳ ಹೆಸರು, ಪದನಾಮ, ಸಹಿ)**

ಅನುಬಂಧ – 4

## ಭಾಗ–I ಮೊದಲ ಹಂತದ ಪರಿಶೀಲನೆ (ಎಫ್‌ಎಲ್‌ಸಿ)ಗಾಗಿನ ಏರ್ಪಾಟುಗಳ ಪರಿಶೀಲನಾ ವರದಿ

ರಾಜ್ಯ/ ಕೇಂದ್ರಾಡಳಿತ ಪ್ರದೇಶದ ಹೆಸರು: ____________________

ಜಿಲ್ಲೆಯ ಹೆಸರು: ____________________

ಎಫ್‌ಎಲ್‌ಸಿ ಕೇಂದ್ರದ ವಿಳಾಸ: ________________

ಬಿಇಎಲ್/ ಇಸಿಐಎಲ್‌ನ ಇವಿಎಂ/ ವಿವಿಪ್ಯಾಟ್‌ಗಳು ______________

ದಿನಾಂಕ:________

| ಕ್ರಮ ಸಂಖ್ಯೆ | ವಿವರಗಳು | ವರದಿ |
|---|---|---|
| 1. | ಮತದಾನ ಕೇಂದ್ರಗಳ ಒಟ್ಟು ಸಂಖ್ಯೆ | |
| 2. | ಯೂನಿಟ್‌ಗಳ ಪ್ರಮಾಣ<br>(ಎ) ಬ್ಯಾಲೆಟಿಂಗ್ ಯೂನಿಟ್‌ಗಳು<br>(ಬಿ) ಕಂಟ್ರೋಲ್ ಯೂನಿಟ್‌ಗಳು<br>(ಸಿ) ವಿವಿಪ್ಯಾಟ್‌ಗಳು | |
| 3. | ಬಿಇಎಲ್/ಇಸಿಐಎಲ್ ನಿಂದ ನಿಯೋಜಿಸಲಾದ ಇಂಜಿನಿಯರುಗಳ ಸಂಖ್ಯೆ | |
| 4. | ಎಫ್‌ಎಲ್‌ಸಿ ಪ್ರಾರಂಭವಾಗುವ ನಿರೀಕ್ಷಿತ ದಿನಾಂಕ | |
| 5. | ಇವಿಎಂ ಮತ್ತು ವಿವಿಪ್ಯಾಟ್‌ಗಳನ್ನು ಪರಿಶೀಲಿಸಲು ಡಿಇಓ ರಿಂದ ನಾಮನಿರ್ದೇಶಿತರಾದ ಅಧಿಕಾರಿಗಳು, ಬಿಇಎಲ್/ ಇಸಿಐಎಲ್‌ನ ಇಂಜಿನಿಯರುಗಳು ಮತ್ತು ರಾಜಕೀಯ ಪಕ್ಷಗಳ ಪ್ರತಿನಿಧಿಗಳೆಲ್ಲರಿಗೂ ಅವಕಾಶ ಕಲ್ಪಿಸಬಹುದಾದಷ್ಟು ಮಟ್ಟಿಗೆ ಎಫ್‌ಎಲ್‌ಸಿ ಕೇಂದ್ರವು ವಿಶಾಲವಾಗಿದೆಯೇ? | |
| 6. | ಎಫ್‌ಎಲ್‌ಸಿ ಕೇಂದ್ರದಲ್ಲಿ ಉತ್ತಮ ಗಾಳಿ, ಬೆಳಕಿನ ವ್ಯವಸ್ಥೆಯಿದ್ದು, ಧೂಳು ಮುಕ್ತವಾಗಿದೆಯೇ? | |
| 7. | ಎಫ್‌ಎಲ್‌ಸಿ ಕೇಂದ್ರದ ಒಳಗೆ ಹಾಗೂ ಹೊರಗೆ ಸೂಕ್ತ ಅಗ್ನಿಶಾಮಕ ಹಾಗೂ ತುರ್ತು ಅಗ್ನಿಸೂಚಕ ಏರ್ಪಾಟುಗಳನ್ನು ಮಾಡಲಾಗಿದೆಯೇ? | |
| 8. | ಪೊಲೀಸರು, ಎಫ್‌ಎಲ್‌ಸಿ ಪ್ರದೇಶಕ್ಕೆ ಬ್ಯಾರಿಕೇಡ್ ಹಾಕಿ, ಸ್ಯಾನಿಟೈಸ್ ಮಾಡಿದ್ದಾರೆಯೇ? | |
| 9. | ಕೇಂದ್ರವು ಯಾವುದೇ ಇತರ ವಿದ್ಯುನ್ಮಾನ ಸಾಧನ ಅಥವಾ ಎಲೆಕ್ಟ್ರಾನಿಕ್ ಸಾಧನಗಳ ಬಿಡಿ ಭಾಗಗಳಿಂದ ಮುಕ್ತವಾಗಿದೆಯೇ? | |
| 10. | ಕುಡಿಯುವ ನೀರು, ಶೌಚಾಲಯ, ಪ್ರಥಮ ಚಿಕಿತ್ಸೆ ಮುಂತಾದ ಸೌಲಭ್ಯಗಳಿವೆಯೇ? | |
| 11. | ಕೇಂದ್ರಕ್ಕೆ ಪ್ರವೇಶಿಸಲು ಮತ್ತು ಹೊರಹೋಗಲು ಒಂದೇ ದ್ವಾರವಿದೆಯೇ ಮತ್ತು ಅದು ದಿನದ 24 ಗಂಟೆಯೂ ಸಶಸ್ತ್ರ ಪೊಲೀಸ್ ಕಾವಲಿನಲ್ಲಿದೆಯೇ? | |
| 12. | ಡೋರ್ ಫ್ರೇಮ್ ಮೆಟಲ್ ಡಿಟೆಕ್ಟರ್ ಅನ್ನು ಅಳವಡಿಸಲಾಗಿದೆಯೇ? | |
| 13. | ವ್ಯಕ್ತಿ ಶೋಧನಾ ಸಲಕರಣೆಯ ಏರ್ಪಾಟುಗಳನ್ನು ಮಾಡಲಾಗಿದೆಯೇ? | |
| 14. | ಎಫ್‌ಎಲ್‌ಸಿ ಕೇಂದ್ರವನ್ನು ಪ್ರವೇಶಿಸಲು ಅಧಿಕೃತ ಅಧಿಕಾರಿಗಳಿಗೆ/ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಡಿಇಓ ರವರಿಂದ ಗುರುತಿನ ಚೀಟಿಗಳನ್ನು ನೀಡಲಾಗಿದೆಯೇ? | |
| 15. | ಎಫ್‌ಎಲ್‌ಸಿ ಟೇಬಲ್‌ಗಳನ್ನು ತೋರಿಸುವ ವೆಬ್‌ಕಾಸ್ಟ್ ಸಾಧನವು ಡಿಇಓ ರವರ ಚೇಂಬರ್‌ಗೆ ಸ್ಪಷ್ಟವಾಗಿ ಕಾಣಬಲ್ಲದೇ? | |
| 16. | ಪ್ರತಿಯೊಬ್ಬ ವ್ಯಕ್ತಿಯ ಪ್ರವೇಶವನ್ನು ದಾಖಲಿಸಲು ಎಫ್‌ಎಲ್‌ಸಿ ಕೇಂದ್ರದಲ್ಲಿ ಲಾಗ್–ಪುಸ್ತಕವನ್ನು ಇರಿಸಲಾಗಿದೆಯೇ? | |
| 17. | ಎಫ್‌ಎಲ್‌ಸಿ ಕೇಂದ್ರಕ್ಕಾಗಿ ನಿಯೋಜಿಸಿದ ಸಶಸ್ತ್ರ ಪೊಲೀಸ್ ಪಡೆಗಾಗಿ ಪ್ರತ್ಯೇಕ ಲಾಗ್–ಪುಸ್ತಕ (ಎಂದರೆ, ಕರ್ತವ್ಯ ವಹಿ) ವನ್ನು ನಿರ್ವಹಿಸಲಾಗುತ್ತಿದೆಯೇ? | |

| | | |
|---|---|---|
| 18. | ಆಯೋಗದ ಪತ್ರ ಸಂ. 51/8/16/4/2017–ಇಎಂಎಸ್, ದಿನಾಂಕ: 30ನೇ ಆಗಸ್ಟ್ 2017ರಲ್ಲಿ ನಮೂದಿಸಿರುವ ಎಲ್ಲಾ ಅಗತ್ಯ ರಿಜಿಸ್ಟರುಗಳು ಹಾಗೂ ನಮೂನೆಗಳನ್ನು ಸಿದ್ಧಪಡಿಸಿ ಎಫ್‌ಎಲ್‌ಸಿ ಕೇಂದ್ರದಲ್ಲಿ ಇರಿಸಲಾಗಿದೆಯೇ? | |
| 19. | ಪ್ರತಿ ಪಾಳಿಯಲ್ಲೂ ಇರಲು ಯೋಜಿಸಲಾದ ಸಶಸ್ತ್ರ ಪೊಲೀಸ್ ಸಿಬ್ಬಂದಿಯ ಸಂಖ್ಯೆ? | |
| 20. | ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿನ ಎಲ್ಲಾ ರಾಷ್ಟ್ರೀಯ ಹಾಗೂ ರಾಜ್ಯದ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳಿಗೆ ಲಿಖಿತ ರೂಪದಲ್ಲಿ ಆಮಂತ್ರಣ ನೀಡಲಾಗಿದೆಯೇ? ಮತ್ತು ನೋಟೀಸುಗಳನ್ನು ಕ್ರಮಬದ್ಧವಾಗಿ ಜಾರಿ ಮಾಡಲಾಗಿದೆಯೇ? | |

(ಸಹಿ)

ಹೆಸರು ಮತ್ತು ಪದನಾಮ

## ಭಾಗ– II (ಎಫ್‌ಎಲ್‌ಸಿ ಯ ಗುಣಮಟ್ಟದ ಪರಿಶೀಲನಾ ವರದಿ)

ರಾಜ್ಯ/ ಕೇಂದ್ರಾಡಳಿತ ಪ್ರದೇಶದ ಹೆಸರು: ______________________

ಜಿಲ್ಲೆಯ ಹೆಸರು: ______________________

ಎಫ್‌ಎಲ್‌ಸಿ ಕೇಂದ್ರದ ವಿಳಾಸ: ______________________

ಬಿಇಎಲ್/ ಇಸಿಐಎಲ್‌ನ ಇವಿಎಂ/ ವಿವಿಪ್ಯಾಟ್‌ಗಳು ______________________

ದಿನಾಂಕ:__________

| ಕ್ರಮ ಸಂಖ್ಯೆ | ವಿವರಗಳು | ವರದಿ |
|---|---|---|
| 1. | ಒಟ್ಟು ಮತದಾನ ಕೇಂದ್ರಗಳ ಸಂಖ್ಯೆ | |
| 2. | ಎಫ್‌ಎಲ್‌ಸಿಗೆ ಒಳಪಟ್ಟ ಯೂನಿಟ್‌ಗಳ ಪ್ರಮಾಣ<br>(ಎ) ಬ್ಯಾಲೆಟಿಂಗ್ ಯೂನಿಟ್‌ಗಳು<br>(ಬಿ) ಕಂಟ್ರೋಲ್ ಯೂನಿಟ್‌ಗಳು<br>(ಸಿ) ವಿವಿಪ್ಯಾಟ್‌ಗಳು | |
| 3. | ಹಾಜರಿದ್ದ ಬಿಇಎಲ್/ ಇಸಿಐಎಲ್ ನ ಅಧಿಕೃತ ಇಂಜಿನಿಯರುಗಳ ಒಟ್ಟು ಸಂಖ್ಯೆ | |
| 4. | ಎಫ್‌ಎಲ್‌ಸಿ ಪ್ರಾರಂಭದ ದಿನಾಂಕ | |
| 5. | ಇಲ್ಲಿಯವರೆಗೆ ಎಫ್‌ಎಲ್‌ಸಿ ಮಾಡಿದ ಯೂನಿಟ್‌ಗಳ ಪ್ರಮಾಣ<br>(ಎ) ಬ್ಯಾಲೆಟಿಂಗ್ ಯೂನಿಟ್‌ಗಳು<br>(ಬಿ) ಕಂಟ್ರೋಲ್ ಯೂನಿಟ್‌ಗಳು<br>(ಸಿ) ವಿವಿಪ್ಯಾಟ್‌ಗಳು | |
| 6. | ಡಿಇಓ ರವರು ನೇಮಿಸಿದ ಎಫ್‌ಎಲ್‌ಸಿ ಮೇಲ್ವಿಚಾರಕರ ಹೆಸರು ಮತ್ತು ಪದನಾಮ | |
| 7. | ರಾಜಕೀಯ ಪಕ್ಷಗಳ ಹಾಜರಾತಿ ಪುಸ್ತಕದ ನೆರಳಚ್ಚು ಪ್ರತಿಗಳು | |
| 8. | ನಿಯಂತ್ರಣ ಕೊಠಡಿಯಲ್ಲಿ ಎಫ್‌ಎಲ್‌ಸಿ ಪ್ರಕ್ರಿಯೆಯ ವೆಬ್‌ಕಾಸ್ಟಿಂಗ್ ಅನ್ನು ಯಾರು ನಿರ್ವಹಿಸುತ್ತಾರೆ? | |
| 9. | ಇವಿಎಂಗಳ ಎಲ್ಲಾ ಬಿಡಿ ಭಾಗಗಳು ಅಸಲಿಯಾಗಿದ್ದು, ಅವು ಬಿಇಎಲ್/ ಇಸಿಐಎಲ್‌ಗಳ ಅಧಿಕೃತ ಇಂಜಿನಿಯರುಗಳ ಬಳಿ ಲಭ್ಯವಿದೆ ಎಂಬುದನ್ನು ಖಚಿತಪಡಿಸುವ ಮಾದರಿ ಕಾರ್ಯವಿಧಾನ (ಎಸ್‌ಓಪಿ) | |

| | | |
|---|---|---|
| 10. | ಯಂತ್ರಗಳ ಪರಿಶೀಲನಾ ಸೂಚನಾವಳಿಗಳನ್ನು ಹಂತಹಂತವಾಗಿ ತಿಳಿಸುವ ಎಸ್‌ಓಪಿ ಯನ್ನು ಎಫ್‌ಎಲ್‌ಸಿ ಕೇಂದ್ರದಲ್ಲಿ ಎದ್ದು ಕಾಣುವಂತೆ ಅಂಟಿಸಲಾಗಿದೆ. | |
| 11. | ಪಿಸಿಬಿ ಹಾಗೂ ಇವಿಎಂಗಳ ಇತರ ಘಟಕಾಂಶಗಳನ್ನು ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ತೋರಿಸಿದೆ. | |
| 12. | ಡಿಇಓರವರು, ಎಫ್‌ಎಲ್‌ಸಿ ಯ ಸ್ಥಳವನ್ನು ಹಾಗೂ ಎಫ್‌ಎಲ್‌ಸಿ ಯ ಪ್ರಕ್ರಿಯೆಯನ್ನು ದೈನಂದಿನ ಪರಿಶೀಲನೆ ಮಾಡಿದ್ದಾರೆಯೇ? | |
| 13. | ಎಫ್‌ಎಲ್‌ಸಿ ಪ್ರಕ್ರಿಯೆಯ ಕುರಿತಾಗಿ ಭಾರತ ಚುನಾವಣಾ ಆಯೋಗದ (ಇಸಿಐ) ಸೂಚನೆಗಳನ್ನು ಅಕ್ಷರಶಃ ಪಾಲಿಸಲಾಗಿದೆಯೇ. | |
| 14. | ಸುಧಾರಣಾ ಕ್ರಮಗಳಿಗಾಗಿ, ನ್ಯೂನತೆಗಳನ್ನು ಹಾಗೂ ಸಲಹೆಗಳನ್ನು ದಯವಿಟ್ಟು ಈ ಕೆಳಗೆ ನಮೂದಿಸಿ. | |
| | | |

(ಸಹಿ)

ಹೆಸರು ಮತ್ತು ಪದನಾಮ

ಅನುಬಂಧ – 5

## (ಬಿಇಎಲ್/ ಇಸಿಐಎಲ್ ಇವರು ಇವಿಎಂಗಳನ್ನು ಪ್ರಮಾಣೀಕರಿಸುವುದು)

**ರಾಜ್ಯ/ ಕೇಂದ್ರಾಡಳಿತ ಪ್ರದೇಶದ ಹೆಸರು:**
**ಜಿಲ್ಲೆಯ ಹೆಸರು:**
**ಸಭಾಂಗಣದ ವಿಳಾಸ:**
**ದಿನಾಂಕ:**

ಬಳಸಲಾದ ಎಲ್ಲ ಘಟಕಾಂಶಗಳು ಅಸಲಿ ಎಂಬುದರ ಬಗ್ಗೆ, ದಿನಾಂಕ: ____________ರಂದು ಬಿಇಎಲ್/ಇಸಿಐಎಲ್ ಇವರು ಗೊತ್ತುಪಡಿಸಿದ ಪರೀಕ್ಷೆಗಳನ್ನು ಈ ಕೆಳಗೆ ಪಟ್ಟಿ ಮಾಡಿದ ಇವಿಎಂಗಳ ಮೇಲೆ ನಡೆಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ. ಈ ಪರೀಕ್ಷೆಗಳ ಆಧಾರದ ಮೇಲೆ ಕೆಳಗೆ ಪಟ್ಟಿ ಮಾಡಲಾದ ಇವಿಎಂಗಳ ಎಲ್ಲಾ ಘಟಕಾಂಶಗಳು ಅಸಲಿಯೆಂದು ಪ್ರಮಾಣೀಕರಿಸಲಾಗಿದೆ.

| **ಕಂಟ್ರೋಲ್ ಯೂನಿಟ್‌ನ ಗುರುತಿನ ಸಂಖ್ಯೆ** | **ಬ್ಯಾಲೆಟ್ ಯೂನಿಟ್‌ನ ಗುರುತಿನ ಸಂಖ್ಯೆ** |
|---|---|
| | |
| | |
| | |
| | |

**(ಬಿಇಎಲ್/ ಇಸಿಐಎಲ್ ಇಂಜಿನಿಯರ್‌ಗಳ ಐಡಿ ಸಂಖ್ಯೆ ಸಹಿತ ಹೆಸರು ಮತ್ತು ಸಹಿ)**

**(ರಾಜಕೀಯ ಪಕ್ಷಗಳ ಪ್ರತಿನಿಧಿಗಳು ತಮ್ಮ ಪಕ್ಷದ ಸಂಲಗ್ನತೆ ಸಹಿತ ಹೆಸರು ಮತ್ತು ಸಹಿ)**

**(ಜಿಲ್ಲಾ ಚುನಾವಣಾ ಅಧಿಕಾರಿಯು ನಾಮನಿರ್ದೇಶನ ಮಾಡಿರುವ ಅಧಿಕಾರಿಗಳ ಹೆಸರು, ಪದನಾಮ, ಸಹಿ)**

ಅನುಬಂಧ – 6

## (ವಿವಿಪ್ಯಾಟ್‌ಗಳ ಮೊದಲ ಹಂತದ ಪರಿಶೀಲನಾ (ಎಫ್‌ಎಲ್‌ಸಿ) ಅವಧಿಯಲ್ಲಿ ಅಣಕು ಮತದಾನದ ಪ್ರಮಾಣೀಕರಣ)

**ದಿನಾಂಕ:** ______________

**ರಾಜ್ಯ/ಕೇಂದ್ರಾಡಳಿತ ಪ್ರದೇಶದ ಹೆಸರು:**

**ಜಿಲ್ಲೆಯ ಹೆಸರು:**

**ಸಭಾಂಗಣದ ವಿಳಾಸ:**

ವಿವಿಪ್ಯಾಟ್‌ಗಳ ಮುದ್ರಿತ ಮತಚೀಟಿಗಳ ಫಲಿತಾಂಶಗಳು (ವಿವಿಪ್ಯಾಟ್‌ಗಳ ವಿಶಿಷ್ಟ ಗುರುತಿನ ಪಟ್ಟಿಯನ್ನು ಲಗತ್ತಿಸಲಾಗಿದೆ) ಸಂಬಂಧಪಟ್ಟ ಕಂಟ್ರೋಲ್ ಯೂನಿಟ್‌ಗಳ ವಿದ್ಯುನ್ಮಾನ ಫಲಿತಾಂಶದೊಂದಿಗೆ ತಾಳೆಯಾಗಿದ್ದು, ಕಂಟ್ರೋಲ್ ಯೂನಿಟ್‌ಗಳ ವಿದ್ಯುನ್ಮಾನ ಎಣಿಕೆ ಹಾಗೂ ವಿವಿಪ್ಯಾಟ್‌ಗಳ ಮುದ್ರಿತ ಮತಚೀಟಿಗಳ ಎಣಿಕೆ ನಡುವೆ ಯಾವುದೇ ವ್ಯತ್ಯಾಸ ಕಂಡುಬಂದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ.

| ಕ್ರ.ಸಂ. | ರಾಷ್ಟ್ರೀಯ/ ರಾಜ್ಯ ಪಕ್ಷದ ಹೆಸರು | ಪಕ್ಷದ ಸಂಲಗ್ನತೆಯೊಂದಿಗೆ ರಾಜಕೀಯ ಪಕ್ಷದ ಪ್ರತಿನಿಧಿಯ ಹೆಸರು | ಗುರುತಿನ ದಾಖಲೆ ಸಂಖ್ಯೆ ಮತ್ತು ದಿನಾಂಕ | ಪ್ರತಿನಿಧಿಯ ಸಹಿ | ಷರಾ, ಯಾವುದಾದರೂ ಇದ್ದಲ್ಲಿ. |
|---|---|---|---|---|---|
| | | | | | |
| | | | | | |
| | | | | | |
| | | | | | |
| | | | | | |
| | | | | | |

ಬಿಇಎಲ್/ಇಸಿಐಎಲ್ ಇಂಜಿನಿಯರ್‌ಗಳ ಹೆಸರು (ಸಹಿ)

1.

2.

3.

(ಸಹಿ) ________________________________

ಎಫ್‌ಎಲ್‌ಸಿ–ಮೇಲ್ವಿಚಾರಕರ ಹೆಸರು____________

ಪದನಾಮ ______________________________

ಅನುಬಂಧ – 7

## (ಎಫ್‌ಎಲ್‌ಸಿ ಅವಧಿಯಲ್ಲಿ ಅಣಕು ಮತದಾನದ ಯಾದೃಚ್ಛಿಕ ಆಯ್ಕೆ)

ದಿನಾಂಕ:____________

ರಾಜ್ಯ/ ಕೇಂದ್ರಾಡಳಿತ ಪ್ರದೇಶದ ಹೆಸರು: ______________________

ಜಿಲ್ಲೆಯ ಹೆಸರು:____________________________

ಸಭಾಂಗಣದ ವಿಳಾಸ: ___________________

ಅಣಕು ಮತದಾನದ ಉದ್ದೇಶಕ್ಕಾಗಿ ಯಂತ್ರಗಳನ್ನು (ಇವಿಎಂಗಳು ಹಾಗೂ ವಿವಿಪ್ಯಾಟ್‌ಗಳು) ಯಾದೃಚ್ಛಿಕ ಆಯ್ಕೆಯಲ್ಲಿ ಎತ್ತಿಕೊಳ್ಳಲು ನನಗೆ ಅನುಮತಿ ನೀಡಲಾಗಿದೆ ಎಂದು ಪ್ರಮಾಣೀಕರಿಸಿದೆ.

| ಕ್ರಮ ಸಂಖ್ಯೆ | ರಾಷ್ಟ್ರೀಯ/ ರಾಜ್ಯ ಪಕ್ಷದ ಹೆಸರು | ಪಕ್ಷದ ಸಂಲಗ್ನತೆಯೊಂದಿಗೆ ರಾಜಕೀಯ ಪಕ್ಷದ ಪ್ರತಿನಿಧಿಯ ಹೆಸರು | ಗುರುತಿನ ದಾಖಲೆಯ ಸಂಖ್ಯೆ ಮತ್ತು ದಿನಾಂಕ | ಪ್ರತಿನಿಧಿಯ ಸಹಿ | ಷರಾ, ಯಾವುದಾದರೂ ಇದ್ದಲ್ಲಿ |
|---|---|---|---|---|---|
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |

ಅನುಬಂಧ – 8

## (ಮೊದಲ ಹಂತದ ಪರಿಶೀಲನೆಯ ಸಮಯದಲ್ಲಿ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಅಣಕು ಮತದಾನ)

ದಿನಾಂಕ: ------------

ರಾಜ್ಯ/ ಕೇಂದ್ರಾಡಳಿತ ಪ್ರದೇಶದ ಹೆಸರು:

ಜಿಲ್ಲೆಯ ಹೆಸರು:

ಸಭಾಂಗಣದ ವಿಳಾಸ:

__________ರಂದು, ವಿವಿಪ್ಯಾಟ್‌ನೊಂದಿಗೆ ಇವಿಎಂಗಳ ಅಣಕು ಮತದಾನವನ್ನು ನಾನು ನಡೆಸಿದ್ದೇನೆಂದು ಮತ್ತು ಇವಿಎಂಗಳ ಕಾರ್ಯನಿರ್ವಹಣೆ ಕುರಿತು ನನಗೆ ಸಂಪೂರ್ಣ ತೃಪ್ತಿಯಿದೆ ಎಂದು ಪ್ರಮಾಣೀಕರಿಸುತ್ತೇನೆ.

| ಕ್ರ.ಸಂ. | ರಾಷ್ಟ್ರೀಯ/ ರಾಜ್ಯ ಪಕ್ಷದ ಹೆಸರು | ಪಕ್ಷದ ಸಂಲಗ್ನತೆಯೊಂದಿಗೆ ರಾಜಕೀಯ ಪಕ್ಷದ ಪ್ರತಿನಿಧಿಯ ಹೆಸರು | ಗುರುತಿನ ದಾಖಲೆ ಸಂಖ್ಯೆ ಮತ್ತು ದಿನಾಂಕ | ಪ್ರತಿನಿಧಿಯ ಸಹಿ | ಷರಾ, ಯಾವುದಾದರೂ ಇದ್ದಲಿ |
|---|---|---|---|---|---|
| | | | | | |
| | | | | | |
| | | | | | |
| | | | | | |
| | | | | | |
| | | | | | |

ಅನುಬಂಧ – 9

(ಗುಲಾಬಿ ಬಣ್ಣದ ಕಾಗದ ಬಳಸಿ ಇವಿಎಂಗಳ ಕಂಟ್ರೋಲ್ ಯೂನಿಟ್ ಅನ್ನು ಮೊಹರು ಮಾಡುವುದು)

ರಾಜ್ಯ/ ಕೇಂದ್ರಾಡಳಿತ ಪ್ರದೇಶಧ ಹೆಸರು:

ಜಿಲ್ಲೆಯ ಹೆಸರು:

ಪ್ರಥಮ ಹಂತದ ಪರಿಶೀಲನಾ ಸಭಾಂಗಣದ ವಿಳಾಸ :

ದಿನಾಂಕ:

ಗುಲಾಬಿ ಬಣ್ಣದ ಕಾಗದದ ಮೊಹರುಗಳನ್ನು ಬಳಸಿ ಕಂಟ್ರೋಲ್ ಯೂನಿಟ್‌ಗಳನ್ನು ನನ್ನ ಸಮ್ಮುಖದಲ್ಲಿ ಮೊಹರು ಮಾಡಲಾಗಿದೆಯೆಂದು ಪ್ರಮಾಣೀಕರಿಸಲಾಗಿದೆ.ನಾನು ಕಂಟ್ರೋಲ್ ಯೂನಿಟ್‌ಗಳನ್ನು ಮೊಹರು ಮಾಡಿದ ನಂತರ ಗುಲಾಬಿ ಬಣ್ಣದ ಕಾಗದದ ಮೊಹರುಗಳ ಮೇಲೆ ನನ್ನ ಸಹಿಯನ್ನು ಹಾಕಿದ್ದೇನೆ ಮತ್ತು ಕಂಟ್ರೋಲ್ ಯೂನಿಟ್‌ಗಳನ್ನು ಮೊಹರು ಮಾಡಿದ ಬಗ್ಗೆ ತೃಪ್ತನಾಗಿರುತ್ತೇನೆ.

| ಕ್ರಮ ಸಂಖ್ಯೆ | ಕಂಟ್ರೋಲ್ ಯೂನಿಟ್‌ನ ವಿಶಿಷ್ಟ ಐಡಿ ಸಂಖ್ಯೆ | ಗುಲಾಬಿ ಬಣ್ಣದ ಕಾಗದದ ಮೊಹರಿನ ಸಂಖ್ಯೆ |
|---|---|---|
| | | |
| | | |
| | | |

| ಕ್ರಮ ಸಂಖ್ಯೆ | ರಾಷ್ಟ್ರೀಯ/ ರಾಜ್ಯ ಪಕ್ಷದ ಹೆಸರು | ಪಕ್ಷದ ಸಂಲಗ್ನತೆಯೊಂದಿಗೆ ರಾಜಕೀಯ ಪಕ್ಷದ ಪ್ರತಿನಿಧಿಯ ಹೆಸರು | ಗುರುತಿನ ದಾಖಲೆ ಸಂಖ್ಯೆ ಮತ್ತು ದಿನಾಂಕ | ಪ್ರತಿನಿಧಿಯ ಸಹಿ |
|---|---|---|---|---|
| | | | | |
| | | | | |
| | | | | |

**(ಜಿಲ್ಲಾ ಚುನಾವಣಾಧಿಕಾರಿಗಳು ನಾಮನಿರ್ದೇಶನ ಮಾಡಿದ ಅಧಿಕಾರಿಗಳ ಹೆಸರು, ಪದನಾಮ ಮತ್ತು ಸಹಿ)**

ಅನುಬಂಧ –10

## (ಎಫ್‌ಎಲ್‌ಸಿ ವ್ಯವಸ್ಥೆ ಕುರಿತು ಜಿಲ್ಲಾ ಚುನಾವಣಾ ಅಧಿಕಾರಿಯ ಪ್ರಮಾಣೀಕರಣ)

ರಾಜ್ಯ/ಕೇಂದ್ರಾಡಳಿತ ಪ್ರದೇಶದ ಹೆಸರು:

ಜಿಲ್ಲೆಯ ಹೆಸರು:

ಎಫ್‌ಎಲ್‌ಸಿ ಸಭಾಂಗಣದ ವಿಳಾಸ:

ದಿನಾಂಕ: ____________________

| ಕ್ರ. ಸಂ. | ವಿವರಗಳು | (ಹೌದು/ ಇಲ್ಲ) |
|---|---|---|
| 1 | ಡಿಇಓ ರವರು ನಾಮನಿರ್ದೇಶನ ಮಾಡಿದ ಅಧಿಕಾರಿಗಳು, ಬಿಇಎಲ್ ಮತ್ತು ಇಸಿಐಎಲ್ ಇಂಜಿನಿಯರ್‌ಗಳು ಹಾಗೂ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಎಲ್ಲರೂ ಇವಿಎಂಗಳು ಹಾಗೂ ವಿವಿಪ್ಯಾಟ್‌ಗಳನ್ನು ಪರಿಶೀಲಿಸಲು ಅವಕಾಶ ಕಲ್ಪಿಸುವಷ್ಟು ಪ್ರಮಾಣದಲ್ಲಿ ಎಫ್‌ಎಲ್‌ಸಿ ಸಭಾಂಗಣವು ಸಾಕಷ್ಟು ಸ್ಥಳಾವಕಾಶವನ್ನು ಹೊಂದಿದೆಯೇ. | |
| 2 | ಎಫ್‌ಎಲ್‌ಸಿ ಕೇಂದ್ರದಲ್ಲಿ ಉತ್ತಮ ಗಾಳಿ, ಬೆಳಕಿನ ವ್ಯವಸ್ಥೆಯಿದ್ದು, ಧೂಳು ಮುಕ್ತವಾಗಿದೆಯೇ. | |
| 3 | ಪೊಲೀಸರು, ಎಫ್‌ಎಲ್‌ಸಿ ಪ್ರದೇಶಕ್ಕೆ ಬ್ಯಾರಿಕೇಡ್ ಹಾಕಿ, ಸ್ಯಾನಿಟೈಸ್ ಮಾಡಿದ್ದಾರೆಯೇ. | |
| 4 | ಸಭಾಂಗಣದ ಒಳಗೆ ಮತ್ತು ಹೊರಗೆ ಅಗ್ನಿ ಶಾಮಕಗಳು ಮತ್ತು ಅಗ್ನಿ ಸೂಚಕ (ಫೈರ್ ಅಲಾರಾಮ್) ಸಾಧನಗಳ ಸಾಕಷ್ಟು ವ್ಯವಸ್ಥೆ ಮಾಡಲಾಗಿದೆಯೇ | |
| 5 | ಸಭಾಂಗಣವು ಇತರೆ ಯಾವುದೇ ವಿದ್ಯುನ್ಮಾನ ಸಾಧನ ಅಥವಾ ವಿದ್ಯುನ್ಮಾನ ಸಾಧನಗಳ ಘಟಕಾಂಶಗಳಿಂದ ಮುಕ್ತವಾಗಿದೆಯೇ | |
| 6 | ಕುಡಿಯುವ ನೀರು, ಶೌಚಾಲಯ, ಪ್ರಥಮ ಚಿಕಿತ್ಸೆ ಮುಂತಾದ ಸೌಲಭ್ಯಗಳು ಲಭ್ಯ ಇವೆಯೇ. | |
| 7 | ಸಭಾಂಗಣಕ್ಕೆ ಕೇವಲ ಒಂದೇ ಒಂದು ಆಗಮನ ಮತ್ತು ನಿರ್ಗಮನ ಮಾರ್ಗ ಇದೆಯೇ ಹಾಗೂ ಸಶಸ್ತ್ರ ಪೊಲೀಸ್ ಪಡೆಗಳು ದಿನದ ಇಪ್ಪತ್ನಾಲ್ಕು ಗಂಟೆಯೂ ಅವುಗಳಿಗೆ ಪಹರೆ ನೀಡುತ್ತಾರೆಯೇ. | |
| 8 | ಬಾಗಿಲು ಚೌಕಟ್ಟು, ಲೋಹದ ಶೋಧಕಗಳನ್ನು ಅಳವಡಿಸಲಾಗಿದೆಯೇ. | |
| 9 | ತಪಾಸಣಾ ವ್ಯವಸ್ಥೆಯನ್ನು ಕಲ್ಪಿಸಲಾಗಿದೆಯೇ. | |
| 10 | ಜಿಲ್ಲಾ ಚುನಾವಣಾ ಅಧಿಕಾರಿಯು, ಮೊದಲ ಹಂತದ ಪರಿಶೀಲನಾ ಸಭಾಂಗಣದ ಒಳಗೆ ಪ್ರವೇಶಿಸುವುದಕ್ಕಾಗಿ ಅಧಿಕೃತ ಅಧಿಕಾರಿಗಳು/ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಗುರುತಿನ ಚೀಟಿಗಳನ್ನು ನೀಡಿದ್ದಾರೆಯೇ | |
| 11 | ವೆಬ್‌ಕಾಸ್ಟಿಂಗ್ ವ್ಯವಸ್ಥೆಯನ್ನು ಮಾಡಲಾಗಿದೆಯೇ | |
| 12 | ಪ್ರತಿಯೊಬ್ಬ ವ್ಯಕ್ತಿಯು ಪ್ರವೇಶವನ್ನು ದಾಖಲಿಸಲು ಮೊದಲ ಹಂತದ ಪರಿಶೀಲನಾ ಸಭಾಂಗಣದಲ್ಲಿ ಲಾಗ್ ಪುಸ್ತಕವನ್ನು ಇಡಲಾಗಿದೆಯೇ. | |
| | | |
| 13 | ಮೊದಲ ಹಂತದ ಪರಿಶೀಲನಾ ಸಭಾಂಗಣಕ್ಕೆ ನಿಯೋಜಿಸಲಾದ ಸಶಸ್ತ್ರ ಪೊಲೀಸ್ ಪಡೆಗಳಿಗಾಗಿ ಒಂದು ಪ್ರತ್ಯೇಕವಾದ ಲಾಗ್ ಪುಸ್ತಕವನ್ನು ನಿರ್ವಹಿಸಲು ಮೊದಲನೇ ಹಂತದ ಪರಿಶೀಲನಾ ಸಭಾಂಗಣದಲ್ಲಿ (ಅಂದರೆ ಕರ್ತವ್ಯ ಸರದಿಪಟ್ಟಿ) ಇಡಲಾಗಿದೆಯೇ. | |
| 14 | ಅಗತ್ಯವಿರುವ ಎಲ್ಲಾ ರಿಜಿಸ್ಟರುಗಳು ಮತ್ತು ನಮೂನೆಗಳು ಸಿದ್ಧವಾಗಿವೆಯೇ ಹಾಗೂ ಅವುಗಳನ್ನು ಮೊದಲ ಹಂತದ ಪರಿಶೀಲನಾ ಸಭಾಂಗಣದಲ್ಲಿ ಇಡಲಾಗಿದೆಯೇ. | |
| 15 | ಪ್ರತಿಯೊಂದು ಪಾಳಿಯಲ್ಲಿ ಬರುವ ಸಶಸ್ತ್ರ ಪೊಲೀಸ್ ಸಿಬ್ಬಂದಿಗಳ ಸಂಖ್ಯೆ. | |

ಮೇಲಿನ ವ್ಯವಸ್ಥೆಗಳನ್ನು ನಾನು ಖುದ್ದಾಗಿ ಪರಿಶೀಲಿಸಿರುತ್ತೇನೆ.

(ಜಿಲ್ಲಾ ಚುನಾವಣಾ ಅಧಿಕಾರಿಯ ಹೆಸರು ಮತ್ತು ಸಹಿ)

ಅನುಬಂಧ – 11

(ಮೊದಲನೇ ಹಂತದ ಪರಿಶೀಲನಾ ಪ್ರಕ್ರಿಯೆಯು ಪೂರ್ಣಗೊಂಡ ಕುರಿತ ಪ್ರಮಾಣಪತ್ರ)

**ರಾಜ್ಯ/ಕೇಂದ್ರಾಡಳಿತ ಪ್ರದೇಶದ ಹೆಸರು:**

**ಜಿಲ್ಲೆಯ ಹೆಸರು:**

**ಎಫ್‌ಎಲ್‌ಸಿ ಸಭಾಂಗಣದ ವಿಳಾಸ:**

**ದಿನಾಂಕ:** ____________________

ಇವಿಎಂಗಳು ಹಾಗೂ ವಿವಿಪ್ಯಾಟ್ ಮೊದಲನೇ ಹಂತದ ಪರಿಶೀಲನೆಯ ಕುರಿತು ಆಯೋಗವು ನೀಡಿರುವ ಸೂಚನೆಗಳ ಅನುಸಾರ, ____________ (ದಿನಾಂಕ)ದಂದು ಮೊದಲನೇ ಹಂತದ ಪರಿಶೀಲನೆಯನ್ನು ಪೂರ್ಣಗೊಳಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ. ನಾನು, ಈ ಮುಂದಿನ ದಿನಾಂಕಗಳಂದು ಖುದ್ದಾಗಿ ಎಫ್‌ಎಲ್‌ಸಿ ಅನ್ನು ಪರಿಶೀಲಿಸಿರುತ್ತೇನೆ:


ಎಫ್‌ಎಲ್‌ಸಿಯು ಪೂರ್ಣಗೊಂಡ ನಂತರ ಇವಿಎಂಗಳನ್ನು ಮತ್ತು ವಿವಿಪ್ಯಾಟ್‌ಗಳ ಸ್ಥಿತಿಯನ್ನು ಮುಂದಿನಂತೆ ನೀಡಲಾಗಿದೆ:

| ಜಿಲ್ಲೆಯ ಹೆಸರು | ಜಿಲ್ಲೆಯಲ್ಲಿ ಲಭ್ಯವಿರುವ | | | ಎಫ್‌ಎಲ್‌ಸಿ ಓಕೆ ಪ್ರಮಾಣ | | | ಎಫ್‌ಎಲ್‌ಸಿಗಳನ್ನು ತಿರಸ್ಕರಿಸಿದ ಪ್ರಮಾಣ | | |
|---|---|---|---|---|---|---|---|---|---|
| | ಬಿಯು | ಸಿಯು | ವಿವಿಪ್ಯಾಟ್ | ಬಿಯು | ಸಿಯು | ವಿವಿಪ್ಯಾಟ್ | ಬಿಯು | ಸಿಯು | ವಿವಿಪ್ಯಾಟ್ |
| | | | | | | | | | |

ದೋಷಪೂರಿತ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ________________ದಂದು ಅಂದರೆ, ಜಿಲ್ಲೆಗಳಲ್ಲಿ ಎಫ್‌ಎಲ್‌ಸಿಪ್ರಕ್ರಿಯೆಯು ಪೂರ್ಣಗೊಂಡ ದಿನಾಂಕದಿಂದ 7 ದಿನಗಳ ಒಳಗೆ ತಯಾರಕ (ಬಿಇಎಲ್/ಇಸಿಐಎಲ್)ರಿಗೆ ವರ್ಗಾಯಿಸತಕ್ಕದ್ದು.

**(ಜಿಲ್ಲಾ ಚುನಾವಣಾ ಅಧಿಕಾರಿಯ ಹೆಸರು ಮತ್ತು ಸಹಿ)**

## ಇವಿಎಂ ಮತ್ತು ವಿವಿಪ್ಯಾಟ್ ಬಳಸಿ ಮತದಾನ ಮಾಡುವ ವಿಧಾನ




## ಭಾರತ ಚುನಾವಣಾ ಆಯೋಗ

ಭಾರತ ಚುನಾವಣಾ ಆಯೋಗ

# ಪ್ರಿಸೈಡಿಂಗ್ ಆಫೀಸರ್ ರವರ ಮಾಹಿತಿ ಕೈಪಿಡಿ
# (ಇವಿಎಂ ಮತ್ತು ವಿವಿಪ್ಯಾಟ್‌ಗಳ ಬಳಕೆ ಕುರಿತು)



**ವಿತರಣಾ ದಿನದಂದು ಪ್ರಾರಂಭಿಕ ತಪಾಸಣೆ**

1. ಸಂಬಂಧಪಟ್ಟ ಸಾಗಣೆ ಪೆಟ್ಟಿಗೆಯಿಂದ ಬ್ಯಾಲೆಟಿಂಗ್ ಯೂನಿಟ್ (ಗಳು), ಕಂಟ್ರೋಲ್ ಯೂನಿಟ್ ಮತ್ತು ವಿವಿಪ್ಯಾಟ್‌ಗಳನ್ನು ಜಾಗೃತವಾಗಿ ಹೊರ ತೆಗೆಯಬೇಕು.

2. **ಬ್ಯಾಲೆಟಿಂಗ್ ಯೂನಿಟ್ (ಗಳು)**

**ತಪಾಸಣೆ:**

- ಬ್ಯಾಲೆಟ್ ಯೂನಿಟ್ (ಗಳು) ನಿಮಗೆ ಗೊತ್ತುಪಡಿಸಿದ ಮತಗಟ್ಟೆಗೆ ಸಂಬಂಧಿಸಿದೆ(ವೆ) ಎಂಬುದನ್ನು ಖಾತ್ರಿಪಡಿಸಿಕೊಳ್ಳಲು ಬ್ಯಾಲೆಟ್ ಯೂನಿಟ್‌ನ ಅಡ್ರೆಸ್ ಟ್ಯಾಗುಗಳ ಪರಿಶೀಲನೆ.
- ಬ್ಯಾಲೆಟ್ ಯೂನಿಟ್‌ನ ಗುಲಾಬಿ ಬಣ್ಣದ ಪೇಪರ್ ಸೀಲು ಪರಿಪೂರ್ಣವಾಗಿದೆ ಎಂಬುದರ ಪರಿಶೀಲನೆ.
- ಬ್ಯಾಲೆಟ್ ಪೇಪರ್‌ನ್ನು ಸರಿಯಾಗಿ ಅಳವಡಿಸಲಾಗಿದೆ ಎಂಬುದರ ಪರಿಶೀಲನೆ.
- ನೋಟಾ (ಎನ್‌ಒಟಿಎ) ವರೆಗಿನ ಬ್ಯಾಲೆಟ್ ಗುಂಡಿಗಳನ್ನು ಮುಚ್ಚಿ ಮರೆ ಮಾಡಿಲ್ಲ ಎಂಬುದರ ಪರಿಶೀಲನೆ.
- ಮೊದಲ ಬಿಯು ನಲ್ಲಿ ಥಂಬ್‌ವ್ಹೀಲ್‌ನ ಸ್ಥಾನ 01 ಇದೆ (01 ಕ್ಕಿಂತ ಹೆಚ್ಚು ಬಿಯು ಬಳಸಿದ್ದರೆ, 2ನೇ ಬಿಯು ನಲ್ಲಿ ಥಂಬ್‌ವ್ಹೀಲ್‌ನ ಸ್ಥಾನವನ್ನು 02 ಎಂದು, 3ನೇ ಬಿಯುಗೆ 03 ಎಂದು ಹೀಗೆ ನಂತರದ ಬಿಯುಗಳಿಗೆ ಸ್ಥಾನವನ್ನು ಗೊತ್ತುಪಡಿಸಲಾಗಿದೆ) ಎಂಬುದರ ಪರಿಶೀಲನೆ.

3. **ಕಂಟ್ರೋಲ್ ಯೂನಿಟ್**

**ತಪಾಸಣೆ:**

- ಕಂಟ್ರೋಲ್ ಯೂನಿಟ್ ನಿಮಗೆ ಗೊತ್ತುಪಡಿಸಿದ ಮತಗಟ್ಟೆಗೆ ಸಂಬಂಧಿಸಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳಲು ಕಂಟ್ರೋಲ್ ಯೂನಿಟ್‌ನ ಅಡ್ರೆಸ್ ಟ್ಯಾಗ್ ಪರಿಶೀಲನೆ.
- ಕಂಟ್ರೋಲ್ ಯೂನಿಟ್‌ನ ಗುಲಾಬಿ ಬಣ್ಣದ ಪೇಪರ್ ಸೀಲು ಪರಿಪೂರ್ಣವಾಗಿದೆ ಎಂಬುದರ ಪರಿಶೀಲನೆ.
- ಬ್ಯಾಟರಿ ಸ್ಥಿತಿಗತಿಯನ್ನು ಹಾಗೂ ಸ್ಪರ್ಧಿಸಿರುವ ಅಭ್ಯರ್ಥಿಗಳ ಸಂಖ್ಯೆಯನ್ನು ಪರೀಕ್ಷಿಸಲು ಕಂಟ್ರೋಲ್ ಯೂನಿಟ್ (ಬ್ಯಾಲೆಟಿಂಗ್ ಯೂನಿಟ್ ಹಾಗೂ/ ಅಥವಾ ವಿವಿಪ್ಯಾಟ್‌ನ್ನು ಜೋಡಿಸದೆ) ಅನ್ನು ಸ್ವಿಚ್ ಆನ್ ಮಾಡಬೇಕು.
- ನಂತರ ಕಂಟ್ರೋಲ್ ಯೂನಿಟ್ ಅನ್ನು ಸ್ವಿಚ್ ಆಫ್ ಮಾಡಬೇಕು.

4. **ವಿವಿಪ್ಯಾಟ್**

**ತಪಾಸಣೆ:**

- ವಿವಿಪ್ಯಾಟ್ ನಿಮಗೆ ಗೊತ್ತುಪಡಿಸಿದ ಮತಗಟ್ಟೆಗೆ ಸಂಬಂಧಿಸಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳಲು ವಿವಿಪ್ಯಾಟ್‌ನ ಅಡ್ರೆಸ್ ಟ್ಯಾಗುಗಳ ಪರಿಶೀಲನೆ.
- ಪವರ್ ಪ್ಯಾಕ್ (ಬ್ಯಾಟರಿ) ಅನ್ನು ಅಳವಡಿಸಲಾಗಿದೆ ಎಂಬುದರ ಪರಿಶೀಲನೆ.
- ವಿವಿಪ್ಯಾಟ್‌ನ ನಾಬ್ ಸಮಾನಾಂತರ ಕೋನದಲ್ಲಿದೆ (ಅಂದರೆ ಸಾಗಿಸುವ ಸ್ಥಿತಿಯಲ್ಲಿದೆ) ಎಂಬುದರ ಪರಿಶೀಲನೆ.
- ಬ್ಯಾಲೆಟ್ ಯೂನಿಟ್ ಮತ್ತು/ ಅಥವಾ ಕಂಟ್ರೋಲ್ ಯೂನಿಟ್‌ನೊಂದಿಗೆ ವಿವಿಪ್ಯಾಟ್ ಅನ್ನು ಜೋಡಿಸಬೇಡಿ.

**ಮತಗಟ್ಟೆಯಲ್ಲಿ ಬ್ಯಾಲೆಟಿಂಗ್ ಯೂನಿಟ್, ಕಂಟ್ರೋಲ್ ಯೂನಿಟ್ ಹಾಗೂ ವಿವಿಪ್ಯಾಟ್‌ಗಳ ಅಳವಡಿಕೆ**

1. ಬ್ಯಾಲೆಟಿಂಗ್ ಯೂನಿಟ್ ಮತ್ತು ವಿವಿಪ್ಯಾಟ್‌ಗಳನ್ನು ನೈಜ ಮತದಾನ ಕಂಪಾರ್ಟ್‌ಮೆಂಟ್‌ನಲ್ಲಿ ಇಡುವುದು.
2. ಕಂಟ್ರೋಲ್ ಯೂನಿಟ್ ಅನ್ನು ಅಳವಡಿಸಿದ ನಂತರ ಅಥವಾ ಅಣಕು ಮತದಾನದ ನಂತರ ಅದನ್ನು ಸ್ಥಳಾಂತರ ಮಾಡದಂತೆ ಪ್ರಿಸೈಡಿಂಗ್/ ಪೋಲಿಂಗ್ ಅಧಿಕಾರಿ (ಕಂಟ್ರೋಲ್ ಯೂನಿಟ್‌ನ ಉಸ್ತುವಾರಿ)ಯ ಮೇಜಿನ ಮೇಲೆ ಇಟ್ಟಿರತಕ್ಕದ್ದು,



3. ಬ್ಯಾಲೆಟಿಂಗ್ ಯೂನಿಟ್‌ನ ಕೇಬಲನ್ನು ವಿವಿಪ್ಯಾಟ್‌ಗೆ ಹಾಗೂ ವಿವಿಪ್ಯಾಟ್‌ನ ಕೇಬಲನ್ನು ಕಂಟ್ರೋಲ್ ಯೂನಿಟ್‌ಗೆ ಜೋಡಿಸುವುದು.





4. ವಿವಿಪ್ಯಾಟ್‌ನ ಪೇಪರ್ ರೋಲ್ ನಾಬ್ ಅನ್ನು ಅನ್-ಲಾಕ್ (ಕಾರ್ಯನಿರ್ವಹಣಾ ಸ್ಥಿತಿಗೆ ಅಂದರೆ ಲಂಬ ಸ್ಥಿತಿಗೆ) ಮಾಡುವುದು.



**ಅಣಕು ಮತದಾನವನ್ನು ನಡೆಸುವುದು**

1. ವಿವಿಪ್ಯಾಟ್ ಸ್ಲಿಪ್‌ಗಳಿರುವ ಕಂಪಾರ್ಟ್‌ಮೆಂಟ್ ಖಾಲಿ ಇರುವುದನ್ನು ತೋರಿಸುವುದು.
2. ಕಂಟ್ರೋಲ್ ಯೂನಿಟ್ ಅನ್ನು ಸ್ವಿಚ್–ಆನ್ ಮಾಡುವುದು.
3. 'ಟೋಟಲ್' ಗುಂಡಿಯನ್ನು ಒತ್ತಿ, ಕಂಟ್ರೋಲ್ ಯೂನಿಟ್‌ನಲ್ಲಿಮತದಾನ'0' ಇರುವುದನ್ನು ತೋರಿಸುವುದು.
4. ಕನಿಷ್ಠಪಕ್ಷ 50 ಮತಗಳನ್ನು ಚಲಾಯಿಸುವುದು ಹಾಗೂ ಪ್ರತಿಯೊಬ್ಬ ಅಭ್ಯರ್ಥಿಗೆ ಹಾಕಿದ ಮತಗಳ ಸಂಖ್ಯೆಯನ್ನು ಪೇಪರ್‌ನಲ್ಲಿ/ ರಿಜಿಸ್ಟರಿನಲ್ಲಿ ಬರೆದು ದಾಖಲಿಸುವುದು (ನೋಟಾವನ್ನು ಒಳಗೊಂಡಂತೆ) ಸ್ಪರ್ಧಿಸಿರುವ ಪ್ರತಿಯೊಬ್ಬ ಅಭ್ಯರ್ಥಿಗಳಿಗೂ ಮತಗಳನ್ನು ದಾಖಲಿಸಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳುವುದು.
5. ಅಣಕು ಮತದಾನದ ತರುವಾಯ ಕಂಟ್ರೋಲ್ ಯೂನಿಟ್‌ನ 'ಕ್ಲೋಸ್' ಗುಂಡಿಯನ್ನು ಒತ್ತುವುದು.
6. ಆನಂತರ, ಅಣಕು ಮತದಾನದ ಫಲಿತಾಂಶವನ್ನು ಖಚಿತಪಡಿಸಿಕೊಳ್ಳಲು ಕಂಟ್ರೋಲ್ ಯೂನಿಟ್‌ನ 'ರಿಸಲ್ಟ್' ಗುಂಡಿಯನ್ನು ಒತ್ತುವುದುಮತ್ತು ಫಲಿತಾಂಶವನ್ನು ಬರೆದುಕೊಂಡ ದಾಖಲೆಯೊಂದಿಗೆ ತಾಳೆ ನೋಡುವುದು.
7. ವಿವಿಪ್ಯಾಟ್ ಕಂಪಾರ್ಟ್‌ಮೆಂಟ್‌ನಿಂದ ಅಣಕು ಮತದಾನದ ವಿವಿಪ್ಯಾಟ್ ಸ್ಲಿಪ್ಪುಗಳನ್ನು ಹೊರತೆಗೆಯುವುದು ಹಾಗೂ ಕಂಟ್ರೋಲ್ ಯೂನಿಟ್‌ನಲ್ಲಿನ ಮತಗಳೊಂದಿಗೆ ತಾಳೆ ನೋಡುವುದು.
8. ಮೇಲಿನ 6 ಮತ್ತು 7ನೇ ಬಾಬುಗಳೆರಡೂ ತೃಪ್ತಿಕರವಾಗಿದ್ದರಷ್ಟೇ ಅಣಕು ಮತದಾನ ತಾಳೆಯಾಗುತ್ತದೆ.
9. ಕಂಟ್ರೋಲ್ ಯೂನಿಟ್‌ನಿಂದ ಅಣಕು ಮತದಾನದ ಫಲಿತಾಂಶವನ್ನು ಅಳಿಸಲು ಕಂಟ್ರೋಲ್ ಯೂನಿಟ್ ಮೇಲಿನ 'ಕ್ಲಿಯರ್' ಗುಂಡಿಯನ್ನು ಒತ್ತಿಪೋಲಿಂಗ್ ಏಜೆಂಟರುಗಳಿಗೆ, ಮತದಾನವು'0'ಮತಗಳು ಇರುವುದನ್ನು ತೋರಿಸುವುದು.
10. ಅಣಕು ಮತದಾನದ ವಿವಿಪ್ಯಾಟ್ ಸ್ಲಿಪ್ಪುಗಳ ಮೇಲೆ 'ಅಣಕುಮತದಾನಸ್ಲಿಪ್' ಎಂಬಮುದ್ರೆಯನ್ನು ಒತ್ತುವುದು.
11. ಅಣಕು ಮತದಾನದ ವಿವಿಪ್ಯಾಟ್ ಸ್ಲಿಪ್ಪುಗಳನ್ನು ಕಪ್ಪು ಬಣ್ಣದ ಲಕೋಟೆಯಲ್ಲಿ ಇಟ್ಟು, ನಂತರ ಅದನ್ನು ಪ್ಲಾಸ್ಟಿಕ್ ಬಾಕ್ಸ್‌ನಲ್ಲಿ ಹಾಕಿ ಗುಲಾಬಿ ಬಣ್ಣದ ಪೇಪರ್ ಸೀಲ್‌ನಿಂದ ಬಾಕ್ಸ್‌ನ್ನು ಸೀಲ್ ಮಾಡುವುದು.
12. ಕಂಟ್ರೋಲ್ ಯೂನಿಟ್ ಅನ್ನು ಸ್ವಿಚ್ ಆಫ್ ಮಾಡುವುದು.
13. ವಿವಿಪ್ಯಾಟ್‌ನ ಖಾಲಿ ಡ್ರಾಪ್ ಬಾಕ್ಸ್‌ನ್ನು ಪೋಲಿಂಗ್ ಏಜೆಂಟರಿಗೆ ತೋರಿಸಿ ಅದನ್ನು ಸೀಲ್ ಮಾಡಿ. ಅಡ್ರೆಸ್ ಬ್ಯಾಗ್ ಮೇಲೆ ಸಹಿ ಮಾಡುವಂತೆ ಪೋಲಿಂಗ್ ಏಜೆಂಟರಿಗೆ ತಿಳಿಸುವುದು.
14. ಅಣಕು ಮತದಾನ ಪ್ರಮಾಣ ಪತ್ರ (ಪ್ರಿಸೈಡಿಂಗ್ ಆಫೀಸರ್‌ರವರ ವರದಿ ಭಾಗ–ಖ)ವನ್ನು ಜಾಗರೂಕತೆಯಿಂದ ಭರ್ತಿ ಮಾಡುವುದು. ಅದರ ಮೇಲೆ ಎಲ್ಲಾ ಮತಗಟ್ಟೆ ಅಧಿಕಾರಿಗಳ ಹಾಗೂ ಪೋಲಿಂಗ್ ಏಜೆಂಟರುಗಳ ಸಹಿಗಳನ್ನು ಪಡೆಯುವುದು

**ಅಣಕು ಮತದಾನಕ್ಕಾಗಿ ಬದಲಾವಣೆ ನಿಯಮ:**


1. **ಬ್ಯಾಲೆಟಿಂಗ್ ಯೂನಿಟ್, ಕಂಟ್ರೋಲ್ ಯೂನಿಟ್ ಹಾಗೂ ವಿವಿಪ್ಯಾಟ್‌ನ ಎಲ್ಲಾ 'ಎರರ್'ಸಂದೇಶಗಳು ಕಂಟ್ರೋಲ್ ಯೂನಿಟ್‌ನಲ್ಲಿಮಾತ್ರಪ್ರದರ್ಶಿತವಾಗುತ್ತವೆ. ದಯವಿಟ್ಟುಸಂದೇಶಗಳನ್ನು ಓದಿ ಅದರಂತೆನಡೆದುಕೊಳ್ಳುವುದು.**
2. **ಬ್ಯಾಲೆಟಿಂಗ್ ಯೂನಿಟ್ ಅಥವಾ ಕಂಟ್ರೋಲ್ ಯೂನಿಟ್ ಅಥವಾ ವಿವಿಪ್ಯಾಟ್ ಕಾರ್ಯನಿರ್ವಹಿಸದ ಸಂದರ್ಭದಲ್ಲಿ ಸಂಬಂಧಪಟ್ಟ ಯೂನಿಟನ್ನು ಮಾತ್ರ ಬದಲಾಯಿಸುವುದು**

**ಅಣಕು ಮತದಾನದ ತರುವಾಯ ಕಂಟ್ರೋಲ್ ಯೂನಿಟ್ ಹಾಗೂ ವಿವಿಪ್ಯಾಟ್‌ನ್ನು ಸೀಲ್ ಮಾಡುವುದು**

1. ಕಂಟ್ರೋಲ್ ಯೂನಿಟ್‌ನ್ನು ಹಸಿರು ಪೇಪರ್ ಸೀಲ್, ಸ್ಪೆಷಲ್ ಟ್ಯಾಗ್, ಅಡ್ರೆಸ್ ಟ್ಯಾಗ್ ಮತ್ತು ಹೊರ ಭಾಗದ ಪೇಪರ್ ಸ್ಟ್ರಿಪ್ ಸೀಲ್ (ಎಬಿಸಿಡಿ ಸೀಲ್)ಗಳಿಂದ ಸೀಲ್ ಮಾಡಿ, ಅವುಗಳ ಮೇಲೆ ಪೋಲಿಂಗ್ ಏಜೆಂಟರುಗಳ ಸಹಿ ಪಡೆಯತಕ್ಕದ್ದು.



ಹಸಿರು ಬಣ್ಣದ ಪೇಪರ್ ಸೀಲನ್ನು ಅಂಟಿಸುವುದು



ಒಳಗಿರುವ ರಿಸಲ್ಟ್ ಸೆಕ್ಷನ್ ಅನ್ನು ಸ್ಪೆಷಲ್ ಟ್ಯಾಗ್‌ನಿಂದ ಸೀಲ್ ಮಾಡುವುದು



ಅಡ್ರೆಸ್ ಟ್ಯಾಗ್‌ನೊಂದಿಗೆ ರಿಸಲ್ಟ್ ಸೆಕ್ಷನ್‌ನ ಹೊರಭಾಗವನ್ನು ಸೀಲ್ ಮಾಡುವುದು





ಹೊರಗಿನ ಪೇಪರ್ ಸ್ಟ್ರಿಪ್ ಸೀಲ್ (ಎಬಿಸಿಡಿ ಸೀಲ್) ನಿಂದ ಸೀಲ್ ಮಾಡುವುದು

2. ವಿವಿಪ್ಯಾಟ್‌ನ ಡ್ರಾಪ್ ಬಾಕ್ಸ್‌ನ್ನು ಅಡ್ರೆಸ್ ಟ್ಯಾಗ್‌ನಿಂದ ಸೀಲ್ ಮಾಡಿ, ಅದರ ಮೇಲೆ ಪೋಲಿಂಗ್ ಏಜೆಂಟರಿಗೂ ಸಹ ಸಹಿ ಮಾಡುವಂತೆ ತಿಳಿಸುವುದು.



ವಿವಿಪ್ಯಾಟ್‌ನ ಡ್ರಾಪ್ ಬಾಕ್ಸ್‌ನ್ನು ಅಡ್ರೆಸ್ ಟ್ಯಾಗ್‌ನಿಂದ ಸೀಲ್ ಮಾಡುವುದು

## ನೈಜ ಮತದಾನದ ಪ್ರಾರಂಭ

1. ಕಂಟ್ರೋಲ್ ಯೂನಿಟ್ ಅನ್ನು ಸ್ವಿಚ್ ಆನ್ ಮಾಡುವುದು.
2. ಮತಗಳು ಸೊನ್ನೆ ಎಂಬುದನ್ನು ದೃಢಪಡಿಸಲು ಕಂಟ್ರೋಲ್ ಯೂನಿಟ್‌ನ 'ಟೋಟಲ್' ಗುಂಡಿಯನ್ನು ಒತ್ತಿ ಪೋಲಿಂಗ್ ಏಜೆಂಟರುಗಳಿಗೆ ತೋರಿಸುವುದು.

**ನೈಜ ಮತದಾನದ ಬದಲಾವಣೆ ನಿಯಮ**

1. **ಬ್ಯಾಲೆಟಿಂಗ್ ಯೂನಿಟ್, ಕಂಟ್ರೋಲ್ ಯೂನಿಟ್ ಹಾಗೂ ವಿವಿಪ್ಯಾಟ್‌ನ ಎಲ್ಲಾ 'ಎರರ್'ಸಂದೇಶಗಳು ಕಂಟ್ರೋಲ್ ಯೂನಿಟ್‌ನಲ್ಲಿಮಾತ್ರಪ್ರದರ್ಶಿತವಾಗುತ್ತವೆ. ದಯವಿಟ್ಟು ಸಂದೇಶಗಳನ್ನು ಓದಿ ಅದರಂತೆ ನಡೆದುಕೊಳ್ಳುವುದು.**
2. **ಕಂಟ್ರೋಲ್ ಯೂನಿಟ್ "ರೀಪ್ಲೇಸ್‌ವಿವಿಪ್ಯಾಟ್" ಎಂದು ಎರರ್ ತೋರಿಸಿದಸಂದರ್ಭದಲ್ಲಿ, ಕಂಟ್ರೋಲ್ ಯೂನಿಟ್ ಅನ್ನುಸ್ವಿಚ್ ಆಫ್‌ಮಾಡಿ, ವಿವಿಪ್ಯಾಟ್‌ನ್ನುಬದಲಾಯಿಸುವುದು. ಆಗ ಅಣಕುಮತದಾನಮಾಡುವ ಅಗತ್ಯವಿರುವುದಿಲ್ಲ.**
3. **ಬ್ಯಾಲೆಟಿಂಗ್ ಯೂನಿಟ್ ಅಥವಾ ಕಂಟ್ರೋಲ್ ಯೂನಿಟ್ ಕಾರ್ಯನಿರ್ವಹಿಸದಿದ್ದ ಸಂದರ್ಭದಲ್ಲಿ, ಬ್ಯಾಲೆಟಿಂಗ್ ಯೂನಿಟ್, ಕಂಟ್ರೋಲ್ ಯೂನಿಟ್ ಮತ್ತು ವಿವಿಪ್ಯಾಟ್‌ನ ಇಡೀ ಸೆಟ್ ಅನ್ನು ಬದಲಾಯಿಸುವುದು. ಇಡೀ ಸೆಟ್ಟನ್ನು ಬದಲಾಯಿಸುವ ಸಂದರ್ಭದಲ್ಲಿ, ನೋಟಾವನ್ನು ಒಳಗೊಂಡಂತೆ, ಪ್ರತಿಯೊಬ್ಬ ಸ್ಪರ್ಧಿಸುವ ಅಭ್ಯರ್ಥಿಗಳಿಗೆ 01 ಮತದಾನವನ್ನು ಮಾಡುವ ಮೂಲಕ ಅಣಕು ಮತದಾನವನ್ನು ನಡೆಸತಕ್ಕದ್ದು.**

## ಮತದಾನದ ಮುಕ್ತಾಯ ಪ್ರಕ್ರಿಯೆ

1. ಕಂಟ್ರೋಲ್ ಯೂನಿಟ್‌ನ 'ಕ್ಲೋಸ್' ಗುಂಡಿಯನ್ನು ಒತ್ತಿ.
2. ಕಂಟ್ರೋಲ್ ಯೂನಿಟ್‌ನಲ್ಲಿ ಚಲಾಯಿಸಿದ ಒಟ್ಟು ಮತಗಳನ್ನು ಗಮನಿಸಲು ಕಂಟ್ರೋಲ್ ಯೂನಿಟ್‌ನ 'ಟೋಟಲ್' ಗುಂಡಿಯನ್ನು ಒತ್ತುವುದು.
3. ಕಂಟ್ರೋಲ್ ಯೂ ನಿಟ್ ಅನ್ನು ಸ್ವಿಚ್–ಆಫ್ ಮಾಡುವುದು.
4. ಬ್ಯಾಲೆಟಿಂಗ್ ಯೂನಿಟ್ ಕೇಬಲನ್ನು ವಿವಿಪ್ಯಾಟ್‌ನಿಂದ ಹಾಗೂ ವಿವಿಪ್ಯಾಟ್ ಕೇಬಲನ್ನು ಕಂಟ್ರೋಲ್ ಯೂನಿಟ್‌ನಿಂದ ಬೇರ್ಪಡಿಸುವುದು.
5. ವಿವಿಪ್ಯಾಟ್‌ನಿಂದ ಪವರ್ ಪ್ಯಾಕ್ (ಬ್ಯಾಟರಿ) ಅನ್ನು ತೆಗೆಯುವುದು.
6. ಬ್ಯಾಲೆಟಿಂಗ್ ಯೂನಿಟ್, ಕಂಟ್ರೋಲ್ ಯೂನಿಟ್ ಹಾಗೂ ವಿವಿಪ್ಯಾಟ್‌ಗಳನ್ನು ಸಂಬಂಧಪಟ್ಟ ಸಾಗಣೆ ಪೆಟ್ಟಿಗೆಯಲ್ಲಿ ಇಡುವುದು.
7. ಪ್ರತಿಯೊಂದು ಸಾಗಣೆ ಪೆಟ್ಟಿಗೆಗೆ ಅಡ್ರೆಸ್ ಟ್ಯಾಗ್ ಹಾಕಿ ಸೀಲ್ ಮಾಡುವುದು.

## ಭದ್ರತಾ ಕೊಠಡಿಯಲ್ಲಿ ಮಾಡಿರುವ ಏರ್ಪಾಟಿನ ವರದಿ

ರಾಜ್ಯದ ಹೆಸರು:

ಜಿಲ್ಲೆಯ ಹೆಸರು:

ವಿಧಾನಸಭಾ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು:

ಭೇಟಿ ಮಾಡಿದ ಭದ್ರತಾ ಕೊಠಡಿಯ ವಿಳಾಸ:

